ಮಹಾಕವಿ ರತ್ನಾಕರ ವಿರಚಿತ

ರತ್ನಾಕರ ಶತಕ

ಸಂಪಾದಕರು :
ಎ. ಆರ್. ನಾಗರಾಜ್, ಎಂ. ಎ.,

ಪ್ರಕಾಶನ :
ಚಂದ್ರಗುಪ್ತ ಗ್ರಂಥಮಾಲೆ
ಶ್ರವಣಬೆಳಗೊಳ
ಕರ್ನಾಟಕ.

ಶ್ರೀಮಾನ್. ಡಿ. ಕೆ. ನಾಗರಾಜರಾವ್ ಅವರಿಗೆ

ವಿಶ್ವಾಸಪೂರ್ವಕವಾಗಿ

ಎ. ಆರ್. ನಾಗರಾಜ್

16-3-81

ಮಹಾಕವಿ ರತ್ನಾಕರ ವಿರಚಿತ

ರತ್ನಾಕರ ಶತಕ

ಸಂಪಾದಕರು :

ಎ. ಆರ್. ನಾಗರಾಜ್, ಎಂ.ಎ.,

ಪ್ರಕಾಶನ :

ಚಂದ್ರಗುಪ್ತ ಗ್ರಂಥಮಾಲೆ

ಶ್ರವಣಬೆಳಗೊಳ

ಕರ್ನಾಟಕ.

ಮಹಾಕವಿ ರತ್ನಾಕರ ವಿರಚಿತ

ರ ತ್ನಾ ಕ ರ ಶ ತ ಕ

ಪ್ರತಿಪದಾರ್ಥ, ಭಾವಾರ್ಥಸಹಿತ

ಸಂಪಾದಕ : **ಶ್ರೀ ಎ. ಆರ್. ನಾಗರಾಜ್,** ಎಂ. ಎ.

ಮೊದಲ ಮುದ್ರಣ : ಕ್ರಿ. ಶ. 1981 (ಗೊಮ್ಮಟಶಕ 1000)

Rathnakara Shathaka

By : Mahakavi Rathnakara

Edited by : **Sri A. R. Nagaraj,** M.A.

Published by : Chandraguptha Granthamale, Sravanabelagola.
First Edition : A. D. 1981 (Gommata Sahka 1000)

ಬೆಲೆ : 30 ರೂಪಾಯಿಗಳು

Price : Rupees **Thirty** only

ಪ್ರತಿಗಳು ದೊರೆಯುವ ಸ್ಥಳ :
ಎ. ಆರ್. ನಾಗರಾಜ್,
42, "ಕುಂದ ಕುಂದ ಮಂದಿರ"
ಬಸಪ್ಪ ಲೇ ಔಟ್, ಗವೀಪುರಂ ಬಡಾವಣೆ,
ಬೆಂಗಳೂರು–560 019.

ಮುದ್ರಕರು :
ಶ್ರೀ ಕೀರ್ತಿ ಪ್ರಿಂಟರ್ಸ್
ಸರ್ವೇಯರ್ ರಸ್ತೆ, ಬಸವನಗುಡಿ,
ಬೆಂಗಳೂರು–560 004



ಅಹಿಂಸಾ ಮೂರ್ತಿ

ಮಹಾವೀರವಾಣಿಯ ಸಮರ್ಥ

ಉದ್ಬೋಧಕ ಮಹಾ ಮೇಧಾವಿ,

ಜ್ಞಾನಚಕ್ಷು, ಭಾರತೀಯ

ಸಂಸ್ಕೃತಿಯ ಜೀವಂತಪ್ರತೀಕ,

ವಿಶ್ವಧರ್ಮದ ಪ್ರಭಾವಿ ಪ್ರವರ್ತಕ,

ಪರಮವಾಗ್ಮಿ, ಸಂತಶಿರೋಮಣಿ ಸಿದ್ಧಾಂತ ಚಕ್ರವರ್ತಿ

ಪರಮಪೂಜ್ಯ ಏಲಾಚಾರ್ಯ ಮುನಿಶ್ರೀ

ವಿದ್ಯಾನಂದ ಮಹಾರಾಜ

ರವರ ಕರಕಮಲಗಳಲ್ಲಿ ಶ್ರದ್ಧಾಭಕ್ತಿಪೂರ್ವಕವಾಗಿ

ಸಮರ್ಪಣೆ

ಆಶೀರ್ವಾದ

ಮೊಟ್ಟಮೊದಲು ರತ್ನಾಕರನ ಶತಕಗಳನ್ನು ನಾವು ಐನಾಪುರದ ಗುಹೆಯಲ್ಲಿ ಪರಮ ಪೂಜ್ಯ ಮಹಾವೀರ ಕೀರ್ತಿಗಳ ಸನ್ನಿಧಾನದಲ್ಲಿ ಕಲಿತುಕೊಂಡೆವು. ಅನಂತರ ಕೊಣ್ಣೂರು ಗ್ರಾಮದ ಭದ್ರಬಾಹು ಗುಹೆಯಲ್ಲಿ ಎ. ಶಾಂತಿರಾಜಶಾಸ್ತ್ರಿಗಳು ಚಿಕ್ಕ ಪುಸ್ತಕವಾಗಿ ಪ್ರಕಟಿಸಿದ ಶತಕಗಳನ್ನು ಮತ್ತೆ ಅಭ್ಯಾಸಮಾಡಿದೆವು. ರತ್ನಾಕರನ ಶತಕಗಳಲ್ಲಿ ನೈತಿಕ, ಸಾಮಾಜಿಕ ಹಾಗೂ ಅಧ್ಯಾತ್ಮಿಕ ಚಿಂತನೆಯ ತ್ರಿವೇಣೀ ಸಂಗಮವಾಗಿದೆ. ಭಗವಾನ್ ಕುಂದ ಕುಂದರು, ಭಗವಾನ್ ಜಿನಸೇನಾಚಾರ್ಯರ ಕೃತಿಗಳನ್ನು ರತ್ನಾಕರಕವಿ ರಕ್ತಗತಮಾಡಿಕೊಂಡು ತನ್ನ ಕೃತಿಗಳಲ್ಲಿ ಅದೇ ಸಮ್ಯಗ್‌ಜ್ಞಾನವನ್ನು ಕಾವ್ಯಮಯವಾದ ಭಾಷೆಯಲ್ಲಿ ಛಂದೋ ವಿಲಾಸದೊಡನೆ ವಿವರಿಸಿರುವನು.

ರತ್ನಾಕರನ ಸಂದೇಶ ಕರ್ನಾಟಕದ ಮನೆ ಮನೆಗೂ ಹರಿಯಬೇಕು. ಶ್ರೀ ಎ. ಆರ್. ನಾಗರಾಜರವರು ಸಂಪಾದಿಸಿದ ರತ್ನಾಕರನ ಶತಕಗಳು ಸಮಯೋಚಿತವಾಗಿವೆ. ಪದ ವಿಭಾಗ, ಅರ್ಥಸಂಪತ್ತು, ವ್ಯಾಖ್ಯಾನ ವೈಖರಿ ಈ ಮೂರು ಸರ್ವಾಂಗಸುಂದರವಾಗಿ, ಸಮರ್ಪಕವಾಗಿ ಈ ಗ್ರಂಥದಲ್ಲಿ ಮೈದಳೆದಿವೆ. ಶ್ರೀ ಎ. ಆರ್. ನಾಗರಾಜರವರು ಪಂಪ–ರನ್ನ–ಜನ್ನ–ರತ್ನಾಕರ ಮುಂತಾದ ಹಳಗನ್ನಡದ ಕವಿಗಳಮೇಲೆ ಕೀರ್ತನ ಶೈಲಿಯಲ್ಲಿ ವ್ಯಾಖ್ಯಾನಮಾಡಿ ವ್ಯಾಖ್ಯಾನಕೇಸರಿಯೆನಿಸಿರುವರು. ಇವರ ಶ್ರೀಕಂಠದಲ್ಲಿ ಕನ್ನಡದ ರತ್ನಾಕರ ಕಮನೀಯ ಸುಧಾಕರನಾಗಿ ತೊಳಗುವನು. ಈ ಭವ್ಯಾತ್ಮರಿಗೆ ಸಕಲ ಸನ್ಮಂಗಳಗಳೂ ಉಂಟಾಗಲಿ ಎಂದು ಆಶೀರ್ವದಿಸುವೆವು.

ಶ್ರವಣಬೆಳಗೊಳ
ಗೊಮ್ಮಟಶಕ ೧೦೦೦

ಏಲಾಚಾರ್ಯ ವಿದ್ಯಾನಂದಮುನಿ

ಸಂದೇಶ

ಕನ್ನಡ ಶತಕ ಸಾಹಿತ್ಯದಲ್ಲಿ ಇತಿಹಾಸದ ಕವಿ ರತ್ನಾಕರನ ಹೆಸರು ಅಜರಾಮರವಾಗಿದೆ. ಸ್ವ. ಶ್ರೀ ಕೆ. ಎಸ್. ಧರಣೇಂದ್ರಯ್ಯನವರು ರತ್ನಾಕರನ ಪದ್ಯಗಳನ್ನು ಚೆನ್ನಾಗಿ ಇಂಪಾಗಿ ಹಾಡಿ ಮನೆ ಮನೆಗೆ ತಲುಪುವಂತೆ ಮಾಡಿದರು. ಅವರಂತೆ ಈಗ ವ್ಯಾಖ್ಯಾನಕೇಸರಿ ಶ್ರೀಯುತ ಎ. ಆರ್. ನಾಗರಾಜ್‌ರವರು ಎಲ್ಲರಿಗೂ ಮನದಟ್ಟಾಗುವಂತೆ ವ್ಯಾಖ್ಯಾನ ಮಾಡುವುದರ ಜೊತೆಗೆ 'ರತ್ನಾಕರ ಶತಕ'ವನ್ನು ಯಶಸ್ವಿಯಾಗಿ ಸಂಪಾದಿಸಿ ಪ್ರಕಾಶನಕ್ಕೆ ತಂದಿರುತ್ತಾರೆ. ಜನಸಾಮಾನ್ಯರಿಗೂ ಉಪಕಾರವಾಗುವುದರಲ್ಲಿ ಸಂದೇಹವಿಲ್ಲ. ಸನ್ಮಂಗಲವಾಗಲಿ ಎಂದು ಶುಭ ಹಾರೈಕೆ.

2-12-1980

ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ.
ಶ್ರವಣಬೆಳಗೊಳ

ಕವಿ - ಕಾವ್ಯ ವಿಮರ್ಶೆ

ಕರ್ನಾಟಕ ಸಾಹಿತ್ಯಸರಸ್ವತಿಯ ಆಸ್ಥಾನದ ಮೊದಲ ಪಂಕ್ತಿಯಲ್ಲಿ ರಾರಾಜಿಸುವ ಕವಿಶ್ರೇಷ್ಠರಲ್ಲಿ ರತ್ನಾಕರ ಮಹಾಕವಿಯೂ ಒಬ್ಬ. ಪಂಪ, ಪೊನ್ನ, ರನ್ನ, ಜನ್ನ, ನಾಗಚಂದ್ರ ಮೊದಲಾದ ಕವಿಪುಂಗವರಂತೆ ರತ್ನಾಕರನೂ ಸಹ ಕರ್ನಾಟಕ ಸಾಹಿತ್ಯ ಸರಸ್ವತೀಮಾತೆಯನ್ನು ತನ್ನ ಅಪೂರ್ವಕೃತಿರತ್ನದಿಂದ ಅಲಂಕರಿಸಿದ್ದಾನೆ. ಕ್ರಿಸ್ತಶಕ ಹದಿನಾರನೆಯ ಶತಮಾನದಲ್ಲಿ ಬಾಳಿ ಬೆಳಗಿದ ರತ್ನಾಕರ ಆ ಶತಮಾನದ ಅಗ್ರಮಾನ್ಯ ಕವಿಯೆಂದು ಧಾರಾಳವಾಗಿ ಹೇಳಬಹುದು.

ಹದಿನೈದು ಹದಿನಾರನೆಯ ಶತಮಾನಗಳಲ್ಲಿ ಇಡೀ ದಕ್ಷಿಣ ಕನ್ನಡ ಜಿಲ್ಲೆ ಜೈನ ಅರಸುಮನೆತನಗಳ ಆಳ್ವಿಕೆಯಲ್ಲಿತ್ತು. ದಕ್ಷಿಣ ಕನ್ನಡ ಪ್ರಾಂತಕ್ಕೆ ಮೂಡುಬಿದಿರೆ ಮಕುಟಮಣಿಯಂತೆ ಶೋಭಿಸುತ್ತಿದೆ. ಜೈನಧರ್ಮದ ನೆಲೆವೀಡು ಮೂಡಬಿದಿರೆ. "ನಾಲಗೆ ಯಾರಿಗುಂಟು ಪೊಗಳಲ್ ನೆರೆ ವೇಣುಪುರ ಪ್ರಭಾವಮಂ" ಎಂದು ಶಾಸನದ ಕವಿ ಮುಕ್ತಕಂಠದಿಂದ ಹೊಗಳಿರುವುದು ವಾಸ್ತವವಾಗಿದೆ. ಹದಿನೆಂಟು ಮನಮೋಹಕ ಜಿನಮಂದಿರಗಳ ಜೊತೆ **ತ್ರಿಭುವನ ತಿಲಕ ಚೂಡಾಮಣಿ**ಯಾದ ಸಾವಿರಕಂಬದ ದಿವ್ಯ ಭವ್ಯ ದೇಗುಲ ಮೂಡುಬಿದಿರೆಯನ್ನು ಅತಿಶಯ ಕ್ಷೇತ್ರವನ್ನಾಗಿ ಮಾಡಿದೆ. "ಪರಮ ಜಿನೇಂದ್ರವಾಣಿಯೇ ಸರಸ್ವತಿ" ಎಂಬ ಪಂಪನ ಉಕ್ತಿಯಂತೆ ಧವಳ ಜಯಧವಳಗಳೆಂಬ ಮಹಾನ್ ಸಿದ್ಧಾಂತ ಗ್ರಂಥಗಳನ್ನು ಸಂರಕ್ಷಿಸಿಕೊಂಡು ಬಂದ ಮಹಾಕ್ಷೇತ್ರ ಮೂಡುಬಿದಿರೆ! ಜಾಜ್ವಲ್ಯಮಾನವಾದ ನವರತ್ನದ ಜಿನಬಿಂಬಗಳನ್ನೊಳಗೊಂಡಿರುವ ಮೂಡಬಿದಿರೆ ರತ್ನಾಕರವಾಗಿ ರಾರಾಜಿಸುತ್ತಿದೆ! ಹೀಗೆ ಸ್ಥಾವರ ಜಿನರತ್ನ ಮೂರ್ತಿಗಳಿಗೆ ಆಗರವಾದ ಮೂಡುಬಿದಿರೆಯಲ್ಲಿ ಜಂಗಮ ಜಿನಮೂರ್ತಿ ರತ್ನಾಕರನು ಮೂಡಿ ಆ ಊರಿನ ಪೆಂಪಿಗೆ ಕಂಪನ್ನೆರೆದಿದ್ದಾನೆ. ತ್ರಿಭುವನಸಾರನೂ, ದಿವ್ಯಧ್ವನಿಸಾರನೂ, ತತ್ತ್ವಾರ್ಥಸಾರನೂ, ವಿದ್ಯಾಸಾರನೂ ಆದ ಪರಮ ಜಿನೇಂದ್ರನ ಪರಮ ಭಕ್ತನಾದ ರತ್ನಾಕರ ತನ್ನ ಕಾವ್ಯಗಳಲ್ಲಿ ಜಿನಾಗಮಸಾರವನ್ನು ಪಂಡಿತರಿಗೂ, ಪಾಮರರಿಗೂ ಅರ್ಥವಾಗುವಂತೆ ಸರಳ, ಸುಂದರ, ಸುಭಗ ಶೈಲಿಯಲ್ಲಿ ಭಟ್ಟಿಯಿಳಿಸಿದ್ದಾನೆ.

ರತ್ನಾಕರನ ಮೇರುಕೃತಿ ಭರತೇಶ ವೈಭವ. ತ್ಯಾಗಭೋಗಗಳ ಸಮನ್ವಯದ ಯೋಗದರ್ಶನವನ್ನು ಕವಿ ಸುಂದರವಾಗಿ ಚಿತ್ರಿಸಿದ್ದಾನೆ. ರಾಷ್ಟ್ರಕವಿ ಕುವೆಂಪು ಈ ಕೃತಿಯಬಗ್ಗೆ ಹೇಳಿರುವ ಮಾತು ಇಲ್ಲಿ ಸ್ಮರಿಸಬಹುದು : "ಕವಿ ಆದರ್ಶವನ್ನು ಭರತನ ಜೀವನದಲ್ಲಿ ಮಾತ್ರವೇ ಅಲ್ಲದೆ ಇಡೀ ಕಾವ್ಯದವಿವರ ವಿವರಗಳಲ್ಲೆಲ್ಲ ಬುದ್ಧಿಪೂರ್ವಕವಾಗಿ ಪ್ರತಿಬಿಂಬಿಸಿರುವುದನ್ನು ನೋಡಿದರಂತೂ ಇಂತಹ ಕಾವ್ಯಸೃಷ್ಟಿ ಜಗತ್ತಿನ ಮತ್ತಾವ ಸಾಹಿತ್ಯದಲ್ಲೂ ಆಗಿರುವಂತೆ ಕಾಣುವುದಿಲ್ಲ. ಆ ದೃಷ್ಟಿಯಿಂದ ಈ ಕೃತಿ ಜಗತ್‌ಕೃತಿ. ಹಿಂದಿನ ಕನ್ನಡ ಸಾಹಿತ್ಯದಲ್ಲಿ ಹಳೆಯ ಕಥೆ ಮತ್ತು ವಿಷಯ ಇವುಗಳಿಂದ ಅತ್ಯಂತ ಸ್ವತಂತ್ರವಾದ ದರ್ಶನವಸ್ತುವನ್ನು ಸೃಷ್ಟಿಸಿ ತನ್ನದೇ ಆದ ಒಂದು ನೂತನ ಮಾರ್ಗದಿಂದ ಭರತೇಶ ವೈಭವದಂತಹ ಬೃಹತ್ ಪ್ರಮಾಣದ ಮಹಾಕೃತಿಯನ್ನಾಗಿಸಿದ ಮಹಾಕವಿಯ ಕೀರ್ತಿ ರತ್ನಾಕರವರ್ಣಿಗೊಬ್ಬನಿಗೆ ಸಲ್ಲುತ್ತದೆ." ಭರತೇಶ ವೈಭವವಲ್ಲದೆ ರತ್ನಾಕರನು ತ್ರಿಲೋಕಶತಕ, ರತ್ನಾಕರಾಧೀಶ್ವರ ಶತಕ, ಅಪರಾಜಿತೇಶ್ವರ ಶತಕ ಎಂಬ ಶತಕತ್ರಯವನ್ನೂ, "ಎರಡುಸಾವಿರ ಗ್ರಂಥದಷ್ಟು ಆಧ್ಯಾತ್ಮಗೀತೆ"ಗಳನ್ನೂ ರಚಿಸಿದ್ದಾನೆ.

ಕವಿಯು ತನ್ನ ಕಾವ್ಯಗಳಲ್ಲಿ ತನ್ನ ವಿಚಾರವಾಗಿ ಹೆಚ್ಚಿಗೆ ಏನೂ ಹೇಳಿಕೊಂಡಿಲ್ಲ. ರತ್ನಾಕರವರ್ಣಿ, ರತ್ನಾಕರ ಅಣ್ಣ, ರತ್ನಾಕರ ಸಿದ್ಧ ಎಂಬ ಬೇರೆ ಬೇರೆ ಹೆಸರುಗಳಿಂದ ತನ್ನನ್ನು ಕರೆದುಕೊಂಡಿರುವನಾದರೂ "ಸಿದ್ಧಪದಕೆ ಸೋತನಾಗಿ ರತ್ನಾಕರ ಸಿದ್ಧನೆನಲೊಪ್ಪಿ" ಎಂದು ಹೇಳಿರುವುದರಿಂದ "ರತ್ನಾಕರಸಿದ್ಧ"ನೆಂಬ ಹೆಸರು ಅವನಿಗೆ ಅತ್ಯಂತ ಮೆಚ್ಚುಗೆಯಾದುದು. ತನ್ನ ತಂದೆ ತಾಯಿಗಳ ಹೆಸರನ್ನು ಎಲ್ಲೂ ಸೂಚಿಸಿಲ್ಲ. "ಶ್ರೀ ಮಂದರಸ್ವಾಮಿ ನನ್ನಯ್ಯ" ಎಂದು ಹೇಳಿಕೊಂಡಿದ್ದಾನೆ. ತನ್ನ ನಾಡು ಕರ್ನಾಟಕ, ವಂಶ ಕ್ಷತ್ರಿಯವಂಶ, ದೀಕ್ಷಾಗುರು ಚಾರುಕೀರ್ತ್ಯಾಚಾರ್ಯ, ಮೋಕ್ಷಗುರು ಹಂಸನಾಥ; ಈ ಮೋಕ್ಷಗುರುವಿನ ಅಣತಿಯಂತೆ, ಆತ್ಮಸಂತೋಷಕ್ಕಾಗಿ ಭರತೇಶ ವೈಭವವನ್ನು ಬರೆದ ;

ಬಿನ್ನಹ ಗುರುವೆ ಧ್ಯಾನಕೆ ಬೇಸರಾದಾಗ
ನಿನ್ನನಾದಿಯ ಮಾಡಿಕೊಂಡು
ಕನ್ನಡದೊಳಗೊಂದು ಕಥೆಯ ಪೇಳುವೆನದು
ನಿನ್ನಾಜ್ಞೆಕಂಡ ನನ್ನೊಡೆಯಾ

ಇಷ್ಟೇ ಆತನು ತನ್ನನ್ನು ಕುರಿತು ಹೇಳಿಕೊಂಡಿರುವುದು. ಹತ್ತುಸಾವಿರ ಪದ್ಯಗಳ ಭರತೇಶ ವೈಭವವನ್ನು ಕೇವಲ ಒಂಬತ್ತು ತಿಂಗಳುಗಳಲ್ಲಿ ರಚಿಸಿದನೆಂದು ಹೇಳುವ ರತ್ನಾಕರನ ಮಾತು ಒಂದು ಪವಾಡದಂತೆ ಕಾಣುತ್ತದೆ.

ರತ್ನಾಕರ ಮಹಾಕವಿಯ ಜೀವನದ ಪರಿಚಯುವನ್ನು ಕ್ರಿ. ಶ. 1770–1841ರ ನಡುವೆ ಬಾಳಿದ ದೇವಚಂದ್ರ ತನ್ನ ರಾಜಾವಳೀ ಕಥೆಯಲ್ಲಿ ಚಿತ್ತಾಕರ್ಷಕವಾಗಿ ಮಾಡಿಕೊಟ್ಟಿದ್ದಾನೆ. ಅದನ್ನು ಹೀಗೆ ಸಂಗ್ರಹಿಸಬಹುದು.

"ತುಳುವದೇಶದ ಮೂಡಬಿದಿರೆಯೊಳ್ ಸೂರ್ಯವಂಶದರಸನಾಗಿದ್ದ
ದೇವರಾಜನ ಪುತ್ರಂಗೆ ಕಡಲಾದಿಪರಮೇಶನ ಪೆಸರಿಡಲಾತಂ ಬಾಲಕಾಲದೊಳ್
ಕಾವ್ಯಾಲಂಕಾರ ಲಕ್ಷಣಶಾಸ್ತ್ರದೊಳತಿ ನಿಪುಣನಾಗಿ ಸಾರತ್ರಯಕ್ಕೆ ಕೇಶವವರ್ಯರು
ರಚಿಸಿದ ವ್ಯಾಖ್ಯಾನಂಗಳಂ ಕುಂದ ಕುಂದಾರ್ಯೋಕ್ತ ಆಧ್ಯಾತ್ಮಸಿದ್ಧಾಂತಕ್ಕೆ
ಪ್ರಭೇಂದುಗಳು ಮಾಡಿದ ಟೀಕಂ ಸಮಾಧಿಶತಕ ಏಕಸಪ್ತತಿ ಸ್ವರೂಪ
ಸಂಬೋಧನೆ ಮೊದಲಾದನೇಕ ಪರಮಾಗಮಂಗಳಂ ಹೃದ್ಗತಮಾಗೆ ತಿಳಿದು
ಕವೀಶ್ವರನಾಗಿ ಆ ದೇಶದರಸು ಸೋಮವಂಶದ ಭೈರಸ ಒಡೆಯರ ಸಭೆಯೊಳ್
ಶೃಂಗಾರಕವಿಯೆಂಬ ಪೆಸರಾಂತು ರತ್ನಾಕರನೆಂಬಭಿಧಾನದಿಂ ವಿದ್ವಾಂಸರ್ಗಧಿಕನಾಗಿ
ಯೋಗರತ್ನಾಕರಶಾಸ್ತ್ರಾಭ್ಯಾಸದಿಂ ದಶವಾಯುಗಳಂ ಸಾಧಿಸಿರ್ದು ನಿಜಗುರುವಪ್ಪ
ಮಹೇಂದ್ರಕೀರ್ತಿಗಳಿಂದ ಅಣುವ್ರತದೀಕ್ಷೆಗೊಂಡು ಆಗಮಂಗಳೊಳತಿ
ನಿಪುಣನಾಗಿ ಆಧ್ಯಾತ್ಮದೊಳಹರ್ನಿಶಂ ಕೂಡಿರೆ, ವಿಜಯಕೀರ್ತಿಗಳೆಂಬ
ಪಟ್ಟಾಚಾರ್ಯರ ಶಿಷ್ಯರಾದ ವಿಜಯಣ್ಣಗಳು ದ್ವಾದಶಾನುಪ್ರೇಕ್ಷೆಗಳಂ
ಕನ್ನಡದಿಂ ಸಂಗೀತಮಾಗಿ ವೃತ್ತವಚನದಿಂ ಮಾಡಿ ಆನೆಯ ಮೇಲೆ
ಪ್ರಭಾವನೆಯುಂ ಮಾಡಿಸಲೀ ರತ್ನಾಕರಾರ್ಯಂ ಭರತೇಶ್ವರ ಚರಿತಮುಂ
೮೪ ಸಂಧಿಯುಂ ಮಾಡಿ ಮಾತಂಗಮನೇರಿಸಿ ಮೆರೆಯಿಸವೇಳ್ಕೆಂಬುದುಂ
ಪಟ್ಟಾಚಾರ್ಯರು ಇದರೊಳೆರಡು ಮೂರು ವಾಕ್ಯಂ ಪುರಾಣಕ್ಕೆ
ವಿರೋಧಮಿರ್ಪುದದರಿಂದಾಗದೆಂಬುದುಂ ಅದೆ ಸಂವಾದಮಾಗಿ
ಚರ್ಚಿಸಿದೊಡೆ ತನ್ನ ತಿರಸ್ಕರಿಸಿ ೭೦೦ ಶ್ರಾವಕರ ಗೃಹಗಳೊಳ್
ಚರಿಗೆಯುಂ ಮಾಡದಿರಲು ನಿಜಾನುಜೆಯಿಂದಾಹಾರಂ ಕೊಳ್ಳುತ್ತೆ
ಕೋಪಮುದಯಿಸಿ ಆತ್ಮಜ್ಞಾನಿಗೆ ಜಾತಿಕುಲಮಾವುದಾದೊಡಂ
ಸಮವೆಂದು ಲಿಂಗಮುಂ ಕಟ್ಟಿಕೊಂಡು ವೀರಶೈವ ಶಾಸ್ತ್ರಂಗಳಂ
ಬಸವಪುರಾಣಂ ಮೊದಲಾಗೆ ಮಾಡಿ ಕೆಲವು ದಿನದಿಂ ಮೇಲೆ ಉಪಶಮವಂ
ತಾಳ್ದು ಸನ್ಮಾರ್ಗದೊಳ್ ನಂಬಿ ನಡೆದಂ. ರತ್ನಾಕರಶತಕಂ, ಅಪರಾಜಿತ ಶತಕಂ,
ತ್ರಿಲೋಕ ಶತಕಂ, ಆಧ್ಯಾತ್ಮಗೀತಂಗಳೊಳ್ ೨೦೦೦ ಗ್ರಂಥದಷ್ಟು ಪೇಳಿದಂ.

ಶಕವರುಷ ೧೪೮೯ (ಕ್ರಿ. ಶ. ೧೫೫೭) ಸಂದಿರ್ದುದು. ರಾಜ ಒಡೆಯರ ಕಾಲವಾದಮೇಲೆ ಚಾಮರಾಜರ ಕಾಲದಲ್ಲಿ ಸಭೆಯಲ್ಲಿ ರತ್ನಾಕರಾರ್ಯ ವಿರಚಿತ ಭರತೇಶ್ವರ ಚರಿತೆ ೮೪ ಸಂಧಿಯನೋದಿದರು.

ಮೇಲಿನ ಬರವಣಿಗೆಯಿಂದ ರತ್ನಾಕರನು ಸೂರ್ಯವಂಶದ ಕ್ಷತ್ರಿಯ ಕುಲದಲ್ಲಿ ಜನಿಸಿದವನೆಂದೂ, ಕ್ರಿಸ್ತಶಕ ೧೬ನೇ ಶತಮಾನದ ಮಧ್ಯಕಾಲದಲ್ಲಿ ಬಾಳಿದನೆಂದೂ. ಪ್ರಾಕೃತ, ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಪಂಡಿತನಾಗಿದ್ದನೆಂದೂ, ಆಧ್ಯಾತ್ಮ ವಿದ್ಯೆಯಲ್ಲಿ ನಿಪುಣನಾಗಿದ್ದನೆಂದೂ, ಕಾರ್ಕಳದ ಭೈರವರಸ ಒಡೆಯರ ಆಸ್ಥಾನಕವಿಯಾಗಿದ್ದು "ಶೃಂಗಾರಕವಿ" ಎಂಬ ಪ್ರಶಸ್ತಿ ಲಭ್ಯವಾಗಿತ್ತೆಂದೂ ತಿಳಿಯುತ್ತದೆ. ತನಗೂ ಮತ್ತು ಮೂಡುಬಿದಿರೆ ಶ್ರೀಮಠದ ಚಾರುಕೀರ್ತಿ ಭಟ್ಟಾರಕರಿಗೂ ಸಿದ್ಧಾಂತ ವಿಷಯಗಳಲ್ಲಿ ಭಿನ್ನಾಭಿಪ್ರಾಯವುಂಟಾಗಿ ಅದರಿಂದ ಮನಸ್ತಾಪವುಂಟಾಗಿ ಭಟ್ಟಾರಕರ ಕೋಪಕ್ಕೆ ತುತ್ತಾದ್ದರಿಂದ ಕ್ರುದ್ಧನಾಗಿ ಜೈನಮತವನ್ನು ತೊರೆದು ವೀರಶೈವ ಮತವನ್ನು ಸ್ವೀಕರಿಸಿ ಲಿಂಗಧಾರಿಯಾಗಿ ಕೆಲವು ಆ ಮತಗ್ರಂಥಗಳನ್ನು ರಚಿಸಿದನೆಂದೂ, ಸ್ವಲ್ಪಕಾಲ ಕಳೆದಮೇಲೆ ಕೋಪವು ಇಳಿದನಂತರ ಮತ್ತೆ ಜೈನಮತಾವಲಂಬಿಯಾಗಿ ರತ್ನಾಕರ ಶತಕ, ಅಪರಾಜಿತ ಶತಕ, ತ್ರಿಲೋಕ ಶತಕಗಳನ್ನೂ, ಆಧ್ಯಾತ್ಮಗೀತಗಳನ್ನೂ ರಚಿಸಿದನೆಂದೂ ಗೊತ್ತಾಗುತ್ತದೆ.

ರತ್ನಾಕರನ ವಿಚಾರದಲ್ಲಿ ದಂತಕಥೆಯೊಂದು ಜನಜನಿತವಾಗಿ ಪ್ರಚಾರದಲ್ಲಿರುವಂತೆ ಉಗ್ರಾಣದ ಮಂಗೇಶರಾಯರು ಸಂಪಾದಿಸಿರುವ ಭರತೇಶವೈಭವ ಗ್ರಂಥದ ಮುನ್ನುಡಿಯಿಂದ ತಿಳಿದುಬರುತ್ತದೆ. ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯರಿಂದ ದೀಕ್ಷಿತನಾದ ರತ್ನಾಕರನು ತನ್ನ ದೈವದತ್ತವಾದ ಕವಿತಾ ಸಾಮರ್ಥ್ಯದಿಂದ ದಿನದಿನಕ್ಕೆ ಕೀರ್ತಿಶಾಲಿಯಾಗಿ ಪ್ರವರ್ಧಮಾನನಾಗುತ್ತಿದ್ದನು. ಇವನ ಅಭ್ಯುದಯವನ್ನು ಸಹಿಸದ ಕೆಲವು ಕುಹಕಿಗಳು ಅಸೂಯೆಯಿಂದ ಆತನು ಮಲಗುವ ಮಂಚದ ಕೆಳಗೆ ಒಬ್ಬ ವೇಶ್ಯೆಯನ್ನು ಬಚ್ಚಿಟ್ಟು ರತ್ನಾಕರನ ಕೀರ್ತಿಗೆ ಮಸಿ ಬಳಿಯಲು ಪ್ರಯತ್ನಿಸಿದರು. ಅವಮಾನಿತನಾದ ರತ್ನಾಕರನು ತನ್ನ ಹಿತಚಿಂತಕರ ಮಾತನ್ನೂ ಕೇಳದೆ, ನೆಟ್ಟನೆ ನಡೆದು ಹೊಳೆಯನ್ನು ಸೇರಿ, ಜಿನಧರ್ಮಕ್ಕೆ ಜಲಾಂಜಲಿಯಿತ್ತೆನೆಂದು ಘೋಷಿಸಿ ನೀರಿನಲ್ಲಿ ಮುಳುಗುಹಾಕಿ ಮೇಲೆದ್ದು ಘಟ್ಟದ ಮೇಲಕ್ಕೆ ಹೋದನು. ಅಲ್ಲಿ ಒಂದು ಶೈವಗ್ರಂಥವನ್ನು ಆನೆಯಮೇಲೆ ಇರಿಸಿ ಮೆರೆಸುತ್ತಿದ್ದುದನ್ನು ಕಂಡು ಆ ಗ್ರಂಥವು ಆ ಗೌರವಕ್ಕೆ ಪಾತ್ರವಲ್ಲವೆಂದೂ, ಸಾರವಲ್ಲದುದೆಂದು ಎಲ್ಲರಮುಂದೆ ನಿರ್ಭಯನಾಗಿ ತನ್ನ ಅಭಿಪ್ರಾಯವನ್ನು ಸಾರಿದನು. ಇದರಿಂದ ಕುಪಿತರಾದ ಜನರು ರಾಜನಲ್ಲಿ ದೂರಿದರು. ರಾಜನು ರತ್ನಾಕರನನ್ನು ಕರೆಸಿ ವಿಚಾರಿಸಲಾಗಿ ಪುನಃ ತನ್ನ ಅಭಿಪ್ರಾಯವನ್ನೇ ಉಚ್ಚರಿಸಿದನು, ಹಾಗೂ ತನ್ನ ಕವಿತಾ ಸಾಮರ್ಥ್ಯವನ್ನು ತೋರಲು ಅವಕಾಶ ಬೇಡಿ ಕೇವಲ ಒಂಬತ್ತು ತಿಂಗಳೊಳಗೆ ಹತ್ತುಸಾವಿರ ಪದ್ಯಗಳನ್ನೊಳಗೊಂಡ ಭರತೇಶ ವೈಭವನೆಂಬ ಮಹಾಕಾವ್ಯವನ್ನು ರಚಿಸಿ ರಾಜನನ್ನೂ ಆತನ ಸಭಾಸದರನ್ನೂ ಮೆಚ್ಚಿಸಿದನು. ಅನಂತರ ರಾಜನ ಬೇಡಿಕೆಯಂತೆ ವೀರಶೈವ ಮತವನ್ನು ಅವಲಂಬಿಸಿದನು. ಆದರೂ ತನ್ನ ಮರಣಾನಂತರ ಉತ್ತರಕ್ರಿಯಾದಿಗಳನ್ನು ನಡೆಸಬೇಕೆಂದು ತಿಳಿಸಿದುದಲ್ಲದೇ, ಸಾಯುವ ಮುನ್ನ ತಾನು ಅಂತರಂಗದಲ್ಲಿ ಜೈನಧರ್ಮಿಯನಾಗಿಯೇ ಇದ್ದನೆಂಬುದನ್ನೂ, ತಾನು ಕೊರಳಲ್ಲಿ ಕಟ್ಟಿಕೊಂಡಿದ್ದುದು ಕೇವಲ ಒಂದು ಗೋಟಡಿಕೆಯೇ ಹೊರತು ಲಿಂಗವಲ್ಲವೆಂಬುದನ್ನೂ ಎಲ್ಲರಿಗೂ ಪ್ರತ್ಯಕ್ಷಪ್ರಮಾಣಮಾಡಿಕೊಟ್ಟನು.

ಮೇಲಿನ ಎರಡು ಕಥೆಗಳಿಂದಲೂ ರತ್ನಾಕರನು ತನ್ನ ಹರೆಯದಲ್ಲಿ ಶೃಂಗಾರಕ್ಕೆ ಮನಸೋತ ರಸಿಕಜೀವಿಯೆಂದು ಹೇಳಬಹುದಾಗಿದೆ. ಇದಕ್ಕೆ ಭರತೇಶವೈಭವವೇ ಸಾಕ್ಷಿ. ಆದರೂ ಅವನ ಅಂತರಂಗದಲ್ಲಿ ವೈರಾಗ್ಯದ ಮೊಳಕೆ ಇದ್ದೇಯಿತ್ತು. ಆ ವೈರಾಗ್ಯ ಮೊಳೆತು ಚಿಗುರೊಡೆಯಲು ಮೇಲಿನ ಪ್ರಸಂಗಗಳು ನಿಮಿತ್ತಗಳಾದವು. ಉದ್ದಾಮ ವಿದ್ವಾಂಸನಾಗಿದ್ದ ರತ್ನಾಕರನ ಘನ ವಿದ್ವತ್ತನ್ನು ನೋಡಿ ಸೈರಿಸಲಾರದೆ ಕೆಲವು ತಿಳಿಗೇಡಿಗಳು ಆ ಸಜ್ಜನನಿಗೆ ನಿಷ್ಕಾರಣವಾಗಿ ತೊಂದರೆಕೊಟ್ಟದ್ದರಿಂದ ಬೇಸತ್ತು ವೀರಶೈವ ಮತವನ್ನವಲಂಬಿಸಿದ. ಬಳಿಕ ಅವನು ಸೋಮೇಶ್ವರ ಶತಕವನ್ನು ರಚಿಸಿದನೆಂದು ಪ್ರತೀತಿಯಿದೆ.

ವರಸಮ್ಯಕ್ತ್ವ ಸುಧರ್ಮ ಜೈನಮತದೊಳ್ತಾಂಪುಟ್ಟಿಯಾದೀಕ್ಷೆಯಂ ।
ಧರಿಸೀ ಸನ್ನುತ ಕಾವ್ಯಶಾಸ್ತ್ರಗಳುಮಂ ನಿರ್ಮಾಣಮಂ ಮಾಡುತಂ ॥
ವರರತ್ನಾಕರಯೋಗಿಯೆಂದು ಸಿರುತಂ ವೈರಾಗ್ಯಬಂದೇರಲಾಂ ।
ಹರದೀಕ್ಷಾವ್ರತನಾದನೈ ಹರಹರಾ ಶ್ರೀ ಚೆನ್ನಸೋಮೇಶ್ವರಾ ॥

ಈ ಪದ್ಯವನ್ನು ನೋಡಿದರೆ ರತ್ನಾಕರನೇ ಸೋಮೇಶ್ವರ ಶತಕವನ್ನು ರಚಿಸಿದನೆಂದು ಊಹಿಸಲು ಅವಕಾಶ ವಿದೆ. ಪಂಡಿತ ಶ್ರೀ ಎಂ. ಜಿ. ನಂಜುಂಡಾರಾಧ್ಯರು ಬರೆದಿರುವ "ಕವಿ ರತ್ನಾಕರನೂ ಸೋಮೇಶ್ವರ ಶತಕವೂ" ಎಂಬ ಲೇಖನದಲ್ಲಿ ಸೋಮೇಶ್ವರ ಶತಕವು ಪಾಲ್ಕುರಿಕೆ ಸೋಮನಾಥನಿಂದಾಗಲಿ ಮತ್ತಾವ ವೀರಶೈವ ಕವಿಯಿಂದಾಗಲಿ ರಚಿತವಾಗಿರದೆ ಕನ್ನಡ ಕವಿಶ್ರೇಷ್ಠನಾದ ರತ್ನಾಕರನಿಂದಲೇ ರಚಿತವಾಗಿದೆಯೆಂದು ಸ್ಪಷ್ಟವಾಗಿ ಕೆಲವು ಆಧಾರಗಳ ಸಹಿತ ಹೇಳಿದ್ದಾರೆ. ಶೈಲಿಯಲ್ಲಿಯೂ ರತ್ನಾಕರಶತಕ-ಸೋಮೇಶ್ವರಶತಕಗಳು ಪರಸ್ಪರ ಹೋಲುತ್ತವೆ. ಕೆಲವರು ಈ ಅಭಿಪ್ರಾಯಕ್ಕೆ ಒಪ್ಪುವುದಿಲ್ಲ. ಆದ್ದರಿಂದ "ಇದಮಿತ್ಥಂ" ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಇದುವರೆವಿಗೂ ರತ್ನಾಕರನ ರಸಿಕಜೀವನದ ವಿಚಾರವನ್ನಾಗಲಿ, ಮತಾಂತರಗಳನ್ನಾಗಲಿ ಕುರಿತು ನಮ್ಮಲ್ಲಿ ಸಂಶೋಧನೆ ನಡೆದಿಲ್ಲ.

ರತ್ನಾಕರನ ಕೃತಿಗಳಲ್ಲಿ ತ್ರಿಲೋಕ ಶತಕವು ಪ್ರಥಮ ಕೃತಿಯೆಂದು ಪರಿಗಣಿಸಲು ಅವಕಾಶವಿದೆ. ಕವಿಯ ಕೃತಿಗಳಲ್ಲೆಲ್ಲ ತ್ರಿಲೋಕ ಶತಕವು ನೀರಸವಾದುದು. ರತ್ನಾಕರನ ಕಾವ್ಯಪ್ರತಿಭೆ ಅರಳುತ್ತಿದ್ದ ಪ್ರಾರಂಭದ ಸಮಯದಲ್ಲಿ ಈ ಕೃತಿಯನ್ನು ರಚಿಸಿದ್ದಿರಬೇಕು. ಏಕೆಂದರೆ ಭರತೇಶ ವೈಭವದಂತಹ ಮೇರುಕೃತಿಯನ್ನು ರಚಿಸಿ ಭೋಗ-ಯೋಗಗಳ ಸಮನ್ವಯಾಚಾರ್ಯನೆಂದು ಹಾಡಿ ಹೊಗಳಿಸಿಕೊಂಡಿರುವ ರತ್ನಾಕರ ತ್ರಿಲೋಕ ಶತಕದಂತಹ ಸಾಧಾರಣ ಸಾಹಿತ್ಯವನ್ನು ತನ್ನ ಇತರ ಕೃತಿಗಳ ರಚನೆಯನಂತರ ರಚಿಸಿರುವ ಸಾಧ್ಯತೆ ಇಲ್ಲವೇ ಇಲ್ಲವೆಂದು ಹೇಳಬಹುದು.

ತ್ರಿಲೋಕ ಶತಕದಲ್ಲಿ ಕಂಡುಬರುವ ಕೆಳಗಿನ ಪದ್ಯದ ಆಧಾರದಿಂದ ಕವಿಯ ಕಾಲವನ್ನು ನಿರ್ಣಯಿಸಬಹುದು.

ಮಣಿಶೈಲಂ ಗತಿಯಿಂದು ಶಾಲಿಶಕ ಕಾಲಂ ಸಂದಿರಲ್ ತೌಳವಾಂ ।
ಗಣದೊಳ್ವೇಣು ಪುರಾಂಕದೊಳ್ ಸೃಜಿಸಿದಂ ರತ್ನಾಕರಾರ್ಯಂ ನಿಜೇ ।
ಕ್ಷಣ ತಾತ್ಪರ್ಯಮಿದೀ ತ್ರಿಲೋಕ ಶತಕಂ ....

ಮೂಡುಬಿದಿರೆಯನ್ನು ಹಿಂದೆ ವೇಣುಪುರ ಎನ್ನುತ್ತಿದ್ದರು. ಮಣಿ–9, ಶೈಲ–7, ಗತಿ–4, ಇಂದು–1, ಇದರಿಂದ ತ್ರಿಲೋಕಶತಕ ಶಾ. ಶ. 1479 ಎಂದರೆ ಕ್ರಿ. ಶ. 1557ರಲ್ಲಿ ರಚಿತವಾಗಿರಬೇಕೆಂದು ತಿಳಿಯುತ್ತದೆ. ಈ ಕೃತಿಯನ್ನು ರತ್ನಾಕರ ತನ್ನ ಹರೆಯದಲ್ಲಿ ಅಂದರೆ ಸುಮಾರು ಅವನ ಇಪ್ಪತ್ತೈದನೆಯ ವಯಸ್ಸಿನಲ್ಲಿ ರಚಿಸಿದ್ದರೆ, ಅವನ ಜನನಕಾಲ ಸುಮಾರು ಕ್ರಿ. ಶ. 1532 ಎಂದು ಹೇಳಬಹುದು. ತ್ರಿಲೋಕ ಶತಕದ ರಚನೆಯ ನಂತರ ಸುಮಾರು ಹತ್ತು ವರ್ಷಗಳ ಅಂತರದಲ್ಲಿ ರತ್ನಾಕರ ಭರತೇಶ ವೈಭವವನ್ನು ರಚಿಸಿರಬಹುದು. ಈ ಕೃತಿಯ ರಚನೆಯ ನಂತರ ಅವನಿಗೂ ಮೂಡಬಿದಿರೆಯ ಮಠಾಧೀಶ್ವರರಿಗೂ ಮನಸ್ತಾಪವುಂಟಾಗಿ, ಜೈನಮತವನ್ನು ತ್ಯಜಿಸಿ ವೀರಶೈವನಾಗಿರಬೇಕು. ಕೇವಲ ಒಂದೆರಡು ವರ್ಷ ಈ ಅಜ್ಞಾತವಾಸದಲ್ಲಿದ್ದು ಮನಸ್ಸು ಸ್ತಿಮಿತಗೊಂಡಮೇಲೆ ಪುನಃ ಜಿನಧರ್ಮಕ್ಕೆ ಶರಣುಹೋಗಿರಬೇಕು. ಈ ಸಮಯಕ್ಕೆ ರತ್ನಾಕರನ ಮನಸ್ಸು ಪರಿಪಕ್ವವಾಗಿ ವೈರಾಗ್ಯದತ್ತ ಸಾಗಿದೆಯೆಂಬುದನ್ನು ಸೂಚಿಸಲು ಅವನ ರತ್ನಾಕರಶತಕ. ಅಪರಾಜಿತಶತಕ ಹಾಗೂ ಆಧ್ಯಾತ್ಮಗೀತಗಳ ರಚನೆಯೇ ಸಾಕ್ಷಿ. ಮೇಲಿನ ವಿಷಯಗಳಿಂದ ರತ್ನಾಕರನ ಜಾತಕದ ರೂಪರೇಷೆಯನ್ನು ಹೀಗೆ ಹೇಳಬಹುದು.

ರತ್ನಾಕರನ ಜನನ ಸುಮಾರು	1532
ತ್ರಿಲೋಕಶತಕದ ರಚನೆ ಸುಮಾರು	1557
ಭರತೇಶ ವೈಭವದ ರಚನೆ ಸುಮಾರು	1567
ರತ್ನಾಕರ ವೀರಶೈವನಾದುದು ಸುಮಾರು	1572
ರತ್ನಾಕರ ಮತ್ತೆ ಜೈನನಾದುದು ಸುಮಾರು	1575
ರತ್ನಾಕರ ಶತಕದ ರಚನೆ ಸುಮಾರು	1577
ಅಪರಾಜಿತೇಶ್ವರ ಶತಕದ ರಚನೆ ಸುಮಾರು	1582

ಆಧ್ಯಾತ್ಮಗೀತದ ರಚನೆ ಸುಮಾರು 1587
ರತ್ನಾಕರನ ಮರಣ ಕ್ರಿ. ಶ. 1600 ನಂತರ.

ರತ್ನಾಕರನ ಜಾತಕದ ಈ ವಾದ ಸರಣಿಯನ್ನು ಶ್ರೀಮಾನ್ ಜಿ. ಬ್ರಹ್ಮಪ್ಪನವರು ತಾವು ಸಂಪಾದಿಸಿರುವ "ಭರತೇಶ ವೈಭವ"ದ ಕವಿ-ಕಾವ್ಯ ವಿಮರ್ಶೆಯಲ್ಲಿ ವಿಶದಪಡಿಸಿದ್ದಾರೆ.

ಶತಕತ್ರಯ :

ರತ್ನಾಕರನ ಮೂರು ಶತಕಗಳು ಜೈನಾಗಮಗಳ ಸರ್ವಸಾರವಾಗಿದೆ. ಪೂರ್ವಾಚಾರ್ಯರ ಪ್ರಾಕೃತ, ಸಂಸ್ಕೃತ ಶಾಸ್ತ್ರಗ್ರಂಥಗಳನ್ನು ರತ್ನಾಕರ ಆಳವಾಗಿ ಅಭ್ಯಾಸಮಾಡಿ ಅವುಗಳಲ್ಲಿನ ಸಾರಸರ್ವಸ್ವವನ್ನು ಪೂರ್ಣವಾಗಿ ಅರಗಿಸಿಕೊಂಡಿದ್ದನೆಂಬುದಕ್ಕೆ ಅವನ ಶತಕತ್ರಯಗಳೇ ಸಾಕ್ಷಿ. ಒಂದೊಂದು ಶತಕದಲ್ಲೂ 128 ಪದ್ಯಗಳಿವೆ. ತ್ರಿಲೋಕಶತಕವು ಜೈನಸಿದ್ಧಾಂತದಲ್ಲಿ ಹೇಳಿರುವ ತ್ರಿಲೋಕಗಳ ವರ್ಣನೆಯಾಗಿದೆ. ಈ ಶತಕವುಮಾತ್ರ ಕಂದಪದ್ಯರೂಪದಲ್ಲಿದ್ದು ಉಳಿದೆರಡು ಶತಕಗಳಾದ ರತ್ನಾಕರಶತಕ ಮತ್ತು ಅಪರಾಜಿತೇಶ್ವರ ಶತಕಗಳು ವೃತ್ತರೂಪದಲ್ಲಿದೆ.

ರತ್ನಾಕರಶತಕದ ನಾಂದಿ ಪದ್ಯದಲ್ಲಿ ಬರುವ " ಶೃಂಗಾರ ಶ್ರೀ ಕವಿಹಂಸರಾಜನೊಡೆಯ ರತ್ನಾಕರಾಧೀಶ್ವರಾ " ಎಂಬ ವಾಕ್ಯದಲ್ಲಿರುವ 'ಹಂಸರಾಜ' ಎಂಬುದು ಒಬ್ಬ ಕವಿಯ ಅಂಕಿತನಾಮವೆಂದು, ಕೆಲವು ಕವಿಚರಿತೆಕಾರರು ತಮ್ಮ ವಾದವನ್ನು ಮುಂದಿಟ್ಟು ರತ್ನಾಕರಶತಕವು, ಭರತೇಶ ವೈಭವದ ರಚನಾಕಾರನಾದ ರತ್ನಾಕರನದಲ್ಲವೆಂದು ವಾದಿಸಿ ಉಳಿದೆರಡು ಶತಕಗಳು ಮಾತ್ರ ಆತನವೇ ಎಂದು ಒಪ್ಪಿಕೊಂಡಿರುವರು. ಆದರೆ ಆ ಪದಪುಂಜದಲ್ಲೇ ಬರುವ "ರತ್ನಾಕರಾಧೀಶ್ವರಾ" ಎಂಬ ಪದದ ಬಗ್ಗೆ ಮೌನತಾಳಿದ್ದಾರೆ. ಅವರ ಈ ವಾದ ಹುರುಳಿಲ್ಲದುದು. ರತ್ನಾಕರನ ಉಸಿರಾದ ಭೇದವಿಜ್ಞಾನ, ಭರತೇಶ ವೈಭವದಲ್ಲಿ ರತ್ನಾಕರ ಚಿತ್ರಿಸಿರುವ ಭರತೇಶನ ಆದರ್ಶಮಯವಾದ ವ್ಯಕ್ತಿತ್ವ, ಅವನು ನುಡಿದಿರುವ ಉತ್ತಮ ಶ್ರಾವಕನ ಲಕ್ಷಣಗಳು, ಮುನಿಸಂಪ್ರದಾಯ ಮುಂತಾದ ಅನೇಕ ವಿಚಾರಗಳನ್ನು ರತ್ನಾಕರ ತನ್ನ ರತ್ನಾಕರ ಶತಕವಲ್ಲೂ ಪುನರುಚ್ಚಿಸಿರುವುದರಿಂದ ಈ ಶತಕವೂ ರತ್ನಾಕರನದ್ದೇ ಎಂದು ಹೇಳುವುದರಲ್ಲಿ ಯಾವ ಸಂಶಯವೂ ಇಲ್ಲ.

ಪೆರರಂ ಪೇಳ್ದೊಡೆ ನೋವರಾನೆನಗೆ ಪೇಳ್ವೆಂ ಕಾಮಿನೀ ಮೂತ್ರದೊ ।
ಜ್ಜರಮೆಯ್ಯಂ ಲತೆಯೆಂದು ಮಾಂಸಕುಚಮಂ ಹೇಮಾಬ್ಜ ಮೆಂದೆಂದು ನೆ ॥
ತ್ತರನುಂಡಾ ತುಟಿಯಂ ಸುಧಾರುಚಿಯೆನುತ್ತಾಂ ಬಿಳ್ದುದುಂ ಸಾಲದೆ ।
ನ್ಯರನೊಯ್ದೆಂ ಕವಿಯೋ ವಲಂ ಕಪಿಯೋ ನಾಂ ರತ್ನಾಕರಾಧೀಶ್ವರಾ ॥

ರತ್ನಾಕರಶತಕವನ್ನು ರಚಿಸುವ ಸಮಯಕ್ಕೆ ರತ್ನಾಕರನ ಮನಸ್ಸು ಪೂರ್ಣ ವೈರಾಗ್ಯದಕಡೆ ವಾಲಿದೆ. ಲೌಕಿಕ ಭೋಗೋಪಭೋಗದ ಕಡೆ ಅವನ ಮನಸ್ಸು ಹರಿಯುವುದಿಲ್ಲ. ತಾನು ಹಿಂದೆ ರಚಿಸಿದ ಭರತೇಶ ವೈಭವದಲ್ಲಿ ಶೃಂಗಾರ ತುಸು ಹೆಚ್ಚಾಯಿತೆಂದು ಅವನಿಗೆ ಅನಿಸಿರಬೇಕು. ಆದ್ದರಿಂದಲೇ ಮೇಲಿನ ಪದ್ಯ ಪಶ್ಚಾತ್ತಾಪ ರೂಪದಲ್ಲಿದೆ. ಈ ಪದ್ಯದಿಂದ ರತ್ನಾಕರಶತಕದ ಕರ್ತೃ ರತ್ನಾಕರನೇ ಹೊರತು ಬೇರೆ ಇನ್ನಾವ ಕವಿಯೂ ಆಗಿರಲಾರನೆಂದು ಹೇಳಬಹುದು. ರಾಜಾವಳೀ ಕಥೆಯ ದೇವಚಂದ್ರ, ಉಗ್ರಾಣದ ಮಂಗೇಶರಾಯರು, ತ. ಸು. ಶಾಮರಾಯರು, ಎ. ಶಾಂತಿರಾಜಶಾಸ್ತ್ರಿಗಳು ಮತ್ತು ರಾಷ್ಟ್ರಕವಿ ಗೋವಿಂದಪೈಗಳು—ಇವರೆಲ್ಲ ಶತಕತ್ರಯ ಪೂರ್ತಿ ರತ್ನಾಕರನವೆಂದು ಮನಸಾರೆ ಒಪ್ಪಿಕೊಂಡಿರುವರು.

ರತ್ನಾಕರನ ಶತಕಗಳಲ್ಲಿ ಶೃಂಗಾರ ಸನ್ನಿವೇಶಗಳಿಲ್ಲ. ಸರಸ-ಸಲ್ಲಾಪಗಳಿಲ್ಲ. ಮಾನವಜನ್ಮ ಕ್ಷಣಿಕ. ಈ ಕ್ಷಣಿಕ ಜೀವನದ ವಿಷಯ ಗೊತ್ತಿದ್ದರೂ ಮಾನವ ತನ್ನ ಜೀವನದ ಉನ್ನತಿಗಾಗಿ, ಆತ್ಮಕಲ್ಯಾಣಕ್ಕಾಗಿ, ಹೆಣಗಾಡದೆ, ಹಮ್ಮು-ಬಿಮ್ಮುಗಳಿಂದ, ಅಹಂಕಾರ ಗರ್ವಗಳಿಂದ ಮೆರೆದು ವ್ಯರ್ಥಜೀವನವನ್ನು ನಡೆಸಿ ವ್ಯಯಮರೆತಿದ್ದಾನಲ್ಲಾ ! ಎಂದು ರತ್ನಾಕರ ಅನುಕಂಪೆಯಿಂದ ಜೀವಕೋಟಿಯನ್ನು ಎಚ್ಚರಿಸಿದ್ದಾನೆ. ಆತ್ಮನ ಅನಂತ ಸಿರಿಯನ್ನು ಎಲ್ಲರಿಗೂ ನೆನಪಿಗೆ ತಂದುಕೊಟ್ಟು ಅದನ್ನು ಗಳಿಸುವ ರೀತಿಯನ್ನು ಹೃದಯಂಗಮವಾಗಿ ನಿರೂಪಿಸಿದ್ದಾನೆ.

ರತ್ನಾಕರಶತಕ ಮತ್ತು ಅಪರಾಜಿತೇಶ್ವರ ಶತಕಗಳ ಒಂದೊಂದು ಪದ್ಯವೂ ಒಂದೊಂದು ಅನರ್ಘ್ಯರತ್ನ. ಈ ಅನರ್ಘ್ಯರತ್ನಗಳ ಕಂಠೀಹಾರವನ್ನು ಮೋಕ್ಷಲಕ್ಷ್ಮಿಯನ್ನು ಒಲಿಸಿಕೊಳ್ಳಬಯಸುವ ಪ್ರತಿಯೊಬ್ಬ ಮಾನವನು ತನ್ನ ಕಂಠದಲ್ಲಿ ಧರಿಸಬೇಕು. ಪರಮಪೂಜ್ಯ ಕುಂದ ಕುಂದಾಚಾರ್ಯರಿಂದ ವಿರಚಿತವಾದ ಮಹಾನ್ ಆಧ್ಯಾತ್ಮಗ್ರಂಥ "ಸಮಯಸಾರ". ಆತ್ಮನ ಸಕಲ ಲಕ್ಷಣವನ್ನೂ, ಆತ್ಮ-ಕರ್ಮಸಂಬಧವನ್ನು, ಕರ್ಮನಿರ್ಜರೆ ಮಾಡಿಕೊಂಡು ಮೋಕ್ಷ ಸಂಪಾದನೆಮಾಡುವ ವಿಧಿ ವಿಧಾನವನ್ನು ವಿವರಿಸಿರುವ ಈ ಪ್ರಾಕೃತ ಗ್ರಂಥವನ್ನು ಓದಿ ಮನನಮಾಡಲು ಎಲ್ಲರಿಂದಲೂ ಸಾಧ್ಯವಲ್ಲದ ಕಾರ್ಯ. ಉದ್ಧಾಮಪಂಡಿತನೂ, ಆತ್ಮಜ್ಞಾನಿಯೂ, ಭೇದವಿಜ್ಞಾನಿಯೂ ಆದ ರತ್ನಾಕರ ಈ "ಸಮಯ ಸಾರ" ಗ್ರಂಥದ ಸಾರವನ್ನು ತನ್ನ ಶತಕಗಳಲ್ಲಿ ಭಟ್ಟಿಯಿಳಿಸಿ ಪಂಡಿತರಿಗೂ, ಪಾಮರರಿಗೂ ಎಟಕುವಂತೆ ಮಾಡಿದ್ದಾನೆ. ಆತ್ಮ ಸ್ವರೂಪವನ್ನು ಕುಂದ ಕುಂದಾಚಾರ್ಯರು ತಮ್ಮ ಸಮಯಸಾರ ಗ್ರಂಥದಲ್ಲಿ ಹೇಳಿರುವುದನ್ನು ಅತ್ಯಂತ ಮನೋಜ್ಞವಾಗಿ ತನ್ನ ಶತಕದಲ್ಲಿ ಹೀಗೆ ಹೇಳಿದ್ದಾನೆ.

ಬಿಸಿಲಿಂ ಕಂದದ ಬೆಂಕಿಯಿಂ ಸುಡದ ಸೀರಿಂ ನಾಂದದುಗ್ರಾಸಿ ಭೇ ।
ದಿಸಲುಂ ಬಾರದ ಚಿನ್ಮಯಂ ಮರೆದು ತನ್ನೊಳ್ಪಂ ಪರಧ್ಯಾನದಿಂ ॥
ಪಸಿವಿಂದೀ ಬಹುಬಾಧೆಯಿಂ ರುಜೆಗಳಿಂ ಕೇಡಾಗುವೀ ಮೆಯ್ಗ ಸಂ ।
ದಿಸಿದಂ ತನ್ನನೆ ಚಿಂತಿಸಲ್ಸುಖಿಯಲಾ ರತ್ನಾಕರಾಧೀಶ್ವರಾ ॥

ಆತ್ಮನ ಸ್ವಸ್ವಭಾವವನ್ನೂ ಅದರ ನಿರುಪಾದಿಕ ವೈಭವವನ್ನೂ ರತ್ನಾಕರ ವರ್ಣಿಸಿ, ಜೊತೆಗೆ ಅಂತಹ ಆತ್ಮನು ಕರ್ಮದ ಸಖ್ಯಬೆಳಸಿ ಎಂತಹ ದುರವಸ್ಥೆಗಿಳಿದಿದ್ದಾನೆಂಬುದನ್ನು ಪರಿಣಾಮಕಾರಿಯಾಗಿ ಓದುಗರ ಮನತಟ್ಟುವಂತೆ ಹೇಳಿದ್ದಾನೆ.

ಸಾವೆಂದರೆ ಯಾರಿಗೆತಾನೇ ಭಯವಿಲ್ಲ. "ಜಾತಸ್ಯ ಮರಣಂ ಧ್ರುವಂ" ಎಂಬ ವಿಚಾರ ಎಲ್ಲರಿಗೂ ಗೊತ್ತಿರುವ ವಿಷಯವಾದರೂ ಸಾಯಲು ಯಾರೂ ಸಿದ್ಧರಿಲ್ಲ. ಆತ್ಮನ ಉನ್ನತಿಗಾಗಿ ಶ್ರಮಿಸುವವರು ಈ ಸಾವನ್ನು ಆನಂದದಿಂದ ಎದುರುನೋಡಬೇಕು. ಮೃತ್ಯುವನ್ನು ಮಹೋತ್ಸವದಂತೆ ಆಚರಿಸಬೇಕು. ಸಾವಿನಲ್ಲೂ ಸಮಾಧಾನಿಯಾಗಿರಬೇಕು. ಇದನ್ನೇ ಸಮಾಧಿ ಮರಣವೆನ್ನುವುದು. ಈ ಭದ್ರಪರಿಣಾಮವನ್ನು ತಾಳಲು ಎಷ್ಟು ಜನರಿಗೆ ಸಾಧ್ಯ. ಬಾಹ್ಯ ಜಗತ್ತಿನಲ್ಲಿದ್ದರೂ ಯಾರ ಒಳಗಣ್ಣು ಅಂತರಾತ್ಮನನ್ನು ನೋಡುತ್ತಿರುವುದೋ ಆವರು ಸಾವಿಗೆ ಅಂಜುವವರಲ್ಲ.

ಸಾವಿಗಂಜಲದೇಕೆ ಸಾವು ಪೆರತೇ ಮೆಯ್ಯಾದ್ದಳ್ದಿದರ್ಕಂಜಲಾ ।
ಸಾವೇಂ ಪ್ರಾಣ್ಗುಮೆ ಕಾವರುಂಟೆಯಕಟಾ ! ಈ ಜೀವನೇನೆಂಮುವುಂ ॥
ಸಾವಂ ಕಂಡವನಲ್ಲವೇ ಮರಣವಾಗಲ್ಮುಂದದೇಂ ಪುಟ್ಟನೆ ।
ಸೀವೆನ್ನೊಳ್ಗಿಲೆ ಸಾವುದುಂ ಸುಖವಲ್ತೆ ರತ್ನಾಕರಾಧೀಶ್ವರಾ ॥

ಸಮತಾಭಾವವನ್ನು ತಾಳುವುದೇ ಸಾಯುಜ್ಯವನ್ನು ಪಡೆಯಲು ಸಾಧನ. ಶ್ರೀಮಂತಿಕೆ ಬರಲಿ, ಬಡತನ ಆವರಿಸಿಕೊಳ್ಳಲಿ, ಸಂತೋಷವಾಗಲಿ, ದುಃಖವಾಗಲಿ, ಯಾವ ಸಮಯದಲ್ಲೂ ಮನಸ್ಸಿನ ಸ್ವಾಸ್ಥ್ಯವನ್ನು ಕಳೆದು ಕೊಳ್ಳದೆ, ಜೀವನದ ಏರಿಳಿತಗಳು ಕನಸೆಂದು ಭಾವಿಸಿ ತನ್ನ ಜೀವನವನ್ನು ಸಮಾಧಾನದಿಂದ ಸಾಗಿಸುವವನು ಗೃಹಸ್ಥ ಪದವಿಯಲ್ಲಿದ್ದರೂ ಅವನು ಅಂತರಂಗದಲ್ಲಿ ಮುನಿಯೇ ಸರಿ.

ಉಪಭೋಗಂಬರೆ ಭೋಗವೃತರೆ ಮನೋರಾಗಂಗಳಿಂ ಭೋಗಿಪಂ ।
ತುಪಸರ್ಗಂಬರೆ ಮೋಕ್ಷ್ಮರಿದ್ರವಸಡಲ್ಸಂತೋಷಮಂ ತಾಳ್ದು ನಿ ॥
ಮ್ಮ ಪದಾಂಭೋಜಯುಗಂ ಸದಾಶರಣೆನುತ್ತಿಚ್ಛೈಸುವಂಗಾಗೃಹ ।
ಸ್ಥಪದಂ ತಾನೆ ಮುನೀಂದ್ರ ಪದ್ಧತಿಯಲಾ ರತ್ನಾಕರಾಧೀಶ್ವರಾ ॥

ಸದ್ಗೃಹಸ್ಥನ ದಿನಚರಿಯನ್ನು ರತ್ನಾಕರ ನಿಗದಿಮಾಡಿರುವನು. ಪಾಪರಹಿತ ದಿನಚರಿಯನ್ನು ಚಾಚೂ ತಪ್ಪದೆ ಆಚರಿಸಿದರೆ ಮಾತ್ರ ಆತ್ಮಸ್ವಾತಂತ್ರ್ಯವನ್ನು ಪಡೆಯಲು ಸಾಧ್ಯವಾದೀತು. ಸೇವಾಮನೋಭಾವ ಬಂದ ಹೊರತು ನಾನು ದೊಡ್ಡವನೆಂಬ ಅಹಂಕಾರ ಹೋಗಲಾರದು. ಮನಸ್ಸು ಮರ್ಕಟನಂತೆ ನೆಗೆದಾಡುವ ಸ್ವಭಾವವುಳ್ಳದ್ದು. ಆ ಮನಸ್ಸನ್ನು ಸಾಧುಸಂತರ ಸೇವೆಯಕಡೆ, ವ್ರತಾಚರಣೆಯಕಡೆ ದೂಡಿದರೆ ಮಾತ್ರ ಅದು ತನ್ನ ಚಾಂಚಲ್ಯವನ್ನು ಬಿಡುವುದು.

ತನುವಂ ಸಂಘದ ಸೇವೆಯೊಳ್ಮನಮನಾತ್ಮಧ್ಯಾನದಭ್ಯಾಸದೊಳ್ ।
ಧನಮಂ ದಾನ ಸುಪೂಜೆಯೊಳ್ದಿನಮನರ್ಹದ್ಧರ್ಮಕಾರ್ಯಪ್ರವ ॥
ರ್ತನೆಯೊಪರ್ವವನೊಲ್ದು ನೋಂಪಿಗಳೊಳಿರ್ದಾಯುಷ್ಯಮಂ ಮೋಕ್ಷ ಚಿಂ ॥
ತನೆಯೊಳ್ತೀರ್ಚುವ ಸದ್ಗೃಹಸ್ಥನನಘಂ ರತ್ನಾಕರಾಧೀಶ್ವರಾ ॥

ಈಗಿರುವಂತೆ ರತ್ನಾಕರನ ಕಾಲದಲ್ಲೂ ಸೋಮಾರಿಗಳೂ, ಆಷಾಢಭೂತಿಗಳೂ, ಸ್ವಾರ್ಥಪರರೂ, ವಿದ್ಯಾವಂತ ವೇಷಧಾರಿಗಳೂ ಸಾಕಷ್ಟುಜನ ಇದ್ದಿರಬೇಕು. ತಮ್ಮ ವಯಕ್ತಿಕ ಪ್ರತಿಭೆ ಏನಿಲ್ಲದಿದ್ದರೂ ಪ್ರತಿಭಾನ್ವಿತ ವ್ಯಕ್ತಿಗಳು ಪ್ರಕಾಶಕ್ಕೆ ಬರುವುದನ್ನು ಸೈರಿಸಲಾರದೆ ಅಸೂಯೆಯಿಂದ ಅಂತಹ ಸುಸಂಸ್ಕೃತ ಸಜ್ಜನರನ್ನು ಅವಹೇಳನಮಾಡಲೂ ಹೇಸದ ವ್ಯಕ್ತಿಗಳಿಂದ ರತ್ನಾಕರನ ಮನಸ್ಸು ರೋಸಿಹೋಗಿರಬೇಕು. ಆಗ ರತ್ನಾಕರ ಇಂತಹ ಲಘುಹೃದಯಿ ಜನಗಳ ಮಾತಿಗೆ ಸೊಪ್ಪುಹಾಕದೆ ತನ್ನ ನಿರ್ದಾಕ್ಷಿಣ್ಯ ಮನೋಪ್ರವೃತ್ತಿಯನ್ನು ತೋರಬೇಕಾಯಿತು.

ಶೃಂಗಾರ ರಸಭರಿತವಾದ ಭರತೇಶ ವೈಭವದಂತಹ ಮನೋಹರ ಕಾವ್ಯವನ್ನು ಬರೆದ ಕವಿಹೃದಯ ಈಗ ತನ್ನ ಸುಕೋಮಲತ್ವವನ್ನು ಬದಿಗೊತ್ತಿ, ಈ ಶತಕದ್ವಯಗಳಲ್ಲಿ ವೀರ ರೌದ್ರ ರಸಗಳಿಗೆ ಹದಗೊಂಡಿದೆ. ಮಾನವ, ಸಮ್ಯಕ್ ದರ್ಶನಜ್ಞಾನ ಚಾರಿತ್ರಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳದಿದ್ದರೆ ಅಂತಹವನ ಬಾಳು ಬರಡು, ವ್ಯರ್ಥ ಎಂಬ ವಿಷಯವನ್ನು ನೇರವಾದ ಹಾಗೂ ಮೊನಚಾದ ಮಾತುಗಳಿಂದ ಸ್ಪಷ್ಟಪಡಿಸಿದ್ದಾನೆ. ಇಲ್ಲಿಯ ಶೈಲಿಯಲ್ಲಿ ಮೋಹಕತೆಯಿಲ್ಲ; ಒನಪು ಒಯ್ಯಾರವಿಲ್ಲ; ಕತ್ತಿಯ ಅಲುಗಿನಂತೆ ಹರಿತ. ಬಿಗಿಯಾದ ಬಂಧದಲ್ಲಿ, ಮೊನಚಾದ ಭಾಷೆಯಲ್ಲಿ ಗಂಡು ಹಳಗನ್ನಡದಲ್ಲಿ ಈ ಎರಡೂ ಶತಕಗಳು ಅಭಿವ್ಯಕ್ತಿಗೊಂಡು ರತ್ನಾಕರನ ಮನೋಧರ್ಮವನ್ನೂ ಭಾವದ ಆವೇಶವನ್ನೂ ಸಾರಿವೆ.

ಪಡೆಯೊಳ್ ಬಲ್ಲಿದನಾದೊಡಾ ಪಡೆಯಿನೇಂ ಪಾಪಾರಿಯಂ ಗೆಲ್ವನೇ ।
ಕಡುಪಿಂದಂ ಜವನಂ ತೆರಳ್ಚುವನೆ? ಬಲ್ಪಿಂ ಮೋಕ್ಷಮಂ ಕೊಂಬನೇ ॥
ಕಡೆಗಾ ಭೂಪನ ಶಕ್ತಿನಾಲ್ಗಳಿಗೆ ಸಲ್ಗುಂ ಮರ್ತ್ಯಕೀಟಂಗಳೊಳ್ ।
ಬಿಡು ಯೋಗೀಂದ್ರನ ಶಕ್ತಿಗಾವುದು ಸಮಂ ರತ್ನಾಕರಾಧೀಶ್ವರಾ ॥

ಶ್ರೀಮಂತಿಕೆಯ ಪಿತ್ತ ನೆತ್ತಿಗೇರಿದವರನ್ನು ಕಂಡು ರತ್ನಾಕರ ಸಿಡಿಮಿಡಿಗೊಂಡಿದ್ದಾನೆ. ಸಮಾಜ ಸುಧಾರಣಾ ಕಾರ್ಯದಲ್ಲಿ ಈ ಶ್ರೀಮಂತರು ಮನಃಪೂರ್ವಕ ಸಹಕರಿಸಿಲ್ಲವೆಂದು ಕಾಣುತ್ತದೆ. ಹಾರ-ತುರಾಯಿಗಳಿಗೆ ಮಾತ್ರ ಹಾತೊರೆದು ಸ್ವತಃ ಕೆಲಸ ಮಾಡಬೇಕಾದ ಸಂದರ್ಭಗಳಲ್ಲಿ ಕಣ್ಮರೆಯಾಗುವ ಶ್ರೀಮಂತರಿಗೆ ಕಟುಮಡಿ ಅನಿವಾರ್ಯ. ತಮ್ಮ ಪ್ರತಿಷ್ಠೆಯನ್ನು ಮೆರೆಯಲು ಮಾತ್ರ ಧರ್ಮಕಾರ್ಯಗಳಲ್ಲಿ ಪಾಲ್ಗೊಳ್ಳುವ ಈ ಶ್ರೀಮಂತರ ಗರ್ವವನ್ನು, ಪೊಳ್ಳು ಜೀವನವನ್ನು ಬಯಲಿಗೆಳೆದಿದ್ದಾನೆ. ತೀರ್ಥಂಕರ ಪರಮ ದೇವರಿಗೆ ಸೇವೆಯೆಸಗಲು ಇಂದ್ರಾದಿಗಳು ತಾ ಮುಂದು ನಾ ಮುಂದೆಂದು ಕೈಕಟ್ಟಿ ಕಾದಿರುವುದನ್ನು ಬಣ್ಣಿಸಿ ಈ ನರಕೀಟಾದಿಗಳು ಏಕೆ ತಲೆತಿರುಗಿದಂತಾಡುವರೋ ಎಂದು ರತ್ನಾಕರ ಮೂದಲಿಸಿರುವನು.

ಸುರಪಂ ತನ್ನಿಭವಿತ್ತು ಮಾಪತಿಗನಪ್ಪಂ ಕಾಂತೆಯಿಂ ಪಾಡಿಸಂ ।
ಸುರಸೈನ್ಯಂಸಹಮಾಗಿ ನಿಮ್ಮ ಭಿಷವಕ್ಕೊಲ್ದೋಳಿಗಂ ಮಾಳ್ಪನಾ ॥
ದರದಿಂ ಛತ್ರಮನೆತ್ತುವಂ ನಟಿಸುವಂ ಪಲ್ಲಕ್ಕಿಯಂ ತಾಳ್ವ ನೀ ।
ನರಕೀಟಾದಿಗಳೇಕೆ ಗರ್ವಿಸುವರೋ ರತ್ನಾಕರಾಧೀಶ್ವರಾ ॥

ರತ್ನಾಕರ ವಿಶ್ವತತ್ವವನ್ನು ಸಾರಿದ ವಿಶ್ವಕವಿ. ಸರ್ವಧರ್ಮ ಸಮನ್ವಯಾಚಾರ್ಯ. ಸತ್ಯವೊಂದೇ. ನನ್ನ ಸತ್ಯ ಬೇರೆ, ನಿನ್ನ ಸತ್ಯ ಬೇರೆ ಎಂಬ ಮಾತೇ ಸಲ್ಲದು. ಸತ್ಯಕ್ಕೆ ಎರಡು ಮುಖಗಳಿದ್ದರೆ ಅದು ಸತ್ಯವೇ ಅಲ್ಲ. ಧರ್ಮಕಾಲಾತೀತ ಹಾಗೂ ದೇಶಾತೀತ. ಸಕಲ ಜೀವರಾಶಿಗಳಿಗೆ ಲೇಸನ್ನು ಬಯಸುವುದೇ ಮಾನವಧರ್ಮ. ಈ ಧರ್ಮವೇ ವಿಶ್ವಧರ್ಮವಾಗಬಲ್ಲುದು. ಅಂತಹ ಧರ್ಮವನ್ನು ಅನಾದಿಕಾಲದಿಂದ ಸಕಲ ಜೀವಾತ್ಮರುಗಳ ಹಿತದೃಷ್ಟಿಯಿಂದ ತೀರ್ಥಂಕರ ಪರಮದೇವರು ತಮ್ಮ ದಿವ್ಯಧ್ವನಿಯಿಂದ ಉಪದೇಶಗೈದಿರುವುದನ್ನು ರತ್ನಾಕರ ತನ್ನ ಮಾತುಗಳಿಂದ ಲೋಕದ ಎಲ್ಲ ಧರ್ಮಗಳ ಅನುಯಾಯಿಗಳು ಒಪ್ಪಿ ತಲೆದೂಗುವಂತೆ ಪ್ರತಿಪಾದಿಸಿರುವನು.

ತ್ರಿಜಗತ್‌ಸ್ವಾಮಿ ಜಿನೇಂದ್ರ ಸಿದ್ಧ ಶಿವ ಲೋಕಾರಾಧ್ಯ ಸರ್ವಜ್ಞ ಶಂ ।
ಭು ಜಗನ್ನಾಥ ಜಗತ್ ಪಿತಾಮಹ ಹರ ಶ್ರೀಕಾಂತ ವಾಣೀಶ ವಿ ॥
ಷ್ಣು ಜಿತಾನಂಗ ಜಿನೇಶ ಪಶ್ಚಿಮ ಸಮುದ್ರಾಧೀಶ್ವರಾ ಬೇಗದಿಂ ।
ನಿಜಮಂ ತೋರು ದಯಾಳುವೇ ತಳುವಿದೇಂ ರತ್ನಾಕರಾಧೀಶ್ವರಾ ॥

ರತ್ನಾಕರ ಶತಕದಲ್ಲಿ ಗೃಹಸ್ಥರು ತಮ್ಮ ದಿನಚರಿಯನ್ನು ಹೇಗೆ ರೂಢಿಸಿಕೊಳ್ಳಬೇಕೆಂದು ಹೇಳಿದ್ದರೆ ಅಪರಾಜಿತೇಶ್ವರ ಶತಕದಲ್ಲಿ ತ್ಯಾಗಿಗಳು ಅನುಸರಿಸಬೇಕಾದ ನಿಯಮಗಳನ್ನು ಸುಂದರವಾಗಿ ವರ್ಣಿಸಲಾಗಿದೆ.

ತನ್ನೊಳಿತನ್ನನೋಳ್ಪ ಋಷಿಗನ್ಯರ ನೋಟಮದೇಕೆ ಚಿದ್ಘನೋ ।
ತ್ಪನ್ನ ಸುಧಾನ್ನಮುಣ್ಬ ಮುನಿಗೊಳ್ಳುಣಿಸೆಂಬ ವಿವಕ್ಷೆಯೇಕೆ ಸಿ ॥
ದ್ಧಂ ನಮ ಎಂಬ ವಾಕ್ಯವಿರೆ ಬೇರ್ನುಡಿಯೇಕೆ ನಿಜಾತ್ಮ ರೂಪದೊಳ್ ।
ನಿನ್ನೊಡನಾಡುವಂಗುಳಿದ ಗೋಷ್ಠಿಗಳೇಕಪರಾಜಿತೇಶ್ವರಾ ॥

ಆತ್ಮಾನುಸಂಧಾನದಲ್ಲಿ ಮಗ್ನನಾಗಿರುವ ಭವ್ಯಚೇತನನಿಗೆ ಈ ಲೋಕದ ಯಾವ ವ್ಯವಹಾರದಲ್ಲೂ ತಲೆಹಾಕಲು ಮನಸ್ಸಾಗುವುದಿಲ್ಲ. ಅವನ ಅಂತರಂಗ ಶಾಂತಿಯ ಮಡುವಾಗಿ ಕಂಗೊಳಿಸುವುದು.

ಕರ್ಮಗಳ ನಿರ್ಜರೆಯಾಗಬೇಕು ಎಂದು ಬರೆ ಬಾಯಿಮಾತಿನಲ್ಲಿ ಹಂಬಲಿಸಿದರೆ ಅದು ಸಾಧ್ಯವೇ? ಮಂತ್ರಕ್ಕೆ ಮಾವಿನಕಾಯಿ ಉದುರುವುದೇ? ಅದಕ್ಕೆ ಪುರುಷಾರ್ಥ ಬೇಕು, ಶ್ರಮಪಡಬೇಕು, ಸಾಧನೆಬೇಕು ಅಂತರಂಗದಲ್ಲಿ ಕಲ್ಮಶವನ್ನು ತುಂಬಿಕೊಂಡು ಬಾಹ್ಯದಲ್ಲಿ ಶುದ್ಧನೆಂದು ಮೆರೆದಾಡಿದರೆ ಆತ್ಮಕಲ್ಯಾಣ ಸಾಧಿಸಲು ಸಾಧ್ಯವೆ?

ಬಿಡದೆ ಕಷಾಯಮಂ ಸುಡದೆಯಿಂದ್ರಿಯ ತೃಷ್ಣೆಗಳಂ ಪರೀಷಹ ।
ಕ್ಕೊಡನಿದಿರಾಗಿ ಗೆಲ್ಲದೆ ಸುಗುಪ್ತಿಗಳಂ ಪುಗದಾತ್ಮನಂ ಮಲಂ ॥
ಬಿಡದೊಡಲಿಂದೆ ಬೇರ್ಪಡಿಸಿ ನೋಡದೆ ಸನ್ಮನೆ ಕರ್ಮಶತ್ರುವೇ ।
ಬಿಡು ಬಿಡು ಪೋಗೆನಲ್ಕುಡಿಗೆ ಪೋದಪುದೇ ಅಪರಾಜಿತೇಶ್ವರಾ ॥

ಅಪರಾಜಿತೇಶ್ವರ ಶತಕದಲ್ಲಿ ರತ್ನಾಕರ "ಶುದ್ಧ ನಿಶ್ಚಯ ದೃಷ್ಟಿಯನ್ನು" ಪ್ರತಿಪಾದಿಸಿರುವನು. ಅಪರಾಜಿತೇಶ್ವರ ಶತಕವನ್ನು ಓದುತ್ತಾ ಓದುತ್ತಾ ಹೋದರೆ ನಮ್ಮ ಜೀವನ ಎಷ್ಟು ಬರಡು, ಈ ಬರಡು ಜೀವನದ ಕ್ಷಣಿಕಸುಖಕ್ಕೆ ಹಂಬಲಿಸಿ ಬಾಯಿ ಬಾಯಿ ಬಿಡುತ್ತಿರುವೆವಲ್ಲ ಎನ್ನಿಸುವುದು. ವೈರಾಗ್ಯದ ಮೆಟ್ಟಲನ್ನೇರಲು ಅಪರಾಜಿತೇಶ್ವರ ಶತಕ ಒಂದು ಊರುಗೋಲು.

ಅಪರಾಜಿತ ಶತಕದ ರಚನೆಯಹೊತ್ತಿಗೆ ರತ್ನಾಕರ ವೈರಾಗ್ಯದ ಮಡುವಿನಲ್ಲಿ ಮುಳುಗಿದ್ದ. ಯಾರ ಗೊಡವೆಯೂ ಬೇಡ ಅವನಿಗೆ. ತನ್ನ ಆತ್ಮಾನುಸಂಧಾನದಲ್ಲಿ ತನ್ಮಯನಾಗಿರುವನು. ಅವನು ಈಗ ಸದಾ ಅಂತರ್ಮುಖಿ. ಅಕಸ್ಮಾತ್ ಅಕ್ಕಪಕ್ಕದಲ್ಲಿ ಕಣ್ಣುಬಿಟ್ಟು ನೋಡಿದಾಗ ಮಾನವನ ವಿವೇಕರಹಿತವಾದ ವ್ಯಾಪಾರ ಗೋಚರವಾದಾಗ ಮೊದಲಂತೆ ರೊಚ್ಚಿಗೇಳುವುದಿಲ್ಲ. ಸಹಾನುಭೂತಿಯಿಂದ ಮಾನವನ ಇತಿಮಿತಿಯನ್ನು ಪರಿಗಣಿಸಿ ಅವನ ಓರೆ ಕೋರೆಗಳನ್ನು ತಿದ್ದಲು ಪ್ರಯತ್ನಪಡುತ್ತಾನೆ. ರತ್ನಾಕರ ಶತಕ ಶ್ರಾವಕರಿಗೆ ಕೈಗನ್ನಡಿಯಾದರೆ, ಅಪರಾಜಿತೇಶ್ವರ ಶತಕ ಜ್ಞಾನವೃದ್ಧರಿಗೆ, ಶೀಲವೃದ್ಧರಿಗೆ ಕೈದೀವಿಗೆಯಾಗಿದೆ. ರತ್ನಾಕರ ಶತಕ ಸಾಗಾರ ಶತಕವಾದರೆ ಅಪರಾಜಿತೇಶ್ವರ ಶತಕ ಅನಗಾರ ಶತಕವಾಗಿದೆ.

ಅಪರಾಜಿತೇಶ್ವರ ಶತಕದಲ್ಲಿ ರತ್ನಾಕರನ ಹಂಸಾನುಭವ ಎದ್ದು ಕಾಣುವುದು. "ರತ್ನಾಕರ ಶತಕ"ದ ಕೊನೆಯ ಭಾಗ ಹಾಗೂ "ಅಪರಾಜಿತೇಶ್ವರ ಶತಕ"ದ ಉದ್ದಗಲದಲ್ಲೂ ಹಬ್ಬಿಕೊಂಡಿರುವ ಭಕ್ತಿಗೀತೆಗಳಲ್ಲಿ ರಸಾವೇಶ ತುಂಬಿ ತುಳುಕಾಡಿದೆ.

ನಿನ್ನಂ ಚಿಂತಿಸುತಿರ್ಪವಂಗೆ ಪರದೇಶಂ ತನ್ನದೇಶಂ ಪರರ್ ।
ತನ್ನಿಷ್ಟರ್ ಪಗೆಗಳ್ ಭಟರ್ ದೊರೆಗಳಾತ್ಮ ಸ್ನೇಹಿತರ್ ಕಿಚ್ಚು ಬಾ ॥
ವನ್ನಂ ವ್ಯಾಧಿಸುಖಂ ವಿಷಂ ಸುಧೆಯೆನಿಕ್ಕುಂ ನೋಡೆ ನೀನಿರ್ದುಮಾ ।
ನಿನ್ನೊಂದಕ್ಕೆಳಸಿರ್ಪನೇಕೆಯಕಟಾ ರತ್ನಾಕರಾಧೀಶ್ವರಾ ॥

ನೀನಾನೆಂಬರಿವಾಗೆ ಸಾಕು ಸಿರಿಯೇಂ ದಾರಿದ್ರ್ಯಮೇಂ ಗ್ರಾಮಮೇಂ ।
ಕಾನೇಂ ಪಾಲುಣಿಸೇಂ ಕದನ್ನದುಣಿಸೇಂ ನಿರ್ಬಂಧಮೇಂ ರಾಜ್ಯಮೇಂ ॥
ಈ ನಾನಾವಿಧಿಯೆಲ್ಲವುಂ ಕನಸಿವಂ ಕೊಂಡೇನೋ ನಿನ್ನೆನ್ನ ಸಂ ।
ಧಾನಂ ನಿತ್ಯಸುಖೈಕವಿನ್ನುಳಿದುವೇಂ ರತ್ನಾಕರಾಧೀಶ್ವರಾ ॥

ನಡೆದೆಂ ಚಿತ್ತಕೆ ಬಂದವೊಲ್ ನುಡಿದೆನಾಂ ಬಾಯ್ಗಿಚ್ಚೆಬಂದಂತೆ ಕೈ ।
ಗೆಡೆದೆಂ ದುಃಖಸಮುದ್ರದೊಳ್ ಪಡೆದೆನ್ ಅಂಧಂ ಕಣ್ಗಳಂ ಪೆತ್ತವೊಲ್ ॥
ಬಿಡೆ ನಿಮ್ಮಂಘ್ರಿಗಳಂ ಬಿಡೆಂ ಬಿಡೆನುದಾರಂ ನೀನಹೋ ಬಲ್ಲೆನ್ ।
ಎನ್ನೊಡೆಯಾ ರಕ್ಷಿಸು ರಕ್ಷಿಸಾ ತಳುವಿದೇಂ ರತ್ನಾಕರಾಧೀಶ್ವರಾ ॥

ಜಡಮತಿಯ್ಮೆಸೆನಾಂ ಪರಮ ನಿನ್ನ ಗುಣಂಗಳನೆಲ್ಲಮಂ ಮನಂ ।
ಬಿಡಿಯೆ ಸಮರ್ಥನಲ್ಲೆನದರಿಂ ಕಿರಿದಂ ಪಿಡಿದಿರ್ಪೆನೆಂತೆನಲ್ ॥
ಕೊಡದೊಳಗೆಷ್ಟು ನಿಲ್ವುದು ಸಮುದ್ರಜಲಂ ವರಕಾಂಚನಾದ್ರಿ ಕ ।
ನ್ನಡಿಯೊಳಗೆಷ್ಟು ತೋರ್ಪುದವಧಾರಿಸು ನೀನಪರಾಜಿತೇಶ್ವರಾ ॥

ಮುನ್ನಂ ಅನೇಕರಂ ಭವದಿಂಎತ್ತಿ ಯಶೋನಿಧಿಯಾದೆ ಯಾದೊಡೇಂ ।
ನಿನ್ನ ದಯಾಗುಣಕ್ಕದು ವಿಶೇಷಮೆ ? ಮೂರ್ಖನಂ ಆರ್ತ ರೌದ್ರನಂ ॥
ನನ್ನ ಪವಿತ್ರಮಾಡಿದೊಡೆ ದೊಡ್ಡಪೆಸರ್ ಘನಕೀರ್ತಿ ದೇವ ಭೂ ।
ತೆನ್ನದಿರೊಪ್ಪುಗೊಳ್ ನಗದಿರ್ಕೆ ಶರಣಾಗಪರಾಜಿತೇಶ್ವರಾ ॥

ಬಂದೊಲವಿಂದೆ ನಿನ್ನಿದಿರೊಳೊಪ್ಪದೆ ನಿಂದು ಕರಂಗಳಂ ನೊಸ ।
ಲ್ಗೊಂದಿಸಿ ದೇವದೇವ ಕರುಣಾಕರ ಬಿನ್ನಪವು ಆತ್ಮಸಿದ್ಧಿಯಿ ॥
ನ್ನೆಂದೆನಗಪ್ಪುದೆಂದೊಡೆಲೆ ಕಂದ ಕಡಂಗದಿರಿಂದು ನಾಳೆ ಯೆ ।
ನ್ನೆಂದವೆ ಯಪ್ಪೆಯೆಂಬ ನುಡಿಗೇಳ್ವೆನದೆಂದಪರಾಜಿತೇಶ್ವರಾ ॥

ಶ್ರವಣಬೆಳಗೊಳದ ವಿಂಧ್ಯಗಿರಿಯಮೇಲೆ ವಿರಾಜಮಾನನಾಗಿರುವ ಪ್ರಥಮ ಕೇವಲಿ ಪ್ರಥಮ ಮನ್ಮಥ, ವರ್ತಮಾನಕಾಲದ ಪ್ರಥಮ ಮೋಕ್ಷಗಾಮಿ ಭಗವಾನ್ ಬಾಹುಬಲಿ ಗೋಮಟೇಶ್ವರನ ಜಗದಾಶ್ಚರ್ಯಕರ ಜಗನ್ಮೋಹನ ಮೂರ್ತಿಯನ್ನು ನೋಡಿ ಸ್ಫೂರ್ತಿಗೊಂಡು ಹಾಡಿದಂತಿದೆ ಈ ಭಕ್ತಿಗೀತೆ.

ಚೆಲುವರ ಚೆಲ್ವ ಚೆನ್ನಿಗರ ಚೆನ್ನ ಸುವೀರರ ವೀರ ಸತ್ಕಲಾ ।
ಬಲರ ಬಲಾಢ್ಯ ಬಲ್ಲಿದರ ಬಲ್ಲಹ ದೇವರದೇವ ನೀತಿ ನಿ ॥
ರ್ಮಲರ ನಿಧಾನ ನಿಚ್ಚ ಮದುವಕ್ಕಳ ಮಾಣಿಕ ಕಾಂತಿ ಶಾಂತಿ ಶೀ ।
ತಲರ ಶಿರೋಮಣೀ ನಿನಗೆ ಪಾಸಟಿಯಾರಪರಾಜಿತೇಶ್ವರಾ ॥

ರತ್ನಾಕರನ ಕೃತಿಗಳ ಹಾಗೂ ಶೈಲಿಯ ಬಗ್ಗೆ ಕೆಲವು ಪ್ರಸಿದ್ಧ ಕನ್ನಡ ಸಾಹಿತಿಗಳ ಅನಿಸಿಕೆಗಳನ್ನು ಇಲ್ಲಿ ಉದ್ಧರಿಸುವುದು ಸೂಕ್ತವೆನಿಸುತ್ತದೆ.

ಭರತೇಶ ವೈಭವದಲ್ಲಿ ತ್ಯಾಗ ಭೋಗಗಳ ಸಮನ್ವಯದ ಯೋಗದರ್ಶನವನ್ನು ಕವಿ ಸುಂದರವಾಗಿ ಪ್ರತಿಮಿಸಿದ್ದಾನೆ. ಅಷ್ಟೇ ಅಲ್ಲ, ಕವಿ ಆದರ್ಶವನ್ನು ಭರತನ ಜೀವನದಲ್ಲಿ ಮಾತ್ರವೇ ಅಲ್ಲದೆ ಇಡೀ ಕಾವ್ಯದ ವಿವರ. ವಿವರಗಳಲ್ಲೆಲ್ಲ ಬುದ್ಧಿಪೂರ್ವಕವಾಗಿ ಪ್ರತಿಮಿಸಿರುವುದನ್ನು ನೋಡಿದರಂತೂ ಇಂತಹ ಕಾವ್ಯಸೃಷ್ಟಿ ಜಗತ್ತಿನ ಮತ್ತಾವ ಸಾಹಿತ್ಯದಲ್ಲೂ ಆಗಿರುವಂತೆ ಕಾಣವುದಿಲ್ಲ. ಆ ದೃಷ್ಟಿಯಿಂದ ಇದು ಜಗತ್ ಕೃತಿ.

— ಕುವೆಂಪು.

ಶಿಲ್ಪಗಾಯನ ನಾಟ್ಯ, ವಾದ್ಯಘೋಷ, ಸರಸಸಲ್ಲಾಪ, ಪ್ರಣಯಪ್ರವೃತ್ತಿಗಳನ್ನು ರತ್ನಾಕರನಂತೆ ಚಿತ್ರಿಸುವ ಪ್ರಾಯಶಃ ಚಿತ್ರಿಸಬಲ್ಲ ಕವಿಗಳು ಕನ್ನಡದಲ್ಲಿ ಅಪರೂಪ. ಬಹುಷಃ ಅವನಿಗೇ ಅರ್ಪಿತವಾಗತಕ್ಕದ್ದು ಅಗ್ರತಾಂಬೂಲ.

—ಎಸ್. ವಿ. ರಂಗಣ್ಣ.

ರತ್ನಾಕರನ ಬರವಣಿಗೆಯ ಓಘದಲ್ಲಿ ಸರಸ್ವತಿಯ ಪ್ರಸನ್ನತೆಯಿದೆ, ನಿರ್ಮಲತೆಯಿದೆ. ದರ್ಶನದ ಉನ್ನತಿ ವ್ಯಕ್ತಿಯ ಉದಾತ್ತತೆ ಇದನ್ನು ಚಿತ್ರಿಸುವ ಭಾಷೆ ಮತ್ತು ನುಡಿಯ.ವ ಛಂದ ಎಷ್ಟು ಸರಳವೋ ಅಷ್ಟು ಭವ್ಯವಾಗಿದೆ.

—ರಂ. ಶ್ರೀ ಮುಗಳಿ.

ತತ್ವವನ್ನೂ, ರಸಿಕತೆಯನ್ನೂ, ಬೆರೆಸಿ ಯೋಗ ಭೋಗ ಸಮನ್ವಯವನ್ನು ನಮ್ಮೆದುರಿಗೆ ಒಂದು ಜೀವನ ತತ್ವವೆಂದು, ಕಾವ್ಯವೆಂದು, ಭರತೇಶನಂತಹ ಆದರ್ಶ ಪುರುಷನೆಂದು ನಿಲ್ಲಿಸಿದ್ದು ಆತನ ಅಜರಾಮರ ಕೀರ್ತಿಯಾಗಿದೆ.

—ವಿ. ಗೋಕಾಕ್.

ಭಾಮಿನಿ ಷಟ್ಪದಿಗೆ ಕುಮಾರವ್ಯಾಸನು ಹೇಗೋ, ರಗಳೆಗೆ ಹರಿಹರನು ಹೇಗೋ, ಸಾಂಗತ್ಯಕ್ಕೆ ರತ್ನಾಕರನು ಹಾಗೆ. ಆಯಾ ಛಂದಸ್ಸಿಗೆ ಅವರವರು ಸಾಮ್ರಾಟರು.

ರತ್ನಾಕರ ಕನ್ನಡ ಭಾಷೆಗೆ ಹೊಸ ಹೊಸ ನುಡಿಮುತ್ತಿನ ಕುಚ್ಚನ್ನು ಅರ್ಪಿಸುವುದರ ಜೊತೆಗೆ, ಬಹುಜನ ಮತ್ತೆ ಮತ್ತೆ ಬಳಸಿ ಸವಕಲಾಗಿ ಸತ್ವಹೀನವಾಗಿದ್ದ ಮಾತಿನಮಾಲೆಗೆ ಈ ಕವಿ ನವನೂತನ ಹೊಳಪನ್ನೂ ಕಮನೀಯ ವಾದ ಕನ್ನಡದ ಕಂಪನ್ನೂ ಪ್ರತಿಭಾಸ್ಪರ್ಶದ ಪೆಂಪನ್ನೂ ಕೊಟ್ಟು ಅವನ್ನೆಲ್ಲ ಸಪ್ರಾಣಗೊಳಿಸಿರುವನು. ಅನುಕರಣ ಪದಪುಂಜವನ್ನು ಪರಿಣಾಮಕಾರಿಯಾಗಿ ಬಳಸಿ ಕನ್ನಡ ಸಿರಿಯನ್ನು ಹೆಚ್ಚಿಸಿರುವನು.

ಅಚ್ಚ ಕನ್ನಡ ನುಡಿಯಲ್ಲೂ ಸುಖೋಷ್ಣವಾದ ಶ್ಲೇಷೆಯನ್ನು ತಂದು ದೇಶೀಯ ಗೌರವವನ್ನು ಮಾರ್ಗದ ಮಟ್ಟಕ್ಕೇರಿಸಲು ಪ್ರಯತ್ನಿಸಿರುವನು. ಜನಪದ ಧಾಟಿಯಲ್ಲಿ ದಿನಬಳಕೆಯ ಮಾತುಗಳಿಂದ ದಿನಚರಿಯ ಬದುಕನ್ನು ರತ್ನಾಕರ ಬಣ್ಣಿಸಿ ಮಹಾಕಾವ್ಯವನ್ನು ರಚಿಸಿದುದಕ್ಕಿಂತ ಕನ್ನಡ ನುಡಿಯ ಬೆಳವಣಿಗೆಗೆ ಬೇರೆ ಉಪಕಾರ ಬೇಕೆ? ಅಚ್ಚ ಕನ್ನಡನುಡಿಯ ಕಟ್ಟಾಣಿ ಮುತ್ತುಗಳಿಂದ, ಕನ್ನಡ ಕಂಪಿನ ಬಿರಿಮುಗುಳ ಮಾತಿನ ಮಾಲೆಯಿಂದ ಕನ್ನಡಾಂಬೆ ಯನ್ನು ಸಿಂಗರಿಸಿರುವನು.

—ಜಿ. ಬ್ರಹ್ಮಪ್ಪ.

ರತ್ನಾಕರನ ಶತಕಸಾಹಿತ್ಯ ಕನ್ನಡ ಸಾಹಿತ್ಯದಲ್ಲಿ ಹೊರಹೊಮ್ಮಿರುವ ಹೊಸ ಬೆಳಕು. **ರತ್ನಾಕರ ಶತಕ ಕನ್ನಡದ ತಿರುಕ್ಕುರುಳ್.** ಕುರುಳ್ ಕಾವ್ಯವು ಮಾನವನಿಗೆ ಬೇಕಾದ ನೀತಿಯನ್ನು ಬೋಧಿಸುತ್ತದೆ. ದಾಂಪತ್ಯ ವಿಜ್ಞಾನ, ರಾಜನೀತಿ, ಪ್ರೇಮಸಾಮ್ರಾಜ್ಯದ ಉನ್ನತಸ್ಥಾನ, ವಿಷಯಲೋಲುಪತೆಯ ವಿಡಂಬನೆ ಇವುಗಳನ್ನು ಈ ಮಹಾಕವಿ ತನ್ನ ಅನುಭವಪೂರ್ವಕವಾದ ಉದಾಹರಣೆಗಳೊಡನೆ ಮನಮುಟ್ಟುವಂತೆ ಚಿತ್ರಿಸಿದ್ದಾನೆ. ಜೀವನದಿಂದ ಅನೇಕ ಸಾಮಗ್ರಿಗಳನ್ನು ಆರಿಸಿಕೊಂಡು ಅವಕ್ಕೆ ಹೊಸದೊಂದು ಚೈತನ್ಯವನ್ನು ತುಂಬಿ ಜನರ ಮನೋಭಿತ್ತಿಯಮೇಲೆ ಪರಿಣಾಮಕಾರಿಯಾದ ಚಿತ್ರಗಳು ಮೂಡುವಂತೆ ತನ್ನ ಮಂತ್ರಶಕ್ತಿಯ ಪ್ರಭಾವದಿಂದ ಅಳವಡಿಸಿದ್ದಾನೆ ಐಹಿಕ ಜೀವನಕ್ಕೂ, ಆಧ್ಯಾತ್ಮಿಕ ಜೀವನಕ್ಕೂ ಅಪರಾಜಿತ ಶತಕವು ಒಂದು ಸೇತುವೆಯಂತಿದೆ. ಪಾಪ–ಪುಣ್ಯ, ಸ್ವರ್ಗ–ನರಕ, ಜೀವಾತ್ಮ–ಪರಮಾತ್ಮ ಇಂತಹ ಬಹು ಕಠಿಣವಾದ ಸಮಸ್ಯೆಗಳಿಗೆ ರತ್ನಾಕರ ಸುಲಭವೂ, ಸುಭಗವೂ ಆದ ಪರಿಹಾರಗ ಳನ್ನು ತೋರಿಸಿಕೊಟ್ಟು ಸಾಧಕನು ಮುಮುಕ್ಷುವಾಗಲು ದ್ಯೋತಕವಾಗಿದೆ. ರತ್ನಾಕರ, ಪರಮಾತ್ಮನಲ್ಲಿ ಐಕ್ಯನಾಗು ತ್ತಾನೆ. ಒಂದೊಂದುಸಾರಿ ಆ ಪರಮಾನಂದದಿಂದ ಹೊರಗೆಬಂದು ಈ ಪ್ರಪಂಚವನ್ನು ನೋಡುತ್ತಾನೆ. ಐಹಿಕ ಜೀವನ ಎಷ್ಟರಮಟ್ಟಿಗೆ ಆಧ್ಯಾತ್ಮಿಕ ಜೀವನಕ್ಕೆ ತಳಹದಿಯಾಗಬಲ್ಲದೆಂದು ವಿವರಿಸುತ್ತಾನೆ ಒಟ್ಟಿನಲ್ಲಿ ಈ ಶತಕಗಳಲ್ಲಿ ನೀತಿ, ಭಕ್ತಿ, ಜ್ಞಾನ, ವೈರಾಗ್ಯಗಳು ಹಾಸುಹೊಕ್ಕಾಗಿ ಸೇರಿಕೊಂಡು ಕವಿಗೂ, ತತ್ವಜ್ಞಾನಿಗೂ, ಮೋಕ್ಷಪಿಪಾಸಿಗೂ, ಸಾಧಕ ನಿಗೂ, ಸನ್ಯಾಸಿಗೂ ಬೇಕಾದ ವಿಷಯಗಳನ್ನು ಸಂಗ್ರಹಿಸಿ ಅಳವಡಿಸಿ ಕಾವ್ಯಮಯವನ್ನಾಗಿ ಮಾಡಿರುವನು ಇಂತಹ ಶತಕಗಳು ಬಹು ವಿರಳ.

ರತ್ನಾಕರ ಕಾಮಧೇನು, ಕಲ್ಪವೃಕ್ಷಗಳಂತೆ ಕನ್ನಡಿಗರಿಗೆ ರತ್ನಾಕರ ಶತಕ ಮತ್ತು ಅಪರಾಜಿತೇಶ್ವರ ಶತಕ ಗಳನ್ನು ಅನುಗ್ರಹಿಸಿರುವನು. ಇವನ್ನು ನಾವು ಎಷ್ಟೆಷ್ಟು ಸ್ವಾಧ್ಯಾಯ ಮಾಡುವೆವೋ, ಎಷ್ಟೆಷ್ಟು ಮನನಮಾಡು ವೆವೋ ಅಷ್ಟಷ್ಟು ನಮ್ಮ ಉದ್ಧಾರವಾಗುವುದು.

ಆ ಪದದೊಳ್ ಕ್ಷಣ ಕ್ಷಣಕೆ ಕರ್ಮ ಸಮೂಹಕೆ ಹಾನಿ ಸದ್ಗುಣೋ ।
ದ್ದೀಪಿಕೆಯುಪ್ಪುದೋದಿನ ಪರಿಶ್ರಮಮುಂ ತಪದುಬ್ಬೆಯುಂ ಸುಧಾ ॥
ರೂಪಮನೆಯ್ದುತಿರ್ಕುಮದರಿಂದದನೇ ಸಕಲ ಪ್ರಯತ್ನದಿಂ ।
ಸ್ಥಾಪಿಸಿ ಮುಕ್ತಿಯುಂ ಪಡೆವುದೆಂದೆಯಲಾ ಅಪರಾಜಿತೇಶ್ವರಾ ॥

ಮುನ್ನುಡಿ

ರತ್ನಾಕರ ನನ್ನ ಜೀವನದ ಉಸಿರೂ ಮತ್ತು ಕಣ್ಣು. ಚಿಕ್ಕಂದಿನಿಂದ ರತ್ನಾಕರನ ತ್ರಿಲೋಕ ಜಿನವಂದನಾ ಚರಿತೆಯಿಂದ ನಮ್ಮ ತಾಯಿಯವರು ಹಾಡುತ್ತಿದ್ದ ಪದ್ಯಗಳನ್ನು ಕೇಳಿ ಪುಳಕಿತನಾಗುತ್ತಿದ್ದೆ. ಅವುಗಳಲ್ಲಿ ಈಗಲೂ ನನಗೆ ಪ್ರಿಯವಾದ ಕೆಲವು ಪದ್ಯಗಳಿವು :

ಮನಸಿಜಮರ್ಧನ ಮನುಕುಲವರ್ಧನ
ಘನಕರ್ಮಾರಣ್ಯ ನಿರ್ದಹನ ।
ಮುನಿಜನ ಹೃದಯಾಬ್ಜ ಭಾಸ್ಕರ ಪುರುಜಿನ
ಅನುಪಮ ಸುಖವೀವುದೆಮಗೆ ॥

ಅಭಿಷೇಕಪ್ರೇಕ್ಷಣ ಕ್ರೀಡನ ಸಂಗೀತ
ವಿಭವನಾಟಕ ಲೋಕನಾದ ।
ವಿಭುಧೇಂದ್ರನರ್ತನ ಮಂಟಪಗಳು ರತ್ನ
ಪ್ರಭೆಯಿಂದ ಬೆಳಗನಾಂತಿಹುವು ॥

ಚವ್ವೀಸ ಜಿನರಿಗೆ ನಿರ್ವಾಣ ಕಡೆಯಾಗಿ
ಸರ್ವಮಂಗಳವೆತ್ತು ಮೆರೆವ ।
ಪರ್ವತರಾಜ ಕೈಲಾಸ ಚಂಪಾಪುರ
ಗೀರ್ವಾಣನುತ ಊರ್ಜಯಂತ ॥

ಸಮ್ಮೇದ ಪರ್ವತ ಪಾವಾಪುರವೆಂಬ
ಕರ್ಮಕ್ಷಯದ ಭೂಮಿಗಳನು ।
ಕರ್ಮನ ಜಯಿಸಬೇಕೆಂದಾಸು ಮುದದಿಂದ
ಸರ್ವಕಾಲದೊಳು ವಂದಿಸುವೆ ॥

ಅರಹಂತ ಸಿದ್ಧರಾಚಾರ್ಯರುಪಾಧ್ಯಾಯ
ವರ ಸರ್ವಸಾಧು ಪಂಚಕವ ।
ಪರಮ ಶ್ರೀ ಜಿನಧರ್ಮ ಶ್ರುತಬಿಂಬಾಲಯಗಳ
ಪಿರಿದು ಭಕ್ತಿಯೊಳು ವಂದಿಸುವೆ ॥

ಇದರ ಜೊತೆಗೆ ದೇವರ ಮನೆಯಲ್ಲಿ ಪ್ರಾತಃಕಾಲ ಹಾಗೂ ಸಂಜೆ ಹೊತ್ತಿನಲ್ಲಿ ನಿರಂಜನ ಸ್ತುತಿಯನ್ನು ರಾಗವಾಗಿ ನಮ್ಮ ತಾಯಿಯವರು ಹಾಡುತ್ತಿದ್ದುದರಿಂದ ಅನೇಕ ಪದ್ಯಗಳು ಶ್ರಮವಿಲ್ಲದೆ ನನಗೆ ಕಂಠಪಾಠವಾಯಿತು.

ನನ್ನ ಸಾಹಿತ್ಯಾಭ್ಯಾಸಕ್ಕೆ ಇದೇ ನಾಂದಿಯೆನ್ನಬಹುದು. ನಾನು ಕಾಲೇಜುಮೆಟ್ಟಲು ಹತ್ತಿದಾಗ ರತ್ನಾಕರನ ಬಗ್ಗೆ ಹೆಚ್ಚಿನ ಆಸಕ್ತಿ ಒಲವುಗಳನ್ನು ಮೂಡಿಸಲು ಪ್ರೇರಕರಾದವರು ಪೂಜ್ಯ ಕಾ. ಸ. ಧರಣೇಂದ್ರಯ್ಯನವರು. ಅವರು ರತ್ನಾಕರನ ಭರತೇಶ ವೈಭವದಿಂದಾಗಲೀ, ಶತಕಗಳಿಂದಾಗಲೀ ಪದ್ಯಗಳನ್ನು ಉದ್ಧರಿಸಿ ಹಾಡಿದಾಗ ಜನ ಮಂತ್ರಮುಗ್ಧರಾಗಿ ಆಲಿಸುತ್ತಿದ್ದರು. ಕಾ. ಸ. ಧರಣೇಂದ್ರಯ್ಯನವರು ನಿರಂಜನ ಸ್ತುತಿಯನ್ನಾಗಲೀ, ಶತಕದ ಪದ್ಯಗಳನ್ನಾಗಲೀ ಹಾಡುತ್ತಿದ್ದ ರೀತಿ ವಿಶಿಷ್ಟವಾದದ್ದು. ಹಾಗೆ ಬೇರೆಯವರು ಹಾಡಲು ಸಾಧ್ಯವಾಗದು. ಇಡೀ ಕರ್ನಾಟಕದಲ್ಲಿ ಅವರಹಾಗೆ ರತ್ನಾಕರನ ಶತಕದ ವೃತ್ತ ಪದ್ಯಗಳನ್ನಾಗಲೀ, ಭರತೇಶ ವೈಭವದ ಸಾಂಗತ್ಯ ಪದ್ಯಗಳನ್ನಾಗಲೀ ಹಾಡಿದವರೇ ಇಲ್ಲ. ಅವರ ನನ್ನ ಸಂಬಂಧ ಹತ್ತಿರವಾದಾಗ ನನ್ನ ಸಾಹಿತ್ಯಾಭ್ಯಾಸಕ್ಕೆ ಒಂದು ಹೊಸಕಳೆ ಮೂಡಿತು. ಅವರ ಮಾರ್ಗದರ್ಶನದಲ್ಲಿ ನನ್ನ ಸಾಹಿತ್ಯಕೃಶಿ ಸಾಗಿತು. ಇಂಜಿನಿಯರಿಂಗ್ ಪದವೀಧರನಾದರೂ ನನ್ನ ವಿರಾಮವೇಳೆಯನ್ನೆಲ್ಲಾ ಅವರ ಜೊತೆಯಲ್ಲಿ ಹಳಗನ್ನಡ ಸಾಹಿತ್ಯ ಕೃತಿಗಳ ಬಗ್ಗೆ ವಿಚಾರವಿನಿಮಯ ಮಾಡುತ್ತಾ ಕಳೆಯುತ್ತಿದ್ದೆ. ಅವರ ಪಾಂಡಿತ್ಯ, ಪ್ರತಿಭೆ ಅಗಾಧವಾದುದು. ಪಂಪ, ರನ್ನ, ಜನ್ನ, ನಾಗಚಂದ್ರ ಮತ್ತು ರತ್ನಾಕರನ ಕೃತಿಗಳೆಲ್ಲಾ ಅವರ ನಾಲಗೆಯಮೇಲಿದ್ದವು.

ಈ ಮಹಾಕವಿಗಳ ಮಹಾಕಾವ್ಯಗಳಮೇಲೆ ಅವರು ಉಪನ್ಯಾಸಕ್ಕೆ ನಿಂತರೆ ಸಭಿಕರಿಗೆ ಕಾಲದ ಪರಿವೆಯೇ ಇರುತ್ತಿರಲಿಲ್ಲ. ಈ ಕಾವ್ಯಗಳ ಕರುಣಾರಸ ಭಾಗವನ್ನು ಅವರು ವಿವರಿಸುತ್ತಿದ್ದರೆ ಸಭಿಕರಲ್ಲಿ ಅನೇಕರು ಕಣ್ಣೀರು ಹರಿಯಿಸುತ್ತಿದ್ದರು. ಒಂದುಸಾರಿ ಅವರು ಜನ್ನನ ಯಶೋಧರ ಚರಿತ್ರೆಯ ಪ್ರವಚನ ಮಾಡುತ್ತಿದ್ದು, ಅಭಯರುಚಿ-ಅಭಯಮತಿಯ ಪ್ರಸಂಗಬಂದಾಗ, ಸಭಿಕರ ಮೊದಲ ಸಾಲಿನಲ್ಲಿ ಕೂತಿದ್ದ ಒಬ್ಬ ಮುಸಲ್ಮಾನ್ ಸರ್ಕಾರಿ ಅಧಿಕಾರಿಯು ಬಿಕ್ಕಿ ಬಿಕ್ಕಿ ಅಳುತ್ತಿದ್ದುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ನನ್ನಲ್ಲೇನಾದರೂ ಅಲ್ಪಸ್ವಲ್ಪ ಸಾಹಿತ್ಯಾಭಿರುಚಿಯಿದ್ದರೆ ಅದು ಪೂಜ್ಯ ಕಾ. ಸ. ಧರಣೇಂದ್ರಯ್ಯನವರ ಸಂಪೂರ್ಣ ಆಶೀರ್ವಾದ ಬಲದಿಂದಲೇ ಎಂಬುದು ಸತ್ಯವಾದ ವಿಷಯ.

ಜೈನಸಿದ್ಧಾಂತದ ಆಳವಾದ ಅಭ್ಯಾಸ ಮಾಡಬೇಕಾದರೆ ಅನೇಕ ಮಹಾನ್ ಆಚಾರ್ಯರ ಸಂಸ್ಕೃತ, ಪ್ರಾಕೃತ ಗ್ರಂಥಗಳನ್ನು ಓದಬೇಕಾಗುವುದು. ಆದರೆ ಅದು ಎಷ್ಟು ಜನರಿಗೆ ಸಾಧ್ಯ ? ಎಷ್ಟು ಜನರಿಗೆ ಆ ರುಚಿ ಹತ್ತುವುದು ? ರತ್ನಾಕರ ತನ್ನ ಕೃತಿಗಳಲ್ಲಿ ಜಿನೇಂದ್ರವಾಣಿಯ ಸಾರಸರ್ವಸ್ವವನ್ನು ಭಟ್ಟಿಯಿಳಿಸಿದ್ದಾನೆ. ಅವನ ಕೃತಿಗಳನ್ನು ಓದಿದರೆ ಇಡೀ ಸಿದ್ಧಾಂತದ ಪರಿಚಯ ಸುಲಭವಾಗಿ ಆಗುವುದು. ಭಗವಾನ್ ಕುಂದ ಕುಂದಾಚಾರ್ಯರ ಸಮಯಸಾರವನ್ನು ಓದಿ ಅರ್ಥಮಾಡಿಕೊಳ್ಳುವ ಶಕ್ತಿ ಎಷ್ಟುಜನಕ್ಕಿದೆ ? ಆದರೆ ಆ ಮಹಾನ್ ಗ್ರಂಥದ ಸಾರವನ್ನು ಸುಲಭ, ಸುಂದರ, ಮನೋಜ್ಞ ಶೈಲಿಯಲ್ಲಿ ಸರ್ವರಿಗೂ ಮನದಟ್ಟಾಗುವಂತೆ ತನ್ನ ರತ್ನಾಕರಶತಕ ಮತ್ತು ಅಪರಾಜಿತ ಶತಕಗಳಲ್ಲಿ ನಿರೂಪಿಸಿದ್ದಾನೆ. ಭೇದವಿಜ್ಞಾನವನ್ನು ಅತ್ಯಂತ ಸಮರ್ಪಕರೀತಿಯಲ್ಲಿ ಪ್ರತಿಪಾದಿಸಿರುವ ಜೈನ ಕವಿಗಳಲ್ಲಿ ರತ್ನಾಕರನನ್ನು ಬಿಟ್ಟರೆ ಮತ್ತೊಬ್ಬರನ್ನು ಕಾಣಲಾರೆವು. ಭೋಗ–ಯೋಗಗಳ ಸಮನ್ವಯಾಚಾರ್ಯನಾಗಿ ಗೃಹಸ್ಥ ಧರ್ಮದಲ್ಲಿದ್ದುಕೊಂಡು ಮುನಿಧರ್ಮವನ್ನು ಪಾಲಿಸುವ ಅಮೋಘರೀತಿಯನ್ನು ತನ್ನ ಕೃತಿಗಳಲ್ಲಿ ನಿರೂಪಿಸಿ ಎಲ್ಲರ ಮೆಚ್ಚುಗೆಗೆ ಪಾತ್ರನಾಗಿ ಅಮರನಾಗಿದ್ದಾನೆ ರತ್ನಾಕರ.

ನನ್ನ ಉಪನ್ಯಾಸಗಳಲ್ಲಿ ರತ್ನಾಕರನಿಗೆ ಸಿಂಹಪಾಲು. ಅಡಿಗಡಿಗೆ ಅವನ ಪದಗಳೇ ನನ್ನ ಬಾಯಿಂದ ಹೊರ ಬೀಳುತ್ತವೆ. ಅವನಿಲ್ಲದ ನನ್ನ ಉಪನ್ಯಾಸ ನೀರಸ, ಅವನ ಶತಕಗಳನ್ನು ನಾನು ಹಾಡಿದೆನೆಂದರೆ ಜನರು ಎವೆಯಿಕ್ಕದೆ, ತುಟಿಪಿಟಕೆನ್ನದೆ, ಬಾಯಿಬಿಟ್ಟು ಕೇಳುವರು. ಕಾರಣ ಪದ್ಯಗಳಲ್ಲಿರುವ ಸತ್ವ, ಬಲ ಮತ್ತು ಜಿನಧರ್ಮಸಾರಗಳಿಂದಲೇ ಹೊರತು ನಾನು ಹಾಡುವ ಧಾಟಿಯಿಂದಲ್ಲ. ನನ್ನನ್ನು ಅನೇಕಜನ ಉಪನ್ಯಾಸಕ್ಕೆ ಆಹ್ವಾನಿಸುವುದು ಏಕೆಂದರೆ ರತ್ನಾಕರನನ್ನು ಆಲಿಸಲು ಮಾತ್ರ.

ಈಗ ಮೂರು ವರ್ಷಗಳ ಹಿಂದೆ ಪರಮಪೂಜ್ಯ ವಿದ್ಯಾನಂದ ಮುನಿಗಳನ್ನು ಕರ್ನಾಟಕಕ್ಕೆ ಆಹ್ವಾನಿಸಲು ನಾನು ದೆಹಲಿಗೆ ಹೋಗಿದ್ದಾಗ ಅಲ್ಲಿನ ಸಭೆಗಳಲ್ಲಿ ನನ್ನಿಂದ ರತ್ನಾಕರನ ಶತಕಗಳಿಂದ ಆಯ್ದ ಕೆಲವು ಪದ್ಯಗಳ ವಾಚನ

ವಾಯಿತು. ಕನ್ನಡ ಬರದ ದೆಹಲಿಯ ಶ್ರಾವಕರೂ ಸಹ ರತ್ನಾಕರನ ಬಗ್ಗೆ ಅಪಾರ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಪರಮ ಪೂಜ್ಯ ಏಲಾಚಾರ್ಯ ವಿದ್ಯಾನಂದ ಮುನಿಗಳು ರತ್ನಾಕರನ ಕೃತಿಗಳನ್ನು ಚೆನ್ನಾಗಿ ಅಭ್ಯಾಸಮಾಡಿದವರು. ನನ್ನ ವಾಚನದ ತರುವಾಯ ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ಆಶೀರ್ವದಿಸುತ್ತಾ "ನೀನು ರತ್ನಾಕರನ ಕೃತಿಗಳನ್ನು ನಿನ್ನ ಕಂಠದಿಂದ ಕರ್ನಾಟಕದ ಆದ್ಯಂತ ಪ್ರಚಾರ ಮಾಡಬೇಕು. ಎಲ್ಲ ಶ್ರಾವಕರ ಮನೆ ಮನಗಳಿಗೆ ರತ್ನಾಕರನನ್ನು ತುಂಬಬೇಕು" ಎಂದು ಆದೇಶವಿತ್ತರು. ಈ ಆದೇಶವನ್ನು ಅವರನ್ನು ನಾನು ಭೇಟಿಯಾದಾಗಲೆಲ್ಲ ಪುನರುಚ್ಚರಿಸುತ್ತಿದ್ದರು.

ಶ್ರೀಕ್ಷೇತ್ರ ಶ್ರವಣಬೆಳಗೊಳಕ್ಕೆ ಮಹಾಮುನಿಗಳು ಆಗಮಿಸಿದಾಗ ರತ್ನಾಕರನ ಎರಡೂ ಶತಕಗಳನ್ನು (ರತ್ನಾಕರ ಶತಕ ಮತ್ತು ಅಪರಾಜಿತ ಶತಕ) ಎಲ್ಲರಿಗೆ ತಿಳಿಯುವಂತೆ ಸಂಪಾದಿಸಬೇಕೆಂದು ಅಪ್ಪಣೆ ಮಾಡಿದರು. ಮುನಿಗಳ ಈ ಅಪ್ಪಣೆಗೆ ಶ್ರೀಕ್ಷೇತ್ರ ಶ್ರವಣಬೆಳಗೊಳದ ಪೂಜ್ಯ ಶ್ರೀ ಚಾರುಕೀರ್ತಿ ಸ್ವಾಮಿಗಳೂ ಧ್ವನಿಗೂಡಿಸಿದರು. ಅದರಂತೆ ಹೊಸ ರೀತಿಯಲ್ಲಿ ಈ ಶತಕದ್ವಯಗಳನ್ನು ನಾನು ಭವ್ಯಜನರ ಮುಂದಿಡುತ್ತಿದ್ದೇನೆ. ಮೊದಲು ಛಂದಸ್ಸಿಗೆ ಅನುಗುಣವಾಗಿ ಕವಿರಚಿತವಾಗಿರುವ ಪದ್ಯವನ್ನು ಮುದ್ರಿಸಿದೆ. ಅದರ ಕೆಳಗೆ ಓದುವ, ಹಾಡುವ ರೀತಿಯಲ್ಲಿ ಬರೆಯಲಾಗಿದೆ. ನಂತರ ಆ ಪದ್ಯದ ಪ್ರತಿಪದಾರ್ಥ ಮತ್ತು ಭಾವಾರ್ಥವನ್ನು ಜೋಡಿಸಲಾಗಿದೆ. ಈ ರೀತಿಯಾಗಿ ಪ್ರತಿ ಪದ್ಯವನ್ನು ಒಂದೊಂದು ಪುಟಕ್ಕೆ ಅಳವಡಿಸಿ, ಓದಲು ಅನುಕೂಲವಾಗುವಂತೆ ದಪ್ಪ ಅಕ್ಷರಗಳಲ್ಲಿ ಮುದ್ರಿಸಲಾಗಿದೆ. ಇದರಿಂದ ಪ್ರತಿಯೊಬ್ಬರೂ ರತ್ನಾಕರನನ್ನು ಓದಿ, ಅರ್ಥವನ್ನು ಗ್ರಹಿಸಿ, ಮನಸ್ಸಿಗೆ ಆನಂದವನ್ನೂ ಹೃದಯಕ್ಕೆ ತಂಪನ್ನೂ ನಂತರ ಆತ್ಮಕಲ್ಯಾಣವನ್ನು ಸಾಧಿಸಿಕೊಳ್ಳುವರೆಂದು ನನ್ನ ಧೃಢ ವಿಶ್ವಾಸ.

ರತ್ನಾಕರನ ಈ ಎರಡು ಶತಕಗಳನ್ನು ಎರಡು ಭಾಗಗಳಲ್ಲಿ ಹೊರತರಲಾಗಿದೆ. ಮೊದಲನೆಯ ಭಾಗ ರತ್ನಾಕರ ಶತಕ, ಎರಡನೆಯ ಭಾಗ ಅಪರಾಜಿತೇಶ್ವರ ಶತಕ.

ಈ ನನ್ನ ಕಾರ್ಯಕ್ಕೆ ಪೂರ್ಣ ಆಶೀರ್ವಾದವನ್ನು ನೀಡಿದ ಪರಮ ಪೂಜ್ಯ ಏಲಾಚಾರ್ಯ ಮುನಿಮಹಾರಾಜರಿಗೆ ನನ್ನ ಅನಂತ ನಮೋಸ್ತುಗಳು, ಶ್ರೀಕ್ಷೇತ್ರ ಶ್ರವಣಬೆಳಗೊಳದ ಶ್ರೀಮಠದ ಚಂದ್ರಗುಪ್ತಮಾಲೆಯ ವತಿಯಿಂದ ಪ್ರಕಾಶನಗೊಳಿಸಲು ಅನುಮತಿನೀಡಿದ ಪೂಜ್ಯ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರಿಗೂ ಸಾಷ್ಟಾಂಗ ನಮಸ್ಕಾರಗಳು.

ಈ ಗ್ರಂಥವನ್ನು ಜಾಗರೂಕತೆಯಿಂದ ಒಂದೂ ತಪ್ಪಿಲ್ಲದೆ ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ಕೀರ್ತಿ ಪ್ರಿಂಟರ್ಸ್ ಅವರಿಗೂ ನನ್ನ ವಂದನೆಗಳು.

ಎ. ಆರ್. ನಾಗರಾಜ್

41, "ಕುಂದ ಕುಂದ ಮಂದಿರ"
ಬಸಪ್ಪ ಲೇ ಔಟ್, ಗವೀಪುರಂ ಬಡಾವಣೆ,
ಬೆಂಗಳೂರು–560 019

1ನೇ ಜನವರಿ 1981.

ॐ

ಗೋಮಟೇಶ್ವರಾಯ ನಮಃ

ರತ್ನಾಕರ ಮಹಾಕವಿ ವಿರಚಿತ

ರತ್ನಾಕರ ಶತಕ

ಶ್ರೀರಾಗಂ ಸಿರಿಗಂಪು ಮಾಲೆ ಮಣಿಹಾರಂ ವಸ್ತ್ರಮುಂಗಕ್ಕಳಂ
ಕಾರಂ ಹೇಯಮಿವಾತ್ಮತತ್ತ್ವ ರುಚಿಬೋಧೋದ್ಯಚ್ಚರಿತ್ರಂಗಳೀ ॥
ತ್ರೈರತ್ನಂ ಮನಸಿಂಗೆ ಸಿಂಗರಮುಪಾದೇಯಂಗಳೆಂದಿತ್ತೆ ಶೃಂ
ಗಾರಶ್ರೀಕವಿಹಂಸರಾಜನೊಡೆಯಾ ರತ್ನಾಕರಾಧೀಶ್ವರಾ ॥೧॥

ಶ್ರೀರಾಗಂ ಸಿರಿಗಂಪುಮಾಲೆ ಮಣಿಹಾರಂ ವಸ್ತ್ರಂ ಅಂಗಕ್ಕೆ ಅಳಂಕಾರಂ,
ಹೇಯಂ ಇವು, ಆತ್ಮತತ್ತ್ವರುಚಿ ಬೋಧ ಉದ್ಯತ್‌ಚರಿತ್ರಂಗಳ್,
ಈ ತ್ರೈರತ್ನಂ ಮನಸಿಂಗೆ ಸಿಂಗರಂ, ಉಪಾದೇಯಂಗಳ್ ಎಂದಿತ್ತೆ,
ಶೃಂಗಾರ ಶ್ರೀ ಕವಿಹಂಸರಾಜನೊಡೆಯಾ ರತ್ನಾಕರಾಧೀಶ್ವರಾ.

ಶ್ರೀರಾಗಂ – ಮಂಗಲಕರವಾದ ಲೇಪನದ್ರವ್ಯವೂ, ಸಿರಿಗಂಪು ಮಾಲೆ - ಪರಿಮಳಯುಕ್ತವಾದ ಹೂವಿನ ಹಾರವೂ, ಮಣಿಹಾರಂ - ರತ್ನಮಾಲೆಯೂ, ವಸ್ತ್ರಂ - ವಸ್ತ್ರವೂ, ಅಂಗಕ್ಕೆ ಅಳಂಕಾರಂ - (ಇವೆಲ್ಲಾ) ದೇಹಕ್ಕೆ ಅಲಂಕಾರವು; ಹೇಯಂ ಇವು – ಇವೆಲ್ಲ ಬಿಡತಕ್ಕವು; ಆತ್ಮತತ್ತ್ವರುಚಿ – ಆತ್ಮ ಸ್ವರೂಪದ ಬಗ್ಗೆ ಶ್ರದ್ಧೆ (ಸಮ್ಯಗ್ದರ್ಶನ), ಬೋಧ – ಸಮ್ಯಕ್ ಜ್ಞಾನ, ಉದ್ಯತ್ - ಉತ್ಕೃಷ್ಟವಾದಂತ, ಚರಿತ್ರಂಗಳ್ – ಚಾರಿತ್ರ (ಸಮ್ಯಕ್ ಚಾರಿತ್ರ), ಈ ತ್ರೈರತ್ನಂ - ಈ ಮೂರು ರತ್ನಗಳು, ಮನಸಿಂಗೆ– ಮನಸ್ಸಿಗೆ (ಚಿತ್ತಕ್ಕೆ), ಸಿಂಗರಂ - ಅಲಂಕಾರಗಳು (ಭೂಷಣ); ಉಪಾದೇಯಂಗಳ್ - ಸ್ವೀಕರಿಸುವುದಕ್ಕೆ (ಧರಿಸುವುದಕ್ಕೆ) ಯೋಗ್ಯವಾದುವುಗಳು, ಎಂದು ಇತ್ತೆ - (ಈ ರತ್ನತ್ರಯಗಳನ್ನು) ಕೊಟ್ಟೆ, ಶೃಂಗಾರ ಶ್ರೀ ಕವಿಹಂಸರಾಜನ, ಒಡೆಯಾ - ಪ್ರಭುವಾದ, ರತ್ನಾಕರಾಧೀಶ್ವರಾ !

ಈ ಶರೀರದ ಅಲಂಕಾರಕ್ಕಾಗಿ ನಾವು ಬಳಸುವ ಸುಗಂಧದ್ರವ್ಯ, ಸುವಾಸನಾಭರಿತವಾದ ಹೂಮಾಲೆ, ರತ್ನಾಭರಣಗಳು, ವಿವಿಧ ತೆರನಾದ ವಸ್ತ್ರಗಳು ಇವೆಲ್ಲ ಕ್ಷಣಿಕವಾದುವುಗಳು. ಇವೆಲ್ಲ ಬಿಡತಕ್ಕವು. ಈ ಬಾಹ್ಯಗಳಿಗೆ ಮನಸೋಲದೆ ಮೋಕ್ಷ ಸುಖಕ್ಕೆ ನೆರವಾಗುವ ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ ಮತ್ತು ಸಮ್ಯಕ್ ಚಾರಿತ್ರಗಳೆಂಬ ಮೂರು ರತ್ನಗಳನ್ನು ಯಾವಾಗಲೂ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

ತತ್ತ್ವಪ್ರೀತಿ ಮನಕ್ಕೆ ಪುಟ್ಟಲದು ಸಮ್ಯಗ್ದರ್ಶನಂ ಮತ್ತಮಾ |
ತತ್ತ್ವಾರ್ಥಂಗಳನೊಲ್ದು ಭೇದಿಪುದು ಸಮ್ಯಗ್ಜ್ಞಾನಮಾ ಬೋಧದಿಂ
ಸತ್ತ್ವಂಗಳ್ಕಿಡದಂತುಟೋವಿ ನಡೆಯಲ್ಸಮ್ಯಕ್ಚರಿತ್ರಂ ಸುರ
ತ್ನತ್ರಂ ಮೂರಿವು ಮುಕ್ತಿಗೆಂದರುಪಿದೈ ! ರತ್ನಾಕರಾಧೀಶ್ವರಾ ! ||೨||

ತತ್ತ್ವಪ್ರೀತಿ ಮನಕ್ಕೆ ಪುಟ್ಟಲ್ ಅದು ಸಮ್ಯಕ್ ದರ್ಶನಂ, ಮತ್ತಂ ಆ
ತತ್ತ್ವಾರ್ಥಂಗಳಂ ಒಲ್ದು ಭೇದಿಪುದು ಸಮ್ಯಕ್ ಜ್ಞಾನಂ, ಆ ಬೋಧದಿಂ
ಸತ್ವಂಗಳ್ ಕಿಡದಂತುಟು ಓವಿ ನಡೆಯಲ್ ಸಮ್ಯಕ್ ಚರಿತ್ರಂ,
ಸುರತ್ನತ್ರಂ ಮೂರಿವು ಮುಕ್ತಿಗೆ ಎಂದು ಅರುಪಿದೈ ರತ್ನಾಕರಾಧೀಶ್ವರಾ !

ತತ್ತ್ವಪ್ರೀತಿ – ಜೀವ ಅಜೀವಾದಿ ತತ್ತ್ವಗಳ ಪ್ರೀತಿ, ಮನಕ್ಕೆ – ಮನಸ್ಸಿಗೆ, ಪುಟ್ಟಲ್ - ಹುಟ್ಟುವುದು, ಅದು ಸಮ್ಯಕ್‌ದರ್ಶನಂ - ಅದೇ ಸಮ್ಯಕ್‌ದರ್ಶನವು; ಮತ್ತಂ ಆ - ಮತ್ತೆ ಆ, ತತ್ತ್ವಾರ್ಥಂಗಳಂ – ತತ್ತ್ವಗಳ ಅರ್ಥಗಳನ್ನು, ಒಲ್ದು – ಭಾವಿಸಿ (ಸಂತೋಷದಿಂದ), ಭೇದಿಪುದು – ಬೇರೆಬೇರೆಯಾಗಿ ತಿಳಿಯುವುದು (ಅಂದರೆ ಶಾಸ್ತ್ರಜ್ಞಾನವನ್ನು ಹೆಚ್ಚಿಸಿಕೊಳ್ಳುವುದು), ಸಮ್ಯಕ್ ಜ್ಞಾನಂ – ಸಮ್ಯಕ್ ಜ್ಞಾನವು; ಆ ಬೋಧದಿಂ – ಆ ಸುಜ್ಞಾನದಿಂದ, ಸತ್ವಂಗಳ್ - ಜೀವಿಗಳು, ಕಿಡದಂತುಟು – ನಾಶವಾಗದಂತೆ, (ಅವುಗಳನ್ನು) ಓವಿ – ಕಾಪಾಡಿ, ನಡೆಯಲ್ – ವರ್ತಿಸುವುದು. ಸಮ್ಯಕ್ ಚರಿತ್ರಂ – ಸಮ್ಯಕ್ ಚಾರಿತ್ರವು; ಸುರತ್ನತ್ರಂ ಮೂರು ಇವು - ಈ ರತ್ನತ್ರಯವು, ಮುಕ್ತಿಗೆ ಎಂದು - ಮುಕ್ತಿಗೆ ಕಾರಣವೆಂದು, ಅರುಪಿದೈ – ತಿಳಿಸಿದೆ. ರತ್ನಾಕರಾಧೀಶ್ವರಾ !

ದೇವ ಗುರು ಶಾಸ್ತ್ರಗಳಲ್ಲಿ ಶ್ರದ್ಧಾಭಕ್ತಿಗಳನ್ನು ತೋರುವುದೇ ಸಮ್ಯಕ್ ದರ್ಶನ. ನಂತರ ಶಾಸ್ತ್ರಗಳನ್ನು ಅವಲೋಕಿಸಿ, ಅಭ್ಯಾಸಮಾಡಿ, ಮನನಮಾಡಿ ನಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದೇ ಸಮ್ಯಕ್‌ಜ್ಞಾನ. ಈ ಉತ್ಕೃಷ್ಟವಾದ ದರ್ಶನ ಜ್ಞಾನಗಳಿಂದ ಸಕಲ ಜೀವರಾಶಿಗಳಲ್ಲೂ ಸಮತಾ ಭಾವವನ್ನಿಟ್ಟು ಒಳ್ಳೆಯ ಶೀಲಸಂಪನ್ನರಾಗಿ ಬಾಳುವುದೇ ಸಮ್ಯಕ್ ಚಾರಿತ್ರ. ಈ ರತ್ನತ್ರಯಗಳೇ ಮುಕ್ತಿಗೆ ಸೋಪಾನಗಳು.

ಮಿಗೆ ಷಡ್ದ್ರವ್ಯಮನಸ್ತಿಕಾಯಮೆನಿಪ್ಪೈದಂ ತತ್ತ್ವವೇಳಂ ಮನಂ ।
ಬುಗಲೊಂಬತ್ತು ಪದಾರ್ಥಮಂ ತಿಳಿದೊಡಂ ತನ್ನಾತ್ಮನೀ ಮೆಯ್ಯ ದಂ
ದುಗದಿಂ ಬೇರೊಡಲೇನಚೇತನಮೆ ಜೀವಂ ಚೇತನಂ ಜ್ಞಾನರೂ
ಪಿಗಡಾಯೆಂದರಿದಿರ್ದನೇ ಸುಖಿಯಲಾ ! ರತ್ನಾಕರಾಧೀಶ್ವರಾ ! ॥೩॥

ಮಿಗೆ ಷಡ್ದ್ರವ್ಯಮಂ, ಅಸ್ತಿಕಾಯಂ ಎನಿಪ ಐದಂ, ತತ್ತ್ವವು ಏಳಂ, ಮನಂಪುಗಲ್ ಒಂಬತ್ತು ಪದಾರ್ಥಮಂ ತಿಳಿದೊಡಂ, ತನ್ನ ಆತ್ಮನ್ ಈ ಮೆಯ್ಯ ದಂದುಗದಿಂ ಬೇರೆ, ಒಡಲ್ ಏನ್ ಅಚೇತನಮು, ಜೀವಂ ಚೇತನಂ ಜ್ಞಾನರೂಪಿಗಡಾ, ಎಂದು ಅರಿದಿರ್ದನೇ ಸುಖಿಯಲಾ ! ರತ್ನಾಕರಾಧೀಶ್ವರಾ !

ಷಡ್ದ್ರವ್ಯಮಂ - ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲ ಈ ಆರು ದ್ರವ್ಯಗಳನ್ನೂ, ಅಸ್ತಿಕಾಯಂ ಎನಿಪ ಐದಂ–ಜೀವಾಸ್ತಿಕಾಯ, ಪುದ್ಗಲಾಸ್ತಿಕಾಯ, ಧರ್ಮಾಸ್ತಿಕಾಯ, ಅಧರ್ಮಾಸ್ತಿಕಾಯ, ಆಕಾಶಾಸ್ತಿಕಾಯ ಎಂಬ ಐದು ಅಸ್ತಿಕಾಯಗಳನ್ನೂ, ತತ್ತ್ವವು ಏಳಂ – ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರಾ, ಮೋಕ್ಷ ಈ ಏಳು ತತ್ತ್ವಗಳನ್ನೂ, ಒಂಬತ್ತು ಪದಾರ್ಥಮಂ - ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರಾ, ಮೋಕ್ಷ, ಪಾಪ, ಪುಣ್ಯ ಈ ಒಂಬತ್ತು ಪದಾರ್ಥಗಳನ್ನು, ಮಿಗೆ - ಚೆನ್ನಾಗಿ, ಮನಂಪುಗಲ್–ಮನಸ್ಸಿಗೆ ನಾಟುವಂತೆ, ತಿಳಿದೊಡಂ– ತಿಳಿದರೂ, ತನ್ನ ಆತ್ಮನ್ - ತನ್ನ ಆತ್ಮನು, ಈ ಮೆಯ್ಯ ದಂದುಗದಿಂ - ಈ ಶರೀರದ ಬಾಧೆಯಿಂದ, ಬೇರೆ - ಬೇರೆಯಾಗಿರುವನು ; ಒಡಲ್ ಏನ್ – ಈ ಶರೀರ ಏನು (ಎಂಥದ್ದು), ಅಚೇತನಮೆ – ಚೈತನ್ಯ ರಹಿತವಾದದ್ದಲ್ಲವೇ (ಜಡವಲ್ಲವೇ), ಜೀವಂ ಚೇತನಂ – ಜೀವವು ಚೈತನ್ಯಸ್ವರೂಪವೂ, ಜ್ಞಾನರೂಪಿಗಡಾ – ಜ್ಞಾನಸ್ವರೂಪವೂ ಅಲ್ಲವೇ ? ಎಂದು ಅರಿದಿರ್ದನೇ – ಎಂದು ತಿಳಿದವನೇ, ಸುಖಿಯಲಾ - ಸುಖಿಯಲ್ಲವೇ ? ರತ್ನಾಕರಾಧೀಶ್ವರಾ !

ಶಾಸ್ತ್ರಾಭ್ಯಾಸಮಾಡಿ ಷಡ್ದ್ರವ್ಯ, ಪಂಚಾಸ್ತಿಕಾಯ, ಸಪ್ತತತ್ತ್ವ, ನವ ಪದಾರ್ಥ ಇವೇ ಮೊದಲಾದ ಸಿದ್ಧಾಂತಗಳನ್ನು ತಿಳಿದು ಶ್ರುತಜ್ಞಾನವನ್ನು ಹೆಚ್ಚಿಸಿಕೊಂಡಿದ್ದರೂ, ಮನುಷ್ಯ ಸುಖಿಯಾಗಲು ಭೇದವಿಜ್ಞಾನಿಯಾಗಿರಬೇಕು. ಅಂದರೆ, ತನ್ನ ಆತ್ಮಬೇರೆ ಶರೀರ ಬೇರೆ, ರೋಗರುಜಿನ, ಸಾವು ನೋವುಗಳಿಗೆ ಈಡಾಗುವ ಈ ಶರೀರ ಜಡ ; ಆದರೆ ಜೀವ ಚೈತನ್ಯಮಯನೂ, ಜ್ಞಾನಸ್ವರೂಪನೂ, ಎಂದು ತಿಳಿಯುವುದೇ ಭೇದವಿಜ್ಞಾನ. ಅಂಥಹ ತಿಳುವಳಿಕೆಯುಳ್ಳವನೇ ಸುಖಿ.

**ಅರಿವಿಂದೀಕ್ಷಿಸಲಕ್ಕು ಮಾತ್ಮನಿರವಂ ದೇಹಂಬೊಲೀ ಕಣ್ಗೆ ತಾಂ ।
ಗುರಿಯಾಗಂ ಶಿಲೆಯೊಳ್ಸುವರ್ಣಮರಲೊಳ್ಸೌರಭ್ಯಮಾ ಕ್ಷೀರದೊಳ್ ॥
ನರು ನೆಯ್ಕಾಷ್ಠದೊಳಗ್ನಿಯಿರ್ಪತೆರದಿಂದೀ ಮೆಯ್ಯೊಳೊಂದಿರ್ಪನೆಂ
ದರಿದಭ್ಯಾಸಿಸೆ ಕಾಣ್ಗುಮೆಂದರುಪಿದೈ ! ರತ್ನಾಕರಾಧೀಶ್ವರಾ ! ॥೪॥**

ಅರಿವಿಂದ ಈಕ್ಷಿಸಲ್ ಅಕ್ಕುಂ ಆತ್ಮನ ಇರವಂ, ದೇಹಂಬೊಲ್ ಈ ಕಣ್ಗೆ ತಾಂ
ಗುರಿಯಾಗಂ, ಶಿಲೆಯೊಳ್ ಸುವರ್ಣಂ, ಅರಲೊಳ್ ಸೌರಭ್ಯಂ, ಆ ಕ್ಷೀರದೊಳ್
ನರು ನೆಯ್. ಕಾಷ್ಠದೊಳ್ ಅಗ್ನಿ ಇರ್ಪತೆರದಿಂದ, ಈ ಮೆಯ್ಯೊಳ್ ಒಂದಿರ್ಪನ್
ಎಂದು ಅರಿದು ಅಭ್ಯಾಸಿಸೆ ಕಾಣ್ಗುಂ ಎಂದು ಅರುಪಿದೈ ! ರತ್ನಾಕರಾಧೀಶ್ವರಾ !

ಆತ್ಮನ ಇರವಂ-ಆತ್ಮನ ಸ್ಥಿತಿಯನ್ನು, ಅರಿವಿಂದ – ಜ್ಞಾನದಿಂದ, ಈಕ್ಷಿಸಲ್ ಅಕ್ಕುಂ - ನೋಡುವುದಕ್ಕೆ ಆಗುತ್ತದೆ, ದೇಹಂಬೊಲ್ - ಶರೀರದ ಹಾಗೆ, ಈ ಕಣ್ಗೆ – ಈ ಚರ್ಮ ಚಕ್ಷುವಿಗೆ (ಈ ಕಣ್ಣುಗಳಿಗೆ) ತಾಂ ಗುರಿಯಾಗಂ – ಆತ್ಮನು ಗೋಚರಿಸುವುದಿಲ್ಲ ; (ಆತ್ಮನು) ಶಿಲೆಯೊಳ್ - ಕಲ್ಲಿನಲ್ಲಿ, ಸುವರ್ಣಂ - ಚಿನ್ನವೂ, ಅರಲೊಳ್ - ಹೂವಿನಲ್ಲಿ ಸೌರಭ್ಯಂ – ಸುವಾಸನೆಯೂ, ಆ ಕ್ಷೀರದೊಳ್ - ಆ ಹಾಲಿನಲ್ಲಿ, ನರುನೆಯ್ – ಗಮಗಮಿಸುವ ತುಪ್ಪವೂ, ಕಾಷ್ಠದೊಳ್ – ಕಟ್ಟಿಗೆಯಲ್ಲಿ, ಅಗ್ನಿ-ಬೆಂಕಿಯೂ, ಇರ್ಪತೆರದಿಂದ - ಇರುವಹಾಗೆ, ಈ ಮೆಯ್ಯೊಳ್ – ಈ ಶರೀರದಲ್ಲಿ, ಒಂದಿರ್ಪನ್ ಎಂದು - ಸೇರಿದ್ದಾನೆಂದು, ಅರಿದು – ತಿಳಿದು, ಅಭ್ಯಾಸಿಸೆ – ಅಭ್ಯಾಸ ಮಾಡಿದರೆ (ಧ್ಯಾನಮಾಡಿದರೆ) ಕಾಣ್ಗುಂ – ಕಾಣುವನು, ಎಂದು ಅರುಪಿದೈ – ತಿಳಿಸಿದೆ, ರತ್ನಾಕರಾಧೀಶ್ವರಾ !

ಈ ದೇಹದಲ್ಲಿ ಆತ್ಮನು ನೆಲಸಿದ್ದಾನೆ. ಆದರೆ ಅವನನ್ನು ಈ ಸಾಧಾರಣ ಚರ್ಮಚಕ್ಷುಗಳಿಂದ ನೋಡಲು ಸಾಧ್ಯವಿಲ್ಲ. ಕಲ್ಲಿನಲ್ಲಿ ಚಿನ್ನವೂ, ಹೂವಿನಲ್ಲಿ ಪರಿಮಳವೂ, ಹಾಲಿನಲ್ಲಿ ರುಚಿಕರವಾದಂಥ ತುಪ್ಪವೂ, ಕಟ್ಟಿಗೆಯಲ್ಲಿ ಬೆಂಕಿಯೂ ಇರುವಹಾಗೆ, ಈ ಜಡ ಶರೀರದಲ್ಲಿ ಆತ್ಮನು ಇರುವನೆಂದು ಜ್ಞಾನದಿಂದ (ಅಂತಃಚಕ್ಷುಗಳಿಂದ) ಮಾತ್ರ ತಿಳಿಯಬಹುದು. ಅದಕ್ಕೆ ಸತತ ತಪಧ್ಯಾನಾದಿಗಳು ಅಗತ್ಯ.

ಕಲ್ಲೊಳ್ತೋರ್ಪ ಪೊಗರ್ಸುವರ್ಣದ ಗುಣಂ ಕಾಷ್ಠಂಗಳೊಳ್ತೋರ್ಪ ಕೆ
ಚ್ಚೆಲ್ಲಾ ಕಿಚ್ಚಿನ ಚಿಹ್ನವಾ ಕೆನೆಯಿರಲ್ಪಾಲೊಳ್ಘೃತಚ್ಛಾಯೆಯೆಂ-
ದೆಲ್ಲರ್ ಬಣ್ಣಿಪರಂತುಟೀ ತನುವಿನೊಳ್ ಚೈತನ್ಯಮುಂ ಬೋಧಮುಂ
ಸೊಲ್ಲುಂ ಜೀವಗುಣಂಗಳೆಂದರುಪಿದೈ ! ರತ್ನಾಕರಾಧೀಶ್ವರಾ ||೫||

ಕಲ್ಲೊಳ್ ತೋರ್ಪ ಪೊಗರ್ ಸುವರ್ಣದ ಗುಣಂ, ಕಾಷ್ಠಂಗಳೊಳ್ ತೋರ್ಪ ಕೆಚ್ಚು ಎಲ್ಲಾ ಕಿಚ್ಚಿನ ಚಿಹ್ನಂ, ಆ ಕೆನೆಯಿರಲ್ ಪಾಲೊಳ್ ಘೃತಚ್ಛಾಯೆ ಎಂದು ಎಲ್ಲರ್ ಬಣ್ಣಿಪರ್, ಅಂತುಟು ಈ ತನುವಿನೊಳ್ ಚೈತನ್ಯಮುಂ ಬೋಧಮುಂ ಸೊಲ್ಲುಂ ಜೀವಗುಣಂಗಳ್ ಎಂದು ಅರುಪಿದೈ, ರತ್ನಾಕರಾಧೀಶ್ವರಾ !

ಕಲ್ಲೊಳ್ ತೋರ್ಪ - ಕಲ್ಲಿನಲ್ಲಿ ತೋರುವ, ಪೊಗರ್ - ಹೊಳಪು, ಸುವರ್ಣದ ಗುಣಂ - ಚಿನ್ನದ ಗುಣವು, ಕಾಷ್ಠಂಗಳೊಳ್ ತೋರ್ಪ - ಮರಗಳಲ್ಲಿ ತೋರುವ, ಕೆಚ್ಚು ಎಲ್ಲಾ - ಗಟ್ಟಿಯಾದ ಭಾಗವೆಲ್ಲಾ, ಕಿಚ್ಚಿನ ಚಿಹ್ನಂ - ಬೆಂಕಿಯ ಚಿಹ್ನೆಯು, ಆ ಕೆನೆಯಿರಲ್ ಪಾಲೊಳ್ - ಹಾಲಿನಲ್ಲಿ ಆ ಕೆನೆಯಿರುತ್ತಿರಲು, ಘೃತಚ್ಛಾಯೆ–ತುಪ್ಪದ ಚಿಹ್ನೆ, ಎಂದು, ಎಲ್ಲರ್ - ಎಲ್ಲರೂ, ಬಣ್ಣಿಪರ್ - ಹೇಳುತ್ತಾರೆ, ಅಂತುಟು - ಹಾಗೆಯೇ, ಈ ತನುವಿನೊಳ್ - ಈ ಶರೀರದಲ್ಲಿ, ಚೈತನ್ಯಮುಂ - ಚೇತನ ಸ್ವಭಾವವೂ, ಬೋಧಮುಂ - ಜ್ಞಾನವೂ, ಸೊಲ್ಲುಂ - ವಚನವೂ, ಜೀವ ಗುಣಂಗಳ್ - ಜೀವದ ಗುಣಗಳು, ಎಂದು, ಅರುಪಿದೈ - ತಿಳಿಸಿದೆ, ರತ್ನಾಕರಾಧೀಶ್ವರಾ.

ಕಲ್ಲಿನಲ್ಲಿ ಕಾಣುವ ಹೊಳಪು ಚಿನ್ನದ ಗುಣವನ್ನೂ. ಮರಗಳಲ್ಲಿ ಗಟ್ಟಿಯಾದ ಭಾಗಗಳೆಲ್ಲ ಬೆಂಕಿಯ ಚಿಹ್ನೆಯನ್ನೂ, ಹಾಲಿನಲ್ಲಿರುವ ಕೆನೆ ತುಪ್ಪದ ಇರುವಿಕೆಯನ್ನೂ, ಎಲ್ಲರೂ ಬಣ್ಣಿಸುವಂತೆ, ಈ ಶರೀರದಲ್ಲಿರುವ ಚೇತನ ಸ್ವಭಾವವೂ, ಜ್ಞಾನವೂ, ವಚನವೂ ಜೀವದ ಗುಣಗಳು ಎಂದು ತಿಳಿಸಿದೆ ರತ್ನಾಕರಾಧೀಶ್ವರನೇ !

**ಮತ್ತಾ ಕಲ್ಲನೆ ಸೋದಿಸಲ್ಕನಕಮುಂ ಕಾಣ್ಬಂತೆ ಪಾಲಂ ಕ್ರಮಂ –
ಬೆತ್ತೊಳ್ಪಿಂ ಮಥನಂ ಗೆಯಲ್ಘೃತಮುಮಂ ಕಾಣ್ಬಂತೆ ಕಾಷ್ಠಂಗಳಂ ||
ಒತ್ತಂಬಂ ಪೊಸೆದಗ್ನಿ ಕಾಣ್ಬ ತೆರದಿಂ ಮೆಯ್ಬೇರೆ ಬೇರಾನೆನು–
ತ್ತಿತ್ತಭ್ಯಾಸಿಸಲೆನ್ನ ಕಾಣ್ಬುದರಿದೇ ? ರತ್ನಾಕರಾಧೀಶ್ವರಾ ! ||೬||**

ಮತ್ತೆ ಆ ಕಲ್ಲನೆ ಸೋದಿಸಲ್ ಕನಕಮಂ ಕಾಣ್ಬಂತೆ, ಪಾಲಂ ಕ್ರಮಂಬೆತ್ತು
ಒಳ್ಪಿಂ ಮಥನಂ ಗೆಯಲ್ ಘೃತಮುಮಂ ಕಾಣ್ಬಂತೆ, ಕಾಷ್ಠಂಗಳಂ
ಒತ್ತಂಬಂ ಪೊಸೆದು ಅಗ್ನಿ ಕಾಣ್ಬ ತೆರದಿಂ, ಮೆಯ್ ಬೇರೆ ಬೇರೆ ಆನ್ ಎನುತ್ತ
ಇತ್ತ ಅಭ್ಯಾಸಿಸಲ್ ಎನ್ನ ಕಾಣ್ಬುದು ಅರಿದೇ ? ರತ್ನಾಕರಾಧೀಶ್ವರಾ.

ಮತ್ತೆ ಆ ಕಲ್ಲನೆ - ಮತ್ತೆ ಆ ಕಲ್ಲನ್ನೇ, ಸೋದಿಸಲ್ - ಶೋಧಿಸಿದರೆ, ಕನಕಮಂ–ಚಿನ್ನವನ್ನು, ಕಾಣ್ಬಂತೆ–ಕಾಣುವಂತೆಯೂ, ಪಾಲಂ–ಹಾಲನ್ನು, ಕ್ರಮಂಬೆತ್ತು - ಕ್ರಮವನ್ನನುಸರಿಸಿ (ಹೆಪ್ಪಿಟ್ಟು) ಒಳ್ಪಿಂ - ಚೆನ್ನಾಗಿ, ಮಥನಂ ಗೆಯಲ್–ಕಡೆದರೆ, ಘೃತಮುಮಂ–ತುಪ್ಪವನ್ನು, ಕಾಣ್ಬಂತೆ - ಕಾಣುವಂತೆಯೂ, ಕಾಷ್ಠಂಗಳಂ–ಮರಗಳನ್ನು, ಒತ್ತಂಬಂ–ಬಲವಾಗಿ, ಪೊಸೆದು–ಉಜ್ಜಿ, ಅಗ್ನಿ–ಬೆಂಕಿಯನ್ನು, ಕಾಣ್ಬತೆರದಿಂ - ಕಾಣುವ ರೀತಿಯಲ್ಲಿಯೂ, ಮೆಯ್‌ಬೇರೆ - ಸರೀರವು ಬೇರೆ, ಬೇರೆ ಆನ್–ನಾನು ಬೇರೆ, ಎನುತ್ತ - ಎಂಬುದಾಗಿ. ಇತ್ತ–ಹೀಗೆ, ಅಭ್ಯಾಸಿಸಲ್ - (ಭೇದ ವಿಜ್ಞಾನದ) ಅಭ್ಯಾಸವನ್ನು ಮಾಡಿದರೆ, ಎನ್ನ–ನನ್ನನ್ನು (ಪರಮಾತ್ಮನನ್ನು). ಕಾಣ್ಬುದು–ಕಾಣುವುದು, ಅರಿದೇ - ಅಸಾಧ್ಯವೇ ? ರತ್ನಾಕರಾಧೀಶ್ವರಾ.

ಚಿನ್ನದ ಅದಿರು ಇರುವ ಕಲ್ಲನ್ನು ಶೋಧಿಸಿ ಚಿನ್ನವನ್ನು ಪಡೆಯುವ ಹಾಗೆಯೂ, ಹಾಲನ್ನು ಕ್ರಮವರಿತು (ಸರಿಯಾಗಿ ಹೆಪ್ಪಾಕಿ) ಚೆನ್ನಾಗಿ ಕಡೆದರೆ (ಬೆಣ್ಣೆ ಬಂದು ಅದನ್ನು ಹದವಾಗಿ ಕಾಯಿಸಿ) ತುಪ್ಪವನ್ನು ಪಡೆಯುವ ಹಾಗೆಯೂ, ಮರಗಳನ್ನು ಬಲವಾಗಿ ಒಂದಕ್ಕೊಂದು ಉಜ್ಜಿದರೆ ಬೆಂಕಿಯನ್ನು ಕಾಣುವ ರೀತಿಯಲ್ಲಿಯೂ, ''ಶರೀರ ಬೇರೆ, ಆತ್ಮ ಬೇರೆ'' ಎಂಬ ಭೇದ ವಿಜ್ಞಾನದ ಅಭ್ಯಾಸದಲ್ಲಿ ತೊಡಗಿದರೆ ತನ್ನನ್ನು ತಾನು ಕಾಣುವುದು ಅಸಾಧ್ಯವೇನಲ್ಲ, ಅಂದರೆ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳುವುದು ಸಾಧ್ಯವಾಗುತ್ತದೆ.

ಅಂಗುಷ್ಠಂ ಮೊದಲಾಗಿ ನೆತ್ತಿವರೆಗಂ ಸರ್ವಾಂಗಸಂಪೂರ್ಣನು-
ತ್ತುಂಗಜ್ಞಾನಮಯಂ ಸುದರ್ಶನಮಯಂ ಚಾರಿತ್ರತೇಜೋಮಯಂ॥
ಮಾಂಗಲ್ಯಂ ಮಹಿಮಂ ಸ್ವಯಂಭು ಸುಖಿ ನಿರ್ಬಾಧಂ ನಿರಾಪೇಕ್ಷಿ ನಿ-
ಮ್ಮಂಗಂಬೊಲ್ಪರಮಾತ್ಮನೆಂದರುಪಿದೈ ! ರತ್ನಾಕರಾಧೀಶ್ವರಾ ! ॥೭॥

ಅಂಗುಷ್ಠಂ ಮೊದಲಾಗಿ ನೆತ್ತಿವರೆಗಂ ಸರ್ವಾಂಗ ಸಂಪೂರ್ಣಂ,
ಉತ್ತುಂಗ ಜ್ಞಾನಮಯಂ, ಸುದರ್ಶನಮಯಂ, ಚಾರಿತ್ರತೇಜೋಮಯಂ
ಮಾಂಗಲ್ಯಂ, ಮಹಿಮಂ, ಸ್ವಯಂಭು, ಸುಖಿ, ನಿರ್ಬಾಧಂ, ನಿರಾಪೇಕ್ಷಿ
ನಿಮ್ಮ ಅಂಗಂಬೊಲ್ ಪರಮಾತ್ಮನ್ ಎಂದು ಅರುಪಿದೈ ! ರತ್ನಾಕರಾಧೀಶ್ವರಾ !

ರತ್ನಾಕರಾಧೀಶ್ವರನೆ ! ಪರಮಾತ್ಮನ್-ಪರಮಾತ್ಮನು, ನಿಮ್ಮ ಅಂಗಂಬೊಲ್-ನಿಮ್ಮ ಶರೀರದ ಹಾಗೆ, ಅಂಗುಷ್ಠಂ ಮೊದಲಾಗಿ –ಕಾಲಿನ ಹೆಬ್ಬೆರಳಿನಿಂದ ಮೊದಲುಗೊಂಡು, ನೆತ್ತಿವರೆಗಂ - ನೆತ್ತಿಯ ವರೆಗೂ, ಸರ್ವಾಂಗಸಂಪೂರ್ಣಂ-ಸಮಸ್ತ ಅವಯವಗಳಲ್ಲಿ ತುಂಬಿರುವನು; ಉತ್ತುಂಗ ಜ್ಞಾನಮಯಂ-ಶ್ರೇಷ್ಠವಾದ ಜ್ಞಾನಸ್ವರೂಪನು, ಸುದರ್ಶನಮಯಂ – ಸಮ್ಯಗ್ದರ್ಶನ ಸ್ವರೂಪನು, ಚಾರಿತ್ರ ತೇಜೋಮಯಂ–ಸಮ್ಯಕ್ಚಾರಿತ್ರವೆಂಬ ತೇಜಸ್ಸಿನ ಸ್ವರೂಪನು, ಮಾಂಗಲ್ಯಂ–ಮಂಗಲಸ್ವರೂಪನು, ಮಹಿಮಂ–ಅತಿಶಯವುಳ್ಳವನು, ಸ್ವಯಂಭು–ಯಾರ ಅಂಕೆಗೂ ಒಳಪಡದವನು (ಆತ್ಮಸಾಕ್ಷಾತ್ಕಾರ ಪಡೆದವನು) ಸುಖಿ–ಅನಂತ ಸುಖಕ್ಕೆ ಒಡೆಯನು, ನಿರ್ಬಾಧಂ–ಬಾಧೆಯಿಲ್ಲದವನು, ನಿರಾಪೇಕ್ಷಿ–ವಿಶಯಾಸಕ್ತಿ ಇಲ್ಲದವನು, ಎಂದು ಅರುಪಿದೈ - ಎಂದು ತಿಳಿಸಿದೆ.

ಪ್ರತಿಯೊಂದು ದೇಹದಲ್ಲಿರುವ ಆತ್ಮನ ಸ್ವರೂಪ ಪರಮಾತ್ಮ ಸ್ವರೂಪವೇ. ಪರಮಾತ್ಮನ ಸ್ವರೂಪ ಹೇಗಿದೆಯೆಂದರೆ, ''ಕಾಲಿನ ಹೆಬ್ಬೆರಳಿನಿಂದ ನೆತ್ತಿಯವರೆಗೂ ಎಲ್ಲಾ ಅವಯವಗಳಲ್ಲೂ ಪರಿಪೂರ್ಣನಾಗಿ ತುಂಬಿದ್ದಾನೆ, ಅನಂತ ಜ್ಞಾನಸ್ವರೂಪನು, ಅನಂತ ದರ್ಶನಸ್ವರೂಪನು, ಸಮ್ಯಕ್ ಚಾರಿತ್ರವೆಂಬ ತೇಜಸ್ಸಿನಿಂದ ಬೆಳಗುವವನು, ಮಂಗಳಸ್ವರೂಪನು, ಮಹಾಮಹಿಮನು, ತನ್ನ ನಿಜ ಸ್ವರೂಪವನ್ನು ಹೊಂದಿರುವವನು, ಅನಂತ ಸುಖಸ್ವರೂಪನು, ಯಾವ ಬಾಧೆಯೂ ಇಲ್ಲದವನು, ವೀತರಾಗಿಯೂ ಆಗಿದ್ದಾನೆ.''

ಬಿಸಿಲಿಂ ಕಂದದ ಬೆಂಕಿಯಿಂ ಸುಡದ ನೀರಿಂ ನಾಂದದುಗ್ರಾಸಿ ಭೇ–
ದಿಸಲುಂ ಬಾರದ ಚಿನ್ಮಯಂ ಮರೆದು ತನ್ನೊಳ್ಪಂ ಪರಧ್ಯಾನದಿಂ ॥
ಪಸಿವಿಂದೀ ಬಹುಬಾಧೆಯಿಂ ರುಜೆಗಳಿಂ ಕೇಡಾಗುವೀ ಮೆಯ್ಗೆ ಸಂ–
ದಿಸಿದಂ ತನ್ನನೆ ಚಿಂತಿಸಲ್ಸುಖಿಯಲಾ ! ರತ್ನಾಕರಾಧೀಶ್ವರಾ ! ॥೮॥

ಬಿಸಿಲಿಂ ಕಂದದ, ಬೆಂಕಿಯಿಂ ಸುಡದ, ನೀರಿಂ ನಾಂದದ, ಉಗ್ರಾಸಿ
ಭೇದಿಸಲುಂ ಬಾರದ, ಚಿನ್ಮಯಂ, ಮರೆದು ತನ್ನೊಳ್ಪಂ, ಪರಧ್ಯಾನದಿಂ
ಪಸಿವಿಂದ, ಈ ಬಹುಬಾಧೆಯಿಂ, ರುಜೆಗಳಿಂ ಕೇಡಾಗುವ ಈ ಮೆಯ್ಗೆ
ಸಂದಿಸಿದಂ, ತನ್ನನೆ ಚಿಂತಿಸಲ್ ಸುಖಿಯಲಾ ! ರತ್ನಾಕರಾಧೀಶ್ವರಾ !

ಬಿಸಿಲಿಂ ಕಂದದ–ಬಿಸಿಲಿನಿಂದ ಬಾಡಿಹೋಗದಿರುವವನೂ, ಬೆಂಕಿಯಿಂ ಸುಡದ–ಬೆಂಕಿಯಿಂದ ಸುಡದಿರುವವನೂ, ನೀರಿಂ ನಾಂದದ - ನೀರಿನಿಂದ ನೆನೆಯದಿರುವವನೂ, ಉಗ್ರಅಸಿ - ತೀಕ್ಷ್ಣವಾದ ಖಡ್ಗವು, ಭೇದಿಸಲುಂ ಬಾರದ-ಭೇದಿಸುವುದಕ್ಕೂ ಸಿಗದಿರುವವನೂ, ಚಿನ್ಮಯಂ–ಜ್ಞಾನ ದರ್ಶನ ಸ್ವರೂಪನೂ (ಆತ್ಮನು), ಪರಧ್ಯಾನದಿಂ–ಪರವಸ್ತುಗಳ ಚಿಂತನೆಯಿಂದ, ಮರೆದು ತನ್ನೊಳ್ಪಂ–ತನ್ನ ಸ್ವರೂಪವನ್ನು ಮರೆತುಬಿಟ್ಟು, ಪಸಿವಿಂದ - ಹಸಿವಿನಿಂದಲೂ, ಈ ಬಹುಬಾಧೆಯಿಂ - ಈ ಅನೇಕ ಬಾಧೆಗಳಿಂದಲೂ, ರುಜೆಗಳಿಂ - ರೋಗಗಳಿಂದಲೂ, ಕೇಡಾಗುವ - ನಾಶವನ್ನು ಹೊಂದುವ, ಈ ಮೆಯ್ಗೆ - ಈ ಶರೀರಕ್ಕೆ, ಸಂದಿಸಿದಂ–ಸೇರಿದನು, ತನ್ನನೆ ಚಿಂತಿಸಲ್–ತನ್ನನ್ನೇ ಕುರಿತು ಧ್ಯಾನಮಾಡಿದರೆ (ಅಂತರ್ಮುಖಿಯಾದರೆ), ಸುಖಿಯಲಾ - ಸುಖಿಯಲ್ಲವೇ, ರತ್ನಾಕರಾಧೀಶ್ವರಾ.

ಬಿಸಿಲಿನಿಂದ ಬಾಡದಿರುವವನೂ, ಬೆಂಕಿಯಿುದ ಸುಡದಿರುವವನೂ, ನೀರಿನಿಂದ ನೆನೆಯದಿರುವವನೂ, ಹರಿತವಾದ ಕತ್ತಿಯಿಂದ ಯಾವ ರೀತಿಯಲ್ಲೂ ಭೇದಿಸುವುದಕ್ಕಾಗದಿರುವವನೂ, ಅನಂತ ಜ್ಞಾನದರ್ಶನಮಯನೂ ಆದ ಆತ್ಮನು ತನ್ನ ನಿಜ ಸ್ವರೂಪವನ್ನು ಮರೆತು, ಕರ್ಮಸಂಯೋಗದಿಂದ ಪರವಸ್ತುಗಳ ಚಿಂತನೆಯನ್ನು ಮಾಡುತ್ತ, ಹಸಿವಿನಿಂದಲೂ, ಅನೇಕ ಬಾಧೆಗಳಿಂದಲೂ, ರೋಗಗಳಿಂದಲೂ ನಾಶವನ್ನು ಹೊಂದುವ ಈ ಜಡ ಶರೀರದಲ್ಲಿ ಕೂಡಿಕೊಂಡಿದ್ದಾನೆ. ಈ ಕರ್ಮದ ಬಂಧನದಿಂದ ಪಾರಾಗಲು ತನ್ನನ್ನೇ ಕುರಿತು ಧ್ಯಾನಮಾಡಿದರೆ ಸುಖಿಯಾಗುವುದರಲ್ಲಿ ಸಂದೇಹವೇನು ?

ಒಡಲೆಂಬೀಜಡನಂ ಲಯಪ್ರಕರನಂ ನಿಶ್ಚೇಷ್ಟನಂ ದುಶ್ಟನಂ |
ಪಡಿಮಾತೇಂ ಪೆಣನಂ ಮಹಾತ್ಮನಹಹಾ ತನ್ನೊಂದು ಸಾಮರ್ಥ್ಯದಿಂ ||
ನಡೆಯಿಪ್ಪಂ ರಥಿಕಂಬೊಲೇಂ ನುಡಿಯಿಪಂ ಮಾರ್ದಂಗಿಕಂಬೊಲ್ಬಿಸು |
ಳ್ಬಿಡುವಂ ಜೋಹಟಿಗಂಬೊಲೇಂ ಕುಶಲನೋ ! ರತ್ನಾಕರಾಧೀಶ್ವರಾ ||೯||

ಒಡಲ್ಎಂಬ ಈ ಜಡನಂ, ಲಯಪ್ರಕರನಂ, ನಿಶ್ಚೇಷ್ಟನಂ, ದುಶ್ಟನಂ,
ಪಡಿಮಾತೇಂ, ಪೆಣನಂ, ಮಹಾತ್ಮಂ ಅಹಹಾ ! ತನ್ನೊಂದು ಸಾಮರ್ಥ್ಯದಿಂ,
ನಡೆಯಿಪ್ಪಂ ರಥಿಕಂಬೊಲ್, ಏಂ ನುಡಿಯಿಪಂ ಮಾರ್ದಂಗಿಕಂಬೊಲ್,
ಬಿಸುಳ್ಬಿಡುವಂ ಜೋಹಟಿಗಂಬೊಲ್, ಏಂ ಕುಶಲನೋ ರತ್ನಾಕರಾಧೀಶ್ವರಾ

ಒಡಲ್ ಎಂಬ–ಶರೀರವೆಂಬ, ಈ ಜಡನಂ–ಅಚೇತನವನ್ನೂ (ಅರಿಯುವ ಶಕ್ತಿಯಿಲ್ಲದುದು) ಲಯಪ್ರಕರನಂ – ನಾಶಪರಂಪರೆಯುಳ್ಳವನನ್ನೂ, ನಿಶ್ಚೇಷ್ಟನಂ – ವ್ಯಾಪಾರರಹಿತನನ್ನೂ, ದುಶ್ಟನಂ–ದೋಷಯುಕ್ತನನ್ನೂ. ಪಡಿಮಾತೇಂ – ಹೆಚ್ಚು ಮಾತೇಕೆ ? ಪೆಣನಂ – ಹೆಣವಾಗಿರುವವನನ್ನೂ, ಮಹಾತ್ಮಂ – ಆ ಮಹಾತ್ಮನಾದ ಆತ್ಮನು, ಅಹಹಾ ! ತನ್ನ ಒಂದು, ಸಾಮರ್ಥ್ಯದಿಂ – ಚೈತನ್ಯದಿಂದ, ರಥಿಕಂಬೊಲ್ – ರಥವನ್ನು ಹೊಡೆಯುವ ಸಾರಥಿಯಂತೆ, ನಡೆಯಿಪ್ಪಂ – ನಡೆಸುತ್ತಾನೆ. ಮಾರ್ದಂಗಿಕಂಬೊಲ್ – ಮದ್ದಳೆ ಬಾರಿಸುವವನಂತೆ, ಏಂ ನುಡಿಯಿಪಂ – ಏನು ಮಾತಾಡಿಸುತ್ತಾನೋ! ಜೋಹಟಿಗಂಬೊಲ್ – ವೇಷಧಾರಿಯ ಹಾಗೆ, ಬಿಸುಳ್ಬಿಡುವಂ – (ತನ್ನ ವೇಷವನ್ನು) ಬಿಸಾಡುತ್ತಾನೆ, ಏಂ ಕುಶಲನೋ–ಏನು ಸಮರ್ಥನೋ ! ರತ್ನಾಕರಾಧೀಶ್ವರಾ.

ಮಹಾತ್ಮನಾದ ಆತ್ಮನು ಅಚೇತನವಾದ ಈ ಶರೀರದಲ್ಲಿ ಇದ್ದುಕೊಂಡು, ಅದರಿಂದ ನಾನಾ ವಿಧವಾದ ಕಾರ್ಯಗಳನ್ನು ಮಾಡಿಸುತ್ತಾನೆ. ಈ ಶರೀರ ಜಡ, ನಾಶವನ್ನು ಹೊಂದತಕ್ಕದ್ದು, ಕಲುಷಿತವಾದದ್ದು, ವ್ಯಾಪಾರರಹಿತವಾದದ್ದು : ಅಂದರೆ ತನ್ನದೇ ಆದ ಯಾವ ಸಾಮರ್ಥ್ಯವೂ ಇಲ್ಲ, ಹೆಚ್ಚು ಮಾತೇಕೆ ! ಈ ಶರೀರ ಹೆಣವೇ ಸರಿ. ಇಂಥ ಶರೀರದಲ್ಲಿ ತಾನು ಸೇರಿ ತನ್ನ ಸಾಮರ್ಥ್ಯದಿಂದ ಆತ್ಮನು, ರಥದ ಸಾರಥಿಯಂತೆ ಶರೀರವನ್ನು ಸಂಚಾರಮಾಡಿಸುತ್ತಾನೆ ; ಮದ್ದಳೆ ಬಾರಿಸುವವನಂತೆ ಶರೀರವನ್ನು ಮಾತನಾಡಿಸುತ್ತಾನೆ. ನಾಟಕದಲ್ಲಿ ಪಾತ್ರಧಾರಿಯು ತನ್ನ ಪಾತ್ರಮುಗಿದಮೇಲೆ ಆ ವೇಷವನ್ನು ಬದಲಾಯಿಸುವಂತೆ ಒಂದು ಶರೀರದಿಂದ ಮತ್ತೊಂದು ಶರೀರಕ್ಕೆ ಹೋಗುತ್ತಾನೆ, ಏನು ಸಾಮರ್ಥ್ಯ ಈ ಆತ್ಮನದು !

ಬೀಳ್ದಿರ್ಪಂ ತನುವೆಂಬ ಪಂದೊವಲ ಕೂರ್ಪಾಸಂಗಳಂ ತೊಟ್ಟು ತಾ-
ನೇಳ್ದಿರ್ಪಂ ತನುಗೂಡಿ ಸಂಚರಿಪನಾ ಮೆಯ್ಗೂಡಿ ತನ್ನೊಳ್ಪುಮಂ ॥
ಕೇಳ್ದಿರ್ಪಂ ತನುಗೂಡಿ ತತ್ತನುಗೆ ಜೀವಂ ಪೇಸಿ ಸುಜ್ಞಾನದಿಂ
ಪೊಳ್ದಿರ್ಪಂ ಶಿವನಾಗಿಯೇಂ ಚದುರನೋ ! ರತ್ನಾಕರಾಧೀಶ್ವರಾ ! ॥೧೦॥

ಬೀಳ್ದಿರ್ಪಂ ತನುವೆಂಬ ಪಂದೊವಲ ಕೂರ್ಪಾಸಂಗಳಂ ತೊಟ್ಟು,
ತಾನ್ ಏಳ್ದಿರ್ಪಂ ತನುಗೂಡಿ, ಸಂಚರಿಪಂ ಆ ಮೆಯ್ಗೂಡಿ, ತನ್ನ ಒಳ್ಪುಮಂ
ಕೇಳ್ದಿರ್ಪಂ ತನುಗೂಡಿ, ತತ್ ತನುಗೆ ಜೀವಂ ಪೇಸಿ ಸುಜ್ಞಾನದಿಂ
ಪೊಳ್ದಿರ್ಪಂ ಶಿವನಾಗಿ, ಏಂ ಚದುರನೋ ರತ್ನಾಕರಾಧೀಶ್ವರಾ !

(ಜೀವನು)–ತನುವೆಂಬ – ಶರೀರವೆಂಬ, ಪಂದೊವಲ – ಹಸಿಯ ಚರ್ಮದ, ಕೂರ್ಪಾಸಂಗಳಂ ತೊಟ್ಟು – ಕವಚಗಳನ್ನು ತೊಟ್ಟು, ಬೀಳ್ದಿರ್ಪಂ – ಬಿದ್ದಿರುವನು. ತಾನ್ ಏಳ್ದಿರ್ಪಂ ತನುಗೂಡಿ – ತಾನು ಶರೀರದೊಡಗೂಡಿ ಎದ್ದಿರುವನು, ಸಂಚರಿಪಂ ಆ ಮೆಯ್ಗೂಡಿ – ಆ ಶರೀರದೊಡಗೂಡಿ ಸಂಚಾರಮಾಡುವನು, ತನ್ನ ಒಳ್ಪುಮಂ – ತನ್ನ ನಿಜಸ್ವರೂಪವನ್ನು (ಸ್ವಸ್ವರೂಪ) ತನುಗೂಡಿ – ಶರೀರದಲ್ಲಿದ್ದುಕೊಂಡು, ಕೇಳ್ದಿರ್ಪಂ – ತಿಳಿದುಕೊಳ್ಳುವನು, ತತ್ ತನುಗೆ – ಆ ಶರೀರಕ್ಕೆ, ಜೀವಂ–ಜೀವನು, ಪೇಸಿ–ಜುಗುಪ್ಸೆಪಟ್ಟು, ಸುಜ್ಞಾನದಿಂ–ಸುಜ್ಞಾನದಿಂದ, ಶಿವನಾಗಿ–ಪರಮೇಶ್ವರನಾಗಿ, ಪೊಳ್ದಿರ್ಪಂ–ಭೇದಿಸಲ್ಪಟ್ಟಿರುವನು, (ಭೇದವಿಜ್ಞಾನದಿಂದ ಈ ಜೀವ ಶರೀರದಲ್ಲಿದ್ದುಕೊಂಡೇ ಪರಮೇಶ್ವರನಾಗಿ ರಾರಾಜಿಸುವನು) ಏಂ ಚದುರನೋ–ಎಂಥ ಕುಶಲನೋ (ಸಮರ್ಥನೋ) ರತ್ನಾಕರಾಧೀಶ್ವರಾ !

ಈ ಜೀವ ಹಸಿಯ ಚರ್ಮದ ಕವಚದಂತಿರುವ ದೇಹವನ್ನು ಧರಿಸಿಕೊಂಡು ತೊಳಲಾಡುತ್ತಿರುವನು. ಈ ಶರೀರವನ್ನು ಹೊತ್ತುಕೊಂಡು ಏಳುತ್ತ ಬೀಳುತ್ತ ಸುತ್ತುತ್ತಿರುವನು. ಈ ಶರೀರದಲ್ಲಿದ್ದುಕೊಂಡೇ ತನ್ನ ಸ್ವಸ್ವರೂಪವನ್ನು ತಿಳಿದುಕೊಳ್ಳುವನು. ಕೊನೆಗೆ ಈ ತೊಗಲ ಚೀಲಕ್ಕೆ ಹೇಸಿ ಭೇದವಿಜ್ಞಾನದಿಂದ (ಸುಜ್ಞಾನದಿಂದ) ಈ ಜೀವ ಪರಮೇಶ್ವರನಾಗಿ ರಾರಾಜಿಸುವನು. ಎಂಥ ಚದುರ ಈ ಆತ್ಮ ! ಜಡ ಶರೀರದಲ್ಲಿದ್ದುಕೊಂಡೇ ಬೆಳಕನ್ನು ಕಾಣುವ ಆತ್ಮನ ಕುಶಲತೆಯನ್ನು ಎಷ್ಟೆಂದು ಕೊಂಡಾಡೋಣ !

**ಬೂರಂ ವಾರಿಯೊಳಳ್ದಿ ಯೂರ್ಧ್ವಗಮನಂಗೆಟ್ಟುರ್ವಿಯೊಳ್ಬಿಳ್ದು ದೂ
ಳ್ಭಾರೈಸಲ್ಸುಳಿ ಗಾಳಿಯಿಂದುರುಳ್ವವೋಲ್ಕರ್ಮಂಗಳಿಂ ನಾಂದು ಮೆ-॥
ಯ್ಭಾರಂ ದಾಳ್ದುರೆ ಕರ್ಮನೊಯ್ದೆಡೆಗೆ ಸುತ್ತುತ್ತಿರ್ಪೆ ನಂತಲ್ಲದಾ-
ನಾರೀ ಸಂಸೃತಿಯಾರೊ ಮೋಕ್ಷಕನೆ ನಾಂ ರತ್ನಾಕರಾಧೀಶ್ವರಾ !** ॥೧೧॥

ಬೂರಂ ವಾರಿಯೊಳ್ ಅಳ್ದಿ, ಊರ್ಧ್ವಗಮನಂ ಕೆಟ್ಟು, ಉರ್ವಿಯೊಳ್ ಬಿಳ್ದು, ದೂಳ್ ಭಾರೈಸಲ್, ಸುಳಿಗಾಳಿಯಿಂದ ಉರುಳ್ವವೋಲ್, ಕರ್ಮಂಗಳಿಂನಾಂದು ಮೆಯ್‌ಭಾರಂ ತಾಳ್ದು ಉರೆ, ಕರ್ಮ ಒಯ್ದ ಎಡೆಗೆ ಸುತ್ತುತ್ತಿರ್ಪೆನ್, ಅಂತಲ್ಲದೆ ಆನ್ ಆರ್ ಈ ಸಂಸೃತಿ ಯಾರೊ ಮೋಕ್ಷಕನೆ ನಾಂ ರತ್ನಾಕರಾಧೀಶ್ವರಾ !

ಬೂರಂ - ಬೂರುಗದ ಹತ್ತಿಯು. ವಾರಿಯೊಳ್–ನೀರಿನಲ್ಲಿ, ಅಳ್ದಿ – ಅದ್ದಲ್ಪಟ್ಟು, ಊರ್ಧ್ವಗಮನಂ ಕೆಟ್ಟು – ಮೇಲೆಹಾರುವ ಅದರ ಗತಿಯು ತಪ್ಪಿ, ಉರ್ವಿಯೊಳ್ ಬಿಳ್ದು - ಭೂಮಿಯಲ್ಲಿ ಬಿದ್ದು, ದೂಳ್‌ಭಾರೈಸಲ್ – ಧೂಳು ಹತ್ತಿಕೊಂಡು, ಸುಳಿಗಾಳಿಯಿಂದ, ಉರುಳ್ವವೋಲ್ – ಹೊರಳಾಡುವಹಾಗೆ, ಕರ್ಮಂಗಳಿಂ – ಕರ್ಮಗಳಿಂದ, ನಾಂದು - ನೆನೆದು (ಬಂಧನದಿಂದ) ಮೆಯ್‌ಭಾರಂ-ಶರೀರ ಭಾರವನ್ನು, ಉರೆ – ಚೆನ್ನಾಗಿ, ತಾಳ್ದು - ಹೊಂದಿ, ಕರ್ಮ ಒಯ್ದ ಎಡೆಗೆ– ಕರ್ಮವು ಕೊಂಡುಹೋದ ಸ್ಥಳಕ್ಕೆ, ಸುತ್ತುತ್ತಿರ್ಪೆನ್-ತಿರುಗುತ್ತಿರುವೆನು, ಅಂತಲ್ಲದೆ ಆನ್ ಆರ್– ಹಾಗಲ್ಲದೆ ನಾನು ಯಾರು ? ಈ ಸಂಸೃತಿಯಾರೋ–ಈ ಸಂಸಾರ ಯಾವುದೋ ? ಮೋಕ್ಷಕನೆ ನಾಂ–ನಾನು ಮೋಕ್ಷವನ್ನು ಪಡೆಯುವವನೇ. ರತ್ನಾಕರಾಧೀಶ್ವರಾ.

ಬೂರುಗದ ಹತ್ತಿಯು ನೀರಿನಲ್ಲಿ ಬಿದ್ದು ನೆನೆದು ತನ್ನ ಸ್ವಾಭಾವಿಕವಾದ ಮೇಲಕ್ಕೆ ಹಾರುವ ಅವಸ್ಥೆಯನ್ನು ಕೆಡೆಸಿಕೊಂಡು ಭೂಮಿಯಲ್ಲಿ ಬಿದ್ದು ಧೂಳನ್ನು ಹತ್ತಿಸಿಕೊಳ್ಳುತ್ತದೆ ಮತ್ತು ಆಗಾಗ ಬೀಸುವ ಸುಳಿಗಾಳಿಗೆ ಸಿಕ್ಕಿ ತಿರ್ರನೆ ತಿರುಗುತ್ತಿರುತ್ತದೆ. ಅಂತೆಯೆ ನಮ್ಮ ಆತ್ಮನು ಕರ್ಮವೆಂಬ ಧೂಳಿನಿಂದಾದ ಈ ಶರೀರಭಾರವನ್ನು ಹೊಂದಿ ಸಹಜವಾದ ತನ್ನ ಊರ್ಧ್ವಗಮನವನ್ನು ನೀಗಿಕೊಂಡು ಕರ್ಮವು ಆಟವಾಡಿಸಿದ ಹಾಗೆ ಆಡುತ್ತ, ಈ ಸಂಸಾರ ಚಕ್ರದಲ್ಲಿ ತಿರ್ರನೆ ತಿರುಗುತ್ತಿದೆ. ಎಚ್ಚೆತ್ತುಕೊಂಡು ನಾನು ಯಾರು, ಈ ಸಂಸಾರ ಯಾವುದು ಎಂಬ ಅರಿವಾಗಿ, ನಮ್ಮ ನಿವಾಸಸ್ಥಾನ ಮೋಕ್ಷವೆಂದು ತಿಳಿಯಬೇಡವೆ ?

ತನುವೇಸ್ಫಾಟಿಕಪಾತ್ರೆ ಯಿಂದ್ರಿಯದ ಮೊತ್ತಂ ತಾನೆ ಸದ್ವರ್ತಿ ಜೀ-
ವನವೇ ಜ್ಯೋತಿಯದರ್ಕೆ ಪಜ್ಜಳಿಸುವಾ ಸುಜ್ಞಾನಮೇ ರಶ್ಮಿಯಿಂ ||
ತಿನಿತುಂ ಕೂಡಿದೊಡೇನೊ ರಶ್ಮಿಯೊದವಿಂಗೇಂ ದೇವ ! ನಿನ್ನೆನ್ನಚಿಂ
ತನೆಗಳ್ನೋಡೆ ಘೃತಂಬೊಲೆಣ್ಣೆವೊಲಲಾ ! ರತ್ನಾಕರಾಧೀಶ್ವರಾ ||೧೨||

ತನುವೇ ಸ್ಫಾಟಿಕಪಾತ್ರೆ, ಇಂದ್ರಿಯದ ಮೊತ್ತಂ ತಾನೆ ಸದ್ವರ್ತಿ,
ಜೀವನವೇ ಜ್ಯೋತಿ ಅದರ್ಕೆ, ಪಜ್ಜಳಿಸುವ ಆ ಸುಜ್ಞಾನಮೇ ರಶ್ಮಿ,
ಇಂತು ಇನಿತುಂ ಕೂಡಿದೊಡೆ ಏನೊ, ರಶ್ಮಿಯೊದವಿಂಗೆ ಏಂ ದೇವ ! ನಿನ್ನ ಎನ್ನ
ಚಿಂತನೆಗಳ್ ನೋಡೆ, ಘೃತಂಬೊಲ್ ಎಣ್ಣೆವೊಲಲಾ ರತ್ನಾಕರಾಧೀಶ್ವರಾ !

ತನುವೇ–ಶರೀರವೇ, ಸ್ಫಾಟಿಕಪಾತ್ರೆ–ಸ್ಫಟಿಕ ಶಿಲೆಯಿಂದ ಮಾಡಿದ ದೀಪದ ಪಾತ್ರೆ (ದೀಪಸ್ತಂಭ) ಇಂದ್ರಿಯದ ಮೊತ್ತಂ ತಾನೆ–ಸ್ಪರ್ಶನ, ರಸನ, ಘ್ರಾಣ, ಚಕ್ಷು, ಶ್ರೋತ್ರ ಎಂಬ ಪಂಚೇಂದ್ರಿಯಗಳಾದರೋ, ಸದ್ವರ್ತಿ – ಒಳ್ಳೆಯ ಬತ್ತಿಯು ; ಜೀವನವೇ – ಪ್ರಾಣಧಾರಣವೇ, ಜ್ಯೋತಿ ಅದರ್ಕೆ - ಆ ದೀಪಕ್ಕೆ ಕಾಂತಿಯು, ಪಜ್ಜಳಿಸುವ ಆ ಸುಜ್ಞಾನಮೇ – ಪ್ರಕಾಶಿಸುವ ಆ ಸಮ್ಯಕ್ ಜ್ಞಾನವೇ, ರಶ್ಮಿ–ಕಿರಣವು. ಇಂತು – ಹೀಗೆ, ಇನಿತುಂ – ಇಷ್ಟೂ, ಕೂಡಿದೊಡೆ ಏನೊ– ಸೇರಿದರೆ ಏನು ಪ್ರಯೋಜನವೊ ! ದೇವ ! ರಶ್ಮಿ ಒದವಿಂಗೆ ಏಂ – ಬೆಳಕುಂಟಾಗುವುದಕ್ಕೇನು ಬೇಕಾಗಿದೆ ! ನೋಡೆ - ವಿಚಾರಮಾಡಿದರೆ, ನಿನ್ನ ಎನ್ನ ಚಿಂತನೆಗಳ್–ನಿನ್ನನ್ನು ಕುರಿತು ನನ್ನ ಚಿಂತನೆಗಳು, ಘೃತಂಬೊಲ್ ಎಣ್ಣೆವೊಲಲಾ – ತುಪ್ಪದಹಾಗೂ, ಎಣ್ಣೆಯಹಾಗೂ ಅಲ್ಲವೇ ! ರತ್ನಾಕರಾಧೀಶ್ವರಾ !

ಈ ಶರೀರವೇ ಶುಭ್ರವಾದ ಸ್ಫಟಿಕದ ಪಾತ್ರೆ. ಇಂದ್ರಿಯಗಳ ಸಮೂಹವೇ ಬತ್ತಿ ; ಪ್ರಾಣವೇ ಬೆಳಕಿನ ಕುಡಿ ; ಸುಜ್ಞಾನವೇ ಕಾಂತಿಯುಕ್ತವಾದ ಕಿರಣ. ಎಷ್ಟೆಲ್ಲ ಇದ್ದರೂ ಈ ಜ್ಯೋತಿ ನಿರಂತರ ಬೆಳಗಲು ತುಪ್ಪವಾಗಲಿ ಎಣ್ಣೆಯಾಗಲೀ ಬೇಡವೆ? ಪರಮಾತ್ಮನ ಚಿಂತನೆಯೇ ಈ ಸುಜ್ಞಾನ ಪ್ರಕಾಶದ ಹೊಳೆ ಹರಿಸಲು ನೆರವಾಗುವ ತುಪ್ಪವಿದ್ದಂತೆ.

ತನುವೇಂ ತಾಮ್ರನಿವಾಸವೋ ಮಳಲ ಬೆಟ್ಟೊಳ್ತೋಡಿ ಬೀಡಂ ಮರು
ಳ್ಮನಮೊಲ್ದಿರ್ಪವೊಲಿಂದೊ ನಾಳೆಯೊ ತೊಡಂಕೇಂ ನಾಳಿದೋ ಈಗಳೋ ॥
ಘನದೊಡ್ಡೆಂಬವೊಲೊಡ್ಡಿಯೊಡ್ಡಳಿವ ಮೆಯ್ಯೊಳ್ಮೋಸವೇಕಿರ್ದಪೈ
ನೆನೆದಿರ್ಜೀವನೆ ಮೇಲನೆಂದರುಪಿದೈ ! ರತ್ನಾಕರಾಧೀಶ್ವರಾ ॥೧೩॥

ತನುವೇಂ ತಾಮ್ರನಿವಾಸವೋ, ಮಳಲಬೆಟ್ಟೊಳ್ ತೋಡಿ ಬೀಡಂ,
ಮರುಳ್ ಮನಂ ಒಲ್ದಿರ್ಪವೊಲ್ ಇಂದೊ ನಾಳೆಯೊ ತೊಡಂಕೇಂ ನಾಳಿದೋ ಈಗಳೋ
ಘನದ ಒಡ್ಡು ಎಂಬವೊಲ್ ಒಡ್ಡಿ ಒಡ್ಡಿ ಅಳಿವ ಮೆಯ್ಯೊಳ್ ಮೋಸವು, ಏಕಿರ್ದಪೈ,
ನೆನೆದಿರ್ ಜೀವನೆ, ಮೇಲನೆಂದು ಅರುಪಿದೈ ರತ್ನಾಕರಾಧಿಶ್ವರಾ !

ತನುವೇಂ-ಶರೀರವೇನು, ತಾಮ್ರನಿವಾಸವೋ-ತಾಮ್ರದಿಂದ ಮಾಡಿದ ಮನೆಯೊ? ಮಳಲ ಬೆಟ್ಟೊಳ್-ಮರಳಿನ ಗುಡ್ಡದಲ್ಲಿ, ತೋಡಿ ಬೀಡಂ-ಮನೆಯನ್ನು ತೋಡಿ, ಮರುಳ್ಮನಂ-ಹುಚ್ಚು ಮನಸ್ಸು, ಒಲ್ದಿರ್ಪವೊಲ್ - ಒಲಿದಿರುವಹಾಗೆ (ಆ ಮನೆಯನ್ನು ನೋಡಿ) ಇಂದೊ ನಾಳೆಯೊ ತೊಡಂಕೇಂ ನಾಳಿದೋ ಈಗಳೋ - ಈದಿನವೋ ನಾಳೆಯೋ, ಹೆಚ್ಚೆಂದರೆ ನಾಳಿದ್ದೋ ಈಗಲೋ ಈ ಶರೀರಕ್ಕೆ ಅಪಾಯವು; ಘನದ ಒಡ್ಡು ಎಂಬವೊಲ್ – ಮೇಘದ ಸೇರುವಿಕೆಯ ಹಾಗೆ, ಒಡ್ಡಿ ಒಡ್ಡಿ ಅಳಿವ - ಸೇರಿ ಸೇರಿ ನಾಶವಾಗುವ, ಮೆಯ್ಯೊಳ್ - ಶರೀರದಲ್ಲಿರುವುದು, ಮೋಸವು-ಅಪಾಯವು; ಏಕಿರ್ದಪೈ–ಏತಕ್ಕಿರುವೆ? ನೆನೆದಿರ್ ಜೀವನೆ ಮೇಲನ್–ಒಳ್ಳೆಯದನ್ನು ಚಿಂತಿಸುತ್ತಿರು ಜೀವನೆ, ಎಂದು ಅರುಪಿದೈ-ಎಂದು ತಿಳಿಸಿದೆ, ರತ್ನಾಕರಾಧೀಶ್ವರಾ !

ದೇಹ ಶಾಶ್ವತವೇ? ತಾಮ್ರದಿಂದೇನಾದರೂ ಇದನ್ನು ಮಾಡಿದೆಯೆ? ಮರಳಿನ ರಾಶಿಯಲ್ಲಿ ಗೂಡನ್ನು ತೋಡಿ ಅದನ್ನೇ ಮನೆಯೆಂದು ಭ್ರಮಿಸಿ ಮನಸ್ಸು ಒಲಿದಿದೆ. ಆದರೆ ಆ ಮರಳಿನ ಗೂಡು ಯಾವಕ್ಷಣದಲ್ಲಾದರೂ ಕುಸಿಯುವಹಾಗೆ ಈ ದೇಹ ಎಂದುಬೇಕಾದರೂ ನಾಶವಾಗಬಹುದು. ಮೋಡಗಳಗುಂಪು ಈಗ ಕಾಣಿಸಿಕೊಂಡು, ಮರುಕ್ಷಣದಲ್ಲಿ ಚದುರಿಹೋಗುವಂತೆ, ದೇಹವೂ ಕೂಡ ಇಂದೋ, ತಪ್ಪಿದರೆ ನಾಳೆಯೋ, ಹೆಚ್ಚೆಂದರೆ ನಾಳಿದ್ದೋ ನಿರ್ನಾಮವಾಗದಿರದು. ಇಂಥ ನಶ್ವರವಾದ ಬಾಳನ್ನು ನಂಬಿ ಮೋಸಹೋದಿಯೇ ಜೀವ! ಎಚ್ಚರಗೊಂಡು ಆತ್ಮೋನ್ನತಿಯನ್ನು ಸಾಧಿಸಿಕೋ.

ಉಂಬೂಟಂ ಮಿಗಿಲಾಗೆ ಯೇರುವ ಹಯಂಬೆಚ್ಚಲ್ಕೆ ನೀರ್ಮೂಗಿನೊ
ಳ್ತುಂಬಲ್ಪೋಗುತೆ ಮುಗ್ಗಿಯುಂ ಮರಣಮಕ್ಕುಂ ಜೀವಕೀ ದೇಹವೆ ॥
ಷ್ಟಂಬಾಳ್ದಷ್ಪದು ಲಾಭವೀ ಕಿಡುವ ಮೆಯ್ಯಂಕೊಟ್ಟು ನಿತ್ಯತ್ವವಾ
ದಿಂಬಂ ಧರ್ಮದೆ ಕೊಂಬವಂ ಚದುರನೈ ರತ್ನಾಕರಾಧೀಶ್ವರಾ ॥೧೪॥

ಉಂಬೂಟಂ ಮಿಗಿಲಾಗೆ, ಏರುವ ಹಯಂ ಬೆಚ್ಚಲ್ಕೆ, ನೀರ್ ಮೂಗಿನೊಳ್
ತುಂಬಲ್, ಪೋಗುತೆ ಮುಗ್ಗಿಯುಂ ಮರಣಂ ಅಕ್ಕುಂ, ಜೀವಕೆ ಈ ದೇಹವು
ಎಷ್ಟಂ ಬಾಳ್ದಪ್ಪದು ಲಾಭಂ, ಈ ಕಿಡುವ ಮೆಯ್ಯಂ ಕೊಟ್ಟು, ನಿತ್ಯತ್ವವಾದ
ಇಂಬಂ, ಧರ್ಮದೆ ಕೊಂಬವಂ ಚದುರನೈ, ರತ್ನಾಕರಾಧೀಶ್ವರಾ !

ಉಂಬ ಊಟಂ–ಊಟಮಾಡುವ ಆಹಾರವು, ಮಿಗಿಲಾಗೆ–ಹೆಚ್ಚಾಗಲು, ಏರುವ ಹಯಂ-ಹತ್ತುವ ಕುದುರೆಯು, ಬೆಚ್ಚಲ್ಕೆ-ಬೆದರಲು. ನೀರ್–ನೀರು, ಮೂಗಿನೊಳ್ ತುಂಬಲ್–ಮೂಗಿನಲ್ಲಿ ತುಂಬಲು, ಪೋಗುತೆ–ನಡೆಯುತ್ತ, ಮುಗ್ಗಿಯುಂ–ಮುಗ್ಗರಿಸಲೂ, ಮರಣಂ ಅಕ್ಕುಂ ಸಾವು ಪ್ರಾಪ್ತವಾಗುತ್ತದೆ. ಜೀವಕೆ–ಜೀವಾತ್ಮನಿಗೆ, ಈ ದೇಹವು, ಎಷ್ಟಂ ಬಾಳ್ದಪ್ಪು-ಎಷ್ಟು ಬಾಳಿದರಷ್ಟು ಅದು ಲಾಭಂ–ಅದು ಲಾಭವು ; ಈ ಕಿಡುವ–ಈ ನಾಶವಾಗುವ, ಮೆಯ್ಯಂಕೊಟ್ಟು–ಶರೀರವನ್ನು ಕೊಟ್ಟು ನಿತ್ಯತ್ವವಾದ ಇಂಬಂ-ನಿತ್ಯವಾದ ಎಡೆಯನ್ನು (ಮುಕ್ತಿಸ್ಥಾನವನ್ನು) ಧರ್ಮದೆ-ಧರ್ಮದಿಂದ, ಕೊಂಬವಂ-ತೆಗೆದುಕೊಳ್ಳುವವನು, ಚದುರನೈ-ಜಾಣನು ರತ್ನಾಕರಾಧೀಶ್ವರಾ !

ಊಟ ಸ್ವಲ್ಪ ಹೆಚ್ಚಾದರೂ ಪ್ರಾಣ ಹೋಗಬಹುದು. ಸವಾರಿ ಮಾಡುವ ಕುದುರೆ ಬೆದರಿದರೆ ಅದರ ಮೇಲಿಂದ ಬಿದ್ದು ಸಾಯಬಹುದು. ಕುಡಿಯುವಾಗ ನೀರು ಮೂಗಿನಲ್ಲಿ ಹೋದರೆ ಉಸಿರುಕಟ್ಟಿ ಪ್ರಾಣಾಪಾಯವಾಗಬಹುದು. ನಡೆಯುತ್ತಿರುವಾಗ ಎಡವಿ ಸಾಯಬಹುದು. ಸಾವು ಬರುವಾಗ ಹೇಳಿ ಕೇಳಿ ಬರುತ್ತದೆಯೆ ? ಆದ್ದರಿಂದ ಈ ಶರೀರವು ಎಷ್ಟು ಬದುಕಿದರೆ ಅಷ್ಟೇ ಲಾಭ. ಅನಿತ್ಯವಾದ ಶರೀರವೆಂಬ ಬೆಲೆಯನ್ನು ಕೊಟ್ಟು ನಿತ್ಯವಾದ ಮುಕ್ತಿಯೆಂಬ ಪದಾರ್ಥವನ್ನು ಧರ್ಮದಿಂದ ಕೊಳ್ಳುವವನೇ ಚದುರನು.

ಪುಲುವೀಡೊಳ್ಪಲವುಂ ಪಗಲ್ಪರದನಿರ್ದಾದಾಯುಮಂ ಪೆತ್ತು ಬಾ-
ಳ್ನೆಲೆಯುಳ್ಳೊಂದೆಡೆಗೆಯ್ದುಲಾ ನೆಲೆಯುವರ್ನೋವಂತೆ ಪಾಳ್ಮೆಯ್ಯೊಳಿ-
ರ್ದೊಲವಿಂ ಪುಣ್ಯಮನೀ ಮನಂಗಳಿಸಿಕೊಂಡಾ ದೇವಲೋಕಕ್ಕೆ ಪೋ-
ಗಲೊಡಂ ನೋವರವಂಗೊ ನೋವು ತವಗೋ ರತ್ನಾಕರಾಧೀಶ್ವರಾ ||೧೫||

ಪುಲುವೀಡೊಳ್ ಪಲವುಂ ಪಗಲ್ ಪರದನ್ ಇರ್ದು, ಆದಾಯುಮಂ ಪೆತ್ತು,
ಬಾಳ್ ನೆಲೆಯುಳ್ಳ ಒಂದೆಡೆಗೆ ಎಯ್ದಲ್, ಆ ನೆಲೆಯುವರ್ ನೋವಂತೆ, ಪಾಳ್ ಮೆಯ್ಯೊಳ್
ಇರ್ದು, ಒಲವಿಂ ಪುಣ್ಯಮಂ ಈ ಮನಂ ಗಳಿಸಿಕೊಂಡು, ಆ ದೇವಲೋಕಕ್ಕೆ
ಪೋಗಲೊಡಂ, ನೋವರ್ ಅವಂಗೊ ನೋವು ತವಗೋ ರತ್ನಾಕರಾಧೀಶ್ವರಾ !

ಪುಲುವೀಡೊಳ್–ಹುಲ್ಲಿನ ಜೋಪಡಿಯಲ್ಲಿ, ಪಲವುಂ ಪಗಲ್–ಹಲವು ದಿವಸ, ಪರದನ್–ವರ್ತಕನು, ಇರ್ದು–ವಾಸವಾಗಿದ್ದು, (ಬಾಡಿಗೆ ಕೊಟ್ಟು ವಾಸ) ಆದಾಯಮಂ ಪೆತ್ತು-ಲಾಭವನ್ನು ಗಳಿಸಿ, ಬಾಳ್ ನೆಲೆಯುಳ್ಳ – ಬಾಳುವುದಕ್ಕೆ ಯೋಗ್ಯವಾದ, ಒಂದೆಡೆಗೆ - ಒಂದು ಮನೆಗೆ, ಎಯ್ದಲ್-ಹೋಗಲು, ಆ ನೆಲೆಯುವರ್-ಆ ಹುಲ್ಲಿನ ಜೋಪಡಿಯ ಯಜಮಾನರು, ನೋವಂತೆ–ದುಃಖಪಡುವಹಾಗೆ, ಪಾಳ್ಮೆಯ್ಯೊಳ್ ಇರ್ದು – ಹಾಳಾಗುವ ಶರೀರದಲ್ಲಿ ವಾಸಮಾಡಿ ಕೊಂಡಿದ್ದು, ಒಲವಿಂ-ಪ್ರೀತಿಯಿಂದ, ಪುಣ್ಯಮಂ-ಪುಣ್ಯವನ್ನು ಈ ಮನಂ–ಈ ಮನಸ್ಸು (ಆತ್ಮನು), ಗಳಿಸಿಕೊಂಡು – ಸಂಪಾದಿಸಿಕೊಂಡು. ಆ ದೇವಲೋಕಕ್ಕೆ-ಆ ಸ್ವರ್ಗಲೋಕಕ್ಕೆ, ಪೋಗಲೊಡಂ–ಹೋದರೂ, ನೋವರ್–ದುಃಖಪಡುತ್ತಾರೆ (ಅವನ ಬಂಧುಗಳು) ; ಆ ದುಃಖ, ಅವಂಗೊ-ಸ್ವರ್ಗಕ್ಕೆ ಹೋದ ಜೀವಾತ್ಮನಿಗೋ, ನೋವು ತವಗೋ-(ಅಥವ) ನೋವು ತಮಗೋ! ರತ್ನಾಕರಾಧೀಶ್ವರಾ.

ಒಬ್ಬ ವರ್ತಕನು ಒಂದು ಹುಲ್ಲಿನ ಜೋಪಡಿಯಲ್ಲಿ ಬಾಡಿಗೆಗಿದ್ದು, ವ್ಯಾಪಾರದಲ್ಲಿ ಲಾಭ ಗಳಿಸಿ ಬೇರೊಂದು ಚೆನ್ನಾಗಿರುವ ಮನೆಗೆ ಹೋದರೆ ಆ ಜೋಪಡಿಯ ಯಜಮಾನರು ತಮಗೆ ಸಿಗುತ್ತಿದ್ದ ಬಾಡಿಗೆ ಹೋಯಿತೆಂದು ಹೇಗೆ ದುಃಖಪಡುವರೋ ಹಾಗೆಯೇ ಜೀವಾತ್ಮನು ಈ ಕೊಳಕು ಶರೀರದಲ್ಲಿದ್ದುಕೊಂಡು ಪುಣ್ಯವನ್ನು ಗಳಿಸಿಕೊಂಡು ಸತ್ತು ಸ್ವರ್ಗಕ್ಕೆ ಹೋದರೆ ಅವನ ಬಂಧುಗಳು (ಹೆಂಡತಿ ಮಕ್ಕಳು ಇತ್ಯಾದಿ) ಅವನಿಂದ ತಮಗೆ ಬರುತ್ತಿದ್ದ ಹಣಕ್ಕೆ ಕೊರತೆ ಬಂದಿತೆಂದು ದುಃಖಪಡುವರಲ್ಲದೆ ಆ ಸ್ವರ್ಗಕ್ಕೆ ಹೋದ ಜೀವಾತ್ಮನಿಗೋಸ್ಕರವಲ್ಲ.

ದಾನಕ್ಕಿಲ್ಲ ತಪಕ್ಕೆಸಲ್ಲ ಮರಣಂಗಾಣ್ಬಂದು ನಿಮ್ಮಕ್ಷರ
ಧ್ಯಾನಕ್ಕೊಲ್ಲೆನೆನಿಪ್ಪವಂ ಮಡಿಯೆ ನೋಯಲ್ತಕ್ಕುದಿಷ್ಟಾದಿಗಳ್ ॥
ದಾನಂಗೆಯ್ದು ತಪಕ್ಕೆ ಪಾಯ್ದು ಮರಣಂಗಾಣ್ಬಂದು ನಿಮ್ಮಕ್ಷರ
ಧ್ಯಾನಂ ಗೆಯ್ದಳಿದಂಗೆ ಶೋಕಿಪರದೇಂ? ರತ್ನಾಕರಾಧೀಶ್ವರಾ ॥೧೬॥

ದಾನಕ್ಕಿಲ್ಲ ತಪಕ್ಕೆಸಲ್ಲ ಮರಣಂ ಕಾಣ್ಬಂದು ನಿಮ್ಮಕ್ಷರ ಧ್ಯಾನಕ್ಕೆ
ಒಲ್ಲೆನ್ ಎನಿಪ್ಪವಂ ಮಡಿಯೆ, ನೋಯಲ್ ತಕ್ಕುದು ಇಷ್ಟಾದಿಗಳ್,
ದಾನಂಗೆಯ್ದು ತಪಕ್ಕೆಪಾಯ್ದು, ಮರಣಂ ಕಾಣ್ಬಂದು ನಿಮ್ಮಕ್ಷರ
ಧ್ಯಾನಂಗೆಯ್ದು ಅಳಿದಂಗೆ, ಶೋಕಿಪರದೇಂ ರತ್ನಾಕರಾಧೀಶ್ವರಾ !

ದಾನಕ್ಕಿಲ್ಲ – ದಾನಮಾಡಲಿಲ್ಲ, ತಪಕ್ಕೆಸಲ್ಲ – ತಪಸ್ಸಿಗೆ ಮನಸ್ಸಿಲ್ಲ, ಮರಣಂ ಕಾಣ್ಬಂದು– ಮರಣ ಹೊಂದುವ ಕಾಲದಲ್ಲಿ, ನಿಮ್ಮ ಅಕ್ಷರಧ್ಯಾನಕ್ಕ–ನಿಮ್ಮ ನಾಮಾವಳಿಯ ಧ್ಯಾನಮಾಡುವುದಕ್ಕೆ, ಒಲ್ಲೆನ್-ಅಪೇಕ್ಷೆಯಿಲ್ಲ, ಎನಿಪ್ಪವಂ–ಎನ್ನುವವನು, ಮಡಿಯೆ–ಸಾಯಲು, ಇಷ್ಟಾದಿಗಳ್ – ಬಂಧು ಮಿತ್ರರು, ನೋಯಲ್ ತಕ್ಕುದು – ದುಃಖಪಡತಕ್ಕದ್ದು ಸರಿ ; ದಾನಂಗೆಯ್ದು - ದಾನಮಾಡಿ, ತಪಕ್ಕೆಪಾಯ್ದು - ತಪಸ್ಸಿಗೆ ಮುಂದಾಗಿ, ಮರಣಂ ಕಾಣ್ಬಂದು - ಮರಣವನ್ನು ಹೊಂದುವ ಕಾಲ ದಲ್ಲಿ, ನಿಮ್ಮ ಅಕ್ಷರಧ್ಯಾನಂ – ನಿಮ್ಮ ನಾಮಾವಳಿಯ ಧ್ಯಾನವನ್ನು, ಗೆಯ್ದು-ಮಾಡಿ, ಅಳಿದಂಗೆ– ಸತ್ತವನಿಗೆ, ಶೋಕಿಪರ್ ಅದೇಂ - ಏತಕ್ಕೆ ದುಃಖಪಡುತ್ತಾರೆ.

ತನ್ನ ಜೀವನದಲ್ಲಿ ಏನೂ ದಾನಮಾಡಲಿಲ್ಲ. ತಪಸ್ಸಿಗೆ ಯಾವತ್ತೂ ಮನಸ್ಸು ಮಾಡಲಿಲ್ಲ. ಹೋಗಲಿ ಮರಣ ಹೊಂದುವ ಕಾಲದಲ್ಲಿ ಭಗವಂತನನ್ನು ಕುರಿತು ಧ್ಯಾನಮಾಡು ಎಂದರೆ, ಅದಕ್ಕೂ ಇಷ್ಟವಿಲ್ಲದ ಮನುಷ್ಯನು ಸತ್ತರೆ ಅವನ ಬಂಧುಮಿತ್ರರು ಅಳಬೇಕಾದದ್ದು ಸರಿ. ಏಕೆಂದರೆ ತನ್ನ ಆತ್ಮಕಲ್ಯಾಣವನ್ನು ಮಾಡಿಕೊಳ್ಳದೆ "ಅಯ್ಯೋ ಪಾಪಿ ಸತ್ತೆಯಲ್ಲಾ" ಎಂದು ಮರುಗಿ ದುಃಖಪಡಬೇಕಾದ್ದೇ. ಆದರೆ ದಾನಮಾಡಿ ತಪಸ್ಸಿನಲ್ಲಿ ಮುಂದರಿದು ಮರಣದ ಸಮಯದಲ್ಲಿ ಭಗವಂತನ ನಾಮೋಚ್ಚಾರಣೆಯನ್ನೇ ಮಾಡುತ್ತಾ ಸಮಾಧಿ ಮರಣವನ್ನು ಹೊಂದಿದ ಭವ್ಯಾತ್ಮನಿಗೆ ದುಃಖಪಡುವುದು ಯೋಗ್ಯವಲ್ಲ. ಈ ಜೀವ ತನ್ನ ಪುರುಷಾರ್ಥದಿಂದ ಉತ್ತಮಗತಿ ಯನ್ನು ಸಾಧಿಸಿಕೊಂಡಿದೆ ಎಂದು ಸಮಾಧಾನ ಪಟ್ಟುಕೊಳ್ಳಬೇಕು.

ಸಾವಿಗಂಜಲದೇಕೆ ಸಾವು ಪೆರತೇ ಮೆಯ್ತಾಳ್ದಿದರ್ಗಂಜಲಾ ।
ಸಾವೇಂ ಮಾಣ್ಗುಮೆ ಕಾವರುಂಟೆಯಕಟಾ ! ಈ ಜೀವನೇನೆಂದುವುಂ ॥
ಸಾವಂ ಕಂಡವನಲ್ಲವೇ ಮರಣವಾಗಲ್ಮುಂದದೇಂ ಪುಟ್ಟನೇ ।
ನೀವೆನ್ನೊಳ್ನಿಲೆ ಸಾವುದುಂ ಸುಖವಲ್ತೆ ! ರತ್ನಾಕರಾಧೀಶ್ವರಾ ! ॥೧೭॥

ಸಾವಿಗೆ ಅಂಜಲ್ ಅದೇಕೆ, ಸಾವು ಪೆರತೇ ಮೆಯ್ ತಾಳ್ದು,
ಇದರ್ಕೆ ಅಂಜಲ್ ಆ ಸಾವೇಂ ಮಾಣ್ಗುಮೆ, ಕಾವರುಂಟೆ ಅಕಟಾ !
ಈ ಜೀವನ್ ಏನ್ ಎಂದುವುಂ ಸಾವಂ ಕಂಡವನಲ್ಲವೇ, ಮರಣವಾಗಲ್ ಮುಂದೆ
ಅದೇಂ ಪುಟ್ಟನೇ, ನೀವು ಎನ್ನೊಳ್ ನಿಲೆ ಸಾವುದುಂ ಸುಖವಲ್ತೆ ರತ್ನಾಕರಾಧೀಶ್ವರಾ !

ಸಾವಿಗೆ–ಮರಣಕ್ಕೆ, ಅಂಜಲ್ ಅದೇಕೆ–ಭಯಪಡುವುದೇತಕ್ಕೇ? ಸಾವು ಪೆರತೇ ಮೆಯ್‌ತಾಳ್ದು–ಶರೀರವನ್ನು ಧರಿಸಿದವರಿಗೆ ಮರಣವು ಬೇರೆಯೆ ? ಇದರ್ಕೆ ಅಂಜಲ್–ಈ ಸಾವಿಗೆ ಭಯಪಟ್ಟರೆ, ಆ ಸಾವೇಂ – ಆ ಸಾವೇನು, ಮಾಣ್ಗುಮೆ–ನಿವಾರಣೆಯಾಗುವುದೇ ? ಕಾವರುಂಟೆ–ರಕ್ಷಿಸುವವರು ಇದ್ದಾರೆಯೆ ? ಅಕಟಾ ! – ಅಯ್ಯೋ ! ಈ ಜೀವನ್–ಈ ಜೀವಾತ್ಮನು, ಏನ್–ಏನು, ಎಂದುವುಂ-ಹಿಂದೆ ಎಂದೂ, ಸಾವಂ–ಮರಣವನ್ನು, ಕಂಡವನಲ್ಲವೇ–ನೋಡಿದವನಲ್ಲವೇ ? ಮರಣವಾಗಲ್ – ಮರಣವು ಪ್ರಾಪ್ತವಾಗಲು, ಮುಂದೆ, ಅದೇಂ - ಅದೇನು, ಪುಟ್ಟನೇ – ಹುಟ್ಟುವುದಿಲ್ಲವೆ ? ನೀವು ಎನ್ನೊಳ್–ನೀವು ನನ್ನಲ್ಲಿ, ನಿಲೆ–ನೆಲಸಿದರೆ, ಸಾವುದುಂ–ಸಾಯುವುದೂ, ಸುಖವಲ್ತೆ–ಸುಖವಲ್ಲವೇ ? ರತ್ನಾಕರಾಧೀಶ್ವರಾ !

ಸಾವಿಗೆ ಏತಕ್ಕಾಗಿ ಭಯಪಡಬೇಕು ? ಸಾವೇನು ನಮಗೆ ಹೊಸದೇ ? ಹುಟ್ಟಿದಮೇಲೆ ಸಾಯಲೇ ಬೇಕಲ್ಲ (ಜಾತಸ್ಯ ಮರಣಂ ಧ್ರುವಂ), ಒಂದು ಸಮಯ ಅದಕ್ಕೆ ಹೆದರಿದರೆ ಯಾರಾದರೂ ನಿವಾರಣೆಮಾಡಲು ಸಾಧ್ಯವೇ ? ಹೋಗಲಿ ಸತ್ತಮೇಲೆ ಮತ್ತೆ ಹುಟ್ಟುವುದಿಲ್ಲವೇ ? ಭಗವಂತ ! ನೀನೊಬ್ಬ ನನ್ನ ಅಂತರಂಗದಲ್ಲಿದ್ದರೆ ಸಾಕು, ಸಾವೂ ಕೂಡ ಒಂದು ಮಹೋತ್ಸವವೆ ! ಭಗವಂತನನ್ನು ಧ್ಯಾನಿಸುತ್ತ ಸಾವನ್ನು ಅಪ್ಪಿಕೊಳ್ಳುವುದು ಒಂದು ಸುಖಪ್ರಸಂಗವಲ್ಲವೇ !

ಪ್ರಾಣಂ ಮಾನವಜನ್ಮಮುಂ ಪಡೆದ ಮೆಯ್ಯೊಳ್ನಿಚ್ಚಲುಂ ಪಂಚಕ-
ಲ್ಯಾಣಂ ಪಂಚಗುರುಸ್ತವಂ ಪರಮಶಾಸ್ತ್ರಂ ಮೋಕ್ಷಸಂಧಾನಚಿ ।
ತ್ತ್ರಾಣಂ ಚಿತ್ತಿನ ರತ್ನ ಮೂರಿವನಲಂಪಿಂ ಚಿಂತನಂ ಗೆಯ್ವನೇ ।
ಜಾಣಂ ಮತ್ತಿನ ಚಿಂತಕರ್ಮರುಳರ್ಕೈ ! ರತ್ನಾಕರಾಧೀಶ್ವರಾ ! ||೧೮||

ಪ್ರಾಣಂ ಮಾನವ ಜನ್ಮಮುಂ ಪಡೆದ ಮೆಯ್ಯೊಳ್, ನಿಚ್ಚಲುಂ ಪಂಚಕಲ್ಯಾಣಂ
ಪಂಚಗುರುಸ್ತವಂ ಪರಮಶಾಸ್ತ್ರಂ ಮೋಕ್ಷಸಂಧಾನ
ಚಿತ್ತ್ರಾಣಂ, ಚಿತ್ತಿನ ರತ್ನ ಮೂರು, ಇವಂ ಅಲಂಪಿಂ ಚಿಂತನಂ ಗೆಯ್ವನೇ
ಜಾಣಂ, ಮತ್ತಿನ ಚಿಂತಕರ್ ಮರುಳರ್ಕೈ, ರತ್ನಾಕರಾಧೀಶ್ವರಾ !

ಮಾನವ ಜನ್ಮಮುಂ ಪಡೆದ ಮೆಯ್ಯೊಳ್-ಮನುಷ್ಯ ಜನ್ಮವನ್ನು ಪಡೆದ ಶರೀರದಲ್ಲಿ, ನಿಚ್ಚಲುಂ-ಯಾವಾಗಲೂ, ಪಂಚಕಲ್ಯಾಣಂ-ಗರ್ಭಾವತರಣ, ಜನ್ಮಾಭಿಷೇಕ, ಪರಿನಿಷ್ಕ್ರಮಣ, ಕೇವಲಜ್ಞಾನ, ಪರಿನಿರ್ವಾಣ ಈ ಐದು ಪಂಚ ಕಲ್ಯಾಣಗಳು, ಪಂಚಗುರುಸ್ತವಂ-ಅರಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸರ್ವಸಾಧು ಈ ಪಂಚಪರಮೇಷ್ಠಿಗಳ ಸ್ತೋತ್ರವು, ಪರಮಶಾಸ್ತ್ರಂ-ಶ್ರೇಷ್ಠವಾದ ಶಾಸ್ತ್ರವು, ಮೋಕ್ಷಸಂಧಾನ ಚಿತ್ತ್ರಾಣಂ-ಮೋಕ್ಷವನ್ನು ಉಂಟುಮಾಡುವ ಆತ್ಮಸ್ವರೂಪ ರಕ್ಷಣೆಯು, ಚಿತ್ತಿನ ರತ್ನ ಮೂರು-ಆತ್ಮನ ಸಮ್ಯಗ್ದರ್ಶನಜ್ಞಾನ ಚಾರಿತ್ರಗಳೆಂಬ ಮೂರು ರತ್ನಗಳು, ಪ್ರಾಣಂ-(ಇವುಗಳು ಯಾವಾಗಲೂ ಇರಬೇಕಾದ) ಪ್ರಾಣಗಳು, ಇವಂ-ಇವುಗಳನ್ನು, ಅಲಂಪಿಂ-ಪ್ರೀತಿಯಿಂದ, ಚಿಂತನಂ ಗೆಯ್ವನೇ-ಚಿಂತಿಸುವವನೇ, ಜಾಣಂ – ಚದುರನು ; ಮತ್ತಿನ ಚಿಂತಕರ್-ಬೇರೆ ವಿಷಯದ ಚಿಂತನೆಯುಳ್ಳವರು, ಮರುಳರ್ಕೈ-ಹುಚ್ಚರು, ರತ್ನಾಕರಾಧೀಶ್ವರಾ !

ಮಾನವ ಜನ್ಮವೇ ದುರ್ಲಭ. ಅಂಥ ಅವಕಾಶ ದೊರೆತಾಗ ಪ್ರತಿನಿತ್ಯವೂ ಪಂಚಕಲ್ಯಾಣಗಳನ್ನು ನೆನೆಯಬೇಕು ; ಪಂಚಪರಮೇಷ್ಠಿಗಳನ್ನು ಧ್ಯಾನಿಸುತ್ತಿರಬೇಕು ; ಜಿನವಾಣಿಯನ್ನು ಸ್ವಾಧ್ಯಾಯ ಮಾಡಬೇಕು ; ಮೋಕ್ಷಸಿದ್ಧಿಗೋಸ್ಕರ ಯಾವಾಗಲೂ ಹವಣಿಸುತ್ತಿರಬೇಕು. ರತ್ನತ್ರಯಗಳನ್ನು ಸಾಧಿಸಬೇಕು—ಈ ಐದೂ ಸಮ್ಯಗ್ದೃಷ್ಟಿಜೀವಿಯ ಪಂಚಪ್ರಾಣಗಳಿದ್ದಂತೆ. ಇವೇ ನಮ್ಮ ಬಾಳಿನ ಬೆಳಕೂ ಉಸಿರೂ ಆಗಬೇಕು. ಇದನ್ನು ಮರೆತು ಅನ್ಯವಿಷಯದಲ್ಲಿ ಮಗ್ನರಾದವರು ಖಂಡಿತ ಹುಚ್ಚರಲ್ಲವೇ !

ಧನಮಂ ಧಾನ್ಯಮನೂಟಮಂ ವನಿತೆಯಂ ಬಂಗಾರಮಂ ವಸ್ತ್ರವಾ-
ಹನರಾಜ್ಯಾದಿಗಳಂ ಸದಾ ಬಯಸುವೀ ಭ್ರಾಂತಾತ್ಮರಾ ಪಾಟಿಯೊಳ್ ||
ಜಿನರಂ ಸಿದ್ಧರನಾರ್ಯವರ್ಯರನುಪಾಧ್ಯಾಯರ್ಕಳಂ ಸಾಧುಪಾ-
ವನರಂ ಚಿಂತಿಸಿ ಮುಕ್ತಿಗೇಕೊದಗರೋ ! ರತ್ನಾಕರಾಧೀಶ್ವರಾ ! ||೧೯||

ಧನಮಂ ಧಾನ್ಯಮಂ ಊಟಮಂ ವನಿತೆಯಂ ಬಂಗಾರಮಂ
ವಸ್ತ್ರ ವಾಹನ ರಾಜ್ಯಾದಿಗಳಂ ಸದಾ ಬಯಸುವ ಈ ಭ್ರಾಂತಾತ್ಮರು,
ಆ ಪಾಟಿಯೊಳ್ ಜಿನರಂ ಸಿದ್ಧರಂ ಆರ್ಯವರ್ಯರಂ ಉಪಾಧ್ಯಾಯರ್ಕಳಂ,
ಸಾಧುಪಾವನರಂ ಚಿಂತಿಸಿ, ಮುಕ್ತಿಗೆ ಏಕೆ ಒದಗರೊ, ರತ್ನಾಕರಾಧೀಶ್ವರಾ !

ಧನಮಂ-ಹಣವನ್ನೂ, ಧಾನ್ಯಮಂ-ಧಾನ್ಯವನ್ನೂ, ಊಟಮಂ-ಊಟವನ್ನೂ, ವನಿತೆಯಂ-ಸ್ತ್ರೀಯನ್ನೂ, ಬಂಗಾರಮಂ-ಚಿನ್ನವನ್ನೂ, ವಸ್ತ್ರ, ವಾಹನ, ರಾಜ್ಯಾದಿಗಳಂ-ರಾಜ್ಯವೇ ಮೊದಲಾದುವುಗಳನ್ನು, ಸದಾ ಬಯಸುವ-ಯಾವಾಗಲೂ ಇಚ್ಛಿಸುವ, ಈ ಭ್ರಾಂತ ಆತ್ಮರು-ಈ ಭ್ರಾಂತರಾದ ಆತ್ಮರು, ಆ ಪಾಟಿಯೊಳ್-ಅದೇ ರೀತಿಯಲ್ಲಿ, ಜಿನರಂ-(ಪವಿತ್ರರಾದ) ಅರಹಂತರನ್ನು, ಸಿದ್ಧರಂ-ಸಿದ್ಧಪರಮೇಷ್ಠಿಗಳನ್ನು, ಆರ್ಯವರ್ಯರಂ-ಆಚಾರ್ಯರನ್ನು, ಉಪಾಧ್ಯಾಯರ್ಕಳಂ-ಉಪಾಧ್ಯಾಯರನ್ನು, ಸಾಧುಪಾವನರಂ-ಸರ್ವಸಾಧುಗಳನ್ನು, ಚಿಂತಿಸಿ, ಮುಕ್ತಿಗೆ-ಮೋಕ್ಷಕ್ಕೆ, ಏಕೆ ಒದಗರೋ-ಏಕೆ ಸನ್ನದ್ಧರಾಗುವುದಿಲ್ಲವೋ ! ರತ್ನಾಕರಾಧೀಶ್ವರಾ !

ಭ್ರಾಂತಿಯಿಂದ ಜನರಿಗೆ ಯಾವಾಗಲೂ ಹಣದ ಮೋಹ, ಧಾನ್ಯಸಂಗ್ರಹಣೆಯ ಚಿಂತೆ, ಊಟ ಮಾಡುವ ಬಯಕೆ, ಸ್ತ್ರೀಯನ್ನು ಹೊಂದುವ ಆಸೆ, ಚಿನ್ನವನ್ನು, ವಸ್ತ್ರವಾಹನ ರಾಜ್ಯಾದಿಗಳನ್ನು ಗಳಿಸಿ ಭೋಗಜೀವನವನ್ನು ನಡೆಸುವ ಪರದಾಟ. ಅಯ್ಯೋ, ಈ ಅವಿವೇಕಿಗಳು ತಮ್ಮ ಬಾಳನ್ನೆಲ್ಲ ಈ ಕ್ಷಣಿಕವಾದ ಲೌಕಿಕ ಸುಖಕ್ಕೋಸ್ಕರ ವ್ಯರ್ಥವಾಗಿ ಸವೆಸುತ್ತಿರುವರಲ್ಲಾ ! ಇದರ ಬದಲು ಪಂಚ ಪರಮೇಷ್ಠಿಗಳನ್ನಾದರೂ ಚಿಂತಿಸಿ ತಮ್ಮ ಆತ್ಮಕಲ್ಯಾಣ ಮಾಡಿಕೊಂಡು ಮುಕ್ತರಾಗಬಾರದೇ !

ಪಡೆದತ್ತಿಲ್ಲವೆ ಪೂರ್ವದೊಳ್ಧನವಧೂರಾಜ್ಯಾದಿ ಸೌಭಾಗ್ಯಮಂ
ಪಡೆದೆಂ ತನ್ಮಮುಕಾರದಿಂ ಪಡೆದೆನೀ ಸಂಸಾರಸಂವೃದ್ಧಿಯುಂ
ಪಡೆದತ್ತಿಲ್ಲ ನಿಜಾತ್ಮತತ್ತ್ವ ರುಚಿಯುಂ ತದ್ಬೋಧಚಾರಿತ್ರಮಂ
ಪಡೆದಂದಾಗಳೆ ಮುಕ್ತಿಯುಂ ಪಡೆಯೆನೇ ರತ್ನಾಕರಾಧೀಶ್ವರಾ ! ||೨೦||

ಪಡೆದತ್ತಿಲ್ಲವೆ ಪೂರ್ವದೊಳ್ ಧನ ವಧೂ ರಾಜ್ಯಾದಿ ಸೌಭಾಗ್ಯಮಂ
ಪಡೆದೆಂ, ತತ್ ಮಮುಕಾರದಿಂ ಪಡೆದೆನ್ ಈ ಸಂಸಾರ ಸಂವೃದ್ಧಿಯುಂ,
ಪಡೆದತ್ತಿಲ್ಲ ನಿಜಾತ್ಮ ತತ್ತ್ವರುಚಿಯುಂ ತತ್ ಬೋಧಚಾರಿತ್ರಮಂ,
ಪಡೆದಂದಾಗಳೆ ಮುಕ್ತಿಯುಂ ಪಡೆಯೆನೇ ರತ್ನಾಕರಾಧೀಶ್ವರಾ !

ಪೂರ್ವದೊಳ್–ಪೂರ್ವದಲ್ಲಿ, ಧನ ವಧೂ ರಾಜ್ಯಾದಿ ಸೌಭಾಗ್ಯಮಂ–ಧನ ವಧೂ ರಾಜ್ಯ ಮೊದಲಾದ ವೈಭವವನ್ನು, ಪಡೆದತ್ತು ಇಲ್ಲವೆ-ಹೊಂದಲಿಲ್ಲವೇ ? ಪಡೆದೆಂ-ಈಗಲೂ ಆ ವೈಭವ ವವನ್ನು ಪಡೆದೆನು, ತತ್ಮಮುಕಾರದಿಂ–ಆ ವೈಭವಗಳ ಮಮುಕಾರದಿಂದ (ಅಹಂಕಾರ, ಮೋಹದಿಂದ) ಪಡೆದೆನ್ ಈ ಸಂಸಾರ ಸಂವೃದ್ಧಿಯುಂ–ಈ ಸಂಸಾರದ ಸಮೃದ್ಧಿಯನ್ನು ಹೊಂದಿದೆನು, ನಿಜಾತ್ಮತತ್ತ್ವ ರುಚಿಯುಂ–ತನ್ನ ಆತ್ಮಸ್ವರೂಪದ ಬಗ್ಗೆ ನಂಬುಗೆಯನ್ನೂ, ತತ್ಬೋಧಚಾರಿತ್ರಮಂ–ಅದರಿಂದ ಸಮ್ಯಗ್ಜ್ಞಾನ ಚಾರಿತ್ರಗಳನ್ನೂ, ಪಡೆದತ್ತಿಲ್ಲ–ಹೊಂದಲಿಲ್ಲವು (ಪೂರ್ವದಲ್ಲಿ) ; ಪಡೆದಂದಾಗಳೆ-ಆ ಸಮ್ಯಗ್ದರ್ಶನಜ್ಞಾನ ಚಾರಿತ್ರಗಳನ್ನು ಹೊಂದಿದಾಗಲೇ, ಮುಕ್ತಿಯುಂ-ಮೋಕ್ಷವನ್ನು, ಪಡೆಯನೇ-ಹೊಂದಲಾರೆನೇ ! ಖಂಡಿತ ಹೊಂದುವೆನೆಂದು ಅಭಿಪ್ರಾಯ.

ಹಿಂದಿನ ಅನೇಕ ಭವಗಳಲ್ಲಿ ಧನ, ವಧೂ, ರಾಜ್ಯಾದಿ ಸೌಭಾಗ್ಯಗಳನ್ನು ಪಡೆದೂ, ಈಗಲೂ ಈ ಜನ್ಮದಲ್ಲೂ ಸಹ ಅದೇ ವೈಭವಗಳನ್ನು ಹೊಂದಿದ್ದೇನೆ. ಆದರೆ ಅವುಗಳಿಂದೇನು ಪ್ರಯೋಜನ ? ಈ ಭೋಗೋಪಭೋಗಗಳಲ್ಲಿ ಮುಳುಗಿ ಅಹಂಕಾರದಿಂದ, ಮೋಹದಿಂದ ಈ ಸಂಸಾರದ ಚಕ್ರದಲ್ಲಿ ತಿರುಗುತ್ತಿದ್ದೇನೆ, ಚತುರ್ಗತಿಯಲ್ಲಿ ಭ್ರಮಣೆಮಾಡಿ ಬಳಲುತ್ತಿದ್ದೇನೆ. ಹಿಂದೆ ಯಾವಾಗಲೂ ಆತ್ಮ ತತ್ತ್ವರುಚಿಯ ಕಡೆ ಮನಗೊಡದೆ ಸಮ್ಯಗ್ದರ್ಶನಜ್ಞಾನ ಚಾರಿತ್ರಗಳನ್ನು ಧರಿಸದೆ ಕೆಟ್ಟೆನು. ಈ ರತ್ನತ್ರಯಗಳನ್ನು ಹೊಂದಿದಾಗಲೆ ಮುಕ್ತಿಯಲ್ಲವೇ ?

ಒರಗಿರ್ದಂ ಕನಸಿಂದೆ ದುಃಖಸುಖದೊಳ್ಬಾಳ್ವಂತೆ ತಾನೆಳ್ದು ಕ-
ಣ್ದೆರೆದಾಗಳ್ಬಯಲಪ್ಪವೋಲ್ನರಕತಿರ್ಯಙ್ಮರ್ತ್ಯ ದೇವತ್ವದೊಳ್ ||
ತರಿಸಂದೊಪ್ಪುವ ಬಾಳ್ಕೆಯಿೀ ಬಯಲಬಾಳಂ ನಚ್ಚಿ ನಿತ್ಯತ್ವಮಂ
ಮರೆವಂತೇಕೆಯೋ ನಿಮ್ಮ ನಾಂ ಮರೆದೆನೋ ! ರತ್ನಾಕರಾಧೀಶ್ವರಾ ! ||೨೧||

ಒರಗಿರ್ದಂ ಕನಸಿಂದೆ ದುಃಖಸುಖದೊಳ್ ಬಾಳ್ವಂತೆ, ತಾನ್ ಎಳ್ದು
ಕಣ್ ತೆರೆದಾಗಳ್ ಬಯಲಪ್ಪವೋಲ್, ನರಕ ತಿರ್ಯಕ್ ಮರ್ತ್ಯ ದೇವತ್ವದೊಳ್
ತರಿಸಂದು ಒಪ್ಪುವ ಬಾಳ್ಕೆ, ಈ ಬಯಲಬಾಳಂ ನಚ್ಚಿ, ನಿತ್ಯತ್ವಮಂ
ಮರೆವಂತೆ ಏಕೆಯೋ ನಿಮ್ಮಂ ನಾಂ ಮರೆದೆನೋ ! ರತ್ನಾಕರಾಧೀಶ್ವರಾ !

ಒರಗಿರ್ದಂ–ಮಲಗಿದ್ದವನು, ಕನಸಿಂದೆ–ಸ್ವಪ್ನದಲ್ಲಿ, ದುಃಖಸುಖದೊಳ್–ದುಃಖಸುಖಗಳಲ್ಲಿ, ಬಾಳ್ವಂತೆ–ಬಾಳುವಂತೆ, ತಾನ್ಎಳ್ದು–ತಾನೆದ್ದು, ಕಣ್ ತೆರೆದಾಗಳ್ – ಕಣ್ಣು ತೆರೆದಾಗ, ಬಯಲಪ್ಪವೋಲ್–ಮರೆಯಾಗುವಂತೆ, ನರಕ ತಿರ್ಯಕ್ ಮರ್ತ್ಯ ದೇವತ್ವದೊಳ್–ನರಕ ತಿರ್ಯಕ್ ಮನುಷ್ಯ ದೇವಪರ್ಯಾಯಗಳಲ್ಲಿ, ತರಿಸಂದು–ಅಲೆದಾಡಿ, ಒಪ್ಪುವ–ಅಂಗೀಕರಿಸುವ, ಬಾಳ್ಕೆ–ಜೀವನವು; ಈ ಬಯಲಬಾಳಂ–ಈ ನಾಶಹೊಂದುವ ಬಾಳನ್ನು, ನಚ್ಚಿ–ನಂಬಿ, ನಿತ್ಯತ್ವಮಂ–ಆತ್ಮನ ಶಾಶ್ವತವಾದ ಸ್ವರೂಪವನ್ನು, ಮರೆವಂತೆ–ಮರೆಯುವಹಾಗೆ, ನಾಂ–ನಾನು, ನಿಮ್ಮಂ-ನಿಮ್ಮನ್ನು, ಏಕೆಯೋ ಮರೆದೆನೋ–ಏತಕ್ಕೆ ಮರೆತೆನೋ ! ರತ್ನಾಕರಾಧೀಶ್ವರಾ.

ಮಲಗಿದಾಗ ಕನಸಿನಲ್ಲಿ ದುಃಖವೂ ಆಗಬಹುದು ಸುಖವೂ ಆಗಬಹುದು. ಎಚ್ಚರವಾದಾಗ ಕನಸಿನ ಲೋಕವೆಲ್ಲಾ ಬಯಲಾಗುವುದು. ಹಾಗೆಯೇ ಈ ಚತುರ್ಗತಿಗಳಲ್ಲಿ (ದೇವ, ಮನುಷ್ಯ, ನಾರಕ, ತಿರ್ಯಕ್ ಜನ್ಮಗಳಲ್ಲಿ) ಕರ್ಮವಿಪಾಕದಿಂದ ಅಲೆದಾಡಿ ಅನೇಕ ಶರೀರಗಳನ್ನು ಧರಿಸಿ, ಆ ನಾಶಶೀಲವಾದ ಬಾಳುವಿಕೆಯನ್ನು ನಂಬಿ ಸುಖದುಃಖಗಳನ್ನುಂಡು, ಬಳಲುತ್ತಿದ್ದೇನೆ. ಆತ್ಮನ ಶಾಶ್ವತವಾದ ಸ್ವರೂಪವನ್ನು ಮರೆತು, ಹಾಗೆಯೇ ದೇವ, ನಿಮ್ಮನ್ನೂ ಸಹ ಮರೆತುಬಿಟ್ಟೆ. ಎಂಥಹ ಅವಿವೇಕಿ ನಾನು !

ಇಂದಾನಾದವನೇ ಸಮಂತು ಬರಿಸಂ ನೂರೊಂದಹಂ ಕೋಟಿಯಿಂ ।
ಹಿಂದತ್ತತ್ತಲನೇಕ ಕೋಟಿಯುಗದಿಂದತ್ತತ್ತಲಂಭೋಧಿಯಿಂ ॥
ಬಂದತ್ತತ್ತಲನಾದಿಕಾಲದಿನನಂತಾಕಾರದಿಂ ತಿರ್ರೆನಲ್ ।
ಬಂದೆಂ ನೊಂದೆನನಾಥಬಂಧು ! ಸಲಹೋ ರತ್ನಾಕರಾಧೀಶ್ವರಾ ! ॥೨೨॥

ಇಂದು ಆನ್ ಆದವನೇ ಸಮಂತು ಬರಿಸಂ ನೂರೊಂದಹಂ ಕೋಟಿಯಿಂ
ಹಿಂದೆ ಅತ್ತತ್ತಲ್ ಅನೇಕ ಕೋಟಿಯುಗದಿಂದ, ಅತ್ತತ್ತಲ್ ಅಂಭೋಧಿಯಿಂ
ಬಂದ, ಅತ್ತತ್ತಲ್ ಅನಾದಿಕಾಲದಿಂ ಅನಂತ ಆಕಾರದಿಂ ತಿರ್ರೆನಲ್ !
ಬಂದೆಂ ನೊಂದೆನ್, ಅನಾಥಬಂಧು ! ಸಲಹೋ ರತ್ನಾಕರಾಧೀಶ್ವರಾ !

ಇಂದು ಆನ್ ಆದವನೇ–ಈಗ ನಾನಾಗಿರುವವನೇ, ಸಮಂತು–ಹಾಗೆಯೇ, ಬರಿಸಂ ನೂರೊಂದಹಂ ಕೋಟಿಯಿಂ–ನೂರುಹತ್ತು ವರ್ಷವೋ ಕೋಟಿ ವರ್ಷವೋ, ಹಿಂದೆ–ಹಿಂದೆ, ಅತ್ತತ್ತಲ್-ಅತ್ತತ್ತ, ಅನೇಕ ಕೋಟಿಯುಗದಿಂದ–ಅನೇಕ ಕೋಟಿಯುಗಗಳಿಂದ, ಅತ್ತತ್ತಲ್–ಅದಕ್ಕಿಂತ ಹಿಂದೆ ಅಂಭೋಧಿಯಿಂ ಬಂದ–ಸಾಗರ ವರ್ಷಗಳಿಂದ ಬಂದ, ಅತ್ತತ್ತಲ್–ಇನ್ನೂ ಹಿಂದೆ, ಅನಾದಿಕಾಲದಿಂ-ಅನಾದಿಕಾಲದಿಂದಲೂ, ಅನಂತ ಆಕಾರದಿಂ–ಅನೇಕ ಆಕಾರಗಳಿಂದಲೂ, ತಿರ್ರೆನಲ್–ತಿರ್ರೆಂದು ತಿರುಗಿ, ಬಂದೆಂ – ಬಂದೆನು, ನೊಂದೆನ್ - ನೊಂದೆನು, ಅನಾಥಬಂಧು, ಸಲಹೋ - ಕಾಪಾಡು ! ರತ್ನಾಕರಾಧೀಶ್ವರಾ !

ನಾನೇನು ನೆನ್ನೆಮೊನ್ನೆಯವನೇ ? ನೂರಾರುವರ್ಷ ಅಲ್ಲ, ಕೋಟ್ಯಾನುಕೋಟಿ ಸಾಗರೋಪಮ ಕಾಲದಿಂದ ಈ ಕರ್ಮಬಂಧನಕ್ಕೆ ಸಿಲುಕಿ, ಸಂಸಾರಚಕ್ರದಲ್ಲಿ ತಿರ್ರನೆ ತಿರುಗಿ ಬಳಲುತ್ತಿದ್ದೇನೆ, ಎಷ್ಟು ಶರೀರಗಳನ್ನು ಧರಿಸಿದೆನೋ, ಎಷ್ಟು ಆಕಾರಗಳನ್ನು ತಾಳಿದನೋ, ಲೆಕ್ಕವೇ ಇಲ್ಲ. ಈ ಭವಬಂಧನ ಸಾಕಾಗಿದೆ ಸ್ವಾಮಿ. ಇದರಿಂದ ಉದ್ಧರಿಸು ತಂದೆ !

ನಾನಾಗರ್ಭದಿ ಪುಟ್ಟಿ ಪುಟ್ಟಿ ಪೊರಮಟ್ಟೆಂ ರೂಪುಜೋಹಂಗಳಂ ।
ನಾನಾಭಾವದೆ ತೊಟ್ಟು ತೊಟ್ಟು ನಡೆದೆಂ ಮೆಯ್ಮೆಚ್ಚಿದೂಟಂಗಳಂ ॥
ನಾನಾಭೇದದೊಳುಂಡುಮುಂಡು ತಣಿದೆಂ ಚೀಃ ಸಾಲದೇ ಕಂಡುಮಿಂ-
ತೇನಯ್ಯಾ ! ತಳುಮಾಳ್ಪರೇ ? ಕರುಣಿಸಾ ! ರತ್ನಾಕರಾಧೀಶ್ವರಾ ! ॥೨

ನಾನಾಗರ್ಭದಿ ಪುಟ್ಟಿ ಪುಟ್ಟಿ ಪೊರಮಟ್ಟೆಂ, ರೂಪು ಜೋಹಂಗಳಂ
ನಾನಾಭಾವದೆ ತೊಟ್ಟು ತೊಟ್ಟು ನಡೆದೆಂ, ಮೆಯ್ ಮೆಚ್ಚಿದ ಊಟಂಗಳಂ
ನಾನಾಭೇದದೊಳ್ ಉಂಡುಂ ಉಂಡುಂ ತಣಿದೆಂ, ಚೀಃ ಸಾಲದೇ, ಕಂಡುಂ
ಇಂತು ಏನಯ್ಯಾ ! ತಳುಮಾಳ್ಪರೆ ? ಕರುಣಿಸಾ ! ರತ್ನಾಕರಾಧೀಶ್ವರಾ !

ನಾನಾಗರ್ಭದಿ-ನಾನಾಪ್ರಕಾರವಾದ ಪ್ರಾಣಿಗಳ ಹೊಟ್ಟೆಯಲ್ಲಿ, ಪುಟ್ಟಿ ಪುಟ್ಟಿ-ಹುಟ್ಟಿ ಹುಟ್ಟಿ, ಪೊರಮಟ್ಟೆಂ-ಹೊರಬಿದ್ದಿದ್ದೇನೆ. ರೂಪುಜೋಹಂಗಳಂ-ಆಕಾರಗಳನ್ನೂ, ವೇಷಗಳನ್ನೂ, ನಾನಾ ಭಾವದೆ-ಅನೇಕ ರೀತಿಯಿಂದ, ತೊಟ್ಟು ತೊಟ್ಟು-ಧರಿಸಿ ಧರಿಸಿ, ನಡೆದೆಂ-ಬಂದಿದ್ದೇನೆ, ಮೆಯ್ ಮೆಚ್ಚಿದ-ಶರೀರಕ್ಕೆ ಇಷ್ಟವಾದ, ಊಟಂಗಳಂ-ಆಹಾರಗಳನ್ನು, ನಾನಾಭೇದದೊಳ್-ಅನೇಕ ವಿಧದಲ್ಲಿ, ಉಂಡುಂ ಉಂಡುಂ-ತಿಂದು ತಿಂದು, ತಣಿದೆಂ-ತೃಪ್ತಿಪಟ್ಟಿದ್ದೇನೆ, ಚೀಃ ಸಾಲದೇ-ಛೀ ಸಾಲದೇ, ಕಂಡುಂ ಇಂತು-ಹೀಗಿರುವುದನ್ನು ನೋಡಿಯೂ, ಏನಯ್ಯಾ ! ತಳುಮಾಳ್ಪರೆ-ಸಾವಕಾಶ ಮಾಡುವರೇ, ಕರುಣಿಸಾ-ಕೃಪೆಮಾಡು ! ರತ್ನಾಕರಾಧೀಶ್ವರಾ !

ನಾನಾ ಗರ್ಭಗಳಲ್ಲಿ ಹುಟ್ಟಿ ಹುಟ್ಟಿ ಬೇಸತ್ತಿದ್ದೇನೆ. ನಾನಾ ಆಕಾರಗಳನ್ನೂ, ವೇಷಗಳನ್ನೂ ತೊಟ್ಟು ತೊಟ್ಟು ರೋಸಿಹೋಗಿದ್ದೇನೆ. ಬೇಕು ಬೇಕಾದ ತಿಂಡಿ ತಿನಿಸುಗಳನ್ನು ತಿಂದು ತಿಂದು ಸಾಕಾಗಿಹೋಗಿದೆ ಸ್ವಾಮಿ, ಈ ನನ್ನ ಪರದಾಟವನ್ನು ನೋಡಿಯೂ, ನಿನಗೆ ಕರುಣೆ ಬರಲಿಲ್ಲವೇ ತಡವೇಕೆ ಜಿನೇಂದ್ರ, ಕೃಪೆಮಾಡು !

ಅಯ್ಯೋ ! ಕುತ್ಸಿತಯೋನಿಯೊಳ್ನುಸುಳ್ವುದೆತ್ತಾನೆತ್ತ ಚೀ ನಾರುವೀ ।
ಮೆಯ್ಯೆತ್ತೆನ್ನಯ ನಿರ್ಮಲಪ್ರಕೃತಿಯೆತ್ತೀ ದೇಹಜವ್ಯಾಧಿಯಿಂ ॥
ಪುಯ್ಯಲ್ವೆತ್ತಿಹುದೆತ್ತಲೆನ್ನ ನಿಜವೆತ್ತೊಯ್ದೆನ್ನ ನಿಮ್ಮತ್ತ ದ-
ಮ್ಮಯ್ಯಾ ರಕ್ಷಿಸು ರಕ್ಷಿಸಾ ತಳುವಿದೇಂ ರತ್ನಾಕರಾಧೀಶ್ವರಾ ! ॥೨

ಅಯ್ಯೋ ! ಕುತ್ಸಿತ ಯೋನಿಯೊಳ್ ನುಸುಳ್ವುದು ಎತ್ತ, ಆನ್ ಎತ್ತ,
ಚೀ ನಾರುವ ಈ ಮೆಯ್ ಎತ್ತ, ಎನ್ನಯ ನಿರ್ಮಲ ಪ್ರಕೃತಿ ಎತ್ತ,
ಈ ದೇಹಜವ್ಯಾಧಿಯಿಂ ಪುಯ್ಯಲ್ವೆತ್ತಿಹುದು ಎತ್ತಲ್, ಎನ್ನ ನಿಜವೆತ್ತ, ಒಯ್ದು
ಎನ್ನ ನಿಮ್ಮತ್ತ, ದಮ್ಮಯ್ಯಾ ರಕ್ಷಿಸು ರಕ್ಷಿಸಾ ತಳುವಿದೇಂ, ರತ್ನಾಕರಾಧೀಶ್ವರಾ !

ಅಯ್ಯೋ–ಅಕಟಾ ! ಕುತ್ಸಿತ–ನಿಂದ್ಯವಾದ, ಯೋನಿಯೊಳ್–ಯೋನಿಯಲ್ಲಿ, ನುಸುಳ್ವುದು ಎತ್ತ–ಹೋಗುವುದೆಲ್ಲಿ ? ಆನ್ ಎತ್ತ–ನಾನೆಲ್ಲಿ ? ಛೀ, ನಾರುವ–ದುರ್ಗಂಧದಿಂದ ಕೂಡಿರುವ, ಈ ಮೆಯ್ ಎತ್ತ–ಈ ಶರೀರವೆಲ್ಲಿ ? ಎನ್ನಯ ನಿರ್ಮಲ ಪ್ರಕೃತಿ ಎತ್ತ-ನನ್ನ ಪರಿಶುದ್ಧವಾದ ಸ್ವಭಾವವೆಲ್ಲಿ ? ಈ ದೇಹಜ ವ್ಯಾಧಿಯಿಂ–ಈ ಶರೀರದಲ್ಲಿ ಉಂಟಾಗುವ ರೋಗದಿಂದ. ಪುಯ್ಯಲ್ವೆತ್ತಿಹುದು ಎತ್ತಲ್-ಗೋಳಾಡುವುದೆಲ್ಲಿ ? ಎನ್ನ ನಿಜವೆತ್ತ-ನನ್ನ ಯಥಾರ್ಥವಾದ ಸ್ವರೂಪವೆಲ್ಲಿ ? ಸ್ವಾಮಿ ಒಯ್ದು ಎನ್ನ ನಿಮ್ಮತ್ತ–ನನ್ನನ್ನು ನಿಮ್ಮ ಕಡೆಗೆ ಕರೆದುಕೊಂಡು. ದಮ್ಮಯ್ಯಾ–ನರ್ಮದ ಒಡೆಯನೆ ರಕ್ಷಿಸು ರಕ್ಷಿಸಾ ತಳುವಿದೇಂ-ರಕ್ಷಿಸು. ರಕ್ಷಿಸು ತಡವೇಕೆ ? ರತ್ನಾಕರಾಧೀಶ್ವರಾ !

ಅಯ್ಯೋ ! ಅಯೋನಿಜನಾದ ನಾನು, ಈ ನಿಂದ್ಯವಾದ ಯೋನಿಯಲ್ಲಿ ಹುಟ್ಟುವುದೆಂದರೇನು ! ಕಲಂಕರಹಿತನಾದ ನಾನು ಈ ದುರ್ಗಂಧದಿಂದ ಕೂಡಿದ ಶರೀರವನ್ನು ಧರಿಸಿರುವೆನಲ್ಲಾ ! ಸಕಲ ರೋಗಗಳಿಗೂ ತವರುಮನೆಯಾದ ಈ ಶರೀರವನ್ನು ಹೊಂದಿ ಗೋಳಾಡುತ್ತಿದ್ದೇನಲ್ಲಾ ! ನನ್ನ ನಿಜ ರೂಪವನ್ನು ಮರೆತಿರುವೆನಲ್ಲಾ. ದೇವ ! ನನ್ನನ್ನು ಕರುಣೆಯಿಂದ ನಿನ್ನ ಹತ್ತಿರ ಕರೆದುಕೊಂಡು ರಕ್ಷಿಸು ತಂದೆ ತಡಮಾಡಬೇಡ.

ದಾರಿದ್ರ್ಯಂ ಕವಿದಂದು ಪಾಯ್ದು ಪಗೆಗಳ್ಮಾಸಂಕೆಗೊಂಡಂದು ದು– |
ರ್ವಾರವ್ಯಾಧಿಗಳೊತ್ತಿದಂದು ಮನದೊಳ್ ನಿರ್ವೇಗಮಕ್ಕುಂ ಬಳಿ– ||
ಕ್ಕಾರೋಗಂ ಕಳೆದಂದು ವೈರಿ ಲಯವಾದಂದರ್ಥವಾದಂದಿದೇಂ |
ವೈರಾಗ್ಯಂ ತಲೆದೋರದಂಡಿಸುವುದೋ ! ರತ್ನಾಕರಾಧೀಶ್ವರಾ ! ||೨೫||

ದಾರಿದ್ರ್ಯಂ ಕವಿದಂದು, ಪಾಯ್ದು ಪಗೆಗಳ್ ಮಾಸಂಕೆಗೊಂಡಂದು,
ದುರ್ವಾರ ವ್ಯಾಧಿಗಳು ಒತ್ತಿದಂದು, ಮನದೊಳ್ ನಿರ್ವೇಗಂ ಅಕ್ಕುಂ,
ಬಳಿಕ್ಕ ಆ ರೋಗಂ ಕಳೆದಂದು, ವೈರಿ ಲಯವಾದಂದು ಅರ್ಥವಾದಂದು,
ಇದೇಂ ವೈರಾಗ್ಯಂ ತಲೆದೋರದೆ ಅಂಡಿಸುವುದೋ ! ರತ್ನಾಕರಾಧೀಶ್ವರಾ !

ದಾರಿದ್ರ್ಯಂ ಕವಿದಂದು – ಬಡತನವು ಆವರಿಸಿಕೊಂಡ ಕಾಲದಲ್ಲೂ, ಪಾಯ್ದು ಪಗೆಗಳ್ – ಶತ್ರುಗಳು ಮೇಲೆಬಿದ್ದು, ಮಾಸಂಕೆಗೊಂಡಂದು – ತನ್ನನ್ನು ಕಾಂತಿಹೀನರನ್ನಾಗಿ ಮಾಡಿದಾಗಲೂ (ಭಯಪಟ್ಟಾಗಲೂ), ದುರ್ವಾರ–ನಿವಾರಿಸಲು ಸಾಧ್ಯವಲ್ಲದ, ವ್ಯಾಧಿಗಳು ಒತ್ತಿದಂದು–ರೋಗಗಳು ಮುತ್ತಿದಾಗಲೂ, ಮನದೊಳ್ ನಿರ್ವೇಗಂ ಅಕ್ಕುಂ – ಮನಸ್ಸಿನಲ್ಲಿ ವೈರಾಗ್ಯ ಉಂಟಾಗುತ್ತದೆ, ಬಳಿಕ್ಕ–ಆಮೇಲೆ, ಆ ರೋಗಂ ಕಳೆದಂದು–ಆ ರೋಗವು ವಾಸಿಯಾದಮೇಲೆ, ವೈರಿ ಲಯವಾದಂದು–ಶತ್ರುನಾಶವಾದಾಗ, ಅರ್ಥವಾದಂದು–ಹಣವು ಲಭಿಸಿದಾಗ, ಇದೇಂ ವೈರಾಗ್ಯಂ–ಏನಿದು ! ಈ ವೈರಾಗ್ಯವು, ತಲೆದೋರದೆ - ಅಂಕುರಿಸದೆ, ಅಂಡಿಸುವುದೋ - ಅವಿತುಕೊಳ್ಳುವುದೋ, ರತ್ನಾಕರಾಧೀಶ್ವರಾ !

ಬಡತನದಿಂದ ಬೆಂದು ಬಳಲಿದಾಗ, ಶತ್ರುಗಳು ಮೇಲೆಬಿದ್ದು ಅಪಮಾನಮಾಡಿ ಹಿಂಸೆಕೊಟ್ಟಾಗಲೂ, ವಾಸಿಯಾಗದಂಥ ರೋಗ ಬಂದಾಗಲೂ, ಜುಗುಪ್ಸೆಯಿಂದಲೂ, ಭಯದಿಂದಲೂ ಒಂದು ರೀತಿ ವೈರಾಗ್ಯ ತಲೆದೋರುತ್ತದೆ. ಆದರ ಈ ವೈರಾಗ್ಯ ಎಷ್ಟುದಿನ ಉಳಿಯುತ್ತದೆ ? ರೋಗ ವಾಸಿಯಾದಮೇಲೆ, ಬಡತನ ನೀಗಿದಮೇಲೆ, ಶತ್ರುವಿನ ಭಯ ನಿವಾರಣೆಯಾದಮೇಲೆ, ಆ ವೈರಾಗ್ಯ ಹೇಳದೆ ಕೇಳದೆ ಓಡಿಹೋಗುತ್ತದೆ. ಇದೆಂಥ ವೈರಾಗ್ಯ !

ಮೆಯ್ಯೊಳ್ತೋರಿದ ರೋಗದಿಂ ಮನಕೆ ಬಂದಾಯಾಸದಿಂ ಭೀತಿವ-
ಟ್ಟಯ್ಯೋ ! ಎಂದೊಡೆ ಸಿದ್ಧಿಯೇಂ ಜನಕನಂ ತಾಯಂ ಪಲುಂಬಲ್ಕದೇ- ||
ಗೆಯ್ಯಲ್ಕಾರ್ಪರೊ ತಾವು ಮುಮ್ಮಳಿಸುವರ್ಕೂಡೆಂದೊಡಾ ಜಿಹ್ವೆಯೆ-
ಮ್ಮಯ್ಯಾ ! ಸಿದ್ಧ ಜಿನೇಶ ಎಂದೊಡೆ ಸುಖಂ ರತ್ನಾಕರಾಧೀಶ್ವರಾ ! ||೨೬||

ಮೆಯ್ಯೊಳ್ ತೋರಿದ ರೋಗದಿಂ, ಮನಕೆ ಬಂದ ಆಯಾಸದಿಂ, ಭೀತಿವಟ್ಟು
ಅಯ್ಯೋ ! ಎಂದೊಡೆ ಸಿದ್ಧಿಯೇಂ, ಜನಕನಂ ತಾಯಂ ಪಲುಂಬಲ್ಕೆ
ಅದೇಗೆಯ್ಯಲ್ಕೆ ಆರ್ಪರೊ, ತಾವುಂ ಉಮ್ಮಳಿಸುವರ್ ಕೂಡೆ ಎಂದೊಡೆ,
ಆ ಜಿಹ್ವೆಯೆ ಎಮ್ಮಯ್ಯಾ ಸಿದ್ಧ ಜಿನೇಶ ಎಂದೊಡೆ ಸುಖಂ, ರತ್ನಾಕರಾಧೀಶ್ವರಾ !

ಮೆಯ್ಯೊಳ್ ತೋರಿದ ರೋಗದಿಂ-ಶರೀರದಲ್ಲಿ ಕಾಣಿಸಿಕೊಂಡ ರೋಗದಿಂದಲೂ, ಮನಕೆ ಬಂದ ಆಯಾಸದಿಂ-ಮನಸ್ಸಿಗೆ ಆದ ಆಯಾಸದಿಂದಲೂ, ಭೀತಿವಟ್ಟು-ಭೀತಿಪಟ್ಟು, ಅಯ್ಯೋ ಎಂದೊಡೆ-ಅಯ್ಯೋ ಎಂದು ಒರಲಿದರೆ, ಸಿದ್ಧಿಯೇಂ-ಸಿದ್ಧಿಯಾಗುತ್ತದೆ ಏನು ? ಜನಕನಂ ತಾಯಂ ಪಲುಂಬಲ್ಕೆ-ತಂದೆಯನ್ನೂ ತಾಯಿಯನ್ನೂ ಹಂಬಲಿಸಿದರೆ, ಅದೇ ಗೆಯ್ಯಲ್ಕೆ ಆರ್ಪರೊ-ಅದೇನು ಮಾಡುವುದಕ್ಕೆ ಸಾಧ್ಯವೊ, ತಾವುಂ ಉಮ್ಮಳಿಸುವರ್ ಕೂಡೆ ಎಂದೊಡೆ-ತಾವು ಜೊತೆಯಲ್ಲಿ ದುಃಖ ಪಡುತ್ತಾರೆಂದು ಹೇಳುವುದಾದರೆ, ಆ ಜಿಹ್ವೆಯೆ-ಆ ನಾಲಗೆಯೆ, ಎಮ್ಮಯ್ಯಾ ಸಿದ್ಧ ಜಿನೇಶ ಎಂದೊಡೆ-ನನ್ನ ಪೂಜ್ಯನಾದ ಸಿದ್ಧಪರಮೇಷ್ಠಿಯೇ ! ಜಿನೇಶ್ವರನೇ ! ! ಎಂದು ನುಡಿದರೆ, ಸುಖಂ-ಸುಖವುಂಟಾಗುವುದು, ರತ್ನಾಕರಾಧೀಶ್ವರಾ !

ಶರೀರದಲ್ಲಿ ರೋಗ ಕಾಣಿಸಿಕೊಂಡಾಗ, ಮನಸ್ಸಿಗೆ ನೆಮ್ಮದಿ ಇಲ್ಲದಿದ್ದಾಗ, ಭಯಪಟ್ಟು ಅಯ್ಯೋ ಎಂದು ಅರಚಿಕೊಂಡು ಸಂಕಟಪಟ್ಟರೆ, ಏನಾದರೂ ಪರಿಹಾರ ಸಿಗುವುದೇ ! ತಂದೆತಾಯನ್ನು ಹಂಬಲಿಸಿ ಗೋಳಾಡಿದರೆ ಅವರುತಾನೇ ಏನುಮಾಡಿಯಾರು ? ನಿಮ್ಮ ಜೊತೆಯಲ್ಲಿ ಗೋಳಾಡ ಬಹುದಷ್ಟೆ! ಈ ವ್ಯರ್ಥ ಆಲಾಪನೆಯನ್ನು ಬಿಟ್ಟು, ಅದೇ ಸಮಯದಲ್ಲಿ ಭಗವಂತನನ್ನು ಜ್ಞಾಪಿಸಿಕೊಂಡು ಸಿದ್ಧಪರಮೇಷ್ಠಿ! ಜಿನತಂದೆ! ಎಂದು ಮೊರೆಯಿಟ್ಟರೆ ಸುಖವಾಗುವುದರಲ್ಲಿ ಸಂದೇಹವೇ ಇಲ್ಲ.

ತಾಯುಂ ತಂದೆಯುನಾಸೆವಟ್ಟಳುತೆ ಸಾವಂಸತ್ತು ಬೇರನ್ಯರಾ ।
ಕಾಯುಂಬೊಕ್ಕೊಗೆವಂ ಬಳಿಕ್ಕವರುಮಂ ತಾಯ್ತಂದೆಯೆಂದಪ್ಪಿಕೊಂ-॥
ಡಾ ಯೆಂದಾಡುವನಿತ್ತಲಂದು ಪಡೆದರ್ಗಿಚ್ಛೈಸನಾತ್ಮಂಗಿದೇಂ ।
ಮಾಯಾಮೋಹಮೊ ಪೇಳ್ವುದೇನನಕಟಾ ! ರತ್ನಾಕರಾಧೀಶ್ವರಾ ! ॥೨೭॥

ತಾಯುಂ ತಂದೆಯುಂ ಆಸೆವಟ್ಟು ಅಳುತೆ ಸಾವಂ ಸತ್ತು, ಬೇರೆ ಅನ್ಯರಾ
ಕಾಯುಂಬೊಕ್ಕು ಒಗೆವಂ, ಬಳಿಕ್ಕ ಅವರುಮಂ ತಾಯ್ತಂದೆ ಎಂದು
ಅಪ್ಪಿಕೊಂಡು ಆ ಎಂದು ಆಡುವಂ, ಇತ್ತಲ್ ಅಂದು ಪಡೆದರ್ಗೆ ಇಚ್ಛೈಸನ್
ಆತ್ಮಂಗೆ ಇದೇಂ ಮಾಯಾಮೋಹಮೊ ಪೇಳ್ವುದೇನಂ ಅಕಟಾ! ರತ್ನಾಕರಾಧೀಶ್ವರಾ !

(ಸಾಯುವಾಗ ತಾನು) ತಾಯುಂ ತಂದೆಯುಂ ಆಸೆವಟ್ಟು – ತಾಯನ್ನೂ ತಂದೆಯನ್ನೂ ಬಿಡಲಾರದೆ ಪ್ರೀತಿಸಿ, ಅಳುತೆ–ಅಳುತ್ತ, ಸಾವಂ ಸತ್ತು–ಸಾಯುತ್ತಾನೆ, (ಹಾಗೆ ಸತ್ತು) ಬೇರೆ ಅನ್ಯರಾ ಕಾಯುಂಬೊಕ್ಕು – ಬೇರೆ ಇನ್ನೊಬ್ಬರ ಶರೀರವನ್ನು ಹೊಕ್ಕು, ಒಗೆವಂ–ಹುಟ್ಟುತ್ತಾನೆ, ಬಳಿಕ್ಕ ಅವರುಮಂ–ಬಳಿಕ ಅವರುಗಳನ್ನು, ತಾಯ್ತಂದೆ ಎಂದು ಅಪ್ಪಿಕೊಂಡು–ತಾಯಿ ತಂದೆಯೆಂದು ತಬ್ಬಿಕೊಂಡು, ಆ ಎಂದು ಆಡುವನ್–ಆ ! ಯೆಂದು ಆಡುತ್ತಾನೆ, ಇತ್ತಲ್–ಈ ಕಡೆ, ಅಂದು ಪಡೆದರ್ಗೆ–ಹಿಂದಿನ ಜನ್ಮದಲ್ಲಿ ತನ್ನನ್ನು ಪಡೆದ ತಾಯಿ ತಂದೆಗಳಿಗೆ, ಇಚ್ಛೈಸನ್–ಇಚ್ಛೆ ಪಡುವುದಿಲ್ಲವು. ಆತ್ಮಂಗೆ–ಆತ್ಮನಿಗೆ, ಇದೇಂ–ಇದೇನು, ಮಾಯಾಮೋಹಮೊ – ಮಾಯೆಯಿಂದುಂಟಾದ ಭ್ರಮೆಯೊ ! ಪೇಳ್ವುದೇನಂ–ಏನು ಹೇಳುವುದು, ಅಕಟ-ಅಯ್ಯೋ, ರತ್ನಾಕರಾಧೀಶ್ವರಾ !

ತಾನು ಸಾಯುವಾಗ ತಂದೆ ತಾಯನ್ನು ನೆನೆದು ಇವರನ್ನೆಲ್ಲ ಬಿಟ್ಟು ಹೇಗೆ ಹೋಗಲಿ ಎಂದು ಗೋಳಾಡಿ ಸಾಯುತ್ತಾನೆ. ಸತ್ತನಂತರ ತನ್ನ ಕರ್ಮಾನುಸಾರ ಬೇರೊಂದು ಶರೀರವನ್ನು ಹೊಕ್ಕು ಅವರ ಹೊಟ್ಟೆಯಲ್ಲಿ ಹುಟ್ಟುತ್ತಾನೆ. ಮತ್ತೆ ಅವರನ್ನೇ ತಂದೆ ತಾಯಿ ಎಂದು ಪ್ರೇಮದಿಂದ ತಬ್ಬಿಕೊಂಡು ನಲಿದಾಡುತ್ತಾನೆ. ಆದರೆ ಹಿಂದಿನ ಜನ್ಮದಲ್ಲಿ ಯಾರನ್ನು ಬಿಡಲಾರದೆ ಗೋಳಾಡಿ ಸತ್ತನೋ ಅವರನ್ನು ಒಮ್ಮೆಯಾದರೂ ನೆನೆಯುವುದಿಲ್ಲ ! ಅಕಟ ! ಆತ್ಮನಿಗೆ ಏನು ಭ್ರಮೆ, ಎಂಥ ಮೋಹವೋ ! ಏನಿದು ಮಾಯೆ !

ಸ್ತ್ರೀಯುಂ ಮಕ್ಕಳನೆಂತಗಲ್ವೆ ನಿವರ್ಗಾರುಂಟೆಂದು ಗೋಳಿಟ್ಟು ಕ-
ಣ್ಬಾಯುಂ ಬಿಟ್ಟಳಿವಂ ಬಳಿಕ್ಕುದಯಿಪಂ ತಾನತ್ತ ಬೇರನ್ಯರೊಳ್ ||
ಪ್ರಾಯುಂದಾಳ್ದು ವಿವಾಹಮಾಗಿ ಸುತರಂ ಮುದ್ದಾಡುವಂ ಮುನ್ನಿನಾ |
ಸ್ತ್ರೀಯುಂ ಮಕ್ಕಳನಾಗಲೇಕೆ ನೆನೆಯುಂ ರತ್ನಾಕರಾಧೀಶ್ವರಾ ! ||೨೮||

ಸ್ತ್ರೀಯುಂ ಮಕ್ಕಳಂ ಎಂತು ಅಗಲ್ವೆನ್, ಇವರ್ಗೆ ಆರುಂಟೆಂದು ಗೋಳಿಟ್ಟು ಕಣ್‌ಬಾಯುಂ ಬಿಟ್ಟು ಅಳಿವಂ, ಬಳಿಕ್ಕ ಉದಯಿಪಂ ತಾನ್ ಅತ್ತ ಬೇರೆ ಅನ್ಯರೊಳ್, ಪ್ರಾಯುಂದಾಳ್ದು ವಿವಾಹಮಾಗಿ ಸುತರಂ ಮುದ್ದಾಡುವಂ, ಮುನ್ನಿನ ಆ ಸ್ತ್ರೀಯುಂ ಮಕ್ಕಳಂ ಅಗಲ್ ಏಕೆ ನೆನೆಯುಂ, ರತ್ನಾಕರಾಧೀಶ್ವರಾ !

ಸ್ತ್ರೀಯುಂ ಮಕ್ಕಳಂ ಎಂತು ಅಗಲ್ವೆನ್–ಹೆಂಡತಿ ಮಕ್ಕಳನ್ನು ಹೇಗೆ ಬಿಟ್ಟುಹೋಗಲಿ, ಇವರ್ಗೆ ಆರುಂಟು–ಇವರಿಗೆ ಯಾರಿದ್ದಾರೆ ? ಎಂದು ಗೋಳಿಟ್ಟು ಕಣ್ ಬಾಯುಂ ಬಿಟ್ಟು–ಎಂದು ಗೋಳಾಡಿ ಕಣ್ಣು ಬಾಯಿ ಬಿಟ್ಟು, ಅಳಿವಂ–ಸಾಯುತ್ತಾನೆ, ಬಳಿಕ್ಕ–ತರುವಾಯ, ತಾನ್–ತಾನು, ಅತ್ತ ಬೇರೆ ಅನ್ಯರೊಳ್–ಅತ್ತಕಡೆ ಬೇರೆಯವರಲ್ಲಿ, ಉದಯಿಪಂ–ಹುಟ್ಟುತ್ತಾನೆ, ಪ್ರಾಯುಂದಾಳ್ದು – ಯೌವನವನ್ನು ಹೊಂದಿ, ವಿವಾಹಮಾಗಿ-ಮದುವೆಯಾಗಿ. ಸುತರಂ–ಮಕ್ಕಳನ್ನು, ಮುದ್ದಾಡುವಂ-ಮುದ್ದಾಡುತ್ತಾನೆ, ಮುನ್ನಿನ ಆ ಸ್ತ್ರೀಯುಂ ಮಕ್ಕಳಂ-ಹಿಂದಿನ ಜನ್ಮದ ಆ ಹೆಂಡತಿ ಮಕ್ಕಳನ್ನು, ಆಗಲ್ ಏಕೆ ನೆನೆಯುಂ–ಆಗ ಏಕೆ ಸ್ಮರಿಸುವುದಿಲ್ಲ ? ರತ್ನಾಕರಾಧೀಶ್ವರಾ !

ಸಾಯುವಾಗ ತನ್ನ ಹೆಂಡತಿ ಮಕ್ಕಳನ್ನು ಬಿಟ್ಟು ಹೇಗೆ ಹೋಗಲಿ, ನಾನು ಸತ್ತಮೇಲೆ ಇವರಿಗಾರುಗತಿ, ಎಂದು ಗೋಳಾಡುತ್ತಾ ಆರ್ತ ರೌದ್ರಧ್ಯಾನದಿಂದ ಕಣ್ಣು ಬಾಯಿ ಬಿಟ್ಟು ಪ್ರಾಣ ಬಿಡುತ್ತಾನೆ. ಬಳಿಕ ಮತ್ತೊಬ್ಬರ ಗರ್ಭದಲ್ಲಿ ಬೆಳೆದು, ಹುಟ್ಟಿ, ಪ್ರಾಯಕ್ಕೆ ಬಂದು ಮದುವೆಯಾಗಿ, ತನಗೆ ಹುಟ್ಟಿದ ಮಕ್ಕಳನ್ನು ಮುದ್ದಾಡುತ್ತಾನೆ. ಹಿಂದಿನ ಜನ್ಮದ ಹೆಂಡತಿ ಮಕ್ಕಳನ್ನು ಈಗ ಏತಕ್ಕೆ ನೆನೆಯುವುದಿಲ್ಲ ! ಸಂಪೂರ್ಣವಾಗಿ ಮರೆತುಬಿಟ್ಟಿದ್ದಾನೆ. ಏನು ಆತ್ಮನ ಈ ಭ್ರಮೆ !

ಆರಾರಲ್ಲದ ಗರ್ಭದೊಳ್ಬಳೆಯನಾರಾರೊಂದು ಮೂತ್ರಾಧ್ವದೊಳ್ ।
ಬಾರಂ ಬಂದುರೆ ಬಂಧುಗಳ್ಪಿತೃಗಳೆಂದೆನ್ನಂಗನಾನೀಕಮೆಂ ॥
ದಾರಾರೆಂಜಲನುಣ್ಣನಾತ್ಮಜರೆನುತ್ತಾರಾರ ದುರ್ಗಂಧದಿಂ ।
ಚಾರಿತ್ರಂಗಿಡನಾತ್ಮನೇಂ ಭ್ರಮಿತನೋ ರತ್ನಾಕರಾಧೀಶ್ವರಾ ! ॥೨೯॥

ಆರಾರಲ್ಲದ ಗರ್ಭದೊಳ್ ಬಳೆಯನ್, ಆರಾರ ಒಂದು ಮೂತ್ರಾಧ್ವದೊಳ್
ಬಾರಂ, ಬಂದು ಉರೆ ಬಂಧುಗಳ್ ಪಿತೃಗಳ್ ಎಂದು ಎನ್ನ ಅಂಗನಾನೀಕಂ
ಎಂದು, ಆರಾರ ಎಂಜಲಂ ಉಣ್ಣನ್, ಆತ್ಮಜರ್ ಎನುತ್ತ ಆರಾರ
ದುರ್ಗಂಧದಿಂ ಚಾರಿತ್ರಂಗಿಡನ್, ಆತ್ಮನೇಂ ಭ್ರಮಿತನೋ ರತ್ನಾಕರಾಧೀಶ್ವರಾ !

(ಆತ್ಮನು) ಆರಾರ-ಯಾರ ಯಾರ, ಅಲ್ಲದ–ನೀಚವಾದ, ಗರ್ಭದೊಳ್–ಗರ್ಭದಲ್ಲಿ, ಬಳೆಯನ್–ಬೆಳೆಯುವುದಿಲ್ಲ ? ಆರಾರ-ಯಾರ ಯಾರ, ಒಂದು ಮೂತ್ರಾಧ್ವದೊಳ್ ಬಾರಂ-ಮೂತ್ರಮಾರ್ಗದಲ್ಲಿ ಬರುವುದಿಲ್ಲ ? ಬಂದು ಉರೆ-ಹೀಗೆ (ಮೂತ್ರ ಮಾರ್ಗಗಳಲ್ಲಿ) ಅಧಿಕವಾಗಿ ಬಂದು, ಬಂಧುಗಳ್ ಪಿತೃಗಳ್ ಎಂದು–ನನ್ನ ಬಂಧುಗಳು, ನನ್ನ ತಂದೆ ತಾಯಿಗಳು ಎಂದು, ಎನ್ನ ಅಂಗನಾನೀಕಂ ಎಂದು-ನನ್ನ ಪತ್ನಿಯರ ಗುಂಪು ಎಂದು, ಆರಾರ-ಯಾರ ಯಾರ, ಎಂಜಲಂ ಉಣ್ಣನ್–ಎಂಜಲನ್ನು ತಿನ್ನುವುದಿಲ್ಲ ? ಆತ್ಮಜರ್ ಎನುತ್ತ-ನನ್ನ ಮಕ್ಕಳು ಎಂದು, ಆರಾರ ದುರ್ಗಂಧದಿಂ-ಯಾರ ಯಾರ ದುರ್ಗಂಧದಿಂದ, ಚಾರಿತ್ರಂ ಕಿಡನ್–ತನ್ನ ಚಾರಿತ್ರವನ್ನು ಕೆಡಿಸಿ ಕೊಳ್ಳುವುದಿಲ್ಲ ? ಆತ್ಮನೇಂ-ಆತ್ಮನೇಕೆ. ಭ್ರಮಿತನೋ-ಭ್ರಮೆಗೊಂಡಿರುವನೋ, ರತ್ನಾಕರಾಧೀಶ್ವರಾ!

ಈ ಜೀವ ಯಾವ ಯಾವದೋ ಗರ್ಭದಲ್ಲಿ ಹುಟ್ಟಿ ಬೆಳೆಯುತ್ತಾನಲ್ಲ ! ಅನೇಕಾನೇಕ ಯೋನಿಗಳಲ್ಲಿ ಜನಿಸುವನಲ್ಲ ! ಇವರು ನನ್ನ ಬಂಧುಗಳು, ಇವರು ನನ್ನ ತಂದೆತಾಯಿಗಳು, ಇವರು ನನ್ನ ಪ್ರಿಯತಮೆಯರು ಎಂದುಕೊಂಡು ಕಂಡ ಕಂಡವರ ಎಂಜಲನೆಲ್ಲ ತಿನ್ನುವನಲ್ಲ ! ನನ್ನ ಮಕ್ಕಳಿವರೆಂದು ಭ್ರಮಿಸಿ ಯಾರ ಯಾರಲ್ಲಿ ದುರ್ಗಂಧದಲ್ಲಿ ಹೊರಳಾಡಿ ಚಾರಿತ್ರಭ್ರಷ್ಟನಾಗಿ ದಿಕ್ಕುಕಾಣದೆ ಅಲೆಯುತ್ತಿರುವ ಈ ಜೀವದ ಮರುಳುತನಕ್ಕೆ ಏನೆನ್ನೋಣ ?

ಕುಲಮಂ ಗೋತ್ರಮನುರ್ವಿಯಂ ಬಿರುದುಮಂ ಪಕ್ಷೀಕರಂಗೊಂಡು ತಾ |
ನೊಲಿವಂ ತನ್ನವೆನುತ್ತೆ ಲೋಗರವೆನುತ್ತಂ ನಿಂದಿಪಂ ಜೀವನಂ ||
ಡಲೆದೆಂಬತ್ತರ ನಾಲ್ಕು ಲಕ್ಷಭವದೊಳ್ಬಂದಲ್ಲಿ ತಾನಾವುದ-
ಕ್ಕೊಲಿವಂ ನಿಂದಿಪನಾವುದಂ ನಿರವಿಸಾ ರತ್ನಾಕರಾಧೀಶ್ವರಾ ! ||೩೦||

ಕುಲಮಂ ಗೋತ್ರಮಂ ಉರ್ವಿಯಂ ಬಿರುದುಮಂ ಪಕ್ಷೀಕರಂಗೊಂಡು
ತಾನ್ ಒಲಿವಂ, ತನ್ನವು ಎನುತ್ತೆ ಲೋಗರವು ಎನುತ್ತಂ ನಿಂದಿಪಂ, ಜೀವನ್
ಅಂಡಲೆದು ಎಂಬತ್ತರ ನಾಲ್ಕುಲಕ್ಷಭವದೊಳ್ ಬಂದು, ಅಲ್ಲಿ ತಾನ್
ಆವುದಕ್ಕೆ ಒಲಿವಂ ನಿಂದಿಪನ್ ಆವುದಂ ನಿರವಿಸಾ, ರತ್ನಾಕರಾಧೀಶ್ವರಾ !

ಜೀವನ್–ಜೀವನು, ಕುಲಮಂ–ವಂಶವನ್ನೂ, ಗೋತ್ರಮಂ – ಗೋತ್ರವನ್ನೂ, ಉರ್ವಿಯಂ–ಭೂಮಿಯನ್ನೂ, ಬಿರುದುಮಂ–ಬಿರುದನ್ನೂ, ಪಕ್ಷೀಕರಂಗೊಂಡು – ಪರಿಗ್ರಹಿಸಿಕೊಂಡು, ತನ್ನವು ಎನುತ್ತೆ–''ಇವು ತನ್ನವು'' ಎಂದು, ತಾನ್ ಒಲಿವಂ–ತಾನು ಪ್ರೀತಿಸುತ್ತಾನೆ, ಲೋಗರವು ಎನುತ್ತಂ–''ಇವು ಬೇರೆಯವರವು''ಎಂದು, ನಿಂದಿಪಂ-ದೂಶಿಸುತ್ತಾನೆ, ಅಂಡಲೆದು-ದಿಕ್ಕೆಟ್ಟು ಅಲೆದು, ಎಂಬತ್ತರ ನಾಲ್ಕುಲಕ್ಷ ಭವದೋಳ್ ಬಂದು-ಎಂಬತ್ತುನಾಲ್ಕು ಲಕ್ಷ ಭವಗಳಲ್ಲಿ ದುಃಖಪಟ್ಟು ಬಂದು, ಅಲ್ಲಿ ತಾನ್ ಆವುದಕ್ಕೆ ಒಲಿವಂ-ಆ ಭವಗಳಲ್ಲಿ ಯಾವುದಕ್ಕೆ ಪ್ರೀತಿಪಡುತ್ತಾನೆ? ನಿಂದಿಪನ್ ಆವುದಂ-ಯಾವುದನ್ನು ನಿಂದಿಸುತ್ತಾನೆ ? ನಿರವಿಸಾ–ನಿರೂಪಿಸು, ರತ್ನಾಕರಾಧೀಶ್ವರಾ !

ತನ್ನ ಕುಲ, ತನ್ನ ಗೋತ್ರ, ತನ್ನ ಭೂಮಿ, ತನ್ನ ಬಿರುದುಗಳು ಹೀಗೆ ಇವುಗಳಲ್ಲೇ ಮಗ್ನನಾಗಿ, ಅವುಗಳು ಶ್ರೇಷ್ಠವಾದವು ಎಂದು ಹೆಮ್ಮೆಪಟ್ಟುಕೊಳ್ಳುತ್ತಾನೆ. ಅನ್ಯರ ಕುಲ ಗೋತ್ರಾದಿಗಳನ್ನು ತಿರಸ್ಕಾರಭಾವದಿಂದ ಕಾಣುತ್ತಾನೆ. ಆದರೆ ತಾನು ಅನಾದಿಕಾಲದಿಂದ ಎಂಬತ್ತುನಾಲ್ಕುಲಕ್ಷ ಯೋನಿಗಳಲ್ಲಿ ಅನೇಕ ಭವಗಳಲ್ಲಿ ಪರದಾಡುತ್ತಿರುವುದನ್ನು ಮರೆತಿದ್ದಾನಲ್ಲ ! ಅವುಗಳಲ್ಲಿ ಯಾವ ಭವಗಳನ್ನು ಪ್ರೀತಿಸುವುದಕ್ಕೆ ಸಾಧ್ಯ ? ಯಾವ ಭವಗಳನ್ನು ನಿಂದಿಸಲು ಸಾಧ್ಯ ? ನಿರೂಪಿಸಲು ಸಾಧ್ಯವೇ ?

ಎಲೆಲೇ ಉಳ್ಳುದನಾಡೆ ಕೊಳ್ಳಿಗೊಳುವರ್ನೋಡೆಂಬ ನಾಣ್ಣುಡಿದೇಂ ।
ಸಲೆಸತ್ಯಂ ಬಹುಯೋನಿಯೊಳ್ಪಲವು ತಾಯುಂ ತಂದೆಯೊಳ್ಪುಟ್ಟಿದಾ ॥
ಮಲಶುಕ್ಲಂಗಳೊಳಾಳ್ದು ಬಾಳ್ದು ಮನಮನ್ಯರ್ನೊಂದು ಬೈವಲ್ಲಿ ತಾಂ ।
ಪಲರ್ಗಂ ಪುಟ್ಟಿದೆಯೆಂದೊಡೇಂ ಕುದಿವರೋ ರತ್ನಾಕರಾಧೀಶ್ವರಾ !   ॥೩೧॥

ಎಲೆಲೇ ಉಳ್ಳುದನ್ ಆಡೆ ಕೊಳ್ಳಿಗೊಳುವರ್ ನೋಡೆಂಬ ನಾಳ್‌ಮಾತಿದು ಏಂ
ಸಲೆಸತ್ಯಂ, ಬಹುಯೋನಿಯೊಳ್ ಪಲವು ತಾಯುಂ ತಂದೆಯೊಳ್ ಪುಟ್ಟಿದ
ಆ ಮಲಶುಕ್ಲಂಗಳೊಳ್ ಆಳ್ದು ಬಾಳ್ದು, ಮನಂ ಅನ್ಯರ್‌ನೊಂದು ಬೈವಲ್ಲಿ
ತಾಂ ಪಲರ್ಗಂ ಪುಟ್ಟಿದೆಯೆಂದೊಡೆ ಏಂ ಕುದಿವರೋ, ರತ್ನಾಕರಾಧೀಶ್ವರಾ !

ಎಲೆಲೇ–ಎಲೆ ಎಲೇ! ಉಳ್ಳುದನ್ ಆಡೆ–ಇದ್ದದ್ದನ್ನು ಇದ್ದಹಾಗೆ ಹೇಳಿದರೆ, ಕೊಳ್ಳಿಗೊಳುವರ್ ನೋಡು ಎಂಬ – ಕೊಳ್ಳಿಯನ್ನು ತೆಗೆದುಕೊಳ್ಳುತ್ತಾರೆ ನೋಡು ಎಂಬ, ನಾಳ್ ಮಾತಿದು–ಈ ನಾಣ್ನುಡಿ, ಏಂ ಸಲೆಸತ್ಯಂ–ಏನು ಸತ್ಯವಾದುದೋ ! ಬಹುಯೋನಿಯೊಳ್–ಅನೇಕ ಯೋನಿಗಳಲ್ಲಿ ಪಲವು ತಾಯುಂ ತಂದೆಯೊಳ್– ಹಲವು ತಂದೆತಾಯಿಗಳಲ್ಲಿ, ಪುಟ್ಟಿದ–ಹುಟ್ಟಿದ, ಆ ಮಲಶುಕ್ಲಂಗಳೊಳ್–ಆ ಮಲವೀರ್ಯಗಳಲ್ಲಿ, ಆಳ್ದು–ಮುಳುಗಿ, ಬಾಳ್ದು–ವೃದ್ಧಿಹೊಂದಿ, (ಬಂದಾಗ) ಮನಂ ಅನ್ಯರ್ ನೊಂದು ಬೈವಲ್ಲಿ-ಬೇರೆಯವರು ತನ್ನಿಂದ ಸಂಕಟಪಟ್ಟು ಬೈದಾಗ, "ತಾಂ ಪಲರ್ಗಂ ಪುಟ್ಟಿದೆಯೆಂದೊಡೆ"–"ತಾನು ಹಲವರಿಗೆ ಹುಟ್ಟಿದವನೆಂದು ಹೇಳಿದರೆ," ಏಂ ಕುದಿವರೋ–ಏಕೆ ಕುದಿಯುವರೋ (ಏಕೆ ಕೋಪದಿಂದ ಕೆರಳುವರೋ), ರತ್ನಾಕರಾಧೀಶ್ವರಾ !

ಕಂಡದ್ದನ್ನು ಕಂಡಂತೆ ಹೇಳಿದರೆ ಕೆಂಡದಂಥ ಕೋಪ ಎಂಬ ನಾಣ್ನುಡಿಯುಂಟು. ಈ ಮಾತು ನಮ್ಮ ಜೀವನಕ್ಕೆ ಎಷ್ಟೊಂದು ಸತ್ಯ ! ಈ ಜೀವ ನಾನಾ ಯೋನಿಗಳಲ್ಲಿ ಹಲವಾರು ತಂದೆ ತಾಯಿಗಳ ಮಲಮೂತ್ರಾದಿಗಳಲ್ಲಿ ಮುಳುಗಿ ಬಂದಿರುವಾಗ ಯಾರಾದರೂ ಅಂಥವನಿಂದ ಸಂಕಟಗೊಂಡು "ಎಷ್ಟು ಜನಕ್ಕೆ ಹುಟ್ಟಿದೆಯೊ !" ಎಂದು ಬೈದರೆ ಕೋಪದಿಂದ ಕೆರಳುವರಲ್ಲಾ ! ರತ್ನಾಕರಾಧೀಶ್ವರಾ !

ಬಾಹ್ಯಾಪೇಕ್ಷೆಯಿನಾದೊಡಂ ಕುಲಬಲಸ್ಥಾನಾದಿಪಕ್ಷಂ ಮನಃ
ಸಹ್ಯಂ ನಿಶ್ಚಯದಿಂದಮಾತ್ಮನಕುಲಂ ನಿರ್ಗೋತ್ರಿ ನಿರ್ನಾಮಿ ನಿ-
ರ್ಗ್ರಹ್ಯೋದ್ಭೂತನನಂಗನಚ್ಯುತನನಾದ್ಯಂ ಸಿದ್ಧನೆಂದೆಂಬುದೇ
ಗ್ರಾಹ್ಯಂ ತತ್ಪರಿಭಾವನೇ ಭವಹರಂ ರತ್ನಾಕರಾಧೀಶ್ವರಾ ! ||೩೨||

ಬಾಹ್ಯ ಅಪೇಕ್ಷೆಯಿಂ ಆದೊಡಂ ಕುಲಬಲಸ್ಥಾನಾದಿ ಪಕ್ಷಂ ಮನಃ
ಸಹ್ಯಂ, ನಿಶ್ಚಯದಿಂದಂ ಆತ್ಮನ್ ಅಕುಲಂ ನಿರ್ಗೋತ್ರಿ ನಿರ್ನಾಮಿ
ನಿರ್ಗ್ರಹ್ಯೋದ್ಭೂತಂ ಅನಂಗಂ ಅಚ್ಯುತಂ ಅನಾದ್ಯಂ ಸಿದ್ಧನೆಂದೆಂಬುದೇ
ಗ್ರಾಹ್ಯಂ, ತತ್ ಪರಿಭಾವಮೇ ಭವಹರಂ ರತ್ನಾಕರಾಧೀಶ್ವರಾ !

ಬಾಹ್ಯ ಅಪೇಕ್ಷೆಯಿಂ ಆದೊಡಂ – ವ್ಯವಹಾರದೃಷ್ಟಿಯಿಂದಾದರೆ, – (ಆತ್ಮನಿಗೆ) ಕುಲಬಲ ಸ್ಥಾನಾದಿ ಪಕ್ಷಂ – ವಂಶ ಬಲ ಸ್ಥಾನ ಮೊದಲಾದುವುಗಳಲ್ಲಿ ಪ್ರೀತಿಯು, ಮನಃ ಸಹ್ಯಂ – ಮನಸ್ಸಿಗೆ ಸಹನೀಯ, ನಿಶ್ಚಯದಿಂದಂ–ನಿಶ್ಚಯ ನಯದಿಂದ, ಆತ್ಮನ್–ಆತ್ಮನು, ಅಕುಲಂ–ಕುಲವಿಲ್ಲ ದವನು, ನಿರ್ಗೋತ್ರಿ-ಗೋತ್ರರಹಿತನು, ನಿರ್ನಾಮಿ–ಹೆಸರಿಲ್ಲದವನು, ನಿರ್ಗ್ರಹ್ಯ ಉದ್ಭೂತಂ–ಯೋನಿ ಯಲ್ಲಿ ಹುಟ್ಟಿದವನು, ಅನಂಗಂ–ಶರೀರರಹಿತನು, ಅಚ್ಯುತಂ–ಶಾಶ್ವತನು, ಅನಾದ್ಯಂ–ಆದಿಯಿಲ್ಲದ ವನು, ಸಿದ್ಧಂ–ಸಿದ್ಧನು, ಎಂದೆಂಬುದೇ-ಹೀಗೆಂಬುದೇ, ಗ್ರಾಹ್ಯಂ-ಪರಿಗ್ರಹಿಸುವುದಕ್ಕೆ ಯೋಗ್ಯವಾ ದುದು, ತತ್ ಪರಿಭಾವಮೇ - ಅದನ್ನು ಪರಿಭಾವಿಸುವುದೇ, ಭವಹರಂ - ಭವನಾಶಕವು, ರತ್ನಾಕರಾಧೀಶ್ವರಾ !

ವ್ಯವಹಾರ ದೃಷ್ಟಿಯಿಂದ ವಿಚಾರಮಾಡಿದರೆ ಆತ್ಮನಿಗೆ ಕುಲ, ಗೋತ್ರ, ಬಲ, ಪದವಿ ಮುಂತಾ ದವುಗಳು ಸರಿಯೆನಿಸಬಹುದು. ಆದರೆ ನಿಶ್ಚಯದೃಷ್ಟಿಯಿಂದ ವಿವೇಚಿಸಿದರೆ ಆತ್ಮನಿಗೆ ಕುಲವಿಲ್ಲ, ಗೋತ್ರವಿಲ್ಲ, ಹೆಸರಿಲ್ಲ. ಅವನು ಯಾವ ಯೋನಿಯಲ್ಲೂ ಹುಟ್ಟುವುದೂ ಇಲ್ಲ ಸಾಯುವುದೂ ಇಲ್ಲ, ಅವನಿಗೆ ದೇಹವಿಲ್ಲ, ಆದಿ ಅಂತ್ಯಗಳಿಲ್ಲ, ಅವನು ನಿತ್ಯಾನಂದ ಪರಮ ಪರಂಜ್ಯೋತಿ ರೂಪಿಯಾದ ಸಿದ್ಧಪರಮೇಷ್ಠಿಯೇ ! ಹೀಗೆ ಚಿಂತಿಸುವುದೇ ಸರಿಯಾದದ್ದು ಯೋಗ್ಯವಾದದ್ದು. ಈ ಚಿಂತನೆಯೇ ಸಂಸಾರ ಸಾಗರದಿಂದ ಪಾರಾಗುವ ಉಪಾಯ.

**ಪಕ್ಷಂಗೊಂಡೊಡೆ ಕೊಳ್ಗೆ ಜೀವಹಿತಮುಳ್ಳಾಚಾರಮುಳ್ಳಗ್ರದೊಳ್ ।
ಮೋಕ್ಷಕ್ಕೈದಿಸಲಾರ್ಪ ಸತ್ಕುಲಸುಧರ್ಮಶ್ರೀಯುಮಂತಲ್ಲದು-॥
ದ್ಭಕ್ಷದ್ವೇಷದೆ ಕೊಲ್ವ ಕುತ್ಸಿತದ ಶೀಲಂ ತಳ್ತು ಸಾರ್ದಾತ್ಮರಂ ।
ಭಿಕ್ಷಂಗೆಯ್ವವನಾತ್ಮನೇಕೆ ಪಿಡಿವಂ ರತ್ನಾಕರಾಧೀಶ್ವರಾ ! ॥೩೩॥**

ಪಕ್ಷಂಗೊಂಡೊಡೆ ಕೊಳ್ಗೆ, ಜೀವಹಿತಂ ಉಳ್ಳ ಆಚಾರಂ ಉಳ್ಳ
ಅಗ್ರದೊಳ್ ಮೋಕ್ಷಕ್ಕೆ ಐದಿಸಲ್ ಆರ್ಪ ಸತ್ಕುಲಸುಧರ್ಮಶ್ರೀಯುಂ,
ಅಂತಲ್ಲದೆ ಉದ್ಭಕ್ಷದ್ವೇಷದೆ ಕೊಲ್ವ ಕುತ್ಸಿತದ ಶೀಲಂ ತಳ್ತು, ಸಾರ್ದ
ಆತ್ಮರಂ ಭಿಕ್ಷಂಗೆಯ್ವವನ್, ಆತ್ಮನ್, ಏಕೆ ಪಿಡಿವಂ ರತ್ನಾಕರಾಧೀಶ್ವರಾ !

ಆತ್ಮನ್-ಆತ್ಮನು, ಜೀವಹಿತಂ ಉಳ್ಳ-ಜೀವಾತ್ಮನಿಗೆ ಹಿತವುಳ್ಳುದೂ, ಆಚಾರಂ ಉಳ್ಳ-ಸದಾಚಾರವುಳ್ಳುದೂ, ಅಗ್ರದೊಳ್–ಕೊನೆಯಲ್ಲಿ, ಮೋಕ್ಷಕ್ಕೆ ಐದಿಸಲ್ ಆರ್ಪ–ಮುಕ್ತಿಯನ್ನು ಕೊಡಲು ಸಮರ್ಥವಾದ, ಸತ್ಕುಲ–ಸತ್ಕುಲವನ್ನೂ, ಸುಧರ್ಮ–ಸದ್ಧರ್ಮವನ್ನೂ, ಶ್ರೀಯುಂ–ಸಂಪತ್ತನ್ನೂ, ಪಕ್ಷಂಗೊಂಡೊಡೆ ಕೊಳ್ಗೆ–ಪರಿಗ್ರಹಿಸಿದರೆ ಪರಿಗ್ರಹಿಸಲಿ, ಅಂತಲ್ಲದೆ–ಅದುಬಿಟ್ಟು, ಉದ್ಭಕ್ಷ-ಚೆನ್ನಾಗಿ ತಿನ್ನುವ ಉದ್ದೇಶದಿಂದ, ದ್ವೇಷದೆ–ದ್ವೇಷದಿಂದಲೂ, ಕೊಲ್ವ–ಹಿಂಸೆಮಾಡುವ, ಕುತ್ಸಿತದ ಶೀಲಂ–ದುಷ್ಟ ಆಚರಣೆಯನ್ನು, ತಳ್ತು – ಹೊಂದಿ, ಭಿಕ್ಷಂಗೆಯ್ವವನ್ – ಯಾಚಿಸುವವನು, ಏಕೆ, ಸಾರ್ದ ಆತ್ಮರಂ–ಜೀವಹಿತವನ್ನು ಬೋಧಿಸಿದವರನ್ನು, ಪಿಡಿವಂ–ಹಿಡಿಯುವನು ?

ಜೀವನಿಗೆ ಹಿತವಾದದ್ದೂ, ಸದಾಚಾರಸಂಪನ್ನತೆಯಿಂದ ಕೂಡಿದುದೂ, ಕೊನೆಗೆ ಪರಮಪದವನ್ನು ದೊರಕಿಸಿಕೊಡಲು ಸಮರ್ಥವಾದಂಥ ಸತ್ಕುಲವನ್ನೂ, ಸದ್ಧರ್ಮವನ್ನೂ, ಸಂಪತ್ತನ್ನೂ ಬೇಕಿದ್ದರೆ ಆಶ್ರಯಿಸಲಿ, ಅಂತಲ್ಲದೆ ಹೊಟ್ಟೆಪಾಡಿಗಾಗಿ, ದ್ವೇಷ ಅಸೂಯೆಗಳನ್ನು ಬಿತ್ತುವುದಕ್ಕಾಗಿ, ಹಿಂಸಾಚರಣೆಗಾಗಿ, ದುಷ್ಟ ಅಭ್ಯಾಸಗಳಿಗಾಗಿ, ಭಿಕ್ಷಾಟನೆಮಾಡುವವನು ಮೇಲೆ ಹೇಳಿದ ಸದ್ಧರ್ಮವನ್ನು ಮತ್ತು ಜಾತಿಯನ್ನು ಏಕೆ ಹಿಡಿಯಬೇಕು ? ಅಂದರೆ ಧರ್ಮ ಮತ್ತು ಜಾತಿಯನ್ನು ಮುಂದೆ ಮಾಡಿಕೊಂಡು ಕೃತ್ರಿಮ ಜೀವನವನ್ನೇಕೆ ಸಾಗಿಸಬೇಕು ?

ಒಂದೊಂದಾತ್ಮನೆ ಶುದ್ಧದಿಂ ತ್ರಿಜಗದಾಪೂರ್ಣಾಕೃತಂಗಳ್ಜಗ-
ದ್ವೃಂದೋತ್ಕಂಪಿತ ಶಕ್ತಿಗಳ್ಪರರ್ಗಶಕ್ಯಂಗಳ್ಜಗತ್ಕರ್ತೃಗಳ್
ತಂದಿಂತೆಲ್ಲವನಾರ್ದ್ರಚರ್ಮದೊಡಲೊಳ್ತಳ್ತಾನೆ ಪೆಣ್ಣಶ್ವನಾ-
ಳೆಂದೇಂ ಮಾರ್ಗುವೊ ಪಾಪಪುಣ್ಯಯುಗಳಂ ರತ್ನಾಕರಾಧೀಶ್ವರಾ ! ||೩೪||

ಒಂದೊಂದು ಆತ್ಮನೆ ಶುದ್ಧದಿಂ ತ್ರಿಜಗತ್ ಆಪೂರ್ಣಾಕೃತಂಗಳ್,
ಜಗತ್‌ವೃಂದ ಉತ್ಕಂಪಿತ ಶಕ್ತಿಗಳ್, ಪರರ್ಗೆ ಅಶಕ್ಯಂಗಳ್, ಜಗತ್
ಕರ್ತೃಗಳ್, ತಂದು ಇಂತೆಲ್ಲವಂ ಆರ್ದ್ರಚರ್ಮದ ಒಡಲೊಳ್ ತಳ್ತು, ಆನೆ ಪೆಣ್
ಅಶ್ವ ಆಳ್ ಎಂದು ಏಂ ಮಾರ್ಗುವೊ ಪಾಪಪುಣ್ಯಯುಗಳಂ ರತ್ನಾಕರಾಧೀಶ್ವರಾ !

ಶುದ್ಧದಿಂ-ಶುದ್ಧನಿಶ್ಚಯನಯದಿಂದ, ಒಂದೊಂದು ಆತ್ಮನೆ-ಒಂದೊಂದು ಆತ್ಮನೂ, ತ್ರಿಜಗತ್-ಮೂರು ಲೋಕವನ್ನು, ಆಪೂರ್ಣಾಕೃತಂಗಳ್-ತುಂಬುವ ಆಕಾರವುಳ್ಳವನು, ಜಗತ್‌ವೃಂದ-ಲೋಕಗಳನ್ನು, ಉತ್ಕಂಪಿತ-ಕಂಪಿಸುವ, ಶಕ್ತಿಗಳ್-ಶಕ್ತಿಯುಳ್ಳವನು, ಪರರ್ಗೆ-ಬೇರೆಯವರಿಗೆ, ಅಶಕ್ಯಂಗಳ್-ಜಯಿಸಲು ಸಾಧ್ಯವಿಲ್ಲದವನು, ಜಗತ್ ಕರ್ತೃಗಳ್-ಲೋಕದ ಕರ್ತನು, ತಂದು ಇಂತೆಲ್ಲವಂ-ಈ ಆತ್ಮರನ್ನೆಲ್ಲ ತಂದು (ಈ ಸಾಮರ್ಥ್ಯವುಳ್ಳ ಆತ್ಮರುಗಳನ್ನೆಲ್ಲ), ಆರ್ದ್ರಚರ್ಮದ ಒಡಲೊಳ್-ಹಸಿ ತೊಗಲಿನ ಶರೀರದಲ್ಲಿ, ತಳ್ತು-ಹೊಗಿಸಿ, ಆನೆ, ಪೆಣ್‌ಅಶ್ವ-ಹೆಣ್ಣು ಕುದುರೆ, ಆಳ್-ಆಳು, ಎಂದು ಏಂ ಮಾರ್ಗುವೊ-ಏನು ಮಾಡುತ್ತವೊ, ಪಾಪಪುಣ್ಯ ಯುಗಳಂ-ಈ ಪಾಪ ಪುಣ್ಯವೆಂಬ ಕರ್ಮಗಳು, ರತ್ನಾಕರಾಧೀಶ್ವರಾ !

ಶುದ್ಧ ನಿಶ್ಚಯ ದೃಷ್ಟಿಯಿಂದ ಆತ್ಮಸ್ವರೂಪವನ್ನು ಅವಲೋಕಿಸಿದರೆ ಒಂದೊಂದು ಆತ್ಮವೂ ಮೂರು ಲೋಕವನ್ನು ತುಂಬುವ ಸಾಮರ್ಥ್ಯವುಳ್ಳದ್ದು ; ಜಗತ್ತನ್ನೇ ಅಲುಗಾಡಿಸುವ ಮಹಾಶಕ್ತಿ ಆತ್ಮನಲ್ಲಿದೆ. ಯಾರೂ ಈ ಆತ್ಮನನ್ನು ಜಯಿಸಲಾಗುವುದಿಲ್ಲ. ಲೋಕದ ಕರ್ತಾರನೇ ಆತ್ಮ. ಇಂಥ ಅನಂತ ಶಕ್ತಿಸಾಮರ್ಥ್ಯಗಳುಳ್ಳ ಆತ್ಮರುಗಳು ಪಾಪ ಪುಣ್ಯಗಳೆಂಬ ಕರ್ಮಗಳ ಕಟ್ಟಿಗೆ ಸಿಕ್ಕಿಬಿದ್ದು ಹಸಿ ಚರ್ಮದ ಹೊದಿಕೆಯಿರುವ ಆನೆ, ಹೆಣ್ಣುಕುದುರೆ, ಆಳು ಮುಂತಾದ ಅನೇಕ ಶರೀರಗಳಲ್ಲಿ ಬಂದು ತಿರ್ರನೆ ತಿರುಗುತ್ತಿವೆಯಲ್ಲಾ !

ಪಾಪಂ ನಾರಕಭೂಮಿಗೊಯ್ವುದಸುವಂ ಪುಣ್ಯಂ ದಿವಕ್ಕೊಯ್ವುದಾ ।
ಪಾಪಂ ಪುಣ್ಯಮಿವೊಂದುಗೂಡಿದೊಡೆ ತಿರ್ಯಙ್ಮರ್ತ್ಯ ಜನ್ಮಂಗಳೊಳ್ ॥
ರೂಪಂ ಮಾಳ್ಕುಮಿವೆಲ್ಲಮಧ್ರುವಮಿವೇ ಜನ್ಮಕ್ಕೆ ಸಾವಿಂಗೊಡಲ್ ।
ಪಾಪಂ ಪುಣ್ಯಮಿವಾತ್ಮಬಾಹ್ಯಕವಲಾ ರತ್ನಾಕರಾಧೀಶ್ವರಾ ! ॥೩೫॥

ಪಾಪಂ ನಾರಕಭೂಮಿಗೆ ಒಯ್ವುದು ಅಸುವಂ, ಪುಣ್ಯಂ ದಿವಕ್ಕೊಯ್ವುದು,
ಆ ಪಾಪಂ ಪುಣ್ಯಂ ಇವು ಒಂದುಗೂಡಿದೊಡೆ ತಿರ್ಯಕ್ ಮರ್ತ್ಯ
ಜನ್ಮಂಗಳೊಳ್ ರೂಪಂ ಮಾಳ್ಕುಂ, ಇವೆಲ್ಲಂ ಅಧ್ರುವಂ, ಇವೇ ಜನ್ಮಕ್ಕೆ
ಸಾವಿಂಗೆ ಒಡಲ್, ಪಾಪಂಪುಣ್ಯಂ ಇವು ಆತ್ಮಬಾಹ್ಯಕವಲಾ ರತ್ನಾಕರಾಧೀಶ್ವರಾ !

ಪಾಪಂ–ಪಾಪವು, ಅಸುವಂ–ಜೀವವನ್ನು, ನಾರಕಭೂಮಿಗೆ ಒಯ್ವುದು–ನರಕಭೂಮಿಗೆ ಎಳೆ ...ಯ್ಯುತ್ತದೆ, ಪುಣ್ಯಂ-ಪುಣ್ಯವು, ದಿವಕ್ಕೆ ಒಯ್ವುದು–ಸ್ವರ್ಗಕ್ಕೆ ಕೊಂಡೊಯ್ಯುತ್ತದೆ, ಆ ಪಾಪಂ ...ಣ್ಯಂ ಇವು ಒಂದುಗೂಡಿದೊಡೆ-ಆ ಪಾಪ ಪುಣ್ಯಗಳೆರಡು ಸೇರಿದರೆ, ತಿರ್ಯಕ್ ಮರ್ತ್ಯ ಜನ್ಮಂಗ ...ಳ್–ತಿರ್ಯಕ್ ಜನ್ಮದಲ್ಲೂ, ಮನುಷ್ಯ ಜನ್ಮದಲ್ಲೂ, ರೂಪಂಮಾಳ್ಕುಂ–ರೂಪವನ್ನುಂಟುಮಾಡು ...ವೆ, ಇವೆಲ್ಲಂ ಅಧ್ರುವಂ-ಇವೆಲ್ಲವೂ ಅನಿತ್ಯವಾದುವು, ಇವೇ – ಈ ಪಾಪಪುಣ್ಯಗಳೇ, ಜನ್ಮಕ್ಕೆ ...ವಿಂಗೆ–ಜನನಮರಣಗಳಿಗೆ. ಒಡಲ್–ಕಾರಣ, ಪಾಪಪುಣ್ಯಂ ಇವು-ಈ ಪಾಪಪುಣ್ಯಗಳು, ಆತ್ಮ ...ಹ್ಯಕವಲಾ–ಆತ್ಮಬಾಹ್ಯಗಳಲ್ಲವೇ ! ರತ್ನಾಕರಾಧೀಶ್ವರಾ !

ಜೀವಕ್ಕೆ ಪಾಪಕರ್ಮ ಜಾಸ್ತಿ ಅಂಟಿದರೆ ಆ ಜೀವ ನರಕಕ್ಕೆ ಹೋಗುತ್ತದೆ. ಪುಣ್ಯಸಂಚಯ ...ಚ್ಚಾದಾಗ ಸ್ವರ್ಗಕ್ಕೇರುವುದು. ಪಾಪಪುಣ್ಯಗಳೆರಡು ಬೆರೆತಾಗ ತಿರ್ಯಕ್ ಜನ್ಮದಲ್ಲಾಗಲೀ, ...ನುಷ್ಯಜನ್ಮದಲ್ಲಾಗಲಿ ಜೀವ ತೊಳಲಾಡುತ್ತದೆ. ಈ ಚತುರ್ಗತಿಗಳೆಲ್ಲಾ ಅನಿತ್ಯವಾದುವು. ಈ ...ಪಪುಣ್ಯಗಳೇ ಜನನ ಮರಣಗಳಿಗೆ ಕಾರಣ. ಲೌಕಿಕದೃಷ್ಟಿಯಿಂದ ಪಾಪಕರ್ಮ ಕೆಟ್ಟದ್ದು, ಪುಣ್ಯ ...ರ್ಮ ಒಳ್ಳೆಯದೆನ್ನುವರು. ಆದರೆ ಆತ್ಮನ ಹಿತದೃಷ್ಟಿಯಿಂದ ಈ ಎರಡೂ ಕರ್ಮಗಳೂ ...ತ್ಮನನ್ನು ಬಂಧಿಸಿ ಚತುರ್ಗತಿಗಳಲ್ಲಿ ತಿರುಗಿಸುತ್ತದೆ. ಆದ್ದರಿಂದ ಪಾಪಪುಣ್ಯಕರ್ಮಗಳ ಸಂಪೂರ್ಣ ...ರ್ಜರೆಯೇ ಮೋಕ್ಷಪ್ರಾಪ್ತಿ.

ಸುಕೃತಂ ದುಷ್ಕೃತಮುಂ ಸಮಾನಮದನನ್ಯರ್ಮೆಚ್ಚರೇಕೆಂದೊಡಾ ।
ಸುಕೃತಂ ಸ್ವರ್ಗಸುಖಕ್ಕೆ ಕಾರಣಮೆನಲ್ತತ್ಸೌಖ್ಯಮೇಂ ನಿತ್ಯಮೋ ॥
ವಿಕೃತಂಗೊಂಡಳಿವಂದಳಲ್ಜನಿಸದೋ ಸ್ವಪ್ನಂಬೊಲೇಂ ಮಾಂಜದೋ ।
ಪ್ರಕೃತಿಪ್ರಾಪ್ತಿಗೆ ನೂಂಕದೋ ಪಿರಿದದೇಂ ರತ್ನಾಕರಾಧೀಶ್ವರಾ ! ॥೩೬॥

ಸುಕೃತಂ ದುಷ್ಕೃತಮುಂ ಸಮಾನಂ, ಅದಂ ಅನ್ಯರ್ ಮೆಚ್ಚರ್, ಏಕೆಂದೊಡೆ ಆ
ಸುಕೃತಂ ಸ್ವರ್ಗಸುಖಕ್ಕೆ ಕಾರಣಂ ಎನಲ್, ತತ್ ಸೌಖ್ಯಂ ಏಂ ನಿತ್ಯಮೋ,
ವಿಕೃತಂಗೊಂಡು ಅಳಿವಂದ ಅಳಲ್ ಜನಿಸದೋ, ಸ್ವಪ್ನಂಬೊಲ್ ಏಂ ಮಾಂಜದೋ,
ಪ್ರಕೃತಿ ಪ್ರಾಪ್ತಿಗೆ ನೂಂಕದೋ ಪಿರಿದದೇಂ ರತ್ನಾಕರಾಧೀಶ್ವರಾ !

ಸುಕೃತಂ–ಪುಣ್ಯವೂ, ದುಷ್ಕೃತಮುಂ–ಪಾಪವೂ, ಸಮಾನಂ-ಸಮಾನವಾದವುಗಳು, ಅದಂ-ಆ ಮಾತನ್ನು, ಅನ್ಯರ್–ಬೇರೆಯವರು, ಮೆಚ್ಚರ್-ಮೆಚ್ಚರು. ಏಕೆಂದೊಡೆ-ಏಕೆಂದರೆ, ಆ ಸುಕೃತಂ ಸ್ವರ್ಗ ಸುಖಕ್ಕೆ ಕಾರಣಂ ಎನಲ್–ಆ ಪುಣ್ಯವು ಸ್ವರ್ಗಸುಖಕ್ಕೆ ಕಾರಣವೆಂದು, ತತ್‌ಸೌಖ್ಯಂ ಏಂ–ಆ ಸುಖ ವೇನು, ನಿತ್ಯಮೋ–ನಿತ್ಯವೋ ! ವಿಕೃತಂಗೊಂಡು - ವಿಕಾರವನ್ನುಹೊಂದಿ, ಅಳಿವಂದ–ಸಾಯುವ, ಅಳಲ್–ದುಃಖವು. ಜನಿಸದೋ-ಉಂಟಾಗುವುದಿಲ್ಲವೋ ? ಸ್ವಪ್ನಂಬೊಲ್ ಏಂ–ಸ್ವಪ್ನದಂತೆ ಏನು (ಆ ಸ್ವರ್ಗಸುಖವು). ಮಾಂಜದೋ–ಮರೆಯುವುದಿಲ್ಲವೋ, ಪ್ರಕೃತಿಪ್ರಾಪ್ತಿಗೆ-ಕರ್ಮಪ್ರಕೃತಿಯ ಪ್ರಾಪ್ತಿಗೆ, ನೂಂಕದೋ–ತಳ್ಳುವುದಿಲ್ಲವೋ, ಪಿರಿದು ಅದೇಂ–ಅದೇನು ಮಹಾ ! ರತ್ನಾಕರಾಧೀಶ್ವರಾ !

ಅಧ್ಯಾತ್ಮದೃಷ್ಟಿಯಲ್ಲಿ ಪಾಪಪುಣ್ಯಗಳೆರಡೂ ಒಂದೇ, ಆತ್ಮನನ್ನು ಬಂಧಿಸುವ ಕಬ್ಬಿಣದ ಸಂಕೋಲೆ ಪಾಪಕರ್ಮವಾದರೆ, ಪುಣ್ಯಕರ್ಮವು ಆತ್ಮನನ್ನು ಬಂಧಿಸುವ ಸುವರ್ಣಸಂಕೋಲೆ. ಸಾಮಾನ್ಯರು ಪುಣ್ಯಕರ್ಮವನ್ನು ಒಳ್ಳೆಯದೆಂದು ಭಾವಿಸುವರು. ಏಕೆಂದರೆ ಅದು ಸ್ವರ್ಗಸುಖವನ್ನು ಕೊಡುವುದರಿಂದ, ಆದರೆ ಆ ಸ್ವರ್ಗಸುಖವು ಶಾಶ್ವತವೇ ? ಆ ಸ್ವರ್ಗದಲ್ಲಿಯೂ ಆಯುಷ್ಯಾವಸಾನ ಉಂಟು. ಸ್ವರ್ಗದಿಂದ ಚ್ಯುತನಾಗುವಾಗ ಆ ಸ್ವರ್ಗದ ಭೋಗೋಪಭೋಗಗಳನ್ನು ಬಿಟ್ಟುಬರ ಬೇಕಲ್ಲಾ ಎಂದು ದುಃಖಿಸಿ ವಿಕಾರ ಮನಸ್ಸಿನಿಂದ ಸಾಯುತ್ತಾರೆ, ಕನಸಿನಂತೆ ಸ್ವರ್ಗಸುಖವೂ ಒಂದು ದಿನ ಬಯಲಾಗುವುದಿಲ್ಲವೇ ? ಕರ್ಮಸಂಚಯ ಅಲ್ಲಿಯೂ ತಪ್ಪಿದ್ದಲ್ಲ. ಹೀಗಿರುವಾಗ ಆ ಸ್ವರ್ಗ ಸುಖ ಏನು ಮಹಾ !

ದುರಿತಂ ತೀರ್ದೊಡೆ ಪುಣ್ಯದೊಳ್ನಿಲುವನಾ ಪುಣ್ಯಂ ಕರಂ ತೀರ್ದೊಡಾ ।
ದುರಿತಂಬೊರ್ದುವನಿತ್ತಲತ್ತಲೆಡೆಯಾಟಂ ಕುಂದದಾತ್ಮಂಗಿವಂ ॥
ಸರಿಗಂಡಾತ್ಮವಿಚಾರವೊಂದರೊಳೆ ನಿಂದಾನಂದಿಸುತ್ತಿರ್ಪನೇ ।
ಸ್ಥಿರನಕ್ಕುಂ ಸುಖಿಯಕ್ಕುಮಕ್ಷಯನಲಾ ರತ್ನಾಕರಾಧೀಶ್ವರಾ ! ॥೩೭॥

ದುರಿತಂ ತೀರ್ದೊಡೆ ಪುಣ್ಯದೊಳ್ ನಿಲುವಂ, ಆ ಪುಣ್ಯಂ ಕರಂ ತೀರ್ದೊಡೆ
ಆ ದುರಿತಂ ಬೊರ್ದುವಂ, ಇತ್ತಲ್ ಅತ್ತಲ್ ಎಡೆಯಾಟಂ ಕುಂದದು ಆತ್ಮಂಗೆ,
ಇವಂ ಸರಿಗಂಡು ಆತ್ಮವಿಚಾರಂ ಒಂದರೊಳೆ ನಿಂದು, ಆನಂದಿಸುತ್ತಿರ್ಪನೇ
ಸ್ಥಿರ್‌ನ್ ಅಕ್ಕುಂ ಸುಖಿ ಅಕ್ಕುಂ, ಅಕ್ಷಯನಲಾ ! ರತ್ನಾಕರಾಧೀಶ್ವರಾ !

ದುರಿತಂ ತೀರ್ದೊಡೆ–ಪಾಪಕರ್ಮವು ತೀರಿದರೆ, ಪುಣ್ಯದೊಳ್ ನಿಲುವಂ-ಪುಣ್ಯದಲ್ಲಿ ನಿಲ್ಲುವನು, ಆ ಪುಣ್ಯಂ ಕರಂ ತೀರ್ದೊಡೆ–ಆ ಪುಣ್ಯವು ಪೂರ್ತಿಯಾಗಿ ಮುಗಿದುಹೋದರೆ, ಆ ದುರಿತಂ ಬೊರ್ದುವಂ–ಆ ಪಾಪವನ್ನು ಹೊಂದುವನು, ಇತ್ತಲ್ ಅತ್ತಲ್ ಎಡೆಯಾಟಂ–ಈ ಕಡೆ ಆ ಕಡೆಯ ತಿರುಗಾಟವು, ಕುಂದದು ಆತ್ಮಂಗೆ–ಆತ್ಮನಿಗೆ ಕಮ್ಮಿಯಾಗುವುದಿಲ್ಲವು, ಇವಂ ಸರಿಗೊಂಡು–ಈ ಪಾಪ ಪುಣ್ಯಗಳೆರಡನ್ನೂ ಸಮಾನವಾಗಿ ಭಾವಿಸಿ, ಆತ್ಮವಿಚಾರಂ ಒಂದರೊಳೆ ನಿಂದು–ಆತ್ಮವಿಚಾರದಲ್ಲೇ ಮಗ್ನನಾಗಿ, ಆನಂದಿಸುತ್ತ ಇರ್ಪನೇ–ಆನಂದ ಪಡುವವನೇ, ಸ್ಥಿರನ್ ಅಕ್ಕುಂ–ಸ್ಥಿರನಾಗುತ್ತಾನೆ, ಸುಖಿ ಅಕ್ಕುಂ–ಸುಖಿಯಾಗುತ್ತಾನೆ, ಅಕ್ಷಯನಲಾ–ಅಕ್ಷಯಸುಖಕ್ಕೆ ಭಾಜನನಾಗುತ್ತಾನಲ್ಲವೆ ?

ಪಾಪಕರ್ಮದ ತೂಕ ತಗ್ಗಿದಾಗ ಪುಣ್ಯಕರ್ಮದ ಪ್ರಭಾವವು ಏರುವುದು. ಹೀಗೆಯೇ ಆ ಪುಣ್ಯಕರ್ಮದ ಗಂಟು ಕರಗಿದಾಗ ಪುನಃ ಪಾಪಕರ್ಮದ ಹಿಡಿತಕ್ಕೆ ಜೀವನು ಸಿಕ್ಕಿಕೊಳ್ಳುವನು. ಹೀಗೆ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಪಾಪಪುಣ್ಯ ಕರ್ಮಗಳ ಜಂಜಾಟದಲ್ಲಿ ಸಿಕ್ಕಿ ತೊಳಲಾಡುತ್ತಾನೆ. ಈ ಬಂಧನದಿಂದ ವಿಮೋಚನೆಯನ್ನು ಹೊಂದಬೇಕಾದರೆ ಪಾಪಪುಣ್ಯಗಳೆರಡನ್ನೂ ಅಹಿತಗಳೆಂದು ಭಾವಿಸಿ ತನ್ನ ಆತ್ಮನ ನೈಜಸ್ವಭಾವವನ್ನರಿತು, ಆತ್ಮಾನಂದಪಡುವವನೇ ನಿತ್ಯನೂ, ಅನಂತಸುಖಿಯೂ, ಅಕ್ಷಯಸುಖಕ್ಕೆ ಭಾಜನನೂ ಆಗುವುದಿಲ್ಲವೇ ?

ಬಗೆಯಲ್ದುಷ್ಕೃತನೊರ್ಮೆ ತಾಂ ಶುಭದನಾತ್ಮಂಗೇಕೆನಲ್ಪುಣ್ಯವೃ-
ದ್ಧಿಗೆ ತಾಂ ಮುಂದನುಬಂಧನಾದ ಕತದಿಂ ಪುಣ್ಯಂ ಸುಪುಣ್ಯಾನುಬಂ-॥
ಧಿಗೆ ಬಂದಂದದುವುಂ ಶುಭಂ ಸುಕೃತಮುಂ ಪಾಪಾನುಬಂಧಕ್ಕೆ ಮುಂ।
ಪುಗೆ ಪಾಪಕ್ಕನುಬಂಧಿಪಾಪಮಶುಭಂ ರತ್ನಾಕರಾಧೀಶ್ವರಾ ! ॥೩೮॥

ಬಗೆಯಲ್ ದುಷ್ಕೃತಂ ಒರ್ಮೆ ತಾಂ ಶುಭದಂ ಆತ್ಮಂಗೆ, ಏಕೆನಲ್ ಪುಣ್ಯವೃದ್ಧಿಗೆ
ತಾಂ ಮುಂದೆ ಅನುಬಂಧಂ ಆದ ಕತದಿಂ, ಪುಣ್ಯಂ ಸುಪುಣ್ಯಾನುಬಂಧಿಗೆ
ಬಂದಂದು ಅದುವುಂ ಶುಭಂ, ಸುಕೃತಮುಂ ಪಾಪಾನುಬಂಧಕ್ಕೆ
ಮುಂಪುಗೆ, ಪಾಪಕ್ಕೆ ಅನುಬಂಧಿ ಪಾಪಂ ಅಶುಭಂ ರತ್ನಾಕರಾಧೀಶ್ವರಾ !

ಬಗೆಯಲ್–ಯೋಚಿಸಿನೋಡಿದರೆ, ದುಷ್ಕೃತಂ ಒರ್ಮೆ–ಒಂದು ಕಾಲದಲ್ಲಿ ಪಾಪವು, ತಾಂ ಶುಭದಂ ಆತ್ಮಂಗೆ–ತಾನು ಆತ್ಮನಿಗೆ ಶುಭವನ್ನು ಕೊಡುವುದಾಗಿದೆ, ಏಕೆ ಎನಲ್–ಏಕೆಂದರೆ, ಪುಣ್ಯ ವೃದ್ಧಿಗೆ ತಾಂ ಮುಂದೆ ಅನುಬಂಧಂ ಆದ ಕತದಿಂ–ಅದು ಮುಂದೆ ಪುಣ್ಯದ ವೃದ್ಧಿಗೆ ಸಂಬಂಧವಾದ ಕಾರಣವಾಗಿರುವುದರಿಂದ, ಪುಣ್ಯಂ–ಪುಣ್ಯವು, ಸುಪುಣ್ಯಾನುಬಂಧಿಗೆ ಬಂದಂದು - ಪುಣ್ಯಬಂಧನಕ್ಕೆ ಕಾರಣವಾದಾಗ, ಅದುವುಂ ಶುಭಂ–ಅದೂ ಮಂಗಳಕರವು, ಸುಕೃತಮುಂ-ಪುಣ್ಯವು, ಪಾಪಾನು ಬಂಧಕ್ಕೆ-ಪಾಪಬಂಧಕ್ಕೆ, ಮುಂಪುಗೆ-ಮುಂದಾದರೆ, (ಹಾಗೂ) ಪಾಪಕ್ಕೆ–ಪಾಪಬಂಧಕ್ಕೆ, ಅನುಬಂಧಿ-ಕಾರಣವಾದ, ಪಾಪಂ--ಪಾಪವು, ಅಶುಭಂ–ಅಮಂಗಳಕರವು, ರತ್ನಾಕರಾಧೀಶ್ವರಾ !

ಪುಣ್ಯಕ್ಕೆ ಕಾರಣವಾಗಬಹುದಾದ ಪಾಪವೂ ಶ್ರೇಯಸ್ಕರವಾದುದು. ಪುಣ್ಯಬಂಧಕ್ಕೆ ಕಾರಣ ವಾಗಬಹುದಾದ ಶುಭಕರ್ಮಗಳೆಲ್ಲವೂ ಮಂಗಳಕರವು. ಪಾಪಬಂಧಕ್ಕೆ ಪ್ರೇರಕವಾಗುವ ಪುಣ್ಯ ಚರಿತವೂ ಅಮಂಗಳಕರವೇ. ಹೀಗೆಯೆ ಪಾಪಬಂಧಕ್ಕೆ ಕಾರಣವಾಗುವ ಪಾಪಪ್ರವೃತ್ತಿಗಳು ಅಮಂಗಳಕರವೆಂದು ಬೇರೆ ಹೇಳಬೇಕೆ ?

ಅದು ತಾನೆಂತೆನೆ ಮುನ್ನಗೆಯ್ದ ದುರಿತಂ ದಾರಿದ್ರ್ಯದೊಳ್ತಳ್ತೊಡಂ ।
ಸದಯಾಮೂಲಮತಕ್ಕೆ ಸಂದು ನಡೆವಂ ಮುಂದೆಯ್ದುವಂ ಪುಣ್ಯಸಂ ॥
ಪದಮುಂ ತಾಂ ಸುಕೃತಾನುಬಂಧಿದುರಿತಂ ತನ್ನಿರ್ಧನಂ ಮಿಥ್ಯೆಯೊ-
ಳ್ಪುದಿಯಲ್ತಾಂ ದುರಿತಾನುಬಂಧಿದುರಿತಂ ರತ್ನಾಕರಾಧೀಶ್ವರಾ ! ॥೩೯॥

ಅದು ತಾನೆಂತೆನೆ ಮುನ್ನಗೆಯ್ದ ದುರಿತಂ ದಾರಿದ್ರ್ಯದೊಳ್ ತಳ್ತೊಡಂ,
ಸದಯಾಮೂಲಮತಕ್ಕೆ ಸಂದು ನಡೆವಂ ಮುಂದೆ ಎಯ್ದುವಂ ಪುಣ್ಯಸಂಪದಮುಂ,
ತಾಂ ಸುಕೃತಾನುಬಂಧಿದುರಿತಂ, ತನ್ನಿರ್ಧನಂ ಮಿಥ್ಯೆಯೊಳ್
ಪುದಿಯಲ್ ತಾಂ ದುರಿತಾನುಬಂಧಿದುರಿತಂ ರತ್ನಾಕರಾಧೀಶ್ವರಾ !

ಅದು ತಾನ್ ಎಂತೆನೆ-ಅದು ಹೇಗೆಂದರೆ, ಮುನ್ನಗೆಯ್ದ-ಹಿಂದೆ (ಪೂರ್ವಜನ್ಮದಲ್ಲಿ) ಮಾಡಿದ, ದುರಿತಂ-ಪಾಪವು, ದಾರಿದ್ರ್ಯದೊಳ್-ಬಡತನದಲ್ಲಿ, ತಳ್ತೊಡಂ – ಸೇರಿಸಿದರೂ, ಸದಯಾಮೂಲ ಮತಕ್ಕೆ-ಅಹಿಂಸಾಧರ್ಮಮತಕ್ಕೆ, ಸಂದು - ಸೇರಿ, ನಡೆವಂ – ನೆಡೆಯುವವನು, ಮುಂದೆ, ಪುಣ್ಯ ಸಂಪದಮುಂ–ಪುಣ್ಯಸಂಪತ್ತನ್ನು, ಎಯ್ದುವಂ–ಹೊಂದುವನು ! ತಾಂ – ಅದು, ಸುಕೃತಾನುಬಂಧಿ ದುರಿತಂ-ಸುಕೃತಾನುಬಂಧಿದುರಿತವು, ತತ್‌ನಿರ್ಧನಂ–ಆ ದರಿದ್ರನು, ಮಿಥ್ಯೆಯೊಳ್ ಪುದಿಯಲ್- ಮಿಥ್ಯಾತ್ವದಲ್ಲಿ ತೊಡಗಲು, ತಾಂ–ಅದು, ದುರಿತಾನುಬಂಧಿದುರಿತಂ–ದುರಿತಾನುಬಂಧಿದುರಿತವು. ರತ್ನಾಕರಾಧೀಶ್ವರಾ !

ಹಿಂದಿನ ಜನ್ಮದಲ್ಲಿ ಮಾಡಿದ ಪಾಪದ ಫಲವಾಗಿ ಈ ಜನ್ಮದಲ್ಲಿ ಬಡವನಾಗಿ ಹುಟ್ಟಿ ಬಡತನದ ಬೇಗೆಯನ್ನು ಅನುಭವಿಸಿದರೂ, ಅಹಿಂಸಾ ಧರ್ಮವನ್ನು ನಿಷ್ಠೆಯಿಂದ ಅನುಸರಿಸಿದರೆ ಅದರ ಫಲವಾಗಿ ಪುಣ್ಯಬಂಧನವಾಗುವುದು. ಇದನ್ನು "ಸುಕೃತಾನುಬಂಧಿದುರಿತ" ವೆನ್ನುವರು. ಇದು ಬಿಟ್ಟು ಹಿಂದಿನ ಜನ್ಮದಲ್ಲಿ ತಾನು ಮಾಡಿದ ಪಾಪವು ಸಾಲದೆನ್ನುವ ಹಾಗೆ ಈ ಜನ್ಮದಲ್ಲಿಯೂ ಬಡತನದಲ್ಲಿ ತೊಳಲುತ್ತಿದ್ದರೂ ದುರ್ಮಾರ್ಗಿಯಾಗಿ ಪಾಪಸಂಚಯಮಾಡಿಕೊಂಡರೆ ಅದನ್ನು "ದುರಿತಾನುಬಂಧಿ ದುರಿತವೆನ್ನುವರು."

ಪಡೆವಂ ಪೂರ್ವದ ಪುಣ್ಯದಿಂ ಸಿರಿಯನಾತಂ ಶ್ರೀದಯಾಮೂಲದೊ–
ಳ್ನಡೆವಂ ತಾಂ ಸುಕೃತಾನುಬಂಧಿಸುಕೃತಂ ಮತ್ತಾಧನಾಢ್ಯಂ ಗುಣಂ–
ಗಿಡೆ ಮಿಥ್ಯಾಮತದಲ್ಲಿ ವರ್ತಿಪನವಂ ಮುಂದೆಯ್ದುವಂ ದುಃಖಮಂ ।
ನುಡಿಯಲ್ತಾಂ ದುರಿತಾನುಬಂಧಿಸುಕೃತಂ ರತ್ನಾಕರಾಧೀಶ್ವರಾ ! ॥೪೦॥

ಪಡೆವಂ ಪೂರ್ವದ ಪುಣ್ಯದಿಂ ಸಿರಿಯಂ ಆತಂ ಶ್ರೀದಯಾಮೂಲದೊಳ್ ನಡೆವಂ,
ತಾಂ ಸುಕೃತಾನುಬಂಧಿಸುಕೃತಂ, ಮತ್ತೆ ಆ ಧನಾಢ್ಯಂ ಗುಣಂಕಿಡೆ
ಮಿಥ್ಯಾಮತದಲ್ಲಿ ವರ್ತಿಪನ್, ಅವಂ ಮುಂದೆಯ್ದುವಂ ದುಃಖಮಂ
ನುಡಿಯಲ್ ತಾಂ ದುರಿತಾನುಬಂಧಿ ಸುಕೃತಂ ರತ್ನಾಕರಾಧೀಶ್ವರಾ !

ಪೂರ್ವದ ಪುಣ್ಯದಿಂ – ಪೂರ್ವಜನ್ಮದ ಪುಣ್ಯದಿಂದ, ಸಿರಿಯಂ – ಸಂಪತ್ತನ್ನು, ಪಡೆವಂ– ಪಡೆಯುತ್ತಾನೆ, ಆತಂ-ಅಂಥಹವನು, ಶ್ರೀ ದಯಾಮೂಲದೊಳ್-ಶ್ರೇಷ್ಠವಾದ ಅಹಿಂಸಾಧರ್ಮದಲ್ಲಿ, ನಡೆವಂ–ತೊಡಗುತ್ತಾನೆ, ತಾಂ ಸುಕೃತಾನುಬಂಧಿಸುಕೃತಂ – ಅದು ಸುಕೃತಾನುಬಂಧಿಸುಕೃತವು, ಮತ್ತೆ–ಇದುಬಿಟ್ಟು, ಆ ಧನಾಢ್ಯಂ–ಆ ಶ್ರೀಮಂತನು, ಗುಣಂಕಿಡೆ–ಗುಣಹೀನನಾಗಿ, ಮಿಥ್ಯಾಮತ ದಲ್ಲಿ ವರ್ತಿಪನ್–ಮಿಥ್ಯಾಮತದಲ್ಲಿ ನಡೆಯುತ್ತಾನೆ, ಅವಂ–ಅವನು, ಮುಂದೆ ಎಯ್ದುವಂ ದುಃಖಮಂ-ಮುಂದೆ ದುಃಖವನ್ನು ಹೊಂದುವನು, ನುಡಿಯಲ್ ತಾಂ ದುರಿತಾನುಬಂಧಿ ಸುಕೃತಂ– ಅದನ್ನು ದುರಿತಾನುಬಂಧಿಸುಕೃತವೆಂದೇ ಹೇಳಬೇಕು.

ಪೂರ್ವಜನ್ಮದ ಪುಣ್ಯಪ್ರಭಾವದಿಂದ ಧನಿಕನಾಗಿದ್ದರೂ ಶ್ರೇಷ್ಠವಾದ ಅಹಿಂಸಾಧರ್ಮಾಚರಣೆಯನ್ನು ಈ ಜನ್ಮದಲ್ಲಿಯೂ ಮುಂದುವರಿಸಿಕೊಂಡುಹೋದರೆ ಅದನ್ನು "ಸುಕೃತಾನುಬಂಧಿಸುಕೃತ" ವೆನ್ನುವರು. ಇದುಬಿಟ್ಟು ಆ ಶ್ರೀಮಂತನು ಗುಣಹೀನನಾಗಿ ಮಿಥ್ಯಾದೃಷ್ಟಿಯಾದರೆ ಮುಂದೆ ದುಃಖಿಯಾಗದಿರನು. ಇದಕ್ಕೆ "ದುರಿತಾನುಬಂಧಿಸುಕೃತ" ವೆನ್ನುವರು.

ಅಘಪುಣ್ಯಂಗಳನಿಷ್ಟಮೆಂದು ಬಳಿಕಂ ಲೇಸೆಂದೆನೇಕೆಂದೊಡಂ |
ಗಘಟಂಬೊಕ್ಕ ಮನಂ ಸುಧರ್ಮಕೆ ಪುಗಲ್ಮುನ್ನಾದ ಪಾಪಂ ಕ್ರಮಂ ||
ಲಘುವಕ್ಕುಂ ಸುಕೃತಂ ಕ್ರಮಂಬಿಡಿದು ಭೋಗಪ್ರಾಪ್ತಿಯಿಂ ತೀರ್ದು ಮೂ-
ರ್ತಿಘನಂಬೊಲ್ಬಯಲಾಗಿ ಮುಕ್ತಿವಡೆಗುಂ ರತ್ನಾಕರಾಧೀಶ್ವರಾ ! ||೪೧||

ಅಘಪುಣ್ಯಂಗಳ್ ಅನಿಷ್ಟಮೆಂದು ಬಳಿಕಂ ಲೇಸೆಂದೆನ್, ಏಕೆಂದೊಡೆ
ಅಂಗಘಟಂ ಪೊಕ್ಕಮನಂ ಸುಧರ್ಮಕೆ ಪುಗಲ್, ಮುನ್ನಾದ ಪಾಪಂ
ಕ್ರಮಂ ಲಘುವಕ್ಕುಂ, ಸುಕೃತಂ ಕ್ರಮಂ ಪಿಡಿದು ಭೋಗಪ್ರಾಪ್ತಿಯಿಂ
ತೀರ್ದು, ಮೂರ್ತಿಘನಂಬೊಲ್ ಬಯಲಾಗಿ ಮುಕ್ತಿಪಡೆಗುಂ ರತ್ನಾಕರಾಧೀಶ್ವರಾ !

ಅಘಪುಣ್ಯಂಗಳ್–ಪಾಪಪುಣ್ಯಗಳು, ಅನಿಷ್ಟಮೆಂದು-ಅನಿಷ್ಟವೆಂದು ಹೇಳಿ, ಬಳಿಕಂ-ತರುವಾಯ ಲೇಸು ಎಂದೆನ್–ಒಳ್ಳೆಯುವೆಂದು ಹೇಳಿದೆನು, ಏಕೆಂದೊಡೆ–ಏಕೆಂದರೆ, ಅಂಗಘಟಂ–ಶರೀರವೆಂಬ ಗಡಿಗೆಯನ್ನು, ಪೊಕ್ಕಮನಂ–ಪ್ರವೇಶಮಾಡಿದ ಮನಸ್ಸು, ಸುಧರ್ಮಕೆ–ಶ್ರೇಷ್ಠವಾದ ಧರ್ಮದ ಕಡೆ, ಪುಗಲ್–ಹೋಗಲು, ಮುನ್ನಾದ–ಹಿಂದೆಗಳಿಸಿದ, ಪಾಪಂ–ಪಾಪವು, ಕ್ರಮಂ–ಕ್ರಮೇಣ, ಲಘುವಕ್ಕುಂ–ಕಡಿಮೆಯಾಗುತ್ತದೆ, ಸುಕೃತಂ–ಪುಣ್ಯವು, ಕ್ರಮಂ ಪಿಡಿದು – ಕ್ರಮವಾಗಿ, ಭೋಗ ಪ್ರಾಪ್ತಿಯಿಂ ತೀರ್ದು–ಭೋಗಪ್ರಾಪ್ತಿಯಿಂದ ತೀರಿ, ಮೂರ್ತಿ–ಶರೀರವು, ಘನಂಬೊಲ್–ಮೇಘ ದಂತೆ, ಬಯಲಾಗಿ - ನಾಶವಾಗಿ, ಮುಕ್ತಿಪಡೆಗುಂ – ಜೀವನು ಮುಕ್ತಿಯನ್ನು ಪಡೆಯುವನು, ರತ್ನಾಕರಾಧೀಶ್ವರಾ !

ಪಾಪಪುಣ್ಯಗಳೆರಡೂ ಆತ್ಮವಿಕಾಸಕ್ಕೆ ಅಡ್ಡಿಯೆಂದು ಹಿಂದೆ ಹೇಳಿ ಈಗ ಅವು ಕೆಲವುಸಾರಿ ಅನಿಷ್ಟವಲ್ಲವೆಂದು ಹೇಳಿದೆನು, ಇದಕ್ಕೆ ಕಾರಣವುಂಟು. ಜೀವ ಮಡಿಕೆಯೆಂಬ ಈ ಶರೀರದಲ್ಲಿ ಬಾಧಿತವಾಗಿದ್ದರೂ, ಮನಸ್ಸು ಸುಧರ್ಮದ ಕಡೆ ತಿರುಗಿದರೆ ಹಿಂದೆ ಗಳಿಸಿದ ಪಾಪದ ಗಂಟು ತಾನಾಗಿ ಕರಗುವುದು. ಹಾಗೆಯೇ ಪುಣ್ಯಕರ್ಮವೂ ತನ್ನ ಪ್ರಭಾವವನ್ನು ಬೀರಿ ಭೋಗೋಪಭೋಗಗಳನ್ನಿತ್ತು ಅನಂತರ ಮರೆಯಾಗುವುದು. ಪಾಪಪುಣ್ಯಗಳೆರಡೂ ಹೀಗೆ ತಮ್ಮ ತಮ್ಮ ಫಲಗಳನ್ನಿತ್ತನಂತರ ಮಾಯವಾಗುತ್ತದೆ. ಈ ಕರ್ಮನಿರ್ಜರೆಯಾದ ಕ್ಷಣವೇ ಶರೀರ ಮೋಡದಂತೆ ಬಯಲಾಗಿ ಜೀವಾತ್ಮ ಮುಕ್ತಾತ್ಮನಾಗುವನು.

ಪಡಿಯೇಂ ಜೀವದಯಾಮತಂ ಪರಮಧರ್ಮಂ ತನ್ಮತಂಬೊರ್ದಿ ಮುಂ–
ಗಡೆ ನಿರ್ಗ್ರಂಥರಥಕ್ಕೆ ಸಂದ ಯತಿ ಸೂರ್ಯಂಬೊಲ್ಭವಾಂಭೋಧಿಯಂ ॥
ಕಡುವೇಗಂ ಪರಿಲಂಘಿಪಂ ಸುಕೃತಕೃದ್ಗಾರ್ಹಸ್ಥ್ಯನುಂ ಧರ್ಮದಾ ।
ಪಡಗಿಂ ಮೆಲ್ಲನೆ ದಾಂಟದೇ ಇರನಲಾ ರತ್ನಾಕರಾಧೀಶ್ವರಾ ! ॥೪೨॥

ಪಡಿಯೇಂ ಜೀವದಯಾಮತಂ ಪರಮಧರ್ಮಂ, ತನ್ಮತಂಪೊರ್ದಿ ಮುಂಗಡೆ
ನಿರ್ಗ್ರಂಥರಥಕ್ಕೆ ಸಂದ ಯತಿ, ಸೂರ್ಯಂಬೊಲ್ ಭವಾಂಭೋಧಿಯಂ
ಕಡುವೇಗಂ ಪರಿಲಂಘಿಪಂ, ಸುಕೃತಕೃತ್ ಗಾರ್ಹಸ್ಥ್ಯನುಂ
ಧರ್ಮದ ಆ ಪಡಗಿಂ, ಮೆಲ್ಲನೆ ದಾಂಟದೇ ಇರನಲಾ, ರತ್ನಾಕರಾಧೀಶ್ವರಾ !

ಪಡಿಯೇಂ ಜೀವದಯಾಮತಂ ?–ಜೀವದಯಾಮತಕ್ಕೆ ಸಮಾನವಾದುದಾವುದು ? ಪರಮ ಧರ್ಮಂ–(ಈ ಧರ್ಮವು) ಅತ್ಯಂತ ಶ್ರೇಷ್ಠವಾದ ಧರ್ಮ, ತತ್ ಮತಂಪೊರ್ದಿ-ಆ ಧರ್ಮವನ್ನು ಹೊಂದಿ, ಮುಂಗಡೆ–ಮುಂದೆ, ನಿರ್ಗ್ರಂಥರಥಕ್ಕೆ ಸಂದ–ನಿರ್ಗ್ರಂಥವೆಂಬ ರಥವನ್ನು ಆಶ್ರಯಿಸಿ, ಯತಿ-ಮುನಿಯು, ಸೂರ್ಯಂಬೊಲ್-ಸೂರ್ಯನಂತೆ, ಭವಾಂಭೋಧಿಯಂ–ಸಂಸಾರವೆಂಬ ಸಮುದ್ರವನ್ನು, ಕಡುವೇಗಂ–ಬಹುವೇಗದಿಂದ, ಪರಿಲಂಘಿಪಂ-ದಾಟುತ್ತಾನೆ, ಸುಕೃತಕೃತ್-ಪುಣ್ಯವನ್ನು ಮಾಡುವವನೂ, ಗಾರ್ಹಸ್ಥ್ಯನುಂ–ಉತ್ತಮ ಶ್ರಾವಕನೂ ಆದ ಗೃಹಸ್ಥನೂ, ಧರ್ಮದ ಆ ಪಡಗಿಂ–ಧರ್ಮದ ಆ ಹಡಗಿನಿಂದ, ಮೆಲ್ಲನೆ ದಾಂಟದೇ ಇರನಲಾ-ಮೆಲ್ಲನೆ ದಾಟದೆ ಇರಲಾರನಲ್ಲವೇ ? ರತ್ನಾಕರಾಧೀಶ್ವರಾ !

ಅಹಿಂಸಾಧರ್ಮಕ್ಕಿಂತ ಉತ್ಕೃಷ್ಟ ಧರ್ಮವಿದೆಯೇ ? ತ್ರಿಲೋಕಗಳಲ್ಲಿ ಅತ್ಯಂತ ಶ್ರೇಷ್ಠವಾದ ಧರ್ಮವೆಂದರೆ ಅಹಿಂಸಾಧರ್ಮವೊಂದೇ. ಇಂಥ ಧರ್ಮವನ್ನು ನಂಬಿ ನಡೆದು ಮುಂದೆ ನಿರ್ಗ್ರಂಥ ಪದವಿಯನ್ನು ಹೊಂದಿ, ಆ "ನಿರ್ಗ್ರಂಥರಥ"ವನ್ನೇರಿ ಸೂರ್ಯನಂತೆ ಪ್ರಕಾಶಿಸುವ ಮುನಿಪುಂಗವ, ಸಂಸಾರವೆಂಬ ಈ ಸಾಗರವನ್ನು ಬಹು ಶೀಘ್ರವಾಗಿ ದಾಟುತ್ತಾನೆ. ಉತ್ತಮ ಶ್ರಾವಕನೂ ಸಹ ಅಹಿಂಸಾ ಧರ್ಮಾಚರಣೆಯಿಂದ ಪುಣ್ಯಕರ್ಮಗಳನ್ನು ಆಚರಿಸುತ್ತ ಸದ್ಗೃಹಸ್ಥನಾಗಿ ಬಾಳಿದಾಗ ಧರ್ಮದ ಹಡಗನ್ನೇರಿ ನಿಧಾನವಾಗಿಯಾದರೂ ಸಂಸಾರದಿಂದ ಪಾರಾಗದಿರನು.

ತನುವಂ ಸಂಘದ ಸೇವೆಯೊಳ್ಮನಮುನಾತ್ಮಧ್ಯಾನದಭ್ಯಾಸದೊಳ್
ಧನಮುಂ ದಾನಸುಪೂಜೆಯೊಳ್ದಿನಮುನರ್ಹದ್ಧರ್ಮಕಾರ್ಯಪ್ರವ-||
ರ್ತನೆಯೊಳ್ಪರ್ವವನೊಲ್ದು ನೋಂಪಿಗಳೊಳಿರ್ದಾಯುಷ್ಯಮುಂ ಮೋಕ್ಷಚಿಂ-
ತನೆಯೊಳ್ತೀರ್ಚುವ ಸದ್ಗೃಹಸ್ಥನನಘಂ ರತ್ನಾಕರಾಧೀಶ್ವರಾ ! ||೪೩||

ತನುವಂ ಸಂಘದ ಸೇವೆಯೊಳ್, ಮನಮುಂ ಆತ್ಮಧ್ಯಾನದ ಅಭ್ಯಾಸದೊಳ್, ಧನಮುಂ ದಾನಸುಪೂಜೆಯೊಳ್, ದಿನಮುಂ ಅರ್ಹತ್ ಧರ್ಮಕಾರ್ಯಪ್ರವರ್ತನೆಯೊಳ್, ಪರ್ವವಂ ಒಲ್ದು ನೋಂಪಿಗಳೊಳ್, ಇರ್ದ ಆಯುಷ್ಯಮುಂ ಮೋಕ್ಷ ಚಿಂತನೆಯೊಳ್ ತೀರ್ಚುವ ಸದ್ಗೃಹಸ್ಥಂ ಅನಘಂ, ರತ್ನಾಕರಾಧೀಶ್ವರಾ !

ತನುವಂ–ಶರೀರವನ್ನು, ಸಂಘದ ಸೇವೆಯೊಳ್ ಮುನಿ, ಆರ್ಜಿಕೆ ಮತ್ತು ಶ್ರಾವಕ ಶ್ರಾವಿಕೆಯರ (ಚತುರ್ವಿಧ ಸಂಘ) ಸೇವೆಯಲ್ಲಿಯೂ, ಮನಮುಂ-ಮನಸ್ಸನ್ನು, ಆತ್ಮಧ್ಯಾನದ ಅಭ್ಯಾಸದೊಳ್–ಆತ್ಮಧ್ಯಾನದ ಅಭ್ಯಾಸದಲ್ಲಿಯೂ, ಧನಮುಂ–ಸಂಪತ್ತನ್ನು, ದಾನಸುಪೂಜೆಯೊಳ್–ಶ್ರೇಷ್ಠವಾದ ದಾನ, ಪೂಜೆಗಳಲ್ಲಿಯೂ, ದಿನಮುಂ–ದಿವಸವನ್ನು, ಅರ್ಹತ್ ಧರ್ಮಕಾರ್ಯಪ್ರವರ್ತನೆಯೊಳ್–ಜಿನಧರ್ಮ ಕಾರ್ಯದ ಪ್ರವರ್ತನೆಯಲ್ಲಿಯೂ, ಪರ್ವವಂ - ಪರ್ವದಿನಗಳಲ್ಲಿ, ಒಲ್ದು – ಸಂತೋಷದಿಂದ, ನೋಂಪಿಗಳೊಳ್–ನೋಂಪಿಗಳಲ್ಲಿಯೂ, ಇರ್ದ ಆಯುಷ್ಯಮುಂ–ಇರುವ ಆಯುಷ್ಯವನ್ನು, ಮೋಕ್ಷ ಚಿಂತನೆಯೊಳ್–ಮುಕ್ತಿಯ ಚಿಂತನೆಯಲ್ಲಿಯೂ, ತೀರ್ಚುವ-ಕಳೆಯುವ, ಸದ್ಗೃಹಸ್ಥಂ–ಉತ್ತಮ ಗೃಹಸ್ಥನು, ಅನಘಂ–ಪಾಪರಹಿತನಾಗುವನು.

ಮುನಿ, ಅರ್ಜಿಕೆ, ಶ್ರಾವಕ, ಶ್ರಾವಿಕೆಯರ ಸೇವೆಯಲ್ಲಿ ದೇಹ ಸವೆಸಬೇಕು. ಆತ್ಮಧ್ಯಾನದಲ್ಲಿ ಮನಸ್ಸು ಲೀನವಾಗಬೇಕು. ದಾನ ಪೂಜಾದಿ ಸದ್ಧರ್ಮಕಾರ್ಯಗಳಲ್ಲಿ ಸಂಪತ್ತು ಸದ್ವಿನಿಯೋಗವಾಗಬೇಕು. ದಿನವೆಲ್ಲ ಜಿನಧರ್ಮದ ಪ್ರಸಾರ, ಪ್ರಭಾವನೆಯಲ್ಲಿ ಕಳೆಯಬೇಕು. ಪರ್ವ ದಿನಗಳಲ್ಲಿ ಭಕ್ತಿ ಶ್ರದ್ಧೆಗಳಿಂದ ನೋಂಪಿಗಳನ್ನಾಚರಿಸಬೇಕು. ಇರುವ ಆಯುಷ್ಯದ ಪ್ರತಿಕ್ಷಣವನ್ನೂ ಮೋಕ್ಷಚಿಂತನೆಯಲ್ಲಿ ಕಳೆಯಬೇಕು. ಮೋಕ್ಷಚಿಂತನೆ ಬಾಳಿನ ಉಸಿರಾಟವಾದರೇನೇ ಆತ್ಮೋದ್ಧಾರ ಸಾಧ್ಯ. ಸದ್ಗೃಹಸ್ಥನು ತ್ರಿಕರಣಶುದ್ಧಿಯಿಂದ ಈ ದಿನಚರಿಯನ್ನು ಅನುಸರಿಸಿದರೆ, ಅವನು ಪಾಪರಹಿತನಾಗಿ ಮೋಕ್ಷಮಾರ್ಗದಲ್ಲಿ ತೊಡಗುತ್ತಾನೆ.

ಪುತ್ರೋತ್ಸಾಹದೊಳಕ್ಷರಾದಿ ಸಕಲಪ್ರಾರಂಭದೊಳ್ವ್ಯಾಧಿಯೊಳ್ ।
ಯಾತ್ರಾಸಂಭ್ರಮದೊಳ್ಪ್ರವೇಶದೆಡೆಯೊಳ್ವೈವಾಹದೊಳ್ನೋವಿನೊಳ್ ॥
ಛತ್ರಾಂದೋಳಗೃಹಾದಿಸಿದ್ಧಿಗಳೊಳರ್ಹತ್ಪೂಜೆಯುಂ ಸಂಘಸ-
ತ್ಪಾತ್ರಾರಾಧನೆಯುತ್ತಮೋತ್ತಮವಲಾ ರತ್ನಾಕರಾಧೀಶ್ವರಾ ! ॥೪೪॥

ಪುತ್ರೋತ್ಸಾಹದೊಳ್, ಅಕ್ಷರಾದಿಸಕಲಪ್ರಾರಂಭದೊಳ್, ವ್ಯಾಧಿಯೊಳ್
ಯಾತ್ರಾಸಂಭ್ರಮದೊಳ್, ಪ್ರವೇಶದೆಡೆಯೊಳ್, ವೈವಾಹದೊಳ್, ನೋವಿನೊಳ್,
ಛತ್ರಆಂದೋಳ ಗೃಹಾದಿಸಿದ್ಧಿಗಳೊಳ್, ಅರ್ಹತ್ ಪೂಜೆಯುಂ ಸಂಘ
ಸತ್ಪಾತ್ರಾರಾಧನೆಯು ಉತ್ತಮೋತ್ತಮವಲಾ ರತ್ನಾಕರಾಧೀಶ್ವರಾ !

ಪುತ್ರೋತ್ಸಾಹದೊಳ್ – ಪುತ್ರೋತ್ಸವದಲ್ಲಿಯೂ (ಮಗ ಹುಟ್ಟಿದಾಗ), ಅಕ್ಷರಾದಿ ಸಕಲ ಪ್ರಾರಂಭದೊಳ್–ಅಕ್ಷರಾಭ್ಯಾಸ ಮೊದಲಾದ ಕಾರ್ಯಗಳ ಪ್ರಾರಂಭದಲ್ಲಿಯೂ, ವ್ಯಾಧಿಯೊಳ್–ರೋಗದಲ್ಲಿಯೂ, ಯಾತ್ರಾಸಂಭ್ರಮದೊಳ್–ಯಾತ್ರೆಗೆ ಹೋಗುವ ಸಂಭ್ರಮದಲ್ಲಿಯೂ, ಪ್ರವೇಶ ದೆಡೆಯೊಳ್–ಗೃಹ ಮೊದಲಾದವುಗಳ ಪ್ರವೇಶಕಾಲದಲ್ಲಿಯೂ, ವೈವಾಹದೊಳ್–ವಿವಾಹ ಕಾಲ ದಲ್ಲಿಯೂ, ನೋವಿನೊಳ್–ಸಂಕಟದ ಸಮಯದಲ್ಲಿಯೂ, ಛತ್ರ ಆಂದೋಳ ಗೃಹಾದಿ ಸಿದ್ಧಿಗಳೊಳ್–ಛತ್ರ, ತೊಟ್ಟಿಲು, ಮನೆ ಮೊದಲಾದವುಗಳ ಸಿದ್ಧಿಯ ಕಾಲಗಳಲ್ಲಿಯೂ, ಅರ್ಹತ್ ಪೂಜೆಯುಂ–ಅರಹಂತರ ಪೂಜೆಯೂ, ಸಂಘ ಸತ್ಪಾತ್ರಾರಾಧನೆಯು–ಸಂಘಸೇವೆಯೂ ಸತ್ಪಾತ್ರಸೇವೆಯೂ, ಉತ್ತಮೋತ್ತಮವಲಾ–ಬಹಳ ಶ್ರೇಷ್ಠವಲ್ಲವೇ ? ರತ್ನಾಕರಾಧೀಶ್ವರಾ !

ಮಕ್ಕಳಾದಾಗ, ಅವುಗಳಿಗೆ ಅಕ್ಷರಾಭ್ಯಾಸ ಮುಂತಾದುವನ್ನು ಪ್ರಾರಂಭಿಸುವಾಗ, ರೋಗಪೀಡಿತ ರಾದಾಗ, ಯಾತ್ರಾಸಂಭ್ರಮದಲ್ಲಿ, ವಿವಾಹ ಸಮಯದಲ್ಲಿ, ಸಂಕಟಬಂದಾಗ, ನೂತನ ಛತ್ರ, ತೊಟ್ಟಿಲಿಡುವುದು, ಗೃಹ ಇವುಗಳ ಪ್ರವೇಶಕಾಲದಲ್ಲಿ, ಯಾವುದಾದರೂ ಸಿದ್ಧಿಮಾಡಿಸುವಾಗ, ಅರಹಂತರ ಪೂಜೆ, ಸಂಘಸೇವೆ, ಸತ್ಪಾತ್ರದಾನ ಇವುಗಳು ಪರಮೋತ್ಕೃಷ್ಟವಾದುವು. (ಸಂಘಸೇವೆ–ಮುನಿ, ಆರ್ಜಿಕೆ, ಶ್ರಾವಕ ಮತ್ತು ಶ್ರಾವಿಕೆಯರ ಸೇವೆ–ಶ್ರಮಣ ಸಂಘದ ಸೇವೆ).

ಆಹಾರಾಭಯವೈದ್ಯಶಾಸ್ತ್ರಮೆನೆ ಚಾತುರ್ದಾನದಿಂ ಸೌಖ್ಯಸಂ-
ದೋಹಂ ಶ್ರೀಶಿಲೆ ಲೇಪ್ಯ ಕಾಂಸ್ಯ ರಜತಾಷ್ಟಾಪಾದ ರತ್ನಂಗಳಿಂ ||
ದೇಹಾರಂ ಗೆಯಲಂಗಸೌಂದರಬಲಂ ತಚ್ಚೈತ್ಯಗೇಹಪ್ರತಿ-
ಷ್ಠಾಹರ್ಷಂ ಗೆಯೆ ಮುಕ್ತಿಸಂಪದವಲಾ ರತ್ನಾಕರಾಧೀಶ್ವರಾ ! ||೪೫||

ಆಹಾರ ಅಭಯ ವೈದ್ಯ ಶಾಸ್ತ್ರಂ ಎನೆ, ಚಾತುರ್ದಾನದಿಂ ಸೌಖ್ಯಸಂದೋಹಂ,
ಶ್ರೀಶಿಲೆ ಲೇಪ್ಯ ಕಾಂಸ್ಯ ರಜತ ಅಷ್ಟಾಪಾದ ರತ್ನಂಗಳಿಂ ದೇಹಾರಂ
ಗೆಯಲ್ ಅಂಗ ಸೌಂದರಬಲಂ, ತತ್‌ಚೈತ್ಯಗೇಹಪ್ರತಿಷ್ಠಾಹರ್ಷಂ
ಗೆಯೆ ಮುಕ್ತಿಸಂಪದವಲಾ ರತ್ನಾಕರಾಧೀಶ್ವರಾ !

ಆಹಾರ ಅಭಯ ವೈದ್ಯ ಶಾಸ್ತ್ರಂ ಎನೆ-ಆಹಾರ, ಅಭಯ, ಭೈಷಜ್ಯ (ಭೈಷಜ್ಯ-ಔಷಧೋಪಚಾರ) ಶಾಸ್ತ್ರಗಳೆಂಬ, ಚಾತುರ್ದಾನದಿಂ-ನಾಲ್ಕು ದಾನಾದಿಗಳಿಂದ, ಸೌಖ್ಯಸಂದೋಹಂ-ಸುಖಸಮೂಹವೂ (ಪುಣ್ಯಪ್ರಾಪ್ತಿಯೂ) ಶ್ರೀಶಿಲೆ-ಕಾಂತಿಯುಕ್ತವಾದಕಲ್ಲು, ಲೇಪ್ಯ-ಲೆಪ್ಪ, ಕಾಂಸ್ಯ-ಕಂಚು, ರಜತ-ಬೆಳ್ಳಿ, ಅಷ್ಟಾಪಾದ-ಬಂಗಾರ, ರತ್ನಂಗಳಿಂ-ರತ್ನ ಇವುಗಳಿಂದ, ದೇಹಾರಂ-ದೇವಾಲಯವನ್ನು, ಗೆಯಲ್-ಮಾಡಿಸಿದರೆ, ಅಂಗಸೌಂದರ ಬಲಂ-ಶರೀರ ಸೌಂದರ್ಯವೂ ಶಕ್ತಿಯೂ, ತತ್-ಆ, ಚೈತ್ಯಗೇಹ-ದೇವಾಲಯದಲ್ಲಿ, ಪ್ರತಿಷ್ಠಾಹರ್ಷಂಗೆಯೆ-ಸಂತೋಷವಾಗಿ ಬಿಂಬಪ್ರತಿಷ್ಠೆಯನ್ನು ಮಾಡಿಸಿದರೆ, ಮುಕ್ತಿಸಂಪದವಲಾ-ಮೋಕ್ಷಸಂಪತ್ತು ಉಂಟಾಗುವುದಿಲ್ಲವೇ ! ರತ್ನಾಕರಾಧೀಶ್ವರಾ !

ಆಹಾರದಾನ, ಅಭಯದಾನ (ಆಪತ್ತಿನಲ್ಲಿದ್ದವರಿಗೆ ಅಭಯನೀಡುವುದು) ರೋಗಪೀಡಿತರಾದವರಿಗೆ ಔಷಧೋಪಚಾರಮಾಡುವುದು, ಶಾಸ್ತ್ರಾಭ್ಯಾಸ ಮಾಡುವವರಿಗೆ ಉತ್ತಮ ಪುಸ್ತಕಗಳನ್ನು ಕೊಡುವುದು ಈ ನಾಲ್ಕು ತರಹದ ದಾನಗಳಿಂದ ಸದ್ಗೃಹಸ್ಥನು ಸೌಖ್ಯಸಂಪದವನ್ನು ಪಡೆಯುತ್ತಾನೆ. ಕಾಂತಿಯುಕ್ತವಾದ ಶಿಲೆ, ಲೆಪ್ಪ, ಕಂಚು, ಬೆಳ್ಳಿ, ಚಿನ್ನ ಮತ್ತು ರತ್ನಗಳಿಂದ ದೇವಾಲಯವನ್ನು ಕಟ್ಟಿಸಿದರೆ ಶರೀರ ಸೌಂದರ್ಯವು ಹೆಚ್ಚಿ ದೃಢಕಾಯನಾಗುವನು. ಆ ದೇಗುಲಗಳಲ್ಲಿ ಭಕ್ತಿ ಶ್ರದ್ಧೆಗಳಿಂದ ಜಿನಬಿಂಬವನ್ನು ಪ್ರತಿಷ್ಠಾಪಿಸಿದರೆ ಆ ಶ್ರಾವಕನಿಗೆ ಮುಂದೆ ಮೋಕ್ಷಪ್ರಾಪ್ತಿಯಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

ಪಿಡಿದೊಲ್ದರ್ಚಿಸೆ ನೋನೆ ದಾನವನಲಂಪಿಂ ಮಾಡೆ ತತ್ಪುಣ್ಯದಿಂ ।
ಕುಡುಗುಂ ನಿಮ್ಮಯ ಧರ್ಮವೊಂದೆ ನೃಪರೊಳ್ಪಂ ಭೋಗಭೂಲಕ್ಷ್ಮಿಯುಂ ॥
ಬಿಡುಗಣ್ಣೈಸಿರಿಯಂ ಬಳಿಕ್ಕೆ ಸುಕೃತಂ ಭೋಗಂಗಳೊಳ್ತೀರ್ದೊಡಂ ।
ಕುಡುಗುಂ ಮುಕ್ತಿಯನಿಂತದಾರ್ಕುಡುವರೋ ರತ್ನಾಕರಾಧೀಶ್ವರಾ ! ॥೪೬॥

ಪಿಡಿದು ಒಲ್ದು ಅರ್ಚಿಸೆ ನೋನೆ ದಾನವಂ ಅಲಂಪಿಂ ಮಾಡೆ, ತತ್ ಪುಣ್ಯದಿಂ
ಕುಡುಗುಂ ನಿಮ್ಮಯ ಧರ್ಮಂ ಒಂದೆ, ನೃಪರ ಒಳ್ಪಂ ಭೋಗಭೂಲಕ್ಷ್ಮಿಯುಂ
ಬಿಡುಗಣ್ಣ ಐಸಿರಿಯಂ, ಬಳಿಕ್ಕೆ ಸುಕೃತಂ ಭೋಗಂಗಳೊಳ್ ತೀರ್ದೊಡಂ,
ಕುಡುಗುಂ ಮುಕ್ತಿಯಂ, ಇಂತು ಅದಾರ್ ಕುಡುವರೋ ರತ್ನಾಕರಾಧೀಶ್ವರಾ !

ಪಿಡಿದು ಒಲ್ದು ಅರ್ಚಿಸೆ-ಪ್ರೀತಿಯಿಂದ ಪೂಜಿಸಲು, ನೋನೆ-ವ್ರತವನ್ನು ಮಾಡಲು, ದಾನವಂ ಅಲಂಪಿಂ ಮಾಡೆ-ಸಂತೋಷದಿಂದ ದಾನವನ್ನು ಮಾಡಲು, ತತ್ ಪುಣ್ಯದಿಂ-ಆ ಪುಣ್ಯದಿಂದ, ನಿಮ್ಮಯ ಧರ್ಮಂ ಒಂದೆ-ನಿಮ್ಮ ಧರ್ಮವೊಂದೇ, ಕುಡುಗುಂ-ಕೊಡುವುದು (ಏನನ್ನು ?) ನೃಪರ ಒಳ್ಪಂ-ರಾಜಸಂಪತ್ತನ್ನೂ, ಭೋಗಭೂಲಕ್ಷ್ಮಿಯುಂ-ಭೋಗ, ಭೂಮಿ, ಸಂಪತ್ತನ್ನೂ, ಬಿಡುಗಣ್ಣ ಐಸಿರಿಯಂ-ದೇವಸಂಪತ್ತನ್ನೂ (ಕೊಡುವುದು)ಬಳಿಕ್ಕೆ-ತರುವಾಯ, ಸುಕೃತಂ-ಪುಣ್ಯವು, ಭೋಗಂಗಳೊಳ್ ತೀರ್ದೊಡಂ-ಭೋಗಗಳಲ್ಲಿ ತೀರಿಹೋದರೂ. ಮುಕ್ತಿಯುಂ ಕುಡುಗುಂ-ಮುಕ್ತಿಯನ್ನು ಕೊಡುವುದು, ಇಂತು-ಈ ರೀತಿಯಾಗಿ, ಅದಾರ್-ಇನ್ಯಾರು, ಕುಡುವರೋ-ಕೊಡುತ್ತಾರೋ ! ರತ್ನಾಕರಾಧೀಶ್ವರಾ !

ಜಿನೇಂದ್ರನನ್ನು ಎಡೆಬಿಡದೆ ಪ್ರೀತಿಯಿಂದ ಭಕ್ತಿಶ್ರದ್ಧೆಗಳಿಂದ ಪೂಜಿಸಿದರೆ, ನೋಂಪಿಗಳನ್ನಾಚರಿಸಿದರೆ, ಸಂತೋಷದಿಂದ ಸತ್ಪಾತ್ರದಾನಮಾಡಿದರೆ, ಅದರ ಪುಣ್ಯಪ್ರಭಾವದಿಂದ ರಾಜಸಂಪತ್ತು, ಅತುಲೈಶ್ವರ್ಯ, ಭೋಗಭೂಮಿಯ ಸಂಪದ, ಅಮರಲೋಕದ ಅಷ್ಟೈಶ್ವರ್ಯ ಇವೆಲ್ಲವೂ ಪ್ರಾಪ್ತವಾಗುವುದು. ಇದು ಜಿನಧರ್ಮವನ್ನು ನಂಬಿನಡೆದರೆ ಆಗುವ ಲಾಭ ! ಆ ಧರ್ಮ ತನ್ನನ್ನು ನಂಬಿ ನಡೆದವರಿಗೆ ಏನನ್ನುತಾನೆ ಕೊಡುವುದಿಲ್ಲ ; ಈ ಪುಣ್ಯಸಂಪತ್ತನ್ನೆಲ್ಲ ಭೋಗಿಸಿದ ನಂತರವೂ ಈ ಜಿನಧರ್ಮ ಆ ಧರ್ಮಾನುರಾಗಿಗಳಿಗೆ ಮೋಕ್ಷಸಾಮ್ರಾಜ್ಯವನ್ನು ಕರುಣಿಸುವುದು. ಇಷ್ಟೊಂದು ಕೃಪೆಯನ್ನು ಜಿನಧರ್ಮವಲ್ಲದೆ ಮತ್ತಾವ ಧರ್ಮ ಕೊಡಲು ಸಾಧ್ಯ !

ಪುಣ್ಯಂಗೆಯ್ಯದೆ ಪೂರ್ವದೊಳ್ಬರಿದೆ ತಾನೀಗಳ್ಮನಂ ನೋಡೆ ಲಾ-
ವಣ್ಯಕ್ಕಾಭರಣಕ್ಕೆ ಭೋಗಕೆನಸುಂ ರಾಗಕ್ಕೆ ಚಾಗಕ್ಕೆ ತಾ-||
ರುಣ್ಯಕ್ಕಗ್ಗದ ಲಕ್ಷ್ಮಿಗಂ ಬಯಸಿ ಬಾಯಂ ಬಿಟ್ಟು ಕಾಂಕ್ಷಾಮಹಾ |
ರಣ್ಯಂಬೊಕ್ಕಕಟೇಕೆ ಚಿಂತಿಸುವುದೋ ! ರತ್ನಾಕರಾಧೀಶ್ವರಾ ! ||೪೭||

ಪುಣ್ಯಂಗೆಯ್ಯದೆ ಪೂರ್ವದೊಳ್ ಬರಿದೆ ತಾನ್ ಈಗಳ್ ಮನಂ ನೋಡೆ,
ಲಾವಣ್ಯಕ್ಕೆ ಆಭರಣಕ್ಕೆ ಭೋಗಕೆ ಎನಸುಂ ರಾಗಕ್ಕೆ ಚಾಗಕ್ಕೆ ತಾರುಣ್ಯಕ್ಕೆ,
ಅಗ್ಗದ ಲಕ್ಷ್ಮಿಗಂ ಬಯಸಿ ಬಾಯಂಬಿಟ್ಟು, ಕಾಂಕ್ಷಾಮಹಾರಣ್ಯಂ
ಪೊಕ್ಕು, ಅಕಟ ಏಕೆ ಚಿಂತಿಸುವುದೋ ರತ್ನಾಕರಾಧೀಶ್ವರಾ !

ಪುಣ್ಯಂಗೆಯ್ಯದೆ ಪೂರ್ವದೊಳ್–ಹಿಂದಿನ ಜನ್ಮದಲ್ಲಿ ಪುಣ್ಯಕಾರ್ಯವನ್ನು ಮಾಡದೆ, ಬರಿದೆ–ವ್ಯರ್ಥವಾಗಿ, ತಾನ್ ಈಗಳ್–ತಾನೀಗ, ಮನಂನೋಡೆ–ಪಂಚೇಂದ್ರಿಯಗಳಕಡೆ ನೋಡಿ, ಲಾವಣ್ಯಕ್ಕೆ–ಸೊಬಗು ಸೌಂದರ್ಯಕ್ಕೆ, ಆಭರಣಕ್ಕೆ – ಆಭರಣಗಳಿಗೆ, ಭೋಗಕೆ – ಭೋಗೋಪಭೋಗಗಳಿಗೆ, ಎನಸುಂ–ಬಹಳ (ಚೆನ್ನಾದ), ರಾಗಕ್ಕೆ–ಸಂತೋಷಕ್ಕೆ. ಚಾಗಕ್ಕೆ–ದಾನಕ್ಕೆ, ತಾರುಣ್ಯಕ್ಕೆ–ಯೌವನಕ್ಕೆ, ಅಗ್ಗದ ಲಕ್ಷ್ಮಿಗಂ–ಶ್ರೇಷ್ಠವಾದ ಸಂಪತ್ತಿಗೆ, ಬಯಸಿ–ಆಸೆಪಟ್ಟು, ಬಾಯಂಬಿಟ್ಟು–ಬಾಯಿಬಿಟ್ಟು, ಕಾಂಕ್ಷಾಮಹಾರಣ್ಯಂ-ಆಸೆಯೆಂಬ ದೊಡ್ಡಕಾಡನ್ನು, ಪೊಕ್ಕು–ಪ್ರವೇಶಿಸಿ, ಅಕಟ-ಅಯ್ಯೋ, ಏಕೆ ಚಿಂತಿಸುವುದೋ–ಏತಕ್ಕೆ ಚಿಂತಿಸುವುದೋ! ರತ್ನಾಕರಾಧೀಶ್ವರಾ !

ಹಿಂದಿನ ಜನ್ಮಗಳಲ್ಲಿ ಏನೂ ಪುಣ್ಯಕಾರ್ಯಗಳನ್ನು ಮಾಡದೆ, ಈ ಜನ್ಮದಲ್ಲಿ ಸೌಂದರ್ಯ ಸೊಬಗುಗಳಿಗೆ, ಆಭರಣಗಳಿಗೆ, ಭೋಗೋಪಭೋಗಗಳಿಗೆ, ಸಂತೋಷಮಯವಾದ ವಾತಾವರಣಕ್ಕೆ, ಕೊಡುಗೈದಾಸಿಯಾಗಿ ಬಾಳುವುದಕ್ಕೆ, ಚಿರಂತನ ಯೌವನಕ್ಕೆ, ಅತುಲೈಶ್ವರ್ಯಕ್ಕೆ ಬಯಸಿ ಬಯಸಿ ಬಾಯಿ ಬಾಯಿ ಬಿಟ್ಟು ಬಯಕೆಯ ಗೊಂಡಾರಣ್ಯದಲ್ಲಿ ತೊಳಲಾಡಿ ಏಕೆ ಚಿಂತಿಸುವರೋ? ಬರೀ ಚಿಂತನೆಯಿಂದ ಮನಸ್ಸಿನ ಶಾಂತಿಯನ್ನು ಇನ್ನಷ್ಟು ಕೆಡಿಸಿಕೊಳ್ಳಬಹುದೇ ವಿನಹ ಇನ್ನೇನು ಪ್ರಯೋಜನವಾಗುವುದಿಲ್ಲ. ಇದರ ಬದಲು ಮುಂದಿನ ಜನ್ಮಕ್ಕಾದರೂ ಈಗಲೇ ಪುಣ್ಯದ ಬುತ್ತಿಯನ್ನು ಕಟ್ಟಿಕೊಳ್ಳುವ ಪ್ರಯತ್ನ ಮಾಡುವುದು ಒಳಿತು.

ಆರಿತ್ತಾರ್ಕಳೆದರ್ದರಿದ್ರಮನದಾವಂಗಾವನೇನೊಂದು ಸ-
ತ್ಕಾರಂಗೆಯ್ಯದೆ ಭಾಗ್ಯಮಂ ಕಿಡಿಸಿದಂ ಪೂರ್ವಾರ್ಜಿತಪ್ರಾಪ್ತಿಯಿಂ
ದಾರಿದ್ರ್ಯಂ ಧನಮೆಂಬೆರಳ್ಸಮನಿಕುಂ ಮತ್ತೇಕೆ ಧೀರತ್ವಮಂ
ದೂರಂ ಮಾಡಿ ಮನಂ ಸದಾ ಕುದಿವುದೋ ರತ್ನಾಕರಾಧೀಶ್ವರಾ ! ||೪೮||

ಆರಿತ್ತು ಆರ್ ಕಳೆದರ್ ದರಿದ್ರಮಂ ಅದಾವಂಗೆ, ಆವಂ ಏನೊಂದು
ಸತ್ಕಾರಂಗೆಯ್ಯದೆ ಭಾಗ್ಯಮಂ ಕಿಡಿಸಿದಂ, ಪೂರ್ವಾರ್ಜಿತ ಪ್ರಾಪ್ತಿಯಿಂ
ದಾರಿದ್ರ್ಯಂ ಧನಂ ಎಂಬ ಎರಳ್ ಸಮನಿಕುಂ, ಮತ್ತೇಕೆ ಧೀರತ್ವಮಂ
ದೂರಂಮಾಡಿ ಮನಂ ಸದಾ ಕುದಿವುದೋ, ರತ್ನಾಕರಾಧೀಶ್ವರಾ !

ಅದಾವಂಗೆ–ಅದಾವ ಮನುಷ್ಯನಿಗೆ, ಆರ್–ಯಾರು, ಇತ್ತು ದರಿದ್ರಮಂ–ಬಡತನವನ್ನು ಕೊಟ್ಟು, ಆರ್ ಕಳೆದರ್-ಅದನ್ನು ಯಾರು ದೂರಮಾಡಿದರು ? ಏನೊಂದು ಸತ್ಕಾರಂಗೆಯ್ಯದೆ–ಏನೊಂದು ಸತ್ಕಾರವನ್ನೂ ಮಾಡದೆ, ಆವಂ–ಯಾವನು, ಭಾಗ್ಯಮಂ ಕಿಡಿಸಿದಂ–(ಯಾರ) ಐಶ್ವರ್ಯವನ್ನು ನಾಶಮಾಡಿದನು ? ಪೂರ್ವಾರ್ಜಿತ ಪ್ರಾಪ್ತಿಯಿಂ–ಪೂರ್ವದಲ್ಲಿ ಮಾಡಿದ ಪಾಪಪುಣ್ಯಗಳ ಪ್ರಾಪ್ತಿಯಿಂದ, ದಾರಿದ್ರ್ಯಂ ಧನಂ ಎಂಬ–ಬಡತನ, ಹಣ (ಶ್ರೀಮಂತಿಕೆ) ಎಂಬ, ಎರಳ್-ಎರಡೂ, ಸಮನಿಕುಂ-ಲಭಿಸುತ್ತವೆ, ಮತ್ತೇಕೆ-ಮತ್ತೇತಕ್ಕೆ, ಧೀರತ್ವಮಂ ದೂರಂಮಾಡಿ-ಧೈರ್ಯವನ್ನು ದೂರಮಾಡಿ, ಮನಂ ಸದಾಕುದಿವುದೋ-ಮನಸ್ಸು ಯಾವಾಗಲೂ ಸಂತಾಪಪಡುತ್ತೋ? ರತ್ನಾಕರಾಧೀಶ್ವರಾ!

ಬಡತನವನ್ನು ಕೊಡುವವರೂ ಇಲ್ಲ. ಹಾಗೆಯೇ ಅದನ್ನು ನಿವಾರಿಸುವವರೂ ಯಾರೂ ಇಲ್ಲ. ಒಬ್ಬನಿಗೆ ಸತ್ಕಾರ ಲಭಿಸುವುದೇಂದರೇನು ? ಒಬ್ಬನ ಭಾಗ್ಯವನ್ನು ಮತ್ತೊಬ್ಬ ಅಪಹರಿಸುವುದೆಂದರೇನು ? ಈ ಬಡತನ, ಸಿರಿವಂತಿಕೆಗಳು ಪೂರ್ವಾರ್ಜಿತ ಪಾಪಪುಣ್ಯಗಳಿಗನುಸಾರವಾಗಿ ಯಾರನ್ನೂ ಹೇಳದೆ ಕೇಳದೆ ತಮ್ಮ ತಮ್ಮ ಫಲಗಳನ್ನು ಕೊಡುತ್ತವೆ. ಈ ವಿಷಯವನ್ನು ತಿಳಿದೂಸಹ ಜೀವನು ಧೈರ್ಯಗೆಟ್ಟು ತನ್ನ ಮನಸ್ಸಿನಲ್ಲಿ ಸದಾ ಸಂತಾಪಪಡುವನಲ್ಲಾ !

ಕುರುರಾಯುಂ ಬಹುವಿತ್ತಮುಂ ಕುಡುವನಾ ಕರ್ಣಂಗೆ ಮತ್ತಾ ಸಹೋ-
ದರರ್ಗಾ ಪಾಂಡವರ್ಗೇನುಮುಂ ಕುಡನದೇಂ ಪಿಂಬೊಳ್ತಿನೊಳ್ಕರ್ಣನು-
ರ್ವರೆ ದಾರಿದ್ರ್ಯನೆನಲ್ಕೆ ಸಂದನರರೇ ಧರ್ಮರ್ಧರಾಧೀಶರಾ-
ದರಿದೇಂ ಪಾಪಶುಭೋದಯಕ್ರಿಯೆಯಲಾ ರತ್ನಾಕರಾಧೀಶ್ವರಾ ! ||೪೯||

ಕುರುರಾಯುಂ ಬಹುವಿತ್ತಮುಂ ಕುಡುವಂ ಆ ಕರ್ಣಂಗೆ, ಮತ್ತೆ ಆ ಸಹೋದರರ್ಗೆ
ಆ ಪಾಂಡವರ್ಗೆ ಏನುಮುಂ ಕುಡನ್, ಅದೇಂ ಪಿಂಬೊಳ್ತಿನೊಳ್ ಕರ್ಣನ್
ಉರ್ವರೆ ದಾರಿದ್ರ್ಯನ್ ಎನಲ್ಕೆ ಸಂದನ್, ಅರರೇ ಧರ್ಮರ್ ಧರಾಧೀಶರಾದರ್,
ಇದೇಂ ಪಾಪಶುಭೋದಯ ಕ್ರಿಯೆಯಲಾ ರತ್ನಾಕರಾಧೀಶ್ವರಾ !

ಕುರುರಾಯುಂ-ದುರ್ಯೋಧನನು, ಆ ಕರ್ಣಂಗೆ-ಆ ಕರ್ಣನಿಗೆ, ಬಹುವಿತ್ತಮುಂ-ಬಹಳ ದ್ರವ್ಯವನ್ನು, ಕುಡುವಂ-ಕೊಡುತ್ತಿದ್ದನು. ಮತ್ತೆ ಆ ಸಹೋದರರ್ಗೆ ಆ ಪಾಂಡವರ್ಗೆ-ಮತ್ತೆ ಆ ಸಹೋದರರಾದ ಆ ಪಾಂಡವರಿಗೆ, ಏನುಮುಂ-ಏನನ್ನೂ, ಕುಡನ್-ಕೊಡುತ್ತಿರಲಿಲ್ಲ, ಅದೇಂ-ಅದೇನು, ಪಿಂಬೊಳ್ತಿನೊಳ್-ಕೊನೆಯಲ್ಲಿ, ಕರ್ಣನ್-ಕರ್ಣನು, ಉರ್ವರೆ ದಾರಿದ್ರ್ಯನ್ ಎನಲ್ಕೆ ಸಂದನ್-ಕಡುಬಡವನೆನಿಸಿಕೊಂಡನು, ಅರರೇ ! ಧರ್ಮರ್-ಧರ್ಮರಾಯ ಮೊದಲಾದವರು, ಧರಾಧೀಶರ್ ಆದರ್-ಭೂಮಿಗೆ ಅಧಿಪತಿಗಳಾದರು, ಇದೇಂ-ಏನಿದು, ಪಾಪಶುಭೋದಯ ಕ್ರಿಯೆಯಲಾ-ಇದು ಪಾಪ ಪುಣ್ಯೋದಯದ ಕಾರ್ಯವಲ್ಲವೇ ?

ದುರ್ಯೋಧನ ಕರ್ಣನಿಗೆ ಬೇಕಾದಷ್ಟು ಹಣವನ್ನು ಕೊಡುತ್ತಿದ್ದನು, ತನ್ನ ದಾಯಾದಿಗಳಾದ ಪಾಂಡವರಿಗೆ ಒಂದು ಬಿಡಿಕಾಸನ್ನೂ ಕೊಡುತ್ತಿರಲಿಲ್ಲ. ಮತ್ಸರದಿಂದ ಪಾಂಡುಪುತ್ರರನ್ನು ನಾಶ ಮಾಡಲೂ ಹವಣಿಸಿದನು. ಆದರೆ ಕೊನೆಗೆ ಆದದ್ದೇನು ? ಕರ್ಣನು ತನ್ನಲ್ಲಿದ್ದ ಎಲ್ಲವನ್ನೂ ಕೇಳಿದವರಿಗೆ ಕೊಟ್ಟು ಕಡುಬಡವನೆನಿಸಿಕೊಂಡನು. ಪಾಂಡುಕುಮಾರರು ಕೌರವಾದಿಗಳನ್ನು ಜಯಿಸಿ ಸಿಂಹಾಸನವನ್ನೇರಿದರು. ಆದ್ದರಿಂದ ಮತ್ತೊಬ್ಬರಿಂದ ದ್ರವ್ಯಪಡೆದು ಯಾರೂ ಶ್ರೀಮಂತರಾಗಲು ಸಾಧ್ಯವಿಲ್ಲ. ಬಡವರನ್ನು ಬಡವರಾಗೇ ಉಳಿಸಿ ಶ್ರೀಮಂತಿಕೆಯಿಂದ ದೂರವಿಡಲೂ ಸಾಧ್ಯವಿಲ್ಲ. ಇವಕ್ಕೆಲ್ಲ ' ಶುಭ ಅಶುಭ ' ಕರ್ಮಗಳೇ ಕಾರಣ. ಪುಣ್ಯ ಪಾಪಕರ್ಮಗಳ ಫಲ.

ಉಪಭೋಗಂ ಬರೆ ಭೋಗವೈತರೆ ಮನೋರಾಗಂಗಳಿಂ ಭೋಗಿಪಂ-
ತುಪಸರ್ಗಂ ಬರೆ ಮೇಣ್ದರಿದ್ರವಡಸಲ್ಸಂತೋಷಮಂ ತಾಳ್ದು ನಿ-॥
ಮ್ಮ ಪದಾಂಭೋಜಯುಗಂ ಸದಾ ಶರಣೆನುತ್ತಿಚ್ಛೈಸುವಂಗಾ ಗೃಹ-।
ಸ್ಥಪದಂ ತಾನೆ ಮುನೀಂದ್ರಪದ್ಧತಿಯಲಾ ರತ್ನಾಕರಾಧೀಶ್ವರಾ ! ॥೫೦॥

ಉಪಭೋಗಂ ಬರೆ ಭೋಗವೈತರೆ, ಮನೋರಾಗಂಗಳಿಂ ಭೋಗಿಪಂತು
ಉಪಸರ್ಗಂ ಬರೆ, ಮೇಣ್ ದರಿದ್ರವಡಸಲ್, ಸಂತೋಷಮಂ ತಾಳ್ದು,
ನಿಮ್ಮ ಪದಾಂಭೋಜಯುಗಂ ಸದಾ ಶರಣ್ ಎನುತ್ತ ಇಚ್ಛೈಸುವಂಗೆ,
ಆ ಗೃಹಸ್ಥಪದಂ ತಾನೆ ಮುನೀಂದ್ರಪದ್ಧತಿಯಲಾ ರತ್ನಾಕರಾಧೀಶ್ವರಾ !

ಉಪಭೋಗಂ ಬರೆ–ಉಪಭೋಗವು ಬರಲು, ಭೋಗವು ಎಯ್ತರೆ–ಭೋಗವು ಪ್ರಾಪ್ತವಾಗುತ್ತಿರಲು, ಮನೋರಾಗಂಗಳಿಂ-ಮನಃಪ್ರೀತಿಗಳಿಂದ, ಭೋಗಿಪಂತು–ಅನುಭವಿಸುವಹೊತ್ತು, ಉಪಸರ್ಗಂ ಬರೆ–ಉಪಸರ್ಗವು ಬರಲು, ಮೇಣ್-ಮತ್ತು, ದರಿದ್ರವು ಅಡಸಲ್-ಬಡತನವು ಅಂಟಿಕೊಳ್ಳಲು, ಸಂತೋಷಮಂ ತಾಳ್ದು–ಸಂತೋಷವನ್ನು ತಾಳಿ, ಸದಾ–ಯಾವಾಗಲೂ, ನಿಮ್ಮ ಪದಾಂಭೋಜ ಯುಗಂ-ನಿಮ್ಮೆರಡು ಪಾದಕಮಲಗಳು, ಶರಣ್ ಎನುತ್ತ–ಶರಣು ಎಂದು, ಇಚ್ಛೈಸುವಂಗೆ-ಇಚ್ಛಿಸುವವನಿಗೆ, ಆ ಗೃಹಸ್ಥಪದಂ–ಆ ಗೃಹಸ್ಥಪದವಿಯೇ ತಾನೆ, ಮುನೀಂದ್ರಪದ್ಧತಿಯಲಾ-ಮುನಿಶ್ರೇಷ್ಠರ ಮಾರ್ಗವಲ್ಲವೇ ? ರತ್ನಾಕರಾಧೀಶ್ವರಾ !

ಪುಣ್ಯಕರ್ಮದ ಉದಯದಿಂದ ಭೋಗೋಪಭೋಗಗಳು ಪ್ರಾಪ್ತವಾದಾಗ ಅವುಗಳನ್ನು ಮನೋರಾಗದಿಂದ ಅನುಭವಿಸುವಂತೆ, ಸುಖಿಸುವಂತೆ, ಅಡ್ಡಿ ಅಡಚಣೆಗಳು ಬಂದಾಗಲೂ, ಬಡತನ ಬಂದೇರಿದಾಗಲೂ ಧೃತಿಗೆಡದೆ ಸಂತೋಷಚಿತ್ತನಾಗಿ, ಸಂಯಮದಿಂದ ಜಿನಪಾದದ್ವಯಗಳನ್ನು ನಂಬಿ ಬಾಳುವ ಗೃಹಸ್ಥ ನಿಜವಾಗೂ ಮುನಿಯಷ್ಟೇ ದೊಡ್ಡವನು. ಸಂಸಾರದಲ್ಲಿ ಇರುವ ಜೀವನಿಗೆ ಸುಖದುಃಖಗಳ ಹೊಡೆತ ಅನಿವಾರ್ಯ. ಆದರೆ ಸುಖದಲ್ಲಿ ಹಿಗ್ಗದೆ ದುಃಖದಲ್ಲಿ ಕುಗ್ಗದೆ ಸಮಾಧಾನ ಚಿತ್ತದಿಂದ ಇರುವುದೇ ಮುಕ್ತಿಯ ಮಾರ್ಗ.

ಸಿಹಿಯುಂ ಕಾರಮುಮಾಮ್ಲಮುಂ ತೊಗರುವುಪ್ಪುಂ ಕೈಪೆಯುಂ ಬೇರೆವೇ-
ರೆ ಹಿತಂದೋರ್ಕುಮೆನುತ್ತವಕ್ಕೊಲಿವವೋಲ್ ಶ್ರೀಗಂ ದರಿದ್ರಾದುರಾ-॥
ಗ್ರಹಕಂ ಭೋಗಕೆ ರೋಗಕಂ ಪಳಿಕೆಗಂ ಕೇಡಿಂಗೆಯುಂ ಬಾಧೆಗು-
ತ್ಸಹಮಂ ಮಾಳ್ಪ ಗೃಹಸ್ಥನುಂ ಸುಖಿಯಲಾ ರತ್ನಾಕರಾಧೀಶ್ವರಾ ! ॥೫೧॥

ಸಿಹಿಯುಂ ಕಾರಮುಂ ಆಮ್ಲಮುಂ ತೊಗರುಂ ಉಪ್ಪುಂ ಕೈಪೆಯುಂ, ಬೇರೆ
ಬೇರೆ ಹಿತಂ ತೋರ್ಕುಂ ಎನುತ್ತ ಅವಕ್ಕೆ ಒಲಿವವೊಲ್, ಶ್ರೀಗಂ, ದರಿದ್ರ ಆ
ದುರಾಗ್ರಹಕಂ ಭೋಗಕೆ ರೋಗಕಂ ಪಳಿಕೆಗಂ ಕೇಡಿಂಗೆಯುಂ ಬಾಧೆಗೆ,
ಉತ್ಸಹಮಂ ಮಾಳ್ಪ ಗೃಹಸ್ಥನುಂ ಸುಖಿಯಲಾ ರತ್ನಾಕರಾಧೀಶ್ವರಾ !

ಸಿಹಿಯುಂ–ಸಿಹಿಯೂ, ಕಾರಮುಂ–ಖಾರವೂ, ಆಮ್ಲಮುಂ–ಹುಳಿಯೂ, ತೊಗರುಂ–ಒಗರೂ, ಉಪ್ಪು–ಉಪ್ಪೂ, ಕೈಪೆಯುಂ–ಕಹಿಯೂ, ಬೇರೆ ಬೇರೆ ಹಿತಂ–ಬೇರೆ ಬೇರೆ ರುಚಿಯನ್ನೂ, ತೋರ್ಕುಂ ಎನುತ್ತ–ತೋರುವುದೆಂದು, ಅವಕ್ಕೆ ಒಲಿವವೊಲ್–ಆ ರಸಗಳಿಗೆ ಆಸೆಪಡುವಂತೆ, ಶ್ರೀಗಂ–ಐಶ್ವರ್ಯಕ್ಕೂ, ದರಿದ್ರ ಆ ದುರಾಗ್ರಹಕಂ–ಬಡತನದ ಆ ದುರಾಗ್ರಹಕ್ಕೂ, ಭೋಗಕೆ–ಭೋಗಕ್ಕೂ, ರೋಗಕಂ–ರೋಗಕ್ಕೂ, ಪಳಿಕೆಗಂ–ನಿಂದೆಗೂ, ಕೇಡಿಂಗೆಯುಂ–ಕೇಡಿಗೂ, ಬಾಧೆಗೆ–ಬಾಧೆಗೂ, ಉತ್ಸಹಮಂ ಮಾಳ್ಪ–ಉತ್ಸಾಹಪಡುವ (ಸಮತಾಭಾವವನ್ನಿಡುವ) ಗೃಹಸ್ಥನುಂ–ಗೃಹಸ್ಥನು, ಸುಖಿಯಲಾ–ಸುಖಿಯಲ್ಲವೇ ? ರತ್ನಾಕರಾಧೀಶ್ವರಾ !

ಸಿಹಿ, ಖಾರ, ಹುಳಿ, ಒಗರು, ಉಪ್ಪು, ಕಹಿ ಇವುಗಳಲ್ಲಿ ಪ್ರತಿಯೊಂದರಲ್ಲಿಯೂ ಒಂದೊಂದು ರುಚಿಯುಂಟು. ಮಾನವನ ನಾಲಗೆಗೆ ಇವೆಲ್ಲಾ ಬೇಕೇ ಬೇಕು. ಸಿಹಿಯನ್ನೇ ತಿಂದು ಖಾರವನ್ನು ಬಿಡುವಹಾಗಿಲ್ಲ. ಉಪ್ಪಿಲ್ಲದೆ ಬರೇ ಹುಳಿಯು ನಾಲಗೆಗೆ ರುಚಿಸದು. ಮಾನವನ ದೇಹಸಂರಕ್ಷಣೆಗೆ ಇವೆಲ್ಲ ಸೂಕ್ತಪ್ರಮಾಣದಲ್ಲಿ ಬೇಕೇ ಬೇಕು. ಇದೇ ರೀತಿ ಸಂಸಾರದಲ್ಲಿಬಂದ ಜೀವಿಯು ಬಾಳಿನ ಏರಿಳಿತಗಳಿಗೆ ಒಗ್ಗಿಕೊಂಡು ಬಾಳನ್ನು ಸಂಯಮದಿಂದ ಸವೆಸಬೇಕು. ಸಂಪತ್ತನ್ನೂ, ದಟ್ಟದಾರಿದ್ರ್ಯವನ್ನೂ, ದುರಾಗ್ರಹವನ್ನೂ, ಭೋಗವನ್ನೂ, ರೋಗರುಜಿನಗಳನ್ನೂ ಬಾಳಿನ ಭಿನ್ನ ಭಿನ್ನ ರುಚಿಗಳೆಂದು ತಿಳಿದು ಯಾವ ಗೃಹಸ್ಥನು ಸಂತೋಷದಿಂದ ಸಹಿಸುವನೋ ಅವನೇ ಖಂಡಿತವಾಗಿ ಸುಖಿ ! ಬಂದುದಕ್ಕೆಲ್ಲ ಪ್ರತೀಕಾರವೆಸಗದೆ ಸಂತೋಷಚಿತ್ತದಿಂದ ಅನುಭವಿಸಿದಾಗ ಶ್ರಾವಕನ ಮನೋದಾರ್ಢ್ಯ ಅಚಲವಾಗುವುದು.

ಘುಟಿಕಾಪಾತ್ರಕನನ್ಯರೊಳ್ಕಥೆಯನೊಂದಂ ಸೂಚಿಸುತ್ತಿರ್ದೊಡಂ |
ಸ್ಫುಟದಿಂ ಚಿತ್ತಮುಮಕ್ಷಿಯುಂ ಪದಪದಕ್ಕಾಪಾತ್ರೆಯಂ ಸಾರ್ಗುಮೆಂ ||
ತುಟುತಾನಂತುಟು ಬಾಹ್ಯದೊಳ್ನೆಗಳ್ದೊಡಂ ಧ್ಯಾನಂ ಕ್ಷಣಕ್ಕೊರ್ಮೆ ಸಂ-
ಘುಟಿಸಲ್ನಿಮ್ಮಪದಂಗಳೊಳ್ಸುಖಿಯಲಾ ರತ್ನಾಕರಾಧೀಶ್ವರಾ ! ||೫೨||

ಘುಟಿಕಾಪಾತ್ರಕನ್ ಅನ್ಯರೊಳ್ ಕಥೆಯನೊಂದಂ ಸೂಚಿಸುತ್ತಿರ್ದೊಡಂ,
ಸ್ಫುಟದಿಂ ಚಿತ್ತಮುಂ ಅಕ್ಷಿಯುಂ ಪದಪದಕ್ಕೆ ಆ ಪಾತ್ರೆಯಂ ಸಾರ್ಗುಂ
ಎಂತುಟು, ತಾನ್ ಅಂತುಟು ಬಾಹ್ಯದೊಳ್ ನೆಗಳ್ದೊಡಂ ಧ್ಯಾನಂ ಕ್ಷಣಕ್ಕೊರ್ಮೆ
ಸಂಘುಟಿಸಲ್ ನಿಮ್ಮಪದಂಗಳೊಳ್ ಸುಖಿಯಲಾ, ರತ್ನಾಕರಾಧೀಶ್ವರಾ !

ಘುಟಿಕಾಪಾತ್ರಕನ್-ಗಡಿಯಾರವನ್ನು ನೋಡುತ್ತಿರುವವನು (ಅಂದರೆ ಸಮಯದ ಪ್ರಜ್ಞೆಯಿರುವಾತ) ಅನ್ಯರೊಳ್-ಬೇರೆಯವರಲ್ಲಿ, ಕಥೆಯಂ ಒಂದಂ-ಒಂದು ಕಥೆಯನ್ನು, ಸೂಚಿಸುತ್ತಿರ್ದೊಡಂ-ಹೇಳುತ್ತಿದ್ದರೂ, ಸ್ಫುಟದಿಂ-ಸ್ಪಷ್ಟವಾಗಿ, (ಆತನ) ಚಿತ್ತಮುಂ-ಮನಸ್ಸೂ, ಅಕ್ಷಿಯುಂ-ಕಣ್ಣೂ, ಪದಪದಕ್ಕೆ-ಕ್ಷಣಕ್ಷಣಕ್ಕೂ, ಆ ಪಾತ್ರೆಯಂ-ಆ ಗಡಿಯಾರವನ್ನು (ಗಳಿಗೆಯನ್ನು ತಿಳಿಸುವ ಪಾತ್ರೆ-ಘುಟಿಕಾಪಾತ್ರೆ) ಸಾರ್ಗುಂ ಎಂತುಟು-ಹೇಗೆ ಹೊಂದುತ್ತದೋ, ತಾನ್-ತಾನು, ಅಂತುಟು-ಹಾಗೆ, ಬಾಹ್ಯದೊಳ್-ಬಾಹ್ಯನಲ್ಲಿ (ಬಾಹ್ಯ ವಸ್ತುಗಳಲ್ಲಿ) ಧ್ಯಾನಂ ನೆಗಳ್ದೊಡಂ-ಧ್ಯಾನಾಸಕ್ತನಾಗಿದ್ದರೂ (ಚಿಂತನೆಯು ಬಾಹ್ಯವಸ್ತುವಿನಲ್ಲಿದ್ದರೂ) ಕ್ಷಣಕ್ಕೊರ್ಮೆ-ಕ್ಷಣಕ್ಕೊಮ್ಮೆ, ನಿಮ್ಮ ಪದಂಗಳೊಳ್-ನಿಮ್ಮ ಪಾದಗಳಲ್ಲಿ, ಸಂಘುಟಿಸಲ್-ಒಂದುಗೂಡಿದರೆ, ಸುಖಿಯಲಾ-ಸುಖಿಯಲ್ಲವೆ ? ರತ್ನಾಕರಾಧೀಶ್ವರಾ !

ಸಮಯದ ಪ್ರಜ್ಞೆಯಿರುವಾತ ಬೇರೊಬ್ಬರಿಗೆ ಕಥೆಯೊಂದನ್ನು ಹೇಳುತ್ತಿದ್ದರೂ ಅವನ ಮನಸ್ಸು ಮತ್ತು ಕಣ್ಣುಗಳೆಲ್ಲ ಗಡಿಯಾರದ ಕಡೆಗೇ ಇರುತ್ತದೆ. ಕ್ಷಣಕ್ಷಣಕ್ಕೂ ಗಡಿಯಾರದ ಕಡೆ ನೋಡಿ ತನ್ನ ಮುಂದಿನ ಕಾರ್ಯದ ಬಗ್ಗೆ ಅಂತರಂಗದಲ್ಲಿ ಚಿಂತಿಸುತ್ತಿರುತ್ತಾನೆ. ಅದರಂತೆ ಈ ಸಂಸಾರದಲ್ಲಿ ಬಂದು ಲೋಕವ್ಯವಹಾರದ ಜಂಜಾಟದಲ್ಲಿ ಮುಳುಗಿದ್ದರೂ, ನಮ್ಮ ಗಮನ ಪ್ರತಿಕ್ಷಣದಲ್ಲೂ ಜಿನೇಂದ್ರನತ್ತ ಸುಳಿದರೆ ನಿಜವಾಗೂ ನಾವು ಸುಖಿಗಳಲ್ಲವೇ ?

ಪಿಡಿದಿರ್ದಾತನ ಕೈಗೆ ಸೂತ್ರವೆನಸುಂ ಸಿಲ್ಕಿರ್ದೊಡಂ ವ್ಯೋಮದೊಳ್ ।
ನಡೆಗುಂ ಗಾಳಿಪಟಂ ಸಮಂದರತವೊಲ್ಮೆಯ್ಯೊಳ್ಮನಂ ಜಂಜಡಂ–॥
ಬಡೆದಿತ್ತಲ್ಸಿಲುಕಿರ್ದೊಡಂ ನೆನಹು ಲೋಕಾಗ್ರಕ್ಕೆ ಪಾಯ್ದತ್ತಲಾ–
ಗಡೆ ಸಿದ್ಧಾಂಘ್ರಿಗಳೊಳ್ಪಳಂಚೆ ಸುಖಿಯ್ಯೆ ರತ್ನಾಕರಾಧೀಶ್ವರಾ ! ॥೫೩॥

ಪಿಡಿದಿರ್ದಾತನ ಕೈಗೆ ಸೂತ್ರವು ಎನಸುಂ ಸಿಲ್ಕಿರ್ದೊಡಂ, ವ್ಯೋಮದೊಳ್
ನಡೆಗುಂ ಗಾಳಿಪಟಂ ಸಮಂತು, ಅದರವೊಲ್ ಮೆಯ್ಯೊಳ್ ಮನಂ ಜಂಜಡಂ
ಪಡೆದು ಇತ್ತಲ್ ಸಿಲುಕಿರ್ದೊಡಂ, ನೆನಹು ಲೋಕಾಗ್ರಕ್ಕೆ ಪಾಯ್ದತ್ತಲ್ ಆಗಡೆ
ಸಿದ್ಧಾಂಘ್ರಿಗಳೊಳ್ ಪಳಂಚೆ ಸುಖಿಯ್ಯೆ ರತ್ನಾಕರಾಧೀಶ್ವರಾ !

ಪಿಡಿದಿರ್ದಾತನ–ಹಿಡಿದಿರುವವನ, ಕೈಗೆ, ಸೂತ್ರವು–(ಗಾಳಿಪಟದ) ದಾರವು, ಎನಸುಂ ಸಿಲ್ಕಿರ್ದೊಡಂ–ಎಷ್ಟೇ ಸಿಕ್ಕಿದರೂ, ವ್ಯೋಮದೊಳ್ ನಡೆಗುಂ ಗಾಳಿಪಟಂ ಸಮಂತು–ಗಾಳಿಪಟವು ಆಕಾಶದಲ್ಲಿ ಚೆನ್ನಾಗಿ ಹಾರಾಡುತ್ತದೆ, ಅದರವೊಲ್–ಅದರಂತೆ, ಮೆಯ್ಯೊಳ್–ಶರೀರದಲ್ಲಿ, ಮನಂ–ಮನಸ್ಸು, ಜಂಜಡಂ ಪಡೆದು–ತೊಂದರೆಗೀಡಾಗಿ, ಇತ್ತಲ್ ಸಿಲುಕಿರ್ದೊಡಂ–ಈಕಡೆ (ಶರೀರದಲ್ಲಿ) ಸಿಕ್ಕಿಕೊಂಡಿದ್ದರೂ, ನೆನಹು–ನೆನಪು, ಲೋಕಾಗ್ರಕ್ಕೆ ಪಾಯ್ದು ಅತ್ತಲ್–ಲೋಕದ ತುತ್ತತುದಿಗೆ ಹೋಗಿ ಆ ಕಡೆ, ಆಗಡೆ–ಕೂಡಲೆ (ಆಗಲೆ) ಸಿದ್ಧಾಂಘ್ರಿಗಳೊಳ್-ಸಿದ್ಧಭಗವಾನರ ಪಾದಗಳಲ್ಲಿ, ಪಳಂಚೆ-ಸ್ಪರ್ಶಮಾಡಿದರೆ, ಸುಖಿಯ್ಯೆ–ಸುಖಿಯಾಗುವನು ! ರತ್ನಾಕರಾಧೀಶ್ವರಾ !

ದಾರವನ್ನು ಎಷ್ಟೇ ಬಲವಾಗಿ ಹಿಡಿದುಕೊಂಡಿದ್ದರೂ, ಗಾಳಿಪಟ ಆಕಾಶದಲ್ಲಿ ಸುಖವಾಗಿ ಚೆನ್ನಾಗಿ ಹಾರಾಡುತ್ತಿರುತ್ತದೆ. ಅದರಂತೆ ನಮ್ಮ ಮನಸ್ಸು ಈ ದೇಹದಲ್ಲಿ ಸಿಕ್ಕಿಕೊಂಡು ಒದ್ದಾಡುತ್ತಿದ್ದರೂ, ಆಗಾಗ ಸಿದ್ಧಲೋಕವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ನಮ್ಮ ಚಿತ್ತವನ್ನು ಸಿದ್ಧಪರಮೇಷ್ಠಿಗಳ ಪಾದಕಮಲಗಳಲ್ಲಿ ವಿಲೀನಗೊಳಿಸಿದರೆ ನಾವು ಸುಖಿಗಳಾಗುವುದರಲ್ಲಿ ಸಂಶಯವಿಲ್ಲ.

ನಡೆವಾಗಳ್ನಡೆ ಕೊಂಕಿದಾಗಳಿಳೆಯೊಳ್ಬೀಳ್ವಾಗಳೇಳ್ವಾಗಳುಂ |
ನುಡಿವಾಗಳ್ನುಡಿದಪ್ಪಿದಾಗಳೆರ್ದೆಗೆಟ್ಟಾಗಳ್ಸುಖಾವಾಪ್ತಿಯೊಳ್ ||
ಬಿಡದರ್ಹತ್ಪ್ರಭು ಸಿದ್ಧ ಶಂಕರ ಸಮುದ್ರಾಧೀಶ್ವರ ತ್ರಾಹಿಯೆಂ–
ದೊಡನಭ್ಯಾಸಿಸುವಾತನೇ ಸುಖಿಯಲಾ ರತ್ನಾಕರಾಧೀಶ್ವರಾ ! ||೫೪||

ನಡೆವಾಗಳ್ ನಡೆಕೊಂಕಿದಾಗಳ್ ಇಳೆಯೊಳ್ ಬೀಳ್ವಾಗಳ್ ಏಳ್ವಾಗಳುಂ,
ನುಡಿವಾಗಳ್ ನುಡಿದಪ್ಪಿದಾಗಳ್ ಎರ್ದೆಗೆಟ್ಟಾಗಳ್ ಸುಖಾವಾಪ್ತಿಯೊಳ್,
ಬಿಡದೆ ಅರ್ಹತ್‌ಪ್ರಭು ಸಿದ್ಧ ಶಂಕರ ಸಮುದ್ರಾಧೀಶ್ವರ, ತ್ರಾಹಿ ಎಂದು
ಒಡನೆ ಅಭ್ಯಾಸಿಸುವಾತನೇ ಸುಖಿಯಲಾ, ರತ್ನಾಕರಾಧೀಶ್ವರಾ !

ನಡೆವಾಗಳ್–ನಡೆಯುವಾಗಲೂ, ನಡೆಕೊಂಕಿದಾಗಳ್-ಕಾಲು ಎಡವಿದಾಗಲೂ, ಇಳೆಯೊಳ್ ಬೀಳ್ವಾಗಳ್-ಭೂಮಿಯಲ್ಲಿ ಬೀಳುವಾಗಲೂ, ಏಳ್ವಾಗಳುಂ–ಏಳುವಾಗಲೂ, ನುಡಿವಾಗಳ್-ಮಾತನಾಡುವಾಗಲೂ, ನುಡಿತಪ್ಪಿದಾಗಳ್ – ತಪ್ಪಿಮಾತನಾಡಿದಾಗಲೂ, ಎರ್ದೆಗೆಟ್ಟಾಗಳ್-ಭಯಪಟ್ಟಾಗಲೂ, ಸುಖಾವಾಪ್ತಿಯೊಳ್-ಸುಖಪ್ರಾಪ್ತಿಯಲ್ಲಿಯೂ, ಅರ್ಹತ್ ಪ್ರಭು ಸಿದ್ಧ ಶಂಕರ ಸಮುದ್ರಾಧೀಶ್ವರ ತ್ರಾಹಿ–"ಅರ್ಹತ್ಪರಮೇಶ್ವರ ! ಸಿದ್ಧಪರಮೇಷ್ಠಿ, ಶಂಕರ, ಸಮುದ್ರಾಧೀಶ್ವರ ಕಾಪಾಡು" ಎಂದು ಒಡನೆ–ಎಂದು ಬಿಡದೆ, ಅಭ್ಯಾಸಿಸುವಾತನೇ – ಅಭ್ಯಾಸಮಾಡುವವನೇ, ಸುಖಿಯಲಾ – ಸುಖಿಯಲ್ಲವೇ ? ರತ್ನಾಕರಾಧೀಶ್ವರಾ !

ನಡೆವಾಗ, ಎಡವಿದಾಗ, ಬಿದ್ದಾಗ, ಎದ್ದಾಗ, ಮಾತನಾಡುವಾಗ, ನುಡಿತಪ್ಪಿ ತೊದಲಿದಾಗ, ಎಚ್ಚರತಪ್ಪಿ ಮಾತನಾಡಿದಾಗ, ಭಯವಂಕುರಿಸಿದಾಗ, ಸುಖವಾವರಿಸಿದಾಗ, ಆಗ ಈಗ ಎನ್ನದೆ ಯಾವಾಗಲೂ ಪ್ರತಿಕ್ಷಣವೂ, ನಮ್ಮ ಚಿತ್ತ ಭಗವಂತನಕಡೆ ಇರಬೇಕು. ಸದಾ ಅವನನ್ನು ಧ್ಯಾನಿಸುವ ಅಭ್ಯಾಸ ಮಾಡಬೇಕು. "ಅರಹಂತ, ಸಿದ್ಧ, ಶಂಕರ, ಸಮುದ್ರಾಧೀಶ್ವರ, ರಕ್ಷಿಸು, ರಕ್ಷಿಸು" ಎಂದು ಸದಾ ಹಂಬಲಿಸುವವನೇ ಸುಖಿಯಲ್ಲವೇ ?

ಎತ್ತೆತ್ತಂ ಲಲಿತಾಂಗಿಯರ್ಸುಳಿದರತ್ತತ್ತಾಡುಗುಂ ಕಣ್ಗಳೆ-
ತ್ತೆತ್ತಂ ಕಾಮಿನಿಯರ್ಮೊಗಂದೆಗೆದರತ್ತತ್ತೊಂದುಗುಂ ಜಿಹ್ವೆ ಮ-||
ತ್ತೆತ್ತೆತ್ತಂ ಸರಿಮಿಂಡಿಯರ್ತೆಗೆದರತ್ತತ್ತೆಯ್ದುಗುಂ ಬುದ್ಧಿ ನಿ-
ಮ್ಮತ್ತಂ ಬಾರದು ಕೆಟ್ಟೆನೇವೆನಕಟಾ ರತ್ನಾಕರಾಧೀಶ್ವರಾ ! ||೫೫||

ಎತ್ತೆತ್ತಂ ಲಲಿತಾಂಗಿಯರ್ ಸುಳಿದರ್ ಅತ್ತತ್ತ ಆಡುಗುಂ ಕಣ್ಗಳ್,
ಎತ್ತೆತ್ತಂ ಕಾಮಿನಿಯರ್ ಮೊಗಂ ತೆಗೆದರ್ ಆತ್ತತ್ತ ಒಂದುಗುಂ ಜಿಹ್ವೆ,
ಮತ್ತೆ ಎತ್ತೆತ್ತಂ ಸರಿಮಿಂಡಿಯರ್ ತೆಗೆದರ್ ಅತ್ತತ್ತ ಎಯ್ದುಗುಂ ಬುದ್ಧಿ,
ನಿಮ್ಮತ್ತಂ ಬಾರದು ಕೆಟ್ಟೆನ್ ಏವೆನ್, ಅಕಟಾ ರತ್ನಾಕರಾಧೀಶ್ವರಾ !

ಎತ್ತೆತ್ತಂ-ಎಲ್ಲೆಲ್ಲಿ, ಲಲಿತಾಂಗಿಯರ್-ಸುಂದರಾಂಗಿಯರು, ಸುಳಿದರ್-ಓಡಾಡಿದರೋ, ಅತ್ತತ್ತ-ಅಲ್ಲಲ್ಲಿ, ಕಣ್ಗಳ್-ಕಣ್ಣುಗಳು, ಆಡುಗುಂ-ಕುಣಿಯುತ್ತವೆ, ಎತ್ತೆತ್ತಂ-ಯಾವ ಯಾವ ಕಡೆಗೆ ಕಾಮಿನಿಯರ್-ಕಾಮುಕ ಸ್ತ್ರೀಯರು, ಮೊಗಂ ತೆಗೆದರ್-ಮುಖವನ್ನು ತಿರುಗಿಸಿದರೋ, ಅತ್ತತ್ತ-ಆಯಾಕಡೆಗೆ, ಒಂದುಗುಂ ಜಿಹ್ವೆ-ನಾಲಗೆಯು ಚಾಚುವುದು, ಮತ್ತೆ, ಎತ್ತೆತ್ತಂ-ಯಾವ ಯಾವ ಕಡೆ, ಸರಿಮಿಂಡಿಯರ್-ಋತುಮತಿಯುರಾದ ಯುವತಿಯರು, ತೆಗೆದರ್-ಹೋದರೋ, ಅತ್ತತ್ತ-ಆಯಾ ಕಡೆಗೆ, ಎಯ್ದುಗುಂ ಬುದ್ಧಿ-ಬುದ್ಧಿಯು ಹೋಗುತ್ತದೆ: ಈ ಕಣ್ಣು, ನಾಲಗೆ, ಬುದ್ಧಿಗಳು, ನಿಮ್ಮತ್ತಂ-ನಿಮ್ಮಕಡೆ, ಬಾರದು-ಬರುವುದಿಲ್ಲವು, ಕೆಟ್ಟೆನ್-ಕೆಟ್ಟೆನು, ಏವೆನ್-ಏನುಮಾಡಲಿ, ಅಕಟಾ-ಅಯ್ಯೋ, ರತ್ನಾಕರಾಧೀಶ್ವರಾ !

ಸುಂದರಾಂಗಿಯರು ಎಲ್ಲೆಲ್ಲಿ ಸುಳಿದಾಡುವರೋ ಅಲ್ಲಲ್ಲಿ ನಮ್ಮ ಕಣ್ಣುಗಳು ತಿರುಗಾಡುತ್ತವೆಯಲ್ಲಾ ! ವಿಲಾಸಿನಿಯರೊಡನೆ, ಕಾಮುಕ ಸ್ತ್ರೀಯರೊಡನೆ ಮಾತನಾಡಲು ನನ್ನ ನಾಲಗೆ ತವಕಗೊಳ್ಳುವುದಲ್ಲ, ಕನ್ನೆಯರು ಸರಿದತ್ತ ನನ್ನ ಮನಸ್ಸು ಹರಿಯುವುದು ! ಆದರೆ ಅಯ್ಯೋ ! ಏನು ಮಾಡಲಿ, ನನ್ನ ಕಣ್ಣು, ನಾಲಗೆಗಳ ಗಮನ ನಿನ್ನಕಡೆ ವಾಲುವುದಿಲ್ಲವಲ್ಲ : ಎಂಥಹ ಮನೋದೌರ್ಬಲ್ಯ ನನ್ನದು, ನನ್ನಲ್ಲಿ ನನ್ನ ಚಿತ್ತ ನೆಡಬೇಕಾದರೆ ಏನುಮಾಡಲಿ, ಜಿನೇಂದ್ರ !

ಮೊದಲೊಳ್ಮುಗ್ಗುವನಿಚ್ಚೈವಟ್ಟೊಡನೆ ತಾನುಚ್ಛ್ವಾಸ ನಿಃಶ್ವಾಸಪೂ-
ರದೆ ಕೆಯ್ಕಾಲ್ಬಡಿಗೊಂಬನಾ ಕಡೆಯೊಳುಂ ಶಕ್ತಿಕ್ಷಯಂದೋರೆ ತ-||
ಬ್ಬಿದ ಪೆಣ್ಣಂ ಬಿಡುಗೆಯ್ದು ಕೂಡೆ ಕೆಲದೊಳ್ಬಿಳ್ದಳ್ಳೈವೊಯ್ವಂ ಮನ-
ಕ್ಕಿದು ಲೇಸೇ ? ಸುಖವೇ ? ಮರುಳ್ತನವಲಾ ? ರತ್ನಾಕರಾಧೀಶ್ವರಾ ! ||೫೬||

ಮೊದಲೊಳ್ ಮುಗ್ಗುವನ್ ಇಚ್ಚೈವಟ್ಟು, ಒಡನೆ ತಾನು ಉಚ್ಛ್ವಾಸ ನಿಃಶ್ವಾಸ
ಪೂರದೆ ಕೆಯ್ಕಾಲ್ ಬಡಿಗೊಂಬಂ ಆ ಕಡೆಯೊಳುಂ ಶಕ್ತಿಕ್ಷಯಂತೋರೆ
ತಬ್ಬಿದ ಪೆಣ್ಣಂ ಬಿಡುಗೆಯ್ದು ಕೂಡೆ ಕೆಲದೊಳ್‌ಬಿಳ್ದು ಅಳ್ಳೈವೊಯ್ವಂ,
ಮನಕ್ಕಿದು ಲೇಸೇ ? ಸುಖವೇ ? ಮರುಳ್ತನವಲಾ ? ರತ್ನಾಕರಾಧೀಶ್ವರಾ !

ಮೊದಲೊಳ್-ಮೊದಲು (ಮನುಷ್ಯನು) ಇಚ್ಚೈವಟ್ಟು-ಆಸೆಪಟ್ಟು, ಮುಗ್ಗುವನ್-ಮುಗ್ಗರಿಸು ತ್ತಾನೆ, ಒಡನೆ ತಾನು-ಮರುಕ್ಷಣದಲ್ಲೇ ತಾನು, ಉಚ್ಛ್ವಾಸ ನಿಃಶ್ವಾಸಪೂರದೆ-ಶ್ವಾಸೋಚ್ಛ್ವಾಸ ಗಳೆಂಬ ಪ್ರವಾಹದಲ್ಲಿ, ಕೆಯ್ಕಾಲ್ ಬಡಿಗೊಂಬಂ-ಕೈಕಾಲುಗಳನ್ನು ಬಡಿದುಕೊಳ್ಳುತ್ತಾನೆ, ಆ ಕಡೆ ಯೊಳುಂ-ಆ ಕೊನೆಯಲ್ಲಿ, ಶಕ್ತಿಕ್ಷಯಂತೋರೆ-ಶಕ್ತಿ ನಷ್ಟವಾಗುತ್ತಿರಲು, ತಬ್ಬಿದ ಪೆಣ್ಣಂ-ಆಲಂಗಿಸಿದ ಹೆಣ್ಣನ್ನು, ಬಿಡುಗೆಯ್ದು-ಬಿಟ್ಟು, ಕೂಡೆ-ಜೊತೆಯಲ್ಲೇ, ಕೆಲದೊಳ್ ಬಿಳ್ದು-ಪಕ್ಕದಲ್ಲಿ, ಬಿದ್ದುಕೊಂಡು, ಅಳ್ಳೈವೊಯ್ವಂ-ಒದ್ದಾಡುತ್ತಾನೆ, ಮನಕ್ಕಿದು ಲೇಸೇ-ಇದು ಮನಸ್ಸಿಗೆ ಒಳ್ಳೆಯದೇ ? ಸುಖವೇ ? ಮರುಳ್ತನವಲಾ-ಹುಚ್ಚುತನವಲ್ಲವೇ ? ರತ್ನಾಕರಾಧೀಶ್ವರಾ.

ಮಾನವ ಮೊದಲು ಆಸೆಯಿಂದ ಮುಗ್ಗರಿಸುವನು. ಮರುಕ್ಷಣದಲ್ಲಿ ಏದುಸಿರಿನಲ್ಲಿ ಕೈಕಾಲು ಗಳನ್ನು ಬಡಿದುಕೊಂಡು ಒದ್ದಾಡುವನು. ಮದವು ಇಳಿದಮೇಲೆ, ಕೊಬ್ಬಿಳಿದಮೇಲೆ ತಬ್ಬಿದ ಹೆಣ್ಣನ್ನು ಬಿಟ್ಟು ಜೊತೆಯಲ್ಲೇ ಪಕ್ಕದಲ್ಲಿ ಬಿದ್ದುಕೊಂಡು ಒದ್ದಾಡುವನಲ್ಲಾ ! ಇದೇನಾದರೂ ಮನಕ್ಕೆ ಹಿತವೇ ? ಇದರಿಂದ ಏನಾದರೂ ಸುಖವಿದೆಯೇ ? ಎಂಥ ಮರುಳಾಟವಿದು ? ರತಿಕ್ರೀಡೆ ಯಿಂದ ಆಗುವ ದೈಹಿಕ ಮಾನಸಿಕ ಪರಿಣಾಮಗಳು ಮನುಷ್ಯನ ಉನ್ಮತ್ತತೆಯನ್ನು ತೋರಿಸುತ್ತದೆ ವಿನಹ ಅದರಿಂದ ಅವನಿಗೆ ಯಾವ ತರಹದ ಹಿತವಾಗಲೀ ಸಂತೋಷವಾಗಲೀ ಉಂಟಾಗಲಾರದು. ಈ ಕ್ಷಣಿಕ ಸುಖ ಭ್ರಾಂತಿಗೆ ಮನುಷ್ಯ ಚಡಪಡಿಸುವನಲ್ಲ.

ತಿಳಿವಿಲ್ಲಾಗಿ ಶಿಶುತ್ವದೊಳ್ತನಗೆ ತಾಂ ತನ್ನೆಂಜಲೊಳ್ಮೂತ್ರದೊಳ್
ಮುಳುಗಿರ್ದಂ ಬಳಿಕಂ ವಿವೇಕವೆರ್ದೆಯೊಳ್ಮೆಯ್ದೋರೆಯುಂ ಪ್ರಾಯದೊಳ್ ॥
ಎಳೆವೆಣ್ಣೆಂಜಲನುಂಡು ಮೂತ್ರಬಿಲದೊಳ್ ಚೀ ನಾರುವೀ ಶುಕ್ಲಮಂ
ತುಳುಕಲ್ಮೋಹಿಪನಾತ್ಮನೇಂ ಭ್ರಮಿತನೋ ರತ್ನಾಕರಾಧೀಶ್ವರಾ ! ॥೫೭॥

ತಿಳಿವಿಲ್ಲಾಗಿ ಶಿಶುತ್ವದೊಳ್ ತನಗೆ ತಾಂ ತನ್ನೆಂಜಲೊಳ್ ಮೂತ್ರದೊಳ್ ಮುಳುಗಿರ್ದಂ, ಬಳಿಕಂ ವಿವೇಕವು ಎರ್ದೆಯೊಳ್ ಮೆಯ್ದೋರೆಯುಂ ಪ್ರಾಯದೊಳ್ ಎಳೆವೆಣ್ಣ ಎಂಜಲನ್ ಉಂಡು, ಮೂತ್ರಬಿಲದೊಳ್ ಚೀ ನಾರುವ ಈ ಶುಕ್ಲಮಂ ತುಳುಕಲ್ ಮೋಹಿಪನ್, ಆತ್ಮನ್ ಏಂ ಭ್ರಮಿತನೋ ರತ್ನಾಕರಾಧೀಶ್ವರಾ!

ತಿಳಿವಿಲ್ಲಾಗಿ–ತಿಳುವಳಿಕೆಯಿಲ್ಲದೆ, ಶಿಶುತ್ವದೊಳ್–(ಆತ್ಮನು) ಕೂಸಾಗಿದ್ದಾಗ, ತನಗೆ ತಾಂ–ತನಗೆ ತಾನು, ತನ್ನ ಎಂಜಲೊಳ್–ತನ್ನ ಎಂಜಲಲ್ಲಿಯೂ, ಮೂತ್ರದೊಳ್–ಮೂತ್ರದಲ್ಲಿಯೂ, ಮುಳುಗಿರ್ದಂ–ಮುಳುಗಿದ್ದನು : ಬಳಿಕಂ–ತರುವಾಯ, ವಿವೇಕವು ಎರ್ದೆಯೊಳ್–ವಿವೇಕವು ಹೃದಯದಲ್ಲಿ, ಮೆಯ್ದೋರೆಯುಂ–ತೋರಿದರೂ, (ಉಂಟಾದರೂ) ಪ್ರಾಯದೊಳ್ – ಯೌವನದಲ್ಲಿ, ಎಳೆವೆಣ್ಣ–ಎಳೆಪ್ರಾಯದ ಹೆಣ್ಣಿನ, ಎಂಜಲನ್ ಉಂಡು–ಎಂಜಲನ್ನು ತಿಂದು, ಮೂತ್ರಬಿಲದೊಳ್–ಮೂತ್ರದ್ವಾರದಲ್ಲಿ, ಚೀ ನಾರುವ–ದುರ್ಗಂಧವಾದ, ಈ ಶುಕ್ಲಮಂ–ಈ ವೀರ್ಯವನ್ನು, ತುಳುಕಲ್–ಚೆಲ್ಲುವುದಕ್ಕೆ, ಮೋಹಿಪನ್–ಆಸೆಪಡುತ್ತಾನೆ, ಆತ್ಮನ್ ಏಂ ಭ್ರಮಿತನೋ–ಆತ್ಮನು ಏನು ಭ್ರಾಂತಿಗೊಂಡಿರುವನೋ ! ರತ್ನಾಕರಾಧೀಶ್ವರಾ !

ಎಳೆ ಮಗುವಾಗಿದ್ದಾಗ ತಿಳುವಳಿಕೆಯಿಲ್ಲದೆ ತನ್ನ ಎಂಜಲನ್ನೂ ಮಲಮೂತ್ರವನ್ನೂ ಮೈಗೆಲ್ಲಾ ಬಳಿದುಕೊಂಡದ್ದಾಯಿತು. ಬೆಳೆದಹಾಗೆ ವಿವೇಕ ಬರಬಹುದೆಂದು ತಿಳಿದಿದ್ದು ತಪ್ಪಾಯಿತು. ಯೌವನ ಬಂದಾಗ ಬುದ್ಧಿಯಿದ್ದರೂ, ಪ್ರಾಯದ ಪಿತ್ತವೇರಿ ಹೆಣ್ಣಿಗೆ ಬಾಯಿಬಿಟ್ಟು ಈ ಜೀವ ಆ ವನಿತೆಯ ಎಂಜಲನ್ನು ತಿಂದು ಮೂತ್ರಬಿಲಕ್ಕೆ ದುರ್ನಾತದ ವೀರ್ಯವನ್ನು ತುಳುಕಿಸಲು ಆತುರಪಡುವನಲ್ಲ ! ಚೀ ಈ ಆತ್ಮನಿಗೆ ಅದೇನು ಭ್ರಾಂತಿ !

ಸುಖವೆಂಬರ್ಸುಖವೆಂತೊ ನಿರ್ಮಲಬಲಂ ಸುಜ್ಞಾನಮುಂ ಕಾಣ್ಕೆ ಸ-|
ಮ್ಮುಖವಾದಂದದು ಸೌಖ್ಯಮಂಗನೆಯ ಸಂಭೋಗಾಂತ್ಯದೊಳ್ ಹೇಯದು-||
ನ್ಮುಖಮುಂ ಶಕ್ತಿವಿನಾಶಮುಂ ಮರವೆಯುಂ ನಿದ್ರಾಜಡಂದೋರೆಯುಂ |
ಸುಖವೆಂದೆಂಬರದೇನೊ ದುರ್ಮುಖರಲಾ ರತ್ನಾಕರಾಧೀಶ್ವರಾ ! ||೫೮||

ಸುಖವೆಂಬರ್ ಸುಖವೆಂತೊ ನಿರ್ಮಲಬಲಂ ಸುಜ್ಞಾನಮುಂ ಕಾಣ್ಕೆ
ಸಮ್ಮುಖವಾದಂದದು ಸೌಖ್ಯವು, ಅಂಗನೆಯ ಸಂಭೋಗಾಂತ್ಯದೊಳ್, ಹೇಯದ
ಉನ್ಮುಖಮುಂ ಶಕ್ತಿವಿನಾಶಮುಂ ಮರವೆಯುಂ ನಿದ್ರಾ ಜಡಂ ತೋರೆಯುಂ,
ಸುಖವೆಂದೆಂಬರ್ ಅದೇನೊ ದುರ್ಮುಖರಲಾ ರತ್ನಾಕರಾಧೀಶ್ವರಾ !

ಸುಖವೆಂಬರ್-(ಸ್ತ್ರೀ ಸಂಭೋಗವು) ಸುಖವೆಂದು ಹೇಳುತ್ತಾರೆ, ಸುಖವು ಎಂತೊ-ಅದು ಹೇಗೆ ಸುಖವೋ ? ನಿರ್ಮಲಬಲಂ-ನಿರ್ಮಲವಾದ ಶಕ್ತಿಯೂ, ಸುಜ್ಞಾನಮುಂ-ಶ್ರೇಷ್ಠವಾದ ಜ್ಞಾನವೂ, ಕಾಣ್ಕೆ-ದರ್ಶನವೂ, ಸಮ್ಮುಖವು ಆದಂದು-ಪ್ರಾಪ್ತವಾದಾಗ, ಸೌಖ್ಯವು-ಅದು ಸುಖವು, ಅಂಗನೆಯ ಸಂಭೋಗ ಅಂತ್ಯದೊಳ್-ಸ್ತ್ರೀ ಸಂಭೋಗದ ಕೊನೆಯಲ್ಲಿ, ಹೇಯದ ಉನ್ಮುಖಮುಂ-ತುಚ್ಛವಾದ ಸೊಕ್ಕು, ಶಕ್ತಿವಿನಾಶಮುಂ-ಶಕ್ತಿಕ್ಷಯವೂ, ಮರವೆಯುಂ – ಮರೆವೆಯೂ, ನಿದ್ರಾ – ನಿದ್ರೆಯೂ, ಜಡಂ-ಜಡತ್ವವೂ, ತೋರೆಯುಂ-ತೋರಿದರೂ, ಸುಖವೆಂದೆಂಬರ್ – ಸುಖವೆಂದು ಹೇಳುತ್ತಾರೆ ? ಅದೇನೋ ದುರ್ಮುಖರಲಾ – ಇಂಥಹವರು ಕೆಟ್ಟಮೋರೆಯುರಲ್ಲವೇ ? ರತ್ನಾಕರಾಧೀಶ್ವರಾ !

ಸ್ತ್ರೀ ಸಂಭೋಗವೇ ಸುಖವೆಂದು ಭ್ರಮಿಸಿ ತಮ್ಮ ಜೀವನವನ್ನು ಹಾಳುಮಾಡಿಕೊಳ್ಳುತ್ತಿದ್ದಾರಲ್ಲಾ ಈ ಜನರು ! ಇವರ ವಿಷಯಲಂಪಟತನಕ್ಕೆ ಏನೆಂದು ಹೇಳಲಿ ? ನಿಜವಾದ ಸುಖವೆಂದರೆ ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯಗಳಲ್ಲವೇ ? ಇದನ್ನು ಮರೆತು, ತುಚ್ಛಕಾಮವಾಸನೆಗೆ ಮರುಳಾಗಿ, ಶಕ್ತಿಗುಂದಿದರೂ, ಮರೆವೆಯು ಆವರಿಸಿದರೂ, ನಿದ್ರೆಯೂ ಜಡತ್ವವೂ ತೋರಿದರೂ, ಸ್ತ್ರೀ ಸಂಭೋಗವೇ ಸುಖವೆಂದು ಹೇಳುವವರು ಮುಟ್ಠಾಳರಲ್ಲವೇ ?

ಏನೊಂದುಗ್ರವೊ ನೋಡ ನೋಟವರಿವೇ ಮೆಯ್ಯಾದ ಶುದ್ಧಾತ್ಮನಂ ।
ಮೀನಾಕ್ಷೀತನು ತನ್ನ ತಳ್ಕಿಸಲೊಡಂ ನೇತ್ರಂಗಳಂ ಕಟ್ಟಿ ಸು–
ಜ್ಞಾನಂಗುಂದಿಸಿ ಮೂರ್ಛೆಗೆಯ್ಸಿ ಪೆಣನೆಂಬೊಲ್ಮಾಡುಗುಂ ಮತ್ತದ–।
ಕ್ಕಾನಂದಂ ಮಿಗೆ ಮುಗ್ಗುವಂ ಮರುಳಲಾ ರತ್ನಾಕರಾಧೀಶ್ವರಾ ! ॥೫೯॥

ಏನೊಂದುಗ್ರವೊ ! ನೋಡ, ನೋಟವು ಅರಿವೇ ಮೆಯ್ಯಾದ ಶುದ್ಧಾತ್ಮನಂ,
ಮೀನಾಕ್ಷೀತನು ತನ್ನ ತಳ್ಕಿಸಲ್ ಒಡಂ, ನೇತ್ರಂಗಳಂ ಕಟ್ಟಿ
ಸುಜ್ಞಾನಂ ಕುಂದಿಸಿ ಮೂರ್ಛೆಗೆಯ್ಸಿ ಪೆಣನೆಂಬೊಲ್ ಮಾಡುಗುಂ,
ಮತ್ತದಕ್ಕೆ ಆನಂದಂಮಿಗೆ ಮುಗ್ಗುವಂ ಮರುಳಲಾ ರತ್ನಾಕರಾಧೀಶ್ವರಾ !

ನೋಟವು ಅರಿವೇ–ದರ್ಶನಜ್ಞಾನಗಳೇ, ಮೆಯ್ಯಾದ–ಶರೀರವಾಗಿರುವ, ಶುದ್ಧಾತ್ಮನಂ–ಶುದ್ಧಾತ್ಮನನ್ನು, ನೋಡ-ನೋಡು, ಮೀನಾಕ್ಷೀತನು–ಸ್ತ್ರೀಯ ಶರೀರವು. ತನ್ನ ತಳ್ಕಿಸಲ್ ಒಡಂ–ತನ್ನನ್ನು ಆಲಿಂಗಿಸಿದೊಡನೆ. ನೇತ್ರಂಗಳಿಂ ಕಟ್ಟಿ–ಕಣ್ಣುಗಳನ್ನು ಕಟ್ಟಿ, ಸುಜ್ಞಾನಂ ಕುಂದಿಸಿ–ಶ್ರೇಷ್ಠವಾದ ಜ್ಞಾನವನ್ನು ಹೋಗಲಾಡಿಸಿ, ಮೂರ್ಛೆಗೆಯ್ಸಿ–ಮೂರ್ಛೆಯನ್ನು ಹೊಂದಿಸಿ, ಪೆಣನೆಂಬೊಲ್–ಹೆಣದ ಹಾಗೆ, ಮಾಡುಗುಂ–ಮಾಡುವುದು, ಏನೊಂದುಗ್ರಮೊ–ಏನೊಂದು ಭಯಂಕರವೋ ? ಮತ್ತದಕ್ಕೆ–ಮತ್ತು ಆ ಶರೀರಕ್ಕೆ, ಆನಂದಂಮಿಗೆ–ಸಂತೋಷವು ಹೆಚ್ಚಾಗುತ್ತಿರಲು, ಮುಗ್ಗುವಂ–ಎಡಹುವನು, ಮರುಳಲಾ !–ಏನಿದು ಹುಚ್ಚುತನ ! ರತ್ನಾಕರಾಧೀಶ್ವರಾ !

ದರ್ಶನ ಜ್ಞಾನವೇ ಮೆಯ್ಯಾದ ಶುದ್ಧ ಆತ್ಮನೆಲ್ಲಿ ? ಇದನ್ನು ನೋಡದೆ ಹೆಣ್ಣಿನ ಕ್ಷಣಿಕ ಸುಖಕ್ಕೆ ಸೋತು, ಅವಳ ಆಲಿಂಗನಕ್ಕೆ ಹಾತೊರೆಯುತ್ತಾರೆ. ಸ್ತ್ರೀ ಶರೀರ ಸೋಕಿದೊಡನೆ ಕಣ್ಣಿಗೆ ಕತ್ತಲು ಕವಿದು, ಜ್ಞಾನ ಮರೆಯಾಗಿ ಮೈಮರೆತು ಹೆಣದಂತಾಗುವ ಈ ವಿಷಯಲಂಪಟತನಕ್ಕೆ ಧಿಕ್ಕಾರ ! ಎಂಥಹ ಭಯಾನಕ ಪರಿಸ್ಥಿತಿಯಿದು. ಇಂಥಹ ಹೇಯಕಾರ್ಯಕ್ಕೆ ಆನಂದ ಉತ್ಸಾಹದೊಡನೆ ಮುನ್ನುಗ್ಗಿ ಮುಗ್ಗರಿಸುವರಲ್ಲ ! ಎಂಥ ಹುಚ್ಚು ?

ಮದವೆದ್ದಾನೆಗೆ ಕಲ್ಲ ಪೊಯ್ವುದಿನಿದೇ ? ಮೆಯ್ತೀಂಟೆಗಂ ಕಜ್ಜಿಗಂ |
ಬದಿಯಂ ತೋಡುವುದೊಳ್ಳಿತಲ್ತು ಬಗೆವಂದಾತ್ಮಂಗೆ ನಾರೀರತಂ ||
ಮುದವಲ್ತಾದೊಡಮಂತದಂ ಬಿಡಲಶಕ್ಯಂ ಬಿಟ್ಟೊಡೀ ಯೌವನೋ-
ನ್ಮದದುದ್ರೇಕವಡಂಗದೇವೆನಕಟಾ ! ರತ್ನಾಕರಾಧೀಶ್ವರಾ ! ||೬೦||

ಮದವೆದ್ದ ಆನೆಗೆ ಕಲ್ಲಪೊಯ್ವುದಿನಿದೇ ? ಮೆಯ್ತೀಂಟೆಗಂ ಕಜ್ಜಿಗಂ
ಬದಿಯಂ ತೋಡುವುದು ಒಳ್ಳಿತಲ್ತು, ಬಗೆವಂದು ಆತ್ಮಂಗೆ ನಾರೀರತಂ
ಮುದವಲ್ತು, ಆದೊಡಂ ಅಂತದಂ ಬಿಡಲ್ ಅಶಕ್ಯಂ, ಬಿಟ್ಟೊಡೆ ಈ
ಯೌವನೋನ್ಮದದ ಉದ್ರೇಕವು ಅಡಂಗದು, ಏವೆನಕಟಾ ! ರತ್ನಾಕರಾಧೀಶ್ವರಾ !

ಮದವೆದ್ದ ಆನೆಗೆ–ಮದ ಹತ್ತಿದ ಆನೆಗೆ, ಕಲ್ಲು ಪೊಯ್ವುದು ಇನಿದೇ-ಕಲ್ಲನ್ನು ಹೊಡೆಯುವುದು ಹಿತವೇ ? ಮೆಯ್‌ತೀಂಟೆಗಂ–ಮೆಯ್ ನವೆಗೂ, ಕಜ್ಜಿಗಂ-ಕಜ್ಜಿಗೂ, ಬದಿಯಂ–ಕೆಸರನ್ನು, ತೋಡುವುದು ಒಳ್ಳಿತಲ್ತು–ತೋಡುವುದು ಒಳ್ಳೆಯದಲ್ಲ, ಬಗೆವಂದು–ಆಲೋಚಿಸಿದರೆ, ಆತ್ಮಂಗೆ–ಆತ್ಮನಿಗೆ, ನಾರೀರತಂ–ಸ್ತ್ರೀ ಸಂಭೋಗವು, ಮುದವಲ್ತು–ಆನಂದದಾಯಕವಲ್ಲ, ಆದೊಡಂ-ಆದರೂ, ಅಂತದಂ-ಹಾಗೆ ಆ ಸ್ತ್ರೀ ಸಂಭೋಗವನ್ನು, ಬಿಡಲ್ ಅಶಕ್ಯಂ-ಬಿಡುವುದು ಅಸಾಧ್ಯವು, ಬಿಟ್ಟೊಡೆ–ಬಿಟ್ಟರೆ, ಈ ಯೌವನೋನ್ಮದದ ಉದ್ರೇಕವು ಅಡಂಗದು–ಈ ಯೌವನದ ಸೊಕ್ಕಿನ ಆಧಿಕ್ಯವು ಶಾಂತವಾಗುವುದಿಲ್ಲ, ಏವೆನ್ ಅಕಟಾ-ಅಯ್ಯೋ ಏನುಮಾಡಲಿ ! ರತ್ನಾಕರಾಧೀಶ್ವರಾ !

ಮದವೆದ್ದ ಆನೆಗೆ ಕಲ್ಲಿಂದ ಹೊಡೆದರೆ ಹಿತವಾದೀತೇ ? ಅಂಥ ಆನೆಯನ್ನು ಅಂಕೆಯಲ್ಲಿ ಇಟ್ಟುಕೊಳ್ಳಲಾದೀತೇ : ಮೆಯ್ ನವೆಯಾದಾಗ, ಕಜ್ಜಿಯೆದ್ದಾಗ, ಕೆಸರುತೋಡಿ ಅದರಲ್ಲಿ ಕುಳಿತುಕೊಂಡರೆ ಒಳ್ಳೆಯದಾದೀತೇ ? ಸ್ತ್ರೀ ಸಹವಾಸ ಜೀವಕ್ಕೆ ಹಿತವಲ್ಲವೆಂಬುದೇನೋ ನಿಜ. ಆದರೆ ಈ ಯೌವನದ ಸೊಕ್ಕನ್ನು ತಡೆಯಲು ಸಾಧ್ಯವಾಗುತ್ತಿಲ್ಲವಲ್ಲ ! ಸ್ತ್ರೀ ಸಹವಾಸ ಅನಿವಾರ್ಯವಾಗಿದೆಯೆಲ್ಲ ! ಏನು ಮಾಡಲಿ ?

ತನುವೇಳ್ಕೆಂಬವನೌಷಧಕ್ಕೆಳಸನೇ ? ಪಿತ್ತೋರ್ಜಿತಂ ದೇಹಶೋ-
ಧನೆಯಂ ಮಾಳ್ಪವೊಲಂಗನಾಸುರತದಿಂ ತನ್ನಿಂದ್ರಿಯಂ ಪೋಗೆ ಯೌ-॥
ವನತಾಪಂ ನಿಲುಗುಂ ನಿಲಲ್ಚರಿತೆ ಸಲ್ಗುಂ ಸದ್ಗೃಹಸ್ಥಂಗೆ ತ-
ತ್ತನುಬೇಡೆಂಬ ಮುನೀಶ್ವರಂಗುಚಿತವೇ ? ರತ್ನಾಕರಾಧೀಶ್ವರಾ ! ॥೬೧॥

ತನುವೇಳ್ಕು ಎಂಬವನ್ ಔಷಧಕ್ಕೆಳಸನೇ ? ಪಿತ್ತಊರ್ಜಿತಂ ದೇಹಶೋಧನೆ
ಯಂ ಮಾಳ್ಪವೊಲ್, ಅಂಗನಾ ಸುರತದಿಂ ತನ್ನಿಂದ್ರಿಯಂ ಪೋಗೆ ಯೌವನ
ತಾಪಂ ನಿಲುಗುಂ, ನಿಲಲ್ ಚರಿತೆ ಸಲ್ಗುಂ ಸದ್ಗೃಹಸ್ಥಂಗೆ, ತತ್
ತನುಬೇಡೆಂಬ ಮುನೀಶ್ವರಂಗೆ ಉಚಿತವೇ ? ರತ್ನಾಕರಾಧೀಶ್ವರಾ !

ತನುವೇಳ್ಕು ಎಂಬವನ್–ಶರೀರವು ಬೇಕೆಂದು ಹೇಳುವವನು, ಔಷಧಕ್ಕೆ, ಎಳಸನೇ–ಔಷಧಕ್ಕೆ ಅಪೇಕ್ಷೆಪಡುವುದಿಲ್ಲವೇ ? ಪಿತ್ತಊರ್ಜಿತಂ–ಹೆಚ್ಚು ಪಿತ್ತವುಳ್ಳವನು, ದೇಹಶೋಧನೆಯಂ ಮಾಳ್ಪವೊಲ್-ವಾಂತಿ ಮೊದಲಾದವುಗಳಿಂದ ಶರೀರವನ್ನು ಶುದ್ಧಮಾಡಿಕೊಳ್ಳುವಹಾಗೆ, ಅಂಗನಾ ಸುರತದಿಂ–ಸ್ತ್ರೀ ಸಂಭೋಗದಿಂದ, ತನ್ನಿಂದ್ರಿಯಂ ಪೋಗೆ–ತನ್ನ ವೀರ್ಯವು ಹೋಗಲಾಗಿ, ಯೌವನತಾಪಂ–ಯೌವನದ ತಾಪ, ನಿಲುಗುಂ ನಿಲ್ಲುವುದು (ಶಮನವಾಗುವುದು), ನಿಲಲ್-ಆ ಯೌವನ ತಾಪವು ನಿಂತರೆ, ಸದ್ಗೃಹಸ್ಥಂಗೆ–ಸದ್ಗೃಹಸ್ಥನಿಗೆ, ಚರಿತೆಸಲ್ಗುಂ–ಚಾರಿತ್ರವುಂಟಾಗುವುದು, ತತ್ ತನುಬೇಡೆಂಬ–ಆ ಶರೀರವು ಬೇಡವೆಂದು ಹೇಳುವ, ಮುನೀಶ್ವರಂಗೆ–ಮುನೀಶ್ವರನಿಗೆ, ಉಚಿತವೇ–ಸ್ತ್ರೀ ಸಂಭೋಗವು ಉಚಿತವೇ ? ರತ್ನಾಕರಾಧೀಶ್ವರಾ !

ಧರ್ಮಾನುಷ್ಠಾನಕ್ಕಾಗಿ ದೇಹವನ್ನು ಬಯಸುವವನು, ಅದರ ಸುಸ್ಥಿತಿಗಾಗಿ ರೋಗಬಂದಾಗ ಔಷಧಿ ಕುಡಿಯದೇ ಇರುತ್ತಾನೆಯೇ ? ಪಿತ್ತ ಕೆರಳಿದಾಗ ಅದರ ಶಮನಕ್ಕಾಗಿ ವಾಂತಿ ಮಾಡಿಕೊಂಡು ದೇಹವನ್ನು ಶುದ್ಧಿಮಾಡಿಕೊಳ್ಳುವುದಿಲ್ಲವೇ ? ಹಾಗೆ ಯೌವನದಲ್ಲಿ ಕಾಮವನ್ನು ತಡೆಯಲು ಸಾಧ್ಯವಿಲ್ಲದಿರುವಾಗ ಅದರ ಮದವನ್ನು ಇಳಿಸಲು, ಸ್ತ್ರೀ ಸಂಭೋಗ ಅನಿವಾರ್ಯ. ವೀರ್ಯ ತುಳುಕಿದಮೇಲೆ ಕಾಮದ ಕಾವು ಆರಿ ಸಮಾಧಾನವಾಗುವುದು, ಅನಂತರ ಸದ್ಗೃಹಸ್ಥನಿಗೆ ಸಚ್ಚಾರಿತ್ರ ಲಭಿಸುತ್ತದೆ. ಇದು ಗೃಹಸ್ಥಾಶ್ರಮದ ಒಂದು ಲಕ್ಷಣ. ಗೃಹಸ್ಥನಿಗೆ ಇದು ಸಲ್ಲುತ್ತದೆ. ಆದರೆ ಅನಿತ್ಯವಾದ ಈ ಶರೀರದ ಮೇಲಿನ ಮಮಕಾರವನ್ನು ತೊರೆದ ಮಹಾಮುನಿ ಕಾಮಕ್ರೀಡೆಗಾಶಿಸಬಹುದೇ ? ಅದು ಸರಿಯಾದೀತೇ ? ಗೃಹಸ್ಥ ತನ್ನ ಧರ್ಮಪತ್ನಿಯಲ್ಲಿ ತನ್ನ ಕಾಮವಾಸನೆಯನ್ನು ತೀರಿಸಿಕೊಳ್ಳಬಹುದು. ಆದರೆ ಮುನಿಯಾದವನ ಮನಸ್ಸಿನಲ್ಲಿಯೂ ಸಹ ಇಂಥ ಭಾವನೆ ಬರಬಾರದು.

ವಿಷವೋದ್ರೇಕದ ಜವ್ವನಂದಳೆದೊಡಂ ತತ್ಪ್ರಾಯದಿಂ ಪೆಣ್ಗಳೊಳ್ ।
ವಿಷಯಕ್ಕಾಟಿಸನಾವಗಂ ಪರಮತತ್ತ್ವಜ್ಞಾನ ಸಂತುಷ್ಟಕಂ ॥
ರಿಸಿತಾನಕ್ಕೆಮ ಶಿಷ್ಯನಕ್ಕೆಮ ಅವಂ ಮಾನುಷ್ಯನಲ್ತಲ್ತು ನಿ-
ರ್ವಿಷರೂಪಂ ನಿರಘಂ ನಿರಾವರಣನೈ ರತ್ನಾಕರಾಧೀಶ್ವರಾ ! ॥೬೨॥

ವಿಷವೋದ್ರೇಕದ ಜವ್ವನಂ ತಳೆದೊಡಂ, ತತ್‌ಪ್ರಾಯದಿಂ ಪೆಣ್ಗಳೊಳ್
ವಿಷಯಕ್ಕೆ ಆಟಿಸನ್ ಆವಗಂ, ಪರಮತತ್ತ್ವಜ್ಞಾನಸಂತುಷ್ಟಕಂ
ರಿಸಿತಾನ್ ಅಕ್ಕೆಮ ಶಿಷ್ಯನ್ ಅಕ್ಕೆಮ ಅವಂ ಮಾನುಷ್ಯನಲ್ತಲ್ತು,
ನಿರ್ವಿಷರೂಪಂ ನಿರಘಂ ನಿರಾವರಣನೈ ರತ್ನಾಕರಾಧೀಶ್ವರಾ !

ವಿಷಮ ಉದ್ರೇಕದ ಜವ್ವನಂ-ಬಹು ತೀವ್ರವಾದ ಯೌವನವನ್ನು, ತಳೆದೊಡಂ-ಹೊಂದಿದರೂ, ತತ್ ಪ್ರಾಯದಿಂ-ಆ ಯೌವನಾವಸ್ಥೆಯಲ್ಲಿ, ಪೆಣ್ಗಳೊಳ್-ಸ್ತ್ರೀಯರಲ್ಲಿ, ವಿಷಯಕ್ಕೆ ಆಟಿಸನ್ ಆವಗಂ-ಸಂಭೋಗ ಸುಖಕ್ಕೆ ಯಾವಾಗಲೂ ಅಪೇಕ್ಷೆ ಪಡುವುದಿಲ್ಲ, ಪರಮ ತತ್ತ್ವಜ್ಞಾನಸಂತುಷ್ಟಕಂ-ಅವನು ಪರಮತತ್ತ್ವಜ್ಞಾನದಿಂದ ಸಂತೋಷವನ್ನು ಹೊಂದಿರುವವನೂ ಆದ, ರಿಸಿತಾನ್ ಅಕ್ಕೆಮ-ತಪಸ್ವಿಯಾಗಿರಲಿ, ಶಿಷ್ಯನ್ ಅಕ್ಕೆಮ-ಶಿಷ್ಯನಾಗಿರಲಿ, ಅವಂ-ಅವನು, ಮಾನುಷ್ಯನ್ ಅಲ್ತು ಅಲ್ತು-ಖಂಡಿತ ಮನುಷ್ಯನಲ್ಲ, ನಿರ್ವಿಷರೂಪಂ-ವಿಷಯಸುಖರಹಿತ ಸ್ವರೂಪವುಳ್ಳವನೂ, ನಿರಘಂ-ಪಾಪ ರಹಿತನು, ನಿರಾವರಣನೈ-ಜ್ಞಾನಾವರಣ ಮೊದಲಾದ ಕರ್ಮರಹಿತನು. ರತ್ನಾಕರಾಧೀಶ್ವರಾ !

ಏರುಜವ್ವನದಲ್ಲಿ ಕಾಮದ ತೀವ್ರತೆಯಿದ್ದರೂ ಅಂತಹ ಯೌವನಾವಸ್ಥೆಯಲ್ಲಿಯೂ ಸ್ತ್ರೀಯರಲ್ಲಿ ಸಂಭೋಗಸುಖಕ್ಕೆ ಬಯಸದೇ ಇರುವುದು ಸಾಮಾನ್ಯದ ವಿಷಯವಲ್ಲ. ತನ್ನ ಇಂದ್ರಿಯಗಳ ಮೇಲೆ ಸಂಪೂರ್ಣ ಹತೋಟಿಯಿರುವವನಿಗೆ ಮಾತ್ರ ಇದು ಸಾಧ್ಯ. ಅಂತಹ ಜಿತೇಂದ್ರಿಯನು ಪರಮ ತತ್ತ್ವಜ್ಞಾನಿಯಾಗಲಿ, ತಪಸ್ವಿಯಾಗಲಿ, ಶಿಷ್ಯೋತ್ತಮನಾಗಲಿ, ಅವನನ್ನು ಸಾಮಾನ್ಯ ಮನುಷ್ಯರ ಗುಂಪಿಗೆ ಸೇರಿಸಲಾಗುವುದಿಲ್ಲ. ಅವನು ವಿಷಯಸುಖರಹಿತ ಸ್ವರೂಪವುಳ್ಳವನೂ, ಪಾಪರಹಿತನೂ, ಕರ್ಮನಿರ್ಜರೆಯಾದ ಮಹಾಚೇತನವೇ ಆಗಿರಲಿಕ್ಕೆ ಸಾಧ್ಯ.

ಮದ್ದುಂ ಮಾನಿನಿಯುಂ ಸಮಾನಮರಿವಂಗಂತಲ್ಲದೇಂ ಪೆಣ್ಣೊಳೊಂ-
ದಿರ್ದುಂ ಶ್ರೀ ಜಿನದತ್ತನುಂ ಕಪಿಲಮಿತ್ರಂ ವಾರಿಷೇಣಾದಿಗಳ್ ||
ಸಾರ್ದಿರ್ಪರ್ಸುಡುಗಾಡನೇಕೆ? ತಪವೇಕಾ ಪರ್ವದೊಳ್ಮತ್ತೆ ಪೆ-
ಣ್ಣಿರ್ದತ್ತೈದುವರೆಯ್ದಿಯುಂ ಭ್ರಮಿತರೋ ರತ್ನಾಕರಾಧೀಶ್ವರಾ ! ||೬೩||

ಮದ್ದುಂ ಮಾನಿನಿಯುಂ ಸಮಾನಂ ಅರಿವಂಗೆ ಅಂತಲ್ಲದೇಂ, ಪೆಣ್ಣೊಳ್
ಒಂದಿರ್ದುಂ ಶ್ರೀ ಜಿನದತ್ತನುಂ ಕಪಿಲಮಿತ್ರಂ ವಾರಿಷೇಣಾದಿಗಳ್
ಸಾರ್ದಿರ್ಪರ್ ಸುಡುಗಾಡನೇಕೆ ? ತಪವೇಕೆ ಆ ಪರ್ವದೊಳ್ ಮತ್ತೆ
ಪೆಣ್ಣಿರ್ದತ್ತ ಐದುವರ್ ಎಯ್ದಿಯುಂ ಭ್ರಮಿತರೋ, ರತ್ನಾಕರಾಧೀಶ್ವರಾ !

ಅರಿವಂಗೆ – ವಿಚಾರಮಾಡುವವನಿಗೆ, ಮದ್ದುಂ – ಔಷಧವು, ಮಾನಿನಿಯುಂ – ಸ್ತ್ರೀಯು, ಸಮಾನಂ-ಸಮಾನವು, ಅಂತಲ್ಲದೇಂ-ಹಾಗಲ್ಲದೇನು ? ಪೆಣ್ಣೊಳ್ ಒಂದಿರ್ದುಂ-ಹೆಂಡರಲ್ಲಿ ಸೇರಿದ್ದರೂ, ಶ್ರೀ ಜಿನದತ್ತನುಂ-ಶ್ರೀ ಜಿನದತ್ತನೂ, ಕಪಿಲಮಿತ್ರಂ-ಕಪಿಲಮಿತ್ರನೂ, ವಾರಿಷೇಣಾದಿಗಳ್-ವಾರಿಷೇಣ ಮೊದಲಾದವರೂ, ಸುಡುಗಾಡನೇಕೆ ಸಾರ್ದು ಇರ್ಪರ್-ಶ್ಮಶಾನವನ್ನೇತಕ್ಕೆ ಹೊಂದಿರುವರು ? ಆ ಪರ್ವದೊಳ್-ಆ ಪರ್ವತಿಥಿಗಳಲ್ಲಿ, ತಪವೇಕೆ ?–ತಪಸ್ಸೇಕೆ ? ಮತ್ತೆ-ಆಮೇಲೆ, ಪೆಣ್ ಇರ್ದತ್ತ–ಸ್ತ್ರೀಯರಿದ್ದಲ್ಲಿಗೆ, ಐದುವರ್–ಹೋಗುತ್ತಾರೆ, ಎಯ್ದಿಯುಂ–ಹಾಗೆ ಹೋಗಿಯೂ, ಭ್ರಮಿತರೋ-ಮೋಹಿತರಾದರೇ ? ರತ್ನಾಕರಾಧೀಶ್ವರಾ !

ತಿಳಿದಂಥವರಿಗೆ ಔಷಧವೂ ಸ್ತ್ರೀಯೂ ಎರಡೂ ಒಂದೇ, ಶ್ರೀ ಜಿನದತ್ತ, ಕಪಿಲಮಿತ್ರ, ವಾರಿಷೇಣರೇ ಮೊದಲಾದ ಆತ್ಮಜ್ಞಾನಿಗಳು, ತಮಗೆ ನಲ್ಲೆಯರಿದ್ದರೂ ಆಗಾಗ ಸ್ಮಶಾನಕ್ಕೆ ಹೋಗಿ ತಪಸ್ಸನ್ನಾಚರಿಸಿದರು. ಪರ್ವತಿಥಿಗಳಲ್ಲಿ ಸಂಸಾರದ ಎಲ್ಲ ವ್ಯವಹಾರವನ್ನು ತೊರೆದು ಧ್ಯಾನಾಸಕ್ತರಾಗುತ್ತಿದ್ದರು. ಅನಂತರ ಮನೆಗೆ ಬಂದರೂ ತಮ್ಮ ಮಡದಿಯರಲ್ಲಿ ಮೋಹಗೊಳ್ಳುತ್ತಿದ್ದರೇ ? ತಾವರೆ ಎಲೆಯಮೇಲಿನ ಹನಿಯಂತೆ ಸಂಸಾರಕ್ಕೆ ಅಂಟಿಯೂ ಅಂಟದಂತೆ ಜ್ಞಾನಿಗಳು ಮೆರೆಯುತ್ತಾರೆ.

ಧಾರಾಪೂರ್ವಕಮಾದ ಪೆಣ್ಗಳೊಳವರ್ ಪ್ರತ್ಯೇಕಮೇಕೈಕ ಪ-
ತ್ನೀರಾಗವ್ರತಿಕರ್ ಮದಕ್ಷಯನಿಮಿತ್ತಂ ಕಾಮಮಂ ತೀರ್ಚುವರ್ ॥
ವಾರಸ್ತ್ರೀ ಬಹುಲಾಂಗನಾಪರವಧೂ ಚೇಟೀರತಕ್ಕಾಟಿಸರ್ ।
ಸಾರಾತ್ಮರ್ಜಿನದತ್ತಮುಖ್ಯರಘರೇ ? ರತ್ನಾಕರಾಧೀಶ್ವರಾ ! ॥೬೪॥

ಧಾರಾಪೂರ್ವಕಮಾದ ಪೆಣ್ಗಳೊಳ್ ಅವರ್ ಪ್ರತ್ಯೇಕಂ ಏಕೈಕ ಪತ್ನೀ
ರಾಗವ್ರತಿಕರ್, ಮದಕ್ಷಯನಿಮಿತ್ತಂ ಕಾಮಮಂ ತೀರ್ಚುವರ್,
ವಾರಸ್ತ್ರೀ ಬಹುಲಾಂಗನಾ ಪರವಧೂ ಚೇಟೀರತಕ್ಕಾಟಿಸರ್
ಸಾರಾತ್ಮರ್ ಜಿನದತ್ತಮುಖ್ಯರ್ ಅಘರೇ ! ರತ್ನಾಕರಾಧೀಶ್ವರಾ !

ಧಾರಾಪೂರ್ವಕಮಾದ – ಧಾರಾಪೂರ್ವಕವಾಗಿ ಪರಿಗ್ರಹಿಸಿದ, ಪೆಣ್ಗಳೊಳ್ – ಸ್ತ್ರೀಯರಲ್ಲಿ, ಅವರ್-ಅವರು (ಜಿನದತ್ತ ಮೊದಲಾದವರು), ಪ್ರತ್ಯೇಕಂ-ಪ್ರತ್ಯೇಕವಾಗಿ, ಏಕೈಕಪತ್ನೀ-ಓರೋರ್ವ ಧರ್ಮಪತ್ನಿಯಲ್ಲಿ, ರಾಗವ್ರತಿಕರ್–ಸಂತೋಷಪಡುವ ವ್ರತವುಳ್ಳವರಾಗಿ, ಮದಕ್ಷಯನಿಮಿತ್ತಂ–ಸೊಕ್ಕನ್ನಡಗಿಸಿಕೊಳ್ಳುವುದಕ್ಕೋಸ್ಕರ, ಕಾಮಮಂ ತೀರ್ಚುವರ್-ಕಾಮದ ಇಚ್ಛೆಯನ್ನು ಪೂರೈಸಿಕೊಳ್ಳುತ್ತಾರೆ, ವಾರಸ್ತ್ರೀ-ವೇಶ್ಯಾಸ್ತ್ರೀ, ಬಹುಲಾಂಗನಾ-ಬಹುಪತ್ನೀ, ಪರವಧೂ–ಪರಸ್ತ್ರೀ, ಚೇಟೀ-ಸೇವಕಳು (ಇವರ), ರತಕ್ಕೆ ಆಟಿಸರ್-ಸಂಭೋಗಕ್ಕೆ ಉತ್ಸಾಹಪಡುವುದಿಲ್ಲವು, ಸಾರಾತ್ಮರ್–ಪವಿತ್ರಾತ್ಮರಾದ, ಜಿನದತ್ತಮುಖ್ಯರ್-ಜಿನದತ್ತ ಮೊದಲಾದವರು, ಅಘರೇ–ಪಾಪವುಳ್ಳವರೇ ? ರತ್ನಾಕರಾಧೀಶ್ವರಾ !

ಜಿನದತ್ತರಂತಹ ಸಮ್ಯಕ್ ದೃಷ್ಟಿಗಳು ಧಾರಾಪೂರ್ವಕವಾಗಿ ಕೈಹಿಡಿದ ಧರ್ಮಪತ್ನಿಯೊಡನೆ ಮಾತ್ರ ತಮ್ಮ ಯೌವನದ, ಮದದ ಸೊಕ್ಕನ್ನಡಗಿಸಲು ಸಂಭೋಗಿಸಿದರೇ ಹೊರತು ಎಂದೂ ವೇಶ್ಯೆಯರೊಡನಾಗಲೀ, ಬಹುಪತ್ನಿಯರೊಡನಾಗಲೀ, ದಾಸಿಯನೊಡನಾಗಲೀ ಕೂಡಿಲ್ಲ. ಏಕ ಪತ್ನೀ ವ್ರತಸ್ಥರೂ, ಪವಿತ್ರಾತ್ಮರೂ ಆದ ಇಂತಹ ಪುಣ್ಯಾತ್ಮರುಗಳ ಬಳಿ ಪಾಪಕರ್ಮ ಎಂದಾದರೂ ಸುಳಿದೀತೇ ?

ಸತ್ಯಾಧಿಷ್ಠಿತಧರ್ಮಮಂ ತಿಳಿದು ಜೀವಂ ತನ್ನನೀ ಕಾಮುನ-
ಪ್ರತ್ಯಾಖ್ಯಾನ ಕಷಾಯಸಂಭವದೆ ಸುತ್ತಿತ್ತೆಂದು ಪೆಣ್ಗೂಡಿಯುಂ ||
ರತ್ಯಂತೋದ್ಭವಹೇಯಮಂ ನೆನೆಯುತುಂ ಪೋಗಲ್ಜಯಂ ಪೆಣ್ಗೆ ತಾ
ನತ್ಯಂತ ಪ್ರಿಯಬದ್ಧನಾಗೆ ಕಿಡನೇ ? ರತ್ನಾಕರಾಧೀಶ್ವರಾ ! ||೬೫||

ಸತ್ಯಾಧಿಷ್ಠಿತಧರ್ಮಮಂ ತಿಳಿದು ಜೀವಂ, ತನ್ನ ಈ ಕಾಮವು
ಅಪ್ರತ್ಯಾಖ್ಯಾನ ಕಷಾಯಸಂಭವದೆ ಸುತ್ತಿತ್ತೆಂದು, ಪೆಣ್ ಕೂಡಿಯುಂ
ರತಿ ಅಂತೋದಭ್ವಹೇಯಮಂ ನೆನೆಯುತುಂ ಪೋಗಲ್ ಜಯಂ, ಪೆಣ್ಗೆ ತಾನ್
ಅತ್ಯಂತ ಪ್ರಿಯಬದ್ಧನಾಗೆ ಕಿಡನೇ ? ರತ್ನಾಕರಾಧೀಶ್ವರಾ !

ಜೀವಂ-ಜೀವನು, ಸತ್ಯ ಅಧಿಷ್ಠಿತ ಧರ್ಮಮಂ ತಿಳಿದು-ಯಥಾರ್ಥವಾಗಿರುವ ಧರ್ಮವನ್ನು ತಿಳಿದು, ತನ್ನಂ-ತನ್ನನ್ನು, ಈ ಕಾಮವು-ಈ ಸಂಭೋಗದ ಇಚ್ಛೆಯು, ಅಪ್ರತ್ಯಾಖ್ಯಾನ ಕಷಾಯ ಸಂಭವದೆ-ಅಪ್ರತ್ಯಾಖ್ಯಾನ ಕ್ರೋಧಮಾನಮಾಯಲೋಭಗಳೆಂಬ ಕಷಾಯಗಳ ಉದಯದಿಂದ, ಸುತ್ತಿತ್ತು ಎಂದು-ಸುತ್ತಿಕೊಂಡಿದೆ ಎಂದು, ಪೆಣ್‌ಕೂಡಿಯುಂ-ಹೆಣ್ಣನ್ನು ಕೂಡಿದರೂ, ರತಿ ಅಂತ ಉದ್ಭವ ಹೇಯಮಂ ನೆನೆಯುತುಂ-ಸಂಭೋಗಾಂತ್ಯದಲ್ಲಿ ಉಂಟಾದ ಹೇಯವನ್ನು ಪರಿಭಾವಿಸುತ್ತ, ಪೋಗಲ್-ಹೋಗಲು, ಜಯಂ-ಜಯವುಂಟಾಗುವುದು, ಪೆಣ್ಗೆ ತಾನ್-ತಾನು ಹೆಣ್ಣಿಗೆ, ಅತ್ಯಂತ ಪ್ರಿಯಬದ್ಧನಾಗೆ-ಬಹಳವಾಗಿ ಮೋಹಿತನಾದರೆ, ಕಿಡನೇ-ಕೆಡುವುದಿಲ್ಲವೇ ? ರತ್ನಾಕರಾಧೀಶ್ವರಾ !

ಯಥಾರ್ಥವಾಗಿರುವ ಧರ್ಮದ ಮರ್ಮವನ್ನು ತಿಳಿದು ತನ್ನ ಆತ್ಮೋದ್ಧಾರಕ್ಕಾಗಿ ಹೆಣಗಾಡುತ್ತಿರುವ ಜೀವನು ಈ ಸಂಸಾರದಲ್ಲಿ ಸಿಕ್ಕಿದ್ದರೂ ತನ್ನ ದೃಷ್ಟಿಯನ್ನು ಯಾವಾಗಲೂ ಊರ್ಧ್ವಮುಖವಾಗಿಯೇ ಇಟ್ಟಿರುವನು. ಸಂಭೋಗದ ಇಚ್ಛೆಯು ಅಪ್ರತ್ಯಾಖ್ಯಾನ ಕಷಾಯಗಳ ಸಂಭವದಿಂದ ತನಗೆ ಉಂಟಾಗುತ್ತಿದೆ ಎಂದು ತಿಳಿದು ತನ್ನ ಕಾಮದ ಕಾವನ್ನು ತನ್ನ ಧರ್ಮಪತ್ನಿಯಲ್ಲಿ ಕೂಡಿ ಆರಿಸಿಕೊಳ್ಳುವನು. ಹೀಗೆ ಸಂಭೋಗದಲ್ಲಿ ತೊಡಗಿದ್ದರೂ ಅದರ ಹೇಯತ್ವವನ್ನು ಪರಿಭಾವಿಸುತ್ತಿರುವನು. ಇಂಥಹವನಿಗೆ ಜಯಸಿದ್ಧಿ ಖಂಡಿತ. ಇದುಬಿಟ್ಟು ಸ್ತ್ರೀ ಮೋಹದಲ್ಲೇ ಮುಳುಗಿಹೋದರೆ ಅವನು ಪೂರ್ಣ ಮುಳುಗಿದಂತೆಯೇ ಸರಿ.

ಮೊಲೆಯುಮಂ ಮುದ್ದುಮೊಗಂ ಬೆಡಂಗೆಸೆಯೆ ಪೆಣ್ಣಂತಿರ್ದಳಿಂತಿರ್ದಳೆಂ-
ದೊಲವಿಂ ಭಾವಿಸಿ ಕಾಣ್ಬುದೇ ನರಕಮಬ್ಧಿಪ್ರಾಂತಮುಗ್ನಾದ್ರಿಯೊಳ್ ||
ಸಲಿಲಂ ತನ್ನುಡೆ ಮುಟ್ಟೆ ತೋರ್ಪನದೆ ಪಲ್ಯಂಕಾಸನಂ ಸ್ಫಾಟಿಕೋ-
ಜ್ಜ್ವಲನೆಂದಾಗಳೆ ನಿಮ್ಮ ಕಂಡೊಡೆ ಸುಖಂ ರತ್ನಾಕರಾಧೀಶ್ವರಾ ! ||೬೬||

ಮೊಲೆಯುಮಂ ಮುದ್ದುಮೊಗಂ ಬೆಡಂಗು ಎಸೆಯೆ ಪೆಣ್ ಅಂತಿರ್ದಳ್ ಇಂತಿರ್ದಳ್
ಎಂದು ಒಲವಿಂ ಭಾವಿಸಿ ಕಾಣ್ಬುದೇ ನರಕಂ, ಅಬ್ಧಿಪ್ರಾಂತ ಮಗ್ನಾದ್ರಿಯೊಳ್
ಸಲಿಲಂ ತನ್ನುಡೆ ಮುಟ್ಟೆ ತೋರ್ಪನ್, ಅದೆ ಪಲ್ಯಂಕಾಸನಂ ಸ್ಫಾಟಿಕೋ
ಜ್ಜ್ವಲನ್ ಎಂದಾಗಳೆ ನಿಮ್ಮ ಕಂಡೊಡೆ ಸುಖಂ ರತ್ನಾಕರಾಧೀಶ್ವರಾ !

ಮೊಲೆಯುಂ–ಕುಚವೂ, ಮುದ್ದುಮೊಗಂ–ಮುದ್ದಾದ ಮುಖವೂ, ಬೆಡಂಗು–ಸೊಗಸೂ, ಎಸೆಯೆ–ಪ್ರಕಾಶಿಸುತ್ತಿರಲು, ಪೆಣ್ ಅಂತಿರ್ದಳ್ ಇಂತಿರ್ದಳ್–" ಹೆಣ್ಣು ಹಾಗಿದ್ದಳು, ಹೀಗಿದ್ದಳು ", ಎಂದು ಒಲವಿಂ ಭಾವಿಸಿ–ಎಂದು ಪ್ರೀತಿಯಿಂದ ಭಾವಿಸಿ, ಕಾಣ್ಬುದೇ–ನೋಡುವುದೇ, ನರಕಂ–ನರಕವು, ಅಬ್ಧಿಪ್ರಾಂತ–ಸಮುದ್ರದ ಸಮೀಪದಲ್ಲಿ, ಮಗ್ನ ಅದ್ರಿಯೊಳ್–ಮುಳುಗಿರುವ ಪರ್ವತದಲ್ಲಿ, ಸಲಿಲಂ–ನೀರು, ತನ್ನ ಉಡೆ ಮುಟ್ಟೆ–ತನ್ನ ಸೊಂಟದ ಹತ್ತಿರದವರೆಗೂ ಇರುವ ಹಾಗೆ, ತೋರ್ಪನ್–ಕಾಣಿಸುತ್ತಾನೆ, ಯಾರು ? ಪಲ್ಯಂಕಾಸನಂ–ಪದ್ಮಾಸನವುಳ್ಳವನೂ, ಸ್ಫಾಟಿಕ ಉಜ್ಜ್ವಲನ್–ಸ್ಫಟಿಕದಂತೆ ಪ್ರಕಾಶಮಾನನೂ (ಆದ ಸ್ವಾಮಿ) ಎಂದಾಗಳೆ ನಿಮ್ಮ ಕಂಡೊಡೆ–ಎಂದು ಹಾಗೆ ಆ ಪರಮ ಪರಂಜ್ಯೋತಿಸ್ವರೂಪವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡಾಗಲೇ, ಅದೇ ಸುಖಂ–ಅದೇ ಸುಖವು ! ರತ್ನಾಕರಾಧೀಶ್ವರಾ !

ಸುಂದರಿಯಾದ ಸ್ತ್ರೀರೂಪವನ್ನೂ, ಅವಳ ಅಂಗಾಂಗಗಳ ಲಾವಣ್ಯವನ್ನೂ ಮನಸ್ಸಿನಲ್ಲಿ ಮತ್ತೆ ಮತ್ತೆ ಕಲ್ಪಿಸಿಕೊಂಡು ಮೆಲುಕುಹಾಕುವುದೇ ನರಕ. ಸಾಗರದ ನಡುವೆ ಮುಳುಗಿರುವ ಪರ್ವತಾಗ್ರದಲ್ಲಿ ಪರಮ ಪರಂಜ್ಯೋತಿ ಸ್ವರೂಪನಾದ ಅರಹಂತಮೂರ್ತಿ ಪದ್ಮಾಸನದಲ್ಲಿ ವಿರಾಜಮಾನನಾಗಿದ್ದಾನೆ ಎಂದು ಮತ್ತು ಆ ಮೂರ್ತಿಯ ಸೊಂಟದವರೆಗೆ ನೀರಿದೆಯೆಂದು ಕಲ್ಪಿಸಿಕೊಂಡು ಮತ್ತೆ ಮತ್ತೆ ಮನಸ್ಸಿನಲ್ಲಿ ಅದನ್ನೇ ಪರಿಭಾವಿಸುತ್ತಾ ಹೋದರೆ ಜೀವಕ್ಕೆ ತಂಪಾಗುವುದು. ಅದೇ ನಿಜವಾದ ಸುಖ ಮತ್ತು ಪ್ರೀತಿ,

ಪೆರರಂ ಪೇಳ್ದೊಡೆ ನೋವರಾನೆನಗೆ ಪೇಳ್ವೆಂ ಕಾಮಿನೀ ಮೂತ್ರದೊ-
ಜ್ಜರಮೆಯ್ಯಂ ಲತೆಯೆಂದು ಮಾಂಸಕುಚಮಂ ಹೇಮಾಬ್ಜಮೆಂದೆಂದು ನೆ-
ತ್ತರನುಂಡಾತುಟಿಯಂ ಸುಧಾರುಚಿಯೆನುತ್ತಾಂ ಬಿಳ್ದುದುಂ ಸಾಲದ-
ನ್ಯರನೊಯ್ದೆಂ ಕವಿಯೋ? ವಲಂ ಕಪಿಯೊ ನಾಂ? ರತ್ನಾಕರಾಧೀಶ್ವರಾ! ||೬೭||

ಪೆರರಂ ಪೇಳ್ದೊಡೆ ನೋವರ್ ಆನ್ ಎನಗೆ ಪೇಳ್ವೆಂ, ಕಾಮಿನೀ ಮೂತ್ರದ
ಒಜ್ಜರಮೆಯ್ಯಂ ಲತೆಯೆಂದು, ಮಾಂಸಕುಚಮಂ ಹೇಮಾಬ್ಜಮೆಂದೆಂದು,
ನೆತ್ತರಂ ಉಂಡ ಆ ತುಟಿಯಂ ಸುಧಾರುಚಿಯೆನುತ್ತ, ಆಂ ಬಿಳ್ದುದುಂ
ಸಾಲದೆ ಅನ್ಯರನ್ ಒಯ್ದೆಂ, ಕವಿಯೋ ? ವಲಂ ಕಪಿಯೊ ನಾಂ? ರತ್ನಾಕರಾಧೀಶ್ವರಾ !

ಪೆರರಂ ಪೇಳ್ದೊಡೆ–ಬೇರೆಯವರನ್ನು ಕುರಿತು ಹೇಳಿದರೆ, (ಟೀಕಿಸಿದರೆ) ನೋವರ್–ನೊಂದು ಕೊಳ್ಳುವರು, ಆನ್ ಎನಗೆ ಪೇಳ್ವೆಂ–ನಾನು ನನಗೆ ಹೇಳಿಕೊಳ್ಳುತ್ತೇನೆ, ಕಾಮಿನೀ ಮೂತ್ರದ ಒಜ್ಜರ ಮೆಯ್ಯಂ–ಕಾಮುಕ ಸ್ತ್ರೀಯ ಮೂತ್ರದ ಪ್ರವಾಹದಿಂದ ಕೂಡಿರುವ ಶರೀರವನ್ನು, ಲತೆಯೆಂದೂ, ಮಾಂಸಕುಚಮಂ ಹೇಮಾಬ್ಜಂ ಎಂದೆಂದು–ಮಾಂಸದ ಮುದ್ದೆಯಾದ ಮೊಲೆಯನ್ನು ಬಂಗಾರದ ಕಮಲವೆಂದೂ ಹೇಳಿ, ನೆತ್ತರಂ ಉಂಡ ಆ ತುಟಿಯಂ–ರಕ್ತತುಂಬಿದ ಆ ತುಟಿಯನ್ನು, ಸುಧಾರುಚಿ ಯೆನುತ್ತ–ಅಮೃತದ ರುಚಿಯುಳ್ಳುದೆಂದೂ ಹೇಳುತ್ತ, ಆಂ ಬಿಳ್ದುದುಂ ಸಾಲದೆ–ನಾನು ಬಿದ್ದದ್ದು ಸಾಲದೆ, ಅನ್ಯರನ್ ಒಯ್ದೆಂ–ಬೇರೆಯವರನ್ನೂ ಒಯ್ದೆನು, ಕವಿಯೋ ವಲಂ ಕಪಿಯೋ ನಾಂ– ನಿಶ್ಚಯವಾಗಿ ನಾನು ಕವಿಯೋ ? ಅಥವಾ ಕಪಿಯೋ ? ರತ್ನಾಕರಾಧೀಶ್ವರಾ !

ಇನ್ನೊಬ್ಬರನ್ನು ಟೀಕಿಸಿದರೆ ನೊಂದುಕೊಳ್ಳುವರು. ಆದ್ದರಿಂದ ನನ್ನನ್ನು ನಾನೇ ಟೀಕಿಸಿ ಕೊಳ್ಳುವೆನು. ಕಾಮಿನಿಯರ ಮಲಮೂತ್ರಗಳ ಮನೆಯಾದ ದೇಹವನ್ನು ಲತೆಯೆಂದು ಬಣ್ಣಿಸಿದೆ. ಮಾಂಸಭರಿತವಾದ ಮೊಲೆಗಳನ್ನು ಬಂಗಾರದ ಕಮಲಗಳೆಂದು ವರ್ಣಿಸಿದೆ. ರಕ್ತರಂಜಿತವಾದ ತುಟಿ ಗಳನ್ನು ಸುಧಾರುಚಿಯೆನುತ್ತ ಸಾರಿರುವೆನಲ್ಲಾ ! ಏನು ನನ್ನ ಅವಿವೇಕ, ಹುಚ್ಚುತನ ! ನಾನು ಕೆಟ್ಟಿದ್ದ ಲ್ಲದೆ, ನನ್ನ ಕಾವ್ಯವನ್ನು ಓದುವವರನ್ನು ತಪ್ಪುದಾರಿಗೆ ಎಳೆದೆನಲ್ಲಾ ! ನಿಜವಾಗಿ ನಾನು ಕವಿಯೋ ಇಲ್ಲವೇ ? ಕಪಿಯೋ ! ನಾನು ಬೇರೆ ಕಾಣೆ !

ಗುರುಮಾತಾಪಿತರಂ ಪತಿವ್ರತೆಯರಂ ಸಮ್ಯಕ್ತ್ವಸಂಪನ್ನರಂ ।
ಪಿರಿದುಂ ಬಣ್ಣಿಸಿ ಪೇಳ್ಗೆ ತೀರ್ಥಕಕಥಾಶೃಂಗಾರಮುಂ ಪೇಳ್ಗೆ ಮೇಣ್ ॥
ದುರಿತ ಸ್ತ್ರೀಯರನಾತ್ಮಬಾಹ್ಯರನದೇಂ ಪೇಳ್ವರ್ದಿನಂ ಸಗ್ಗದಂ-
ತಿರೆಯುಂಧಂಗೆ ತಮಿಸ್ರೆಯುಂ ನುಡಿವರೇ ? ರತ್ನಾಕರಾಧೀಶ್ವರಾ ! ॥೬೮॥

ಗುರುಮಾತಾಪಿತರಂ ಪತಿವ್ರತೆಯರಂ ಸಮ್ಯಕ್ತ್ವಸಂಪನ್ನರಂ,
ಪಿರಿದುಂ ಬಣ್ಣಿಸಿ ಪೇಳ್ಗೆ, ತೀರ್ಥಕ ಕಥಾಶೃಂಗಾರಮಂ ಪೇಳ್ಗೆ,
ಮೇಣ್ ದುರಿತ ಸ್ತ್ರೀಯರಂ ಆತ್ಮಬಾಹ್ಯರಂ ಅದೇಂ ಪೇಳ್ವರ್, ದಿನಂ
ಸಗ್ಗದಂತಿರೆ ಅಂಧಂಗೆ ತಮಿಸ್ರೆಯುಂ ನುಡಿವರೇ ? ರತ್ನಾಕರಾಧೀಶ್ವರಾ !

ಗುರು ಮಾತಾ ಪಿತರಂ–ಗುರುಗಳನ್ನೂ, ತಾಯಿ ತಂದೆಗಳನ್ನೂ, ಪತಿವ್ರತೆಯರಂ–ಪತಿವ್ರತೆಯರನ್ನೂ, ಸಮ್ಯಕ್ತ್ವಸಂಪನ್ನರಂ–ಸಮ್ಯಕ್ತ್ವ ಸಂಪನ್ನರನ್ನೂ, ಪಿರಿದುಂ ಬಣ್ಣಿಸಿ ಪೇಳ್ಗೆ–ಹೆಚ್ಚಾಗಿ ವರ್ಣನೆಮಾಡಿ ಹೇಳಲಿ, ತೀರ್ಥಕ ಕಥಾಶೃಂಗಾರಮುಂ ಪೇಳ್ಗೆ–ತೀರ್ಥಂಕರರ ಕಥೆಯಲ್ಲಿ ಬರುವ ಶೃಂಗಾರವನ್ನು ಹೇಳಲಿ, ಮೇಣ್–ಇದುಬಿಟ್ಟು, ದುರಿತಸ್ತ್ರೀಯರಂ–ದುಷ್ಟಸ್ತ್ರೀಯರನ್ನೂ, ಆತ್ಮಬಾಹ್ಯರಂ–ಆತ್ಮಸ್ವರೂಪವನ್ನು ತಿಳಿಯದವರನ್ನೂ, ಅದೇಂ ಪೇಳ್ವರ್–ಅದೇನು ವರ್ಣಿಸಿ ಹೇಳುತ್ತಾರೆ! ದಿನಂ ಸಗ್ಗದಂತಿರೆ-ಸ್ವರ್ಗದಂತೆ ಹಗಲು ಇರುತ್ತಿರಲಾಗಿ, ಅಂಧಂಗೆ-ಕುರುಡನಿಗೆ, ತಮಿಸ್ರೆಯುಂ-ರಾತ್ರಿಯನ್ನು ಕುರಿತು. ನುಡಿವರೇ–ಹೇಳುತ್ತಾರೆಯೇ ? ರತ್ನಾಕರಾಧೀಶ್ವರಾ !

ಹಿರಿಯರನ್ನು, ತಂದೆತಾಯಿಯರನ್ನು, ಪತಿವ್ರತೆಯರನ್ನು, ಸಮ್ಯಕ್ತ್ವಸಂಪನ್ನರನ್ನು ಎಷ್ಟು ಬೇಕಾದರೂ ಕೊಂಡಾಡಲಿ. ತೀರ್ಥಂಕರ ಪುರಾಣಗಳಲ್ಲಿ ಬರುವ ಶೃಂಗಾರ ಪ್ರಸಂಗಗಳನ್ನು ಸೊಗಸಾಗಿ ವರ್ಣಿಸಲಿ. ಇವೆಲ್ಲವೂ ಮಾನವನ ಭಾವನೆಯನ್ನು ತಿಳಿಯಾಗಿಡುತ್ತದೆ. ಇದುಬಿಟ್ಟು ದುಷ್ಟ ಸ್ತ್ರೀಯರನ್ನು, ಆತ್ಮಧ್ಯಾನದ ಕಡೆ ಲಕ್ಷ್ಯವಿಲ್ಲದವರನ್ನು, ದುರ್ಮಾರ್ಗಿಗಳನ್ನು ಕೊಂಡಾಡಿ, ಅವರುಗಳ ಮೇಲೆ ಕಾವ್ಯರಚನೆಮಾಡಿ ಅದರಿಂದ ತಾನೂ ಕೆಟ್ಟು ಇತರರನ್ನೂ ಕೆಡಸುವುದಲ್ಲಾ ! ಸ್ವರ್ಗದಂತಿರುವ ಹಗಲನ್ನು ಬಿಟ್ಟು ಕುರುಡನ ಮುಂದೆ ಕತ್ತಲೆಯನ್ನು ವಿವರಿಸುವರಲ್ಲಾ ! ಏನಿದು ಮೂರ್ಖತನ !

ಕವಿತಾಶಕ್ತಿಯೆ ಕಲ್ಪವಲ್ಲಿಯುದನಾ ಸದ್ಧರ್ಮಮೆಂದೆಂಬ ಮೇ-
ರುವಿನೋಳ್ಬಿತ್ತಿ ಮನೋವಿಶುದ್ಧಿ ಬಲವೀರ್ಯಂ ಬುದ್ಧಿಸಾಫಲ್ಯಮಾ ॥
ಕವಿಯುಂ ಸರ್ವರುಮುಣ್ಬರಾ ಫಲಮನಿತ್ತಲ್ಮಾಣ್ದು ಮಿಥ್ಯಾತ್ವಮಾ-
ರವದೊಳ್ಬಿತ್ತಿ ಬಳಲ್ವರೇಕೆಯಕಟಾ ! ರತ್ನಾಕರಾಧೀಶ್ವರಾ ! ॥೬೯॥

ಕವಿತಾಶಕ್ತಿಯೆ ಕಲ್ಪವಲ್ಲಿಯು, ಅದನ್ ಆ ಸದ್ಧರ್ಮಮೆಂದೆಂಬ
ಮೇರುವಿನೋಳ್ ಬಿತ್ತಿ, ಮನೋವಿಶುದ್ಧಿ ಬಲವೀರ್ಯಂ ಬುದ್ಧಿಸಾಫಲ್ಯಂ
ಆ ಕವಿಯುಂ ಸರ್ವರುಂ ಉಣ್ಬರ್ ಆ ಫಲಮಂ, ಇತ್ತಲ್ ಮಾಣ್ದು ಮಿಥ್ಯಾತ್ವ
ಮಾರವದೊಳ್‌ಬಿತ್ತಿ ಬಳಲ್ವರ್ ಏಕೆ ಅಕಟಾ ! ರತ್ನಾಕರಾಧೀಶ್ವರಾ !

ಕವಿತಾಶಕ್ತಿಯೆ ಕಲ್ಪವಲ್ಲಿಯು-ಕವಿತೆಯನ್ನು ರಚಿಸುವ ಸಾಮರ್ಥ್ಯವೇ ಕಲ್ಪಲತೆಯು, ಅದನ್ ಆ ಸದ್ಧರ್ಮಮೆಂದೆಂಬ-ಅದನ್ನು ಆ ಸದ್ಧರ್ಮವೆಂಬ, ಮೇರುವಿನೊಳ್ ಬಿತ್ತಿ-ಮೇರುಪರ್ವತದಲ್ಲಿ ಬಿತ್ತಿ, ಮನೋವಿಶುದ್ಧಿ-ಮನಸ್ಸಿನ ನಿರ್ಮಲತೆ, ಬಲ ವೀರ್ಯಂ-ಬಲ ಮತ್ತು ವೀರ್ಯಗಳು, ಬುದ್ಧಿ ಸಾಫಲ್ಯಂ-ಬುದ್ಧಿ ಸಾಫಲ್ಯಗಳೆಂಬ, ಆ ಫಲಮಂ-ಆ ಫಲವನ್ನು, ಆ ಕವಿಯುಂ-ಆ ನೆಟ್ಟ ಕವಿಯೂ, ಸರ್ವರುಂ-ಎಲ್ಲರೂ, ಉಣ್ಬರ್-ಅನುಭವಿಸುವರು, ಇತ್ತಲ್ ಮಾಣ್ದು-ಇದನ್ನು ಬಿಟ್ಟು, ಮಿಥ್ಯಾತ್ವ ಮಾರವದೊಳ್-ಮಿಥ್ಯಾತ್ವವೆಂಬ ಮರುಭೂಮಿಯಲ್ಲಿ, ಬಿತ್ತಿ-ನೆಟ್ಟು, ಬಳಲ್ವರ್ ಏಕೆ ಅಕಟಾ-ಅಯ್ಯೋ ! ಏತಕ್ಕೆ ಬಳಲುತ್ತಾರೆ ! (ಏತಕ್ಕೆ ದುಃಖಪಡುತ್ತಾರೆ) ರತ್ನಾಕರಾಧೀಶ್ವರಾ !

ಕವಿತಾಶಕ್ತಿ ಕಲ್ಪಲತೆಯಿದ್ದಂತೆ. ಆ ನಿಸರ್ಗದತ್ತಶಕ್ತಿ ಪೂರ್ವಕೃತ ಪುಣ್ಯದಿಂದಾದುದು. ಅದನ್ನು ಸದ್ವಿನಿಯೋಗ ಮಾಡಬೇಕು. ಪರರಿಗೆ ಆ ಶಕ್ತಿಯಿಂದ ಉಪಕಾರವಾಗಬೇಕು ಹಿತವಾಗಬೇಕು. ಸದ್ಧರ್ಮವೃದ್ಧಿಗಾಗಿ ಬಳಸಬೇಕು. ಸದ್ಧರ್ಮವೆಂಬ ಮೇರುಪರ್ವತದಲ್ಲಿ ಬಿತ್ತಿದರೆ ಉತ್ತಮ ಫಲಗಳು ದೊರಕುತ್ತವೆ. ಮನೋನಿರ್ಮಲತೆ, ಶಾಂತಿ, ಶರೀರಶಕ್ತಿ, ಬುದ್ಧಿಶಕ್ತಿ ಇವೆಲ್ಲವನ್ನೂ ಕವಿಯೂ ಮತ್ತು ಆತನ ಕೃತಿರತ್ನವನ್ನು ಅಧ್ಯಯನಮಾಡುವ ಸರ್ವರೂ ಅನುಭವಿಸುವರು. ಇದು ಬಿಟ್ಟು ಕವಿಯಾದವನು ತನ್ನ ಕವಿತಾಶಕ್ತಿಯನ್ನು ಮಿಥ್ಯಾತ್ವವೆಂಬ ಮರುಭೂಮಿಯಲ್ಲಿ ಬಿತ್ತಿದರೆ ಉತ್ತಮ ಫಲಗಳು ದೊರಕುತ್ತದೆಯೇ ? ಕವಿ ತಾನು ಕೆಡುವುದಲ್ಲದೆ ಪರರನ್ನೂ ತಪ್ಪುದಾರಿಗೆ ಎಳೆದು ದುಃಖಿಯಾಗುತ್ತಾನೆ, ಪರರೂ ದುಃಖಪಡುವಹಾಗೆ ಮಾಡುತ್ತಾನೆ.

ಒಡಲಂ ರಕ್ಷಿಸಲನ್ಯರಂ ನುತಿಸಿದಾ ಕೊಂಡಾಟವುಂ ಪೆಣ್ಗಳೊಳ್ ।
ಕಿಡೆಬಿಳ್ದಾಡಿದ ಲಂಪಟಭ್ರಮಣದಾ ಬಂಡಾಟವುಂ ಸರ್ವರೊಳ್ ॥
ನುಡಿದೇಕುಬ್ಬುವರಯ್ಯ ಪುಣ್ಯಕಥೆಯೋ ? ಅಧ್ಯಾತ್ಮವೋ ? ಕೊಳ್ಗೆಸ-
ರ್ಮಡುವಂ ಪಾಲ್ಗಡಲೆಂದು ಕಂಡರಕಟಾ । ರತ್ನಾಕರಾಧೀಶ್ವರಾ ! ॥೭೦॥

ಒಡಲಂ ರಕ್ಷಿಸಲ್ ಅನ್ಯರಂ ನುತಿಸಿದ ಆ ಕೊಂಡಾಟಮಂ, ಪೆಣ್ಗಳೊಳ್
ಕಿಡೆಬಿಳ್ದಾಡಿದ ಲಂಪಟಭ್ರಮಣದ ಆ ಬಂಡಾಟಮಂ, ಸರ್ವರೊಳ್
ನುಡಿದು ಏಕೆ ಉಬ್ಬುವರಯ್ಯ, ಪುಣ್ಯಕಥೆಯೋ ? ಅಧ್ಯಾತ್ಮವೋ ?
ಕೊಳ್ ಕೆಸರಮಡುವಂ ಪಾಲ್ಗಡಲೆಂದು ಕಂಡರ್ ಅಕಟಾ ! ರತ್ನಾಕರಾಧೀಶ್ವರಾ !

ಒಡಲಂ ರಕ್ಷಿಸಲ್–ಶರೀರವನ್ನು ಕಾಪಾಡುವುದಕ್ಕೆ, ಅನ್ಯರಂ ನುತಿಸಿದ–ಬೇರೆಯವರನ್ನು ಹೊಗಳಿದ, ಆ ಕೊಂಡಾಟಮಂ–ಆ ಸ್ತೋತ್ರವನ್ನೂ, ಪೆಣ್ಗಳೊಳ್–ಸ್ತ್ರೀಯರಲ್ಲಿ, ಕಿಡೆಬಿಳ್ದಾಡಿದ–ಕೆಟ್ಟುಹೋಗಿ ಆಡಿದ, ಲಂಪಟ ಭ್ರಮಣದ–ವಿಷಯಾಸಕ್ತತೆಯ ಭ್ರಮಣೆಯ, ಆ ಬಂಡಾಟಮಂ–ಆ ನಾಚಿಕೆಗೇಡುತನವನ್ನೂ, ಸರ್ವರೊಳ್–ಎಲ್ಲರಲ್ಲಿಯೂ, ನುಡಿದು–ಹೇಳಿ, ಏಕೆ ಉಬ್ಬುವರಯ್ಯ–ಏತಕ್ಕೆ ಹಿಗ್ಗುತ್ತಾರೆ ? ಪುಣ್ಯಕಥೆಯೋ–ಅದೇನು ಪುಣ್ಯಕಥೆಯೇ ? ಅಧ್ಯಾತ್ಮವೋ ?–ಆತ್ಮತತ್ತ್ವ ವಿಚಾರವೋ ? ಕೊಳ್ ಕೆಸರಮಡುವಂ–ನಾರುವ ಕೆಸರಿನ ಮಡುವನ್ನು, ಪಾಲ್ಕಡಲೆಂದು–ಕ್ಷೀರ ಸಮುದ್ರವೆಂದು, ಕಂಡರ್–ಕಂಡರು, ಅಕಟಾ–ಅಯ್ಯೋ ? ರತ್ನಾಕರಾಧೀಶ್ವರಾ !

ಹೊಟ್ಟೆಪಾಡಿಗಾಗಿ ಕಂಡಕಂಡವರನ್ನು ಹೊಗಳಿ ಸ್ತೋತ್ರಮಾಡುವುದೂ, ಕಾಮುಕತನದಿಂದ ಮನಸ್ಸಿಗೆ ಬಂದಹಾಗೆವರ್ತಿಸಿ ಸ್ತ್ರೀಯರಲ್ಲಿ ಆಡಿದ ಆ ಲಂಪಟತನದಿಂದ ಭ್ರಮಣೆಯ ಬಂಡಾಟ ವನ್ನು ನಾಚಿಕೆಗೆಟ್ಟು ಇನ್ನೊಬ್ಬರಲ್ಲಿ ವರ್ಣಿಸುವುದು, ಇದು ಹುಚ್ಚುತನವಲ್ಲವೇ ? ಇದರಿಂದ ಏನು ಪುರುಷಾರ್ಥ ಸಾಧಿಸಿದಂತಾಯಿತು ? ಇದೇನು ಪುಣ್ಯಕಥೆಯೇ ಅಥವಾ ಆತ್ಮತತ್ತ್ವವಿಚಾರವೇ ? ಕೊಳೆತು ನಾರುವ ಕೆಸರಿನ ಗುಂಡಿಯನ್ನು ಕ್ಷೀರಸಾಗರವೆಂದು ಹೇಳುವರಲ್ಲ ! ಈ ಮೂರ್ಖರು !

ವೀಣಾ ಕಿನ್ನರಿ ವೇಣು ತಾಳ ಮುರಜಾಳಾಪಾದಿ ಸಂಸಿದ್ಧಿಗೀ–
ರ್ವಾಣ ಪ್ರಾಕೃತವಾಕ್ಯಸಿದ್ಧಿ ಸುಕವಿತ್ವಂ ಸುಸ್ವರಂ ಸತ್ಕುಲಂ ||
ತ್ರಾಣಂ ಶ್ರೀಚೆಲುವಕ್ಕೆಯಾದೊಡಮದೇನಾ ಲೀಲೆಗಂ ನಿಮ್ಮಕ–
ಲ್ಯಾಣಾರಾಧನೆಯಕ್ಕೆ ಚಿತ್ತವಿಸದಂ ರತ್ನಾಕರಾಧೀಶ್ವರಾ ! **||೭೧||**

ವೀಣಾ ಕಿನ್ನರಿ ವೇಣು ತಾಳ ಮುರಜ ಆಳಾಪಾದಿ ಸಂಸಿದ್ಧಿ,
ಗೀರ್ವಾಣ ಪ್ರಾಕೃತವಾಕ್ಯಸಿದ್ಧಿ, ಸುಕವಿತ್ವಂ ಸುಸ್ವರಂ ಸತ್ಕುಲಂ ತ್ರಾಣಂ ಶ್ರೀ
ಚೆಲುವು ಅಕ್ಕೆ, ಆದೊಡಂ ಅದೇನ್, ಆ ಲೀಲೆಗಂ ನಿಮ್ಮ ಕಲ್ಯಾಣಾರಾಧನೆ
ಅಕ್ಕೆ ಚಿತ್ತವಿಸು ಅದಂ, ರತ್ನಾಕರಾಧೀಶ್ವರಾ !

ವೀಣಾ ಕಿನ್ನರಿ ವೇಣು ತಾಳ ಮುರಜ–ವೀಣೆ, ಕಿನ್ನರಿ, ಕೊಳಲು, ತಾಳ, ಮದ್ದಳೆ, ಆಳಾಪ ಆದಿ ಸಂಸಿದ್ಧಿ–ಹಾಡುಗಾರಿಕೆ ಮೊದಲಾದವುಗಳ ಪ್ರಾಪ್ತಿ, ಗೀರ್ವಾಣ ಪ್ರಾಕೃತವಾಕ್ಯಸಿದ್ಧಿ–ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿ ಪಾಂಡಿತ್ಯವೂ, ಸುಕವಿತ್ವಂ–ಒಳ್ಳೆಯ ಕವಿತೆಯೂ, ಸುಸ್ವರಂ–ಒಳ್ಳೆಯ ಸ್ವರವೂ, ಸತ್ಕುಲಂ-ಉತ್ತಮ ಕುಲವೂ, ತ್ರಾಣಂ-ಬಲವೂ, ಶ್ರೀ-ಐಶ್ವರ್ಯವೂ, ಚೆಲುವು-ಸೌಂದರ್ಯವೂ, ಅಕ್ಕೆ–ಉಂಟಾಗಲಿ, ಆದೊಡಂ–ಈ ಫಲಗಳ ಪ್ರಾಪ್ತಿಯಾದರೂ, ಅದೇನ್–ಏನು ಪ್ರಯೋಜನ? (ಏನು ಮಹಾ !) ಆ ಲೀಲೆಗಂ–ಮೇಲೆ ಹೇಳಿದ ವಿಲಾಸಕ್ಕೆ, ನಿಮ್ಮ ಕಲ್ಯಾಣ ಆರಾಧನೆ ಅಕ್ಕೆ–ನಿಮ್ಮ ಮಂಗಳಮಯವಾದ ಆರಾಧನೆ (ಅಥವ ಪಂಚಕಲ್ಯಾಣಗಳ ಸೇವೆ) ಉಂಟಾಗಲಿ, ಅದಂ ಚಿತ್ತವಿಸು–ಅದನ್ನು ಮನಸ್ಸಿಗೆ ತೆಗೆದುಕೋ ರತ್ನಾಕರಾಧೀಶ್ವರಾ !

ವೀಣೆ, ಕಿನ್ನರಿ, ಕೊಳಲು, ತಾಳ, ಮದ್ದಳೆ ಮೊದಲಾದ ವಾದ್ಯಗಳನ್ನು ನುಡಿಯಿಸುವುದರಲ್ಲಿ ಪ್ರಾವೀಣ್ಯವನ್ನು ಪಡೆದಿರಬಹುದು, ಮಧುರವಾಗಿ, ಇನಿದಾದ ಕಂಠದಿಂದ ಹಾಡಬಹುದು. ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿ ಪಾಂಡಿತ್ಯವನ್ನು ಪಡೆದು ಉತ್ತಮ ಲೇಖಕನೂ, ವಾಗ್ಮಿಯೂ ಆಗಿರಬಹುದು : ಪ್ರತಿಭಾವಂತನಾದ ಕವಿಯಾಗಿರಬಹುದು : ಸುಕವಿಜನ ಮನೋಹರನಾಗಿರಬಹುದು ; ಸತ್ಕುಲದಲ್ಲಿ ಹುಟ್ಟಿ, ದೃಢಕಾಯನಾಗಿ, ಸುಂದರಾಂಗನಾಗಿಯೂ ಇರಬಹುದು. ಈ ಸಂಪತ್ ಸಮೃದ್ಧಿಗಳು ಉಂಟಾದರೂ ಅವುಗಳಿಂದ ಅಹಂಕಾರ ಪಡದೆ, ಚಿತ್ತವಿಚಲಿತನಾಗದೆ ಇರುವಂತೆ ಅನುಗ್ರಹಿಸು ದೇವ ! ಈ ಪುಣ್ಯಫಲಪ್ರಾಪ್ತಿಯೆಲ್ಲವೂ ನಿನ್ನನ್ನು ಸ್ತೋತ್ರಮಾಡುವುದರಲ್ಲಿ, ನಿನ್ನ ಗುಣಗಳ ಗಾನಕ್ಕಾಗಿ, ನಿನ್ನ ಆರಾಧನೆಗಾಗಿ ಮೀಸಲಾದರೆ ಮಾತ್ರ ಸಾರ್ಥಕತೆ. ಈ ಸಂಪದವೆಲ್ಲ ಭಗವಂತನ ಸೇವೆಗಾಗಿ ಮುಡಿಪಾಗಿಡದಿದ್ದರೆ, ಆ ವಿಲಾಸಗಳೆಲ್ಲ ವ್ಯರ್ಥವೇ ಸರಿ.

ಏತಕ್ಕಾಡುವರಯ್ಯ ಹಮ್ಮನಕಟಾ ! ತಮ್ಮ ಲ್ಲಿ ವಿದ್ಯಾಕಳಾ-
ವ್ರಾತಂ ತಳ್ತುದನಾ ಕವಿತ್ವಮುಸಿರ್ಗುಂ ಸುಜ್ಞಾನಮುಂ ತತ್ಪರಂ-||
ಜ್ಯೋತಿರ್ವ್ಯಕ್ತಿಯ ಯುಕ್ತಿಯೇ ನುಡಿಗುಮಿನ್ನಂತಲ್ಲದಲ್ಲಲ್ಲಿ ಯ-
ದ್ವಾತದ್ವಾಬಹುಭಾಷೆಯಿಂ ಫಲವದೇಂ ? ರತ್ನಾಕರಾಧೀಶ್ವರಾ ! ||೭೨||

ಏತಕ್ಕಾಡುವರಯ್ಯ ಹಮ್ಮಂ ಅಕಟಾ !, ತಮ್ಮಲ್ಲಿ ವಿದ್ಯಾಕಳಾವ್ರಾತಂ
ತಳ್ತುದನ್ ಆ ಕವಿತ್ವಂ ಉಸಿರ್ಗುಂ, ಸುಜ್ಞಾನಮುಂ ತತ್
ಪರಂಜ್ಯೋತಿರ್ವ್ಯಕ್ತಿಯ ಯುಕ್ತಿಯೇ ನುಡಿಗುಂ, ಇನ್ನಂತಲ್ಲದೆ ಅಲ್ಲಲ್ಲಿ
ಯದ್ವಾತದ್ವಾಬಹುಭಾಷೆಯಿಂ ಫಲವದೇಂ ರತ್ನಾಕರಾಧೀಶ್ವರಾ !

ಅಕಟಾ-ಅಯ್ಯೋ ! ಏತಕ್ಕೆ ಆಡುವರಯ್ಯ ಹಮ್ಮಂ-ಅಹಂಕಾರದ ಮಾತನ್ನು ಏತಕ್ಕೆ ಆಡುತ್ತಾರಯ್ಯ ! ತಮ್ಮಲ್ಲಿ ವಿದ್ಯಾಕಳಾವ್ರಾತಂ-ತಮ್ಮಲ್ಲಿ ವಿದ್ಯೆ ಮತ್ತು ಕಲೆಗಳ ಸಮೂಹವು, ತಳ್ತುದನ್-ಸೇರಿರುವುದನ್ನು, ಆ ಕವಿತ್ವಂ ಉಸಿರ್ಗುಂ-ಆ ಕವಿತೆಯೇ ಹೇಳುವುದು, ಸುಜ್ಞಾನಮುಂ-ಸುಜ್ಞಾನವನ್ನು, ತತ್ ಪರಂಜ್ಯೋತಿರ್ ವ್ಯಕ್ತಿಯ ಯುಕ್ತಿಯೇ ನುಡಿಗುಂ-ಆ ಪರಂಜ್ಯೋತಿಸ್ವರೂಪನಾದ ಭಗವಂತನ ವಿಷಯಕವಾದ ಚಮತ್ಕಾರವೇ ಹೇಳುವುದು ; ಇನ್ನು ಅಂತಲ್ಲದೆ-ಹಾಗಲ್ಲದೆ, ಅಲ್ಲಲ್ಲಿ-ಆಯಾ ಸ್ಥಳಗಳಲ್ಲಿ, ಯದ್ವಾತದ್ವಾ-ಬಾಯಿಗೆ ಬಂದಹಾಗೆ, ಬಹುಭಾಷೆಯಿಂ – ಹರಟೆ ಮಾತುಗಳಿಂದ, ಫಲವದೇಂ-ಏನು ಪ್ರಯೋಜನ ? ರತ್ನಾಕರಾಧೀಶ್ವರಾ !

ಒಬ್ಬನ ಪಾಂಡಿತ್ಯ, ಕವಿತಾಸಾಮರ್ಥ್ಯ, ಅವನು ರಚಿಸಿದ ಕಾವ್ಯದಿಂದಲೇ ತಿಳಿಯಬಹುದು, ಆ ಕಾವ್ಯವೇ ಅವನ ವಿದ್ವತ್ತಿನ ಅಳತೆಗೋಲಾಗುವುದು. ಬೇರೆ ಯಾರೂ ಶಿಫಾರಸು ಮಾಡಬೇಕಾಗಿಲ್ಲ. ಹಾಗೆಯೇ ಆ ಕವಿ ಪರಮಪರಂಜ್ಯೋತಿಸ್ವರೂಪನಾದ ಭಗವಂತನನ್ನು ಹೇಗೆ ಕಂಡಿದ್ದಾನೆ, ಹೇಗೆ ಬಣ್ಣಿಸಿದ್ದಾನೆ, ಅವನ ಭಕ್ತಿಯ ಆವೇಶ ಯಾವತರಹದ್ದು-ಇವು ಅವನ ಸುಜ್ಞಾನವನ್ನು ಸೂಚಿಸುತ್ತದೆ. ಸುಮ್ಮನೆ ಅಹಂಕಾರದ, ಜಂಭದ ಮಾತುಗಳನ್ನಾಡಿದ ಮಾತ್ರಕ್ಕೆ ಆ ಕವಿಯ ಮಟ್ಟ, ಶ್ರೇಷ್ಠತೆ, ಹೆಚ್ಚುತ್ತದೆಯೇ ? ಬಾಯಿಗೆ ಬಂದಹಾಗೆ ಹರಟೆಮಾತನ್ನಾಡಿ ಏನು ಪ್ರಯೋಜನ ?

**ತರ್ಕಂ ಬಂದೊಡೆ ದೃಷ್ಟದಿಂ ಶ್ರುತದಿನಿಟ್ಟೂಹಾನುಮಾನಂಗಳಿಂ ।
ಬೇರ್ಕೆಯ್ದಾತ್ಮನನೆಲ್ಲರುಂ ನೆರೆಯೆ ಕಂಡಂತಾಗೆಯಾಸ್ಥಾನ ಪಾ–॥
ಲರ್ಕೊಂಡಾಡೆ ಕುವಾದಿಯುಂ ತಿಳಿಯೆ ಪೇಳಲ್ಬಲ್ಲನೇ ಬೋಧಮಾ–
ಲಾರ್ಕಂ ಶುಷ್ಕವಿವಾದಿ ತಾನಧಿಕನೇ ? ರತ್ನಾಕರಾಧೀಶ್ವರಾ !** ॥೭೩॥

ತರ್ಕಂ ಬಂದೊಡೆ ದೃಷ್ಟದಿಂ ಶ್ರುತದಿಂ ಇಟ್ಟು ಊಹಾನುಮಾನಂಗಳಿಂ ಬೇರ್ಕೆಯ್ದು ಆತ್ಮನಂ, ಎಲ್ಲರುಂ ನೆರೆಯೆ ಕಂಡಂತಾಗೆ ಆಸ್ಥಾನಪಾಲರ್ ಕೊಂಡಾಡೆ ಕುವಾದಿಯುಂ ತಿಳಿಯೆ, ಪೇಳಲ್ ಬಲ್ಲನೇ ಬೋಧಮಾಲಾರ್ಕಂ, ಶುಷ್ಕವಿವಾದಿ ತಾನ್ ಅಧಿಕನೇ ರತ್ನಾಕರಾಧೀಶ್ವರಾ !

ತರ್ಕಂ ಬಂದೊಡೆ – ತರ್ಕಶಾಸ್ತ್ರವು ಗೊತ್ತಿದ್ದರೆ, ದೃಷ್ಟದಿಂ–ಪ್ರತ್ಯಕ್ಷಪ್ರಮಾಣದಿಂದಲೂ, ಶ್ರುತದಿಂ ಇಟ್ಟು–ತರ್ಕ ಪ್ರಮಾಣದಿಂದಲೂ, ಊಹ ಅನುಮಾನಂಗಳಿಂ–ಅನುಮಾನ ಪ್ರಮಾಣ ದಿಂದಲೂ, ಬೇರ್ಕೆಯ್ದು ಆತ್ಮನಂ–ಆತ್ಮನನ್ನು ಸ್ಥಾಪಿಸಿ, ಎಲ್ಲರುಂ ನೆರೆಯೆ–ಎಲ್ಲರೂ ಸೇರಿರಲು, ಕಂಡಂತಾಗೆ–ಅವರು ಕಾಣುವ ಹಾಗೆ, ಆಸ್ಥಾನಪಾಲರ್ ಕೊಂಡಾಡೆ–ರಾಜರು ಹೊಗಳುವ ಹಾಗೆ, ಕುವಾದಿಯುಂ ತಿಳಿಯೆ–ದುಷ್ಟವಾದಿಯು ತಿಳಿಯುವ ಹಾಗೆ, ಪೇಳಲ್ ಬಲ್ಲನೇ–ಹೇಳುವುದಕ್ಕೆ ತಿಳಿದ ವನೇ, ಬೋಧಮಾಲಾರ್ಕಂ–ಜ್ಞಾನಪರಂಪರೆಯಿಂದ ಪ್ರಕಾಶಿಸುವವನು, (ಹಾಗಲ್ಲದೆ) ಶುಷ್ಕವಿವಾದಿ–ನಿಸ್ಸಾರವಾದ ವಿಷಯವನ್ನು ಕುರಿತು ವಾದಮಾಡುವವನು, ತಾನ್ ಅಧಿಕನೇ–ತಾನುಹೆಚ್ಚೇ ? ರತ್ನಾಕರಾಧೀಶ್ವರಾ !

ತರ್ಕಶಾಸ್ತ್ರವನ್ನು ಬಲ್ಲವನು ಆತ್ಮನ ಅಸ್ತಿತ್ವವನ್ನು ಪ್ರತ್ಯಕ್ಷಪ್ರಮಾಣದಿಂದಲೂ ತರ್ಕಪ್ರಮಾಣ ದಿಂದಲೂ, ಅನುಮಾನಪ್ರಮಾಣದಿಂದಲೂ ಸಮರ್ಥಿಸಿ ಪ್ರತಿವಾದಿಗಳನ್ನು ತೃಪ್ತಿಪಡಿಸಬೇಕು. ಈತನ ವಾದಸರಣಿಯನ್ನು ವಿಷಯಸಮರ್ಥನೆಯನ್ನು ಕಂಡು ರಾಜನು ಮೆಚ್ಚುವಂತಿರಬೇಕು. ಮಿಥ್ಯಾವಾದಿಯೂ ಸಹ ಇದರ ಸತ್ಯತೆಯನ್ನು ಮನಗಂಡು ಸದ್ಧರ್ಮದತ್ತ ಒಲವು ತೋರಿಸಬೇಕು. ಹೀಗೆ ಆತ್ಮತತ್ತ್ವವನ್ನು ಪ್ರತಿಪಾದಿಸುವವನೇ ನಿಜವಾದ ಜ್ಞಾನಿ. ಕೆಲಸಕ್ಕೆ ಬಾರದ ವಿಷಯಗಳನ್ನು ಸಮರ್ಥಿಸಲು ಕುಚರ್ಚೆಮಾಡುವ ಕುವಾದಿಗಳಿಂದ ಏನು ಪ್ರಯೋಜನ ?

ಶಾಸ್ತ್ರಂ ಬಂದೊಡೆ ಶಾಂತಿ ಸೈರಣೆ ನಿಗರ್ವಂ ನೀತಿ ಮೆಲ್ವಾತು ಮು–
ಕ್ತಿ ಸ್ತ್ರೀಚಿಂತೆ ನಿಜಾತ್ಮಚಿಂತೆ ನಿಲವೇಳ್ಕಂತಲ್ಲದಾ ಶಾಸ್ತ್ರದಿಂ ||
ದುಸ್ತ್ರೀ ಚಿಂತನೆ ದುರ್ಮುಖಂ ಕಲಹಮುಂ ಗರ್ವಂ ಮನಂಗೊಂಡೊಡಾ |
ಶಾಸ್ತ್ರಂ ಶಸ್ತ್ರಮೆ ಶಾಸ್ತ್ರಿ ಶಸ್ತ್ರಿಕನಲಾ ? ರತ್ನಾಕರಾಧೀಶ್ವರಾ! ||೭೪||

ಶಾಸ್ತ್ರಂ ಬಂದೊಡೆ ಶಾಂತಿ ಸೈರಣೆ ನಿಗರ್ವಂ ನೀತಿ ಮೆಲ್ವಾತು,
ಮುಕ್ತಿಸ್ತ್ರೀಚಿಂತೆ ನಿಜಾತ್ಮಚಿಂತೆ ನಿಲವೇಳ್ಕು, ಅಂತಲ್ಲದೆ ಆ ಶಾಸ್ತ್ರದಿಂ
ದುಸ್ತ್ರೀಚಿಂತನೆ ದುರ್ಮುಖಂ ಕಲಹಮುಂ ಗರ್ವಂ ಮನಂಗೊಂಡೊಡೆ,
ಆ ಶಾಸ್ತ್ರಂ ಶಸ್ತ್ರಮೆ ಶಾಸ್ತ್ರಿ ಶಸ್ತ್ರಿಕನಲಾ ! ರತ್ನಾಕರಾಧೀಶ್ವರಾ !

ಶಾಸ್ತ್ರಂ ಬಂದೊಡೆ ಶಾಂತಿ–ಶಾಸ್ತ್ರವು ತಿಳಿದಿದ್ದರೆ (ಪಂಡಿತನಾದರೆ) ಶಾಂತತೆಯು, ಸೈರಣೆ–ಸಹನಶೀಲತೆಯೂ, ನಿಗರ್ವಂ–ಅಹಂಕಾರವಿಲ್ಲದಿರುವಿಕೆಯೂ, ನೀತಿ–ಸಚ್ಚಾರಿತ್ರವೂ, ಮೆಲ್ವಾತು–ಮೃದುವಾದ ಮಾತೂ, ಮುಕ್ತಿಸ್ತ್ರೀಚಿಂತೆ–ಮೋಕ್ಷಚಿಂತನೆಯೂ, ನಿಜಾತ್ಮಚಿಂತೆ – ತನ್ನ ಆತ್ಮ ಚಿಂತನೆಯೂ, ನಿಲವೇಳ್ಕು–ನಿಲ್ಲಬೇಕು, ಅಂತಲ್ಲದೆ–ಹಾಗಲ್ಲದೆ, ಆ ಶಾಸ್ತ್ರದಿಂ–ಆ ಶಾಸ್ತ್ರದಿಂದ (ಪಾಂಡಿತ್ಯದಿಂದ), ದುಸ್ತ್ರೀ ಚಿಂತನೆ -ದುಷ್ಟ ಸ್ತ್ರೀಯ ಚಿಂತನೆಯೂ, ದುರ್ಮುಖಂ-ಕ್ರೋಧ ಮೊದಲಾದುವುಗಳಿಂದ ವಿಕಾರವನ್ನು ಹೊಂದಿದ ಮುಖವೂ, ಕಲಹಮುಂ–ಜಗಳವೂ, ಗರ್ವಂ–ಅಹಂಕಾರವೂ, ಮನಂಗೊಂಡೊಡೆ-ಮನಸ್ಸನ್ನು ಆಕ್ರಮಿಸಿದರೆ, ಆ ಶಾಸ್ತ್ರಂ-ಆ ಶಾಸ್ತ್ರವು, ಶಸ್ತ್ರಮೇ-ಆಯುಧವೆ ಸರಿ, ಶಾಸ್ತ್ರಿ-ಶಾಸ್ತ್ರವನ್ನು ತಿಳಿದವನು, ಶಸ್ತ್ರಿಕನಲಾ-ಶಸ್ತ್ರಧಾರಿಯಲ್ಲವೇ ? ರತ್ನಾಕರಾಧೀಶ್ವರಾ !

ಶಾಸ್ತ್ರಾಧ್ಯಯನದಿಂದ ಗಳಿಸಿದ ಪಾಂಡಿತ್ಯದಿಂದ ತನ್ನ ಇಂದ್ರಿಯಗಳಮೇಲೆ ಹತೋಟಿಯನ್ನು ಇಟ್ಟುಕೊಂಡರೆ ಸಾರ್ಥಕವಾದೀತು. ಅಂಥ ಪಾಂಡಿತ್ಯದಿಂದ ಮನಸ್ಸಿನಲ್ಲಿ ಯಾವಾಗಲೂ ಶಾಂತಿಯಿರಬೇಕು. ಸಹನಶೀಲತೆ, ನಿಗರ್ವ ಉತ್ತಮ ಪಂಡಿತನ ಲಕ್ಷಣಗಳು. ಮಾತು ಹಿತವಾಗಿಯೂ, ಮಿತವಾಗಿಯೂ, ಮೃದುವಾಗಿಯೂ ಇರಬೇಕು. ತನ್ನ ಜೀವನವನ್ನು ಪ್ರತಿ ಕ್ಷಣವೂ ಪರಮಾತ್ಮನ ಚಿಂತನೆ, ಆತ್ಮಧ್ಯಾನದಲ್ಲಿ ಕಳೆಯಬೇಕು, ಇದು ಸತ್ಪುರುಷರ, ವಿದ್ಯಾವಂತರ ಲಕ್ಷಣ. ಇದು ಬಿಟ್ಟು ವಿದ್ಯಾವಂತನಾದ ಮಾತ್ರಕ್ಕೆ ತಲೆತಿರುಗಿ ಎಲ್ಲರಮೇಲೂ ಉರಿದುಬೀಳುವುದು, ಮುಖವನ್ನು ಯಾವಾಗಲೂ ಗಂಟುಹಾಕಿಕೊಳ್ಳುವುದು, ಗರ್ವಿಷ್ಠನಾಗಿ ಮೆರೆಯುವುದು, ವಾರಾಂಗನೆಯರ ಜೊತೆ ಸಹವಾಸ ಮಾಡುವುದು, ಈ ಕೆಟ್ಟ ನಡೆವಳಿಕೆಗಳಲ್ಲಿ ಏನು ಪ್ರಯೋಜನ ? ಅವನನ್ನು ಸುಸಂಸ್ಕೃತನೆನ್ನಲಾಗುವುದೇ ? ಶಾಸ್ತ್ರವನ್ನು ತಿಳಿದಿದ್ದರೂ ಅವನು ಒಬ್ಬ ಸಾಮಾನ್ಯ ಶಸ್ತ್ರಧಾರಿಗೆ ಸಮ. ವಿದ್ಯೆಗೆ ವಿನಯವೇ ಭೂಷಣ.

ಭೂನಾಥರ್ಕಳ ಬಾಳ್ಕೆ ಚಿತ್ತಕೆ ಸದಾ ತಳ್ಳಂಕವೆಷ್ಟೆಷ್ಟು ಧಾ–
ತ್ರೀನಾರೀಧನಸೇನೆ ಸಾರ್ದೊಡಮದುಂ ಸಾಲ್ದಪ್ಪುದೇ ? ಮತ್ತೆದು–॥
ರ್ಧ್ಯಾನಾಪೇಕ್ಷೆಯೆ ಪೆರ್ಚುಗುಂ ಬಗೆಯಲಂತಾ ಚಿಂತೆಯೇ ವ್ಯಾಧಿ ಸು–
ಜ್ಞಾನೈಶ್ವರ್ಯಕೆ ಸಾಟಿಸೌಖ್ಯಮೊಳವೇ ? ರತ್ನಾಕರಾಧೀಶ್ವರಾ ! ॥೭೫॥

ಭೂನಾಥರ್ಕಳ ಬಾಳ್ಕೆ ಚಿತ್ತಕೆ ಸದಾ ತಳ್ಳಂಕವು, ಎಷ್ಟೆಷ್ಟು ಧಾತ್ರೀ
ನಾರೀ ಧನ ಸೇನೆ ಸಾರ್ದೊಡಂ ಅದುಂ ಸಾಲ್ದಪ್ಪುದೇ ? ಮತ್ತೆ ದುರ್ಧ್ಯಾನ
ಅಪೇಕ್ಷೆಯೆ ಪೆರ್ಚುಗುಂ, ಬಗೆಯಲ್ ಅಂತು ಆ ಚಿಂತೆಯೇ ವ್ಯಾಧಿ,
ಸುಜ್ಞಾನ ಐಶ್ವರ್ಯಕೆ ಸಾಟಿ ಸೌಖ್ಯಂ ಒಳವೇ ? ರತ್ನಾಕರಾಧೀಶ್ವರಾ !

ಭೂನಾಥರ್ಕಳ–ರಾಜ ಮಹಾರಾಜರುಗಳ, ಬಾಳ್ಕೆ–ಬಾಳು, ಚಿತ್ತಕೆ–ಮನಸ್ಸಿಗೆ, ಸದಾ ತಳ್ಳಂಕವು–ಯಾವಾಗಲೂ ತಳಮಳವು, ಎಷ್ಟೆಷ್ಟು ಧಾತ್ರೀ–ಎಷ್ಟೆಷ್ಟು ಭೂಮಿ, ನಾರೀ–ಹೆಣ್ಣುಗಳು, ಧನ ಸೇನೆ–ದ್ರವ್ಯ ಸೇನೆ ಇವುಗಳು, ಸಾರ್ದೊಡಂ – ತಮಗೆ ಸೇರಿದರೂ, ಅದುಂ – ಅದೂ, ಸಾಲ್ದಪ್ಪುದೇ–ಸಾಕಾಗುತ್ತವೆಯೇ ? ಮತ್ತೆ ದುರ್ಧ್ಯಾನ–ದುರಾಲೋಚನೆಯು, ಅಪೇಕ್ಷೆಯೆ–ಆಸೆಯೇ, ಪೆರ್ಚುಗುಂ–ಹೆಚ್ಚುವುದು, ಬಗೆಯಲ್–ಆಲೋಚಿಸಿದರೆ, ಅಂತು ಆ ಚಿಂತೆಯೇ ವ್ಯಾಧಿ–ಹಾಗೆ ಆ ಚಿಂತನೆಯೇ ರೋಗವು. ಸುಜ್ಞಾನ ಐಶ್ವರ್ಯಕೆ–ಸುಜ್ಞಾನವೆಂಬ ಐಶ್ವರ್ಯಕ್ಕೆ, ಸಾಟಿ ಸೌಖ್ಯಂ ಒಳವೇ ?–ಸರಿಸಮಾನವಾದ ಸುಖವಿದೆಯೇ ? ರತ್ನಾಕರಾಧೀಶ್ವರಾ !

ರಾಜ್ಯ, ಕೋಶ, ಸುರಸುಂದರಿಯರಿರುವ ರಾಣೀವಾಸ, ಚತುರಂಗ ಸೇನೆ ಇವೆಲ್ಲವನ್ನು ಹೊಂದಿದ್ದರೂ ರಾಜ ಮಹಾರಾಜರುಗಳು ನಿಶ್ಚಿಂತೆಯಿಂದ ಸುಖವಾಗಿರುವರೇ ? ಅವರ ಮನಸ್ಸಿನಲ್ಲಿ ಶಾಂತಿ ಎಂಬುದು ಎಳ್ಳಷ್ಟೂ ಇಲ್ಲ. ಸದಾ ತಳಮಳಗೊಳ್ಳುತ್ತಿರುವರು. ಇಷ್ಟಿದ್ದರೂ ಮತ್ತಷ್ಟುಬೇಕೆಂಬ ದುರಾಸೆಯ ದುರ್ಧ್ಯಾನವಲ್ಲೇ ತಮ್ಮ ಜೀವಿತವನ್ನು ಕಳೆಯುವರು. ಆಸೆಗೆ ಮಿತಿಯೆಂಬುದೊಂದಿದೆಯೇ ? ಲೋಕದಲ್ಲಿ ಇರುವುದೆಲ್ಲ ತನಗೆ ಬೇಕೆಂಬ ಆಸೆಯಲ್ಲೇ ಚಿಂತನೆ ಮಾಡಿ ಮಾಡಿ ಅದೇ ಮನೋವ್ಯಾಧಿಯಲ್ಲಿ ನರಳಿ ತಮ್ಮ ಜೀವನವನ್ನೇ ದುಃಖಮಯವನ್ನಾಗಿ ಮಾಡಿಕೊಳ್ಳುತ್ತಾರೆ. ಚಿಂತೆಯೇ ಮುಪ್ಪು, ಸಂತೋಷವೇ ಯೌವನ. ಸುಜ್ಞಾನ ಸಂಪದದ ಮುಂದೆ ರಾಜಪದವಿ ತುಚ್ಛ. ಇದಕ್ಕಿಂತ ಬೇರೊಂದು ಸೌಖ್ಯವುಂಟೇ ?

ಪಡೆಯೊಳ್ಬಲ್ಲಿದನಾದೊಡಾ ಪಡೆಯಿನೇಂ ಪಾಪಾರಿಯುಂ ಗೆಲ್ವನೇ ? ।
ಕಡುಪಿಂದಂ ಜವನಂ ತೆರಳ್ಚುವನೆ ? ಬಲ್ಪಿಂ ಮೋಕ್ಷಮುಂ ಕೊಂಬನೇ ? ॥
ಕಡೆಗಾ ಭೂಪನ ಶಕ್ತಿನಾಲ್ಘಳಿಗೆ ಸಲ್ಗುಂ ಮರ್ತ್ಯಕೀಟಂಗಳೊಳ್ ।
ಬಿಡು ಯೋಗೀಂದ್ರನ ಶಕ್ತಿಗಾವುದು ಸಮಂ ರತ್ನಾಕರಾಧೀಶ್ವರಾ ! ॥೭೬

ಪಡೆಯೊಳ್ ಬಲ್ಲಿದನಾದೊಡೆ ಆ ಪಡೆಯಿನೇಂ ಪಾಪಾರಿಯುಂ ಗೆಲ್ವನೇ ?,
ಕಡುಪಿಂದಂ ಜವನಂ ತೆರಳ್ಚುವನೆ ?, ಬಲ್ಪಿಂ ಮೋಕ್ಷಮುಂ ಕೊಂಬನೇ ?,
ಕಡೆಗೆ ಆ ಭೂಪನ ಶಕ್ತಿ ನಾಲ್ ಘಳಿಗೆ ಸಲ್ಗುಂ ಮರ್ತ್ಯಕೀಟಂಗಳೊಳ್,
ಬಿಡು ಯೋಗೀಂದ್ರನ ಶಕ್ತಿಗೆ ಆವುದು ಸಮಂ ರತ್ನಾಕರಾಧೀಶ್ವರಾ !

ಪಡೆಯೊಳ್ ಬಲ್ಲಿದನಾದೊಡೆ-ಸೈನ್ಯದಿಂದ ಬಲಿಷ್ಠನಾಗಿದ್ದ ಮಾತ್ರಕ್ಕೆ, ಆ ಪಡೆಯಿನೇಂ-ಆ ಸೈನ್ಯದ ಸಹಾಯದಿಂದ, ಪಾಪಾರಿಯುಂ ಗೆಲ್ವನೇ-ಪಾಪವೆಂಬ ಶತ್ರುವನ್ನು ಗೆಲ್ಲುವನೇ? ಕಡುಪಿಂದಂ-ಪರಾಕ್ರಮದಿಂದ, ಜವನಂ-ಯಮನನ್ನು, ತೆರಳ್ಚುವನೆ-ಓಡಿಸುತ್ತಾನೆಯೇ ? ಬಲ್ಪಿಂ-ಶಕ್ತಿಯಿಂದ, ಮೋಕ್ಷಮುಂ-ಮೋಕ್ಷವನ್ನು, ಕೊಂಬನೇ-ತೆಗೆದುಕೊಳ್ಳುವನೇ ? ಕಡೆಗೆ-ಕೊನೆಗೆ, ಆ ಭೂಪನ ಶಕ್ತಿ-ಆ ರಾಜನ ಶಕ್ತಿ, ಮರ್ತ್ಯಕೀಟಂಗಳೊಳ್-ಈ ಮನುಷ್ಯರೆಂಬ ಹುಳುಗಳಲ್ಲಿ, ನಾಲ್ ಘಳಿಗೆ ಸಲ್ಗುಂ-ಒಂದು ನಾಲ್ಕು ಘಳಿಗೆ ಫಲಿಸೀತು, ಬಿಡು ; ಯೋಗೀಂದ್ರನ ಶಕ್ತಗೆ-ಯೋಗೀಶ್ವರನ ಶಕ್ತಿಗೆ, ಆವುದು ಸಮಂ-ಯಾವುದು ಸಮಾನವು ? ರತ್ನಾಕರಾಧೀಶ್ವರಾ !

ಬಲಿಷ್ಠವಾದ ಸೈನ್ಯವನ್ನು ಹೊಂದಿದ್ದ ಮಾತ್ರದಿಂದಲೇ, ಒಬ್ಬ ರಾಜ ಆ ಸೈನ್ಯದ ಸಹಾಯದಿಂದ ಪಾಪಕರ್ಮಗಳೆಂಬ ಶತ್ರುವನ್ನು ಗೆಲ್ಲಲು ಸಾಧ್ಯವೇ ? ತನ್ನ ಪರಾಕ್ರಮದಿಂದ ಸಾವನ್ನು ಗೆಲ್ಲಲು ಸಾಧ್ಯವಿದೆಯೇ ? ತನ್ನ ಶೌರ್ಯ ಅತುಲೈಶ್ವರ್ಯಗಳಿಂದ ಮೋಕ್ಷಸಾಮ್ರಾಜ್ಯವನ್ನು ಹೊಂದುವುದಕ್ಕಾಗುತ್ತದೆಯೇ ? ಏನಿದು ಭ್ರಮೆ! ಅಂಥಹವನಿಂದ ಏನಾಗಬಹುದು ? ಈ ನರಕೀಟಗಳಲ್ಲಿ ಒಂದು ನಾಲ್ಕು ಘಳಿಗೆ ತನ್ನ ಪರಾಕ್ರಮ ಪ್ರದರ್ಶನವನ್ನು ಮಾಡಬಹುದು ಅಷ್ಟೇ ! ಈ ಲೌಕಿಕ ಶಕ್ತಿ ಎಷ್ಟು ಹುಸಿ ಮತ್ತು ಎಷ್ಟು ಕ್ಷಣಿಕ ! ಯೋಗಿರಾಜನ ಆತ್ಮಶಕ್ತಿಯ ಮುಂದೆ ಈ ಯಾವ ಶಕ್ತಿತಾನೇ ನಿಲ್ಲಬಲ್ಲುದು, ಯಾವುದುತಾನೇ ಸಮಾನ !

ತಮ್ಮಂ ಕೀರ್ತಿಸೆ ನಲ್ಮೆಯೊಲ್ಮೆ ಕಡುಚಾಗಂ ಕೂಡೆ ಸಂಭಾಷಣಂ ।
ನಿಮ್ಮಂ ಕೀರ್ತಿಸಲಡ್ಡವೋರೆ ಬಡಚಾಗಂ ಮೌನವಿೂ ಭೂಮಿಪರ್ ॥
ತಮ್ಮಂ ಕೊಲ್ವನರೇಂದ್ರನಂ ಪೊಗಳಲಳ್ಕಿಂ ಮನ್ನಿಪರ್ ನಿಮ್ಮೊಳೇಂ ।
ಹಮ್ಮಂ ತೋರ್ಪರೊ ಕಾವನೊಳ್ಕಲಹವೇ ? ರತ್ನಾಕರಾಧೀಶ್ವರಾ ! ॥೭೭॥

ತಮ್ಮಂ ಕೀರ್ತಿಸೆ ನಲ್ಮೆ ಒಲ್ಮೆ ಕಡುಚಾಗಂ ಕೂಡೆ ಸಂಭಾಷಣಂ,
ನಿಮ್ಮಂ ಕೀರ್ತಿಸಲ್ ಅಡ್ಡವೋರೆ ಬಡಚಾಗಂ ಮೌನಂ, ಈ ಭೂಮಿಪರ್
ತಮ್ಮಂ ಕೊಲ್ವ ನರೇಂದ್ರನಂ ಪೊಗಳಲ್ ಅಳ್ಕಿಂ ಮನ್ನಿಪರ್, ನಿಮ್ಮೊಳ್
ಏಂ ಹಮ್ಮಂ ತೋರ್ಪರೊ, ಕಾವನೊಳ್ ಕಲಹವೇ ? ರತ್ನಾಕರಾಧೀಶ್ವರಾ !

ತಮ್ಮಂ ಕೀರ್ತಿಸೆ-ತಮ್ಮನ್ನು ಹೊಗಳಿದರೆ (ರಾಜರಿಗೆ), ನಲ್ಮೆ-ಪ್ರೀತಿಯೂ, ಒಲ್ಮೆ-ಕರುಣೆಯೂ, ಕಡುಚಾಗಂ-ಬಹಳ ದಾನಮಾಡುವಿಕೆಯೂ, ಕೂಡೆ-ಜೊತೆಗೆ, ಸಂಭಾಷಣಂ-ಮಾತನಾಡುವಿಕೆಯೂ (ಉಂಟಾಗುತ್ತದೆ), ನಿಮ್ಮಂ ಕೀರ್ತಿಸಲ್-ದೇವ ! ನಿನ್ನನ್ನು ಹೊಗಳಿದರೆ, ಅಡ್ಡವೋರೆ-ಮುಖವನ್ನು ಅಡ್ಡ ತಿರುಗಿಸುತ್ತಾರೆ ಮತ್ತು, ಬಡಚಾಗಂ-ಕಿಂಚಿತ್ ದಾನ, ಮೌನಂ-ಮೌನವೂ ಉಂಟಾಗುವುದು, ಈ ಭೂಮಿಪರ್-ಈ ರಾಜರು, ತಮ್ಮಂಕೊಲ್ವ-ತಮ್ಮನ್ನು ಕೊಲ್ಲುವ, ನರೇಂದ್ರನಂ-ಅಧಿರಾಜನನ್ನು, ಪೊಗಳಲ್-ಹೊಗಳಿದರೆ, ಅಳ್ಕಿಂ-ಭಯದಿಂದ, ಮನ್ನಿಪರ್-ಅಂಥಹವರನ್ನು ಗೌರವಿಸುತ್ತಾರೆ. ನಿಮ್ಮೊಳ್-ನಿಮ್ಮಲ್ಲಿ (ಭಗವಂತನಲ್ಲಿ), ಏಂ ಹಮ್ಮಂ-ಏನು ಅಹಂಕಾರವನ್ನು, ತೋರ್ಪರೊ-ತೋರಿಸುತ್ತಾರೋ ! ಕಾವನೊಳ್ ಕಲಹವೇ-ರಕ್ಷಿಸುವ ಭಗವಂತನಲ್ಲಿ ಜಗಳವೇ ! ರತ್ನಾಕರಾಧೀಶ್ವರಾ !

ರಾಜರು ತಮ್ಮನ್ನು ಹೊಗಳುವ ಹೊಗಳು ಭಟ್ಟರಿಗೆ ಮೆಚ್ಚಿ ಅವರ ಮೇಲೆ ತಮ್ಮ ಕೃಪಾದೃಷ್ಟಿಯನ್ನು ಬೀರಿ ಕೈತುಂಬ ದಾನಮಾಡುತ್ತಾರೆ. ಅವರ ಜೊತೆಯಲ್ಲಿ ಸುಮಧುರವಾಗಿ ಮಾತನಾಡುತ್ತಾರೆ. ಸಲುಗೆಯಿಂದ ಇರುತ್ತಾರೆ. ಆದರೆ ರಾಜನ ಸಮ್ಮುಖದಲ್ಲಿ ಪರಮಾತ್ಮನನ್ನು ಸ್ತುತಿಸಿದರೆ, ಅದರಕಡೆ ಲಕ್ಷ್ಯವೇ ಇರುವುದಿಲ್ಲ, ಮುಖ ಅಡ್ಡತಿರುಗಿಸಿ ದೃಷ್ಟಿ ಮತ್ತೆಲ್ಲಿಯೋ ನೆಟ್ಟಿರುತ್ತದೆ. ಏನೋ ಬೇಸರದಿಂದ ಅಷ್ಟೋ ಇಷ್ಟೋ ಕೊಟ್ಟು ಅವನನ್ನು ಸಾಗಾಕುತ್ತಾನೆ. ಅಂತಹ ಭಗವದ್ಭಕ್ತನ ಜೊತೆ ಮಾತನಾಡುವುದೂ ಇಲ್ಲ. ತಮ್ಮ ಅಧಿರಾಜರನ್ನು ಕುರಿತು ಯಾರಾದರೂ ಹೊಗಳಿದರೆ ಬೇರೆ ದಾರಿಕಾಣದೆ ಭಯದಿಂದ ಅಂಥಹವರನ್ನು ಗೌರವಿಸಿ ಅವರಿಗೆ ಬಹುಮಾನವನ್ನು ಕೊಡುತ್ತಾರೆ. ಏನಿದು ಇವರ ವರ್ತನೆ ವಿಚಿತ್ರವಾಗಿದೆಯಲ್ಲ ! ಜಗತ್‌ರಕ್ಷಕನಲ್ಲಿಯೇ ಅಹಂಕಾರವನ್ನು ತೋರಿಸುತ್ತಾರಲ್ಲಾ ? ಭಗವಂತನಲ್ಲಿ ಈ ವರ್ತನೆಯೇ ?

ಆರಿಂದಾದುದೊ ರಾಜ್ಯಲಕ್ಷ್ಮಿಯದು ನಿಮ್ಮಿಂದಾದುದೆಂತೆಂದೊಡಾ–
ಚಾರಂ ಮುನ್ನಣುಮಾತ್ರಮಿರ್ದ ಫಲದಿಂದಾ ಜೀವಕೀ ಜನ್ಮದೊಳ್ ॥
ಸೇರಿತ್ತಾಚರಣಕ್ಕೆ ನೀನೆ ಪತಿ ನಿನ್ನಂ ಮಾಣ್ದವಂ ಕಷ್ಟಸಂ–
ಸಾರಾಂಭೋಧಿಯ ದಾಂಟಲೇನರಿವನೇ । ರತ್ನಾಕರಾಧೀಶ್ವರಾ ! ॥೭೮॥

ಆರಿಂದಾದುದೊ ರಾಜ್ಯಲಕ್ಷ್ಮಿ ಅದು ನಿಮ್ಮಿಂದಾದುದು, ಎಂತೆಂದೊಡೆ
ಆಚಾರಂ ಮುನ್ನ ಅಣುಮಾತ್ರಂ ಇರ್ದ ಫಲದಿಂದ ಆ ಜೀವಕೆ ಈ ಜನ್ಮದೊಳ್
ಸೇರಿತ್ತು, ಆಚರಣಕ್ಕೆ ನೀನೆ ಪತಿ, ನಿನ್ನಂ ಮಾಣ್ದವಂ ಕಷ್ಟ
ಸಂಸಾರಾಂಭೋಧಿಯ ದಾಂಟಲೇನ್ ಅರಿವನೇ ರತ್ನಾಕರಾಧೀಶ್ವರಾ !

ಆರಿಂದ ಆದುದೊ–ಯಾರಿಂದ ಆಯಿತೋ? ರಾಜ್ಯಲಕ್ಷ್ಮಿ–(ಈ) ರಾಜ್ಯಸಂಪತ್ತು: ಅದು ನಿಮ್ಮಿಂದ ಆದುದು–ಆ ರಾಜ್ಯಸಂಪತ್ತು ನಿಮ್ಮಿಂದ ಆಯಿತು, ಎಂತೆಂದೊಡೆ–ಹೇಗೆಂದರೆ, ಮುನ್ನ–ಪೂರ್ವದಲ್ಲಿ, ಆಚಾರಂ–ವ್ರತಾಚರಣೆಯು, ಅಣುಮಾತ್ರಂ ಇರ್ದ–ಸ್ವಲ್ಪಮಾತ್ರವಿದ್ದ, ಫಲದಿಂದ–ಫಲದಿಂದ, ಆ ಜೀವಕೆ–ಆ ಜೀವಾತ್ಮನಿಗೆ, ಈ ಜನ್ಮದೊಳ್–ಈ ಜನ್ಮದಲ್ಲಿ, ಸೇರಿತ್ತು-ರಾಜ್ಯಸಂಪತ್ತು ಸೇರಿತು, ಆಚರಣಕ್ಕೆ-ಆ ವ್ರತಾಚರಣಕ್ಕೆ, ನೀನೆಪತಿ-ನೀನೇ ಪ್ರಭುವು, ನಿನ್ನಂ ಮಾಣ್ದವಂ-ನಿನ್ನನ್ನು ಬಿಟ್ಟವನು, ಕಷ್ಟಸಂಸಾರ ಅಂಭೋಧಿಯ-ದುಃಖಕರವಾದ ಸಂಸಾರವೆಂಬ ಸಮುದ್ರವನ್ನು, ದಾಂಟಲ್-ದಾಟುವುದಕ್ಕೆ, ಏನ್ ಅರಿವನೇ-ಏನು ತಿಳಿಯುವನೇ? ರತ್ನಾಕರಾಧೀಶ್ವರಾ !

ಪೂರ್ವಕೃತ ಪುಣ್ಯದಿಂದ ಈ ಜನ್ಮದಲ್ಲಿ ಸಂಪತ್ತು, ಅಧಿಕಾರ, ರಾಜ್ಯ, ಕೋಶಗಳು ಲಭ್ಯವಾಗಿವೆ. ಪರಮಾತ್ಮನ ಆರಾಧನೆಯಲ್ಲಿ ಕಿಂಚಿತ್ ತೊಡಗಿದ್ದ ಮಾತ್ರಕ್ಕೆ ಇಷ್ಟೊಂದು ಸಂಪತ್ತು ದೊರಕಿತೆಂದರೆ, ಆ ವ್ರತಾಚರಣೆಗಳಲ್ಲಿ ಮನಸ್ಸನ್ನು ದೃಢಮಾಡಿದನೆಂದರೆ ಅವನ ಭಾಗ್ಯಕ್ಕೆ ಎಣೆಯುಂಟೇ? ಜಿನೇಂದ್ರನ ಅನುಗ್ರಹ ಏನನ್ನು ತಾನೆ ಕೊಡಲಾರದು? ಆದರೆ ಆ ಭಗವಂತನನ್ನು ಮರೆತು ಸ್ವೇಚ್ಛಾಚಾರಿಯಾದವನು ಈ ಭವಸಾಗರದಲ್ಲೇ ಮುಳುಗಿ ಅತ್ಯಂತ ದುಃಖಿಯಾಗುತ್ತಾನೆ. ಈ ಸಂಸಾರ ಸಮುದ್ರವನ್ನು ದಾಟಲು ಅಂಥಹವನಿಗೆ ಸಾಧ್ಯವೇ? ಜಿನನನ್ನು ನೆನೆಯುತ್ತಾ ಮುಕ್ತಿಸಂಪದವನ್ನು ಯಾರಾದರೂ ದೊರಕಿಸಿಕೊಳ್ಳಬಹುದೆಂದರೆ ಈ ಲೌಕಿಕ ಸಂಪತ್ತಿನ ಮಾತೇನು?

ಅಣುಮಾತ್ರಂ ವ್ರತಮಲ್ಪಕಾಲಮಿರೆ ಮುನ್ನಂ ತತ್ಫಲಪ್ರಾಪ್ತಿಯಿಂ ।
ಪ್ರಣುತಕ್ಷ್ಮಾಪತಿಯಾದೆ ನಿನ್ನನುದಿನಂ ಸಮ್ಯಗ್ವ್ರತಾಚಾರ ಲ-॥
ಕ್ಷಣಮುಂ ಶಾಶ್ವತವಾಂತು ದೇವಪದಮುಂ ಕೈವಲ್ಯಮುಂ ಕೊಂಬೆನೆಂ-
ದೆಣಿಸುತ್ತುಜ್ಜುಗಿಪಾತನೇ ಸುಖಿಯಲಾ ? ರತ್ನಾಕರಾಧೀಶ್ವರಾ ! ॥೬೯॥

ಅಣುಮಾತ್ರಂ ವ್ರತಂ ಅಲ್ಪಕಾಲಮಿರೆ ಮುನ್ನಂ, ತತ್ಫಲಪ್ರಾಪ್ತಿಯಿಂ
ಪ್ರಣುತಕ್ಷ್ಮಾಪತಿಯಾದೆಂ, ಇನ್ನಂ ಅನುದಿನಂ ಸಮ್ಯಕ್ ವ್ರತಾಚಾರ
ಲಕ್ಷಣಮುಂ ಶಾಶ್ವತವಾಂತು ದೇವಪದಮುಂ ಕೈವಲ್ಯಮುಂ ಕೊಂಬೆನ್,
ಎಂದು ಎಣಿಸುತ್ತ ಉಜ್ಜುಗಿಪಾತನೇ ಸುಖಿಯಲಾ, ರತ್ನಾಕರಾಧೀಶ್ವರಾ !

ಮುನ್ನಂ-ಪೂರ್ವಜನ್ಮದಲ್ಲಿ (ಮಾಡಿದ), ಅಣುಮಾತ್ರಂ ವ್ರತಂ-ಅಲ್ಪವಾದ ವ್ರತಾಚರಣೆಯು, ಅಲ್ಪಕಾಲಮಿರೆ-ಸ್ವಲ್ಪಕಾಲವಿರುತ್ತಿರಲು, ತತ್‌ಫಲಪ್ರಾಪ್ತಿಯಿಂ-ಆ ವ್ರತಾಚರಣೆಯ ಫಲದ ಲಾಭ ದಿಂದ, ಪ್ರಣುತ-ಹೊಗಳಲ್ಪಟ್ಟ, ಕ್ಷ್ಮಾಪತಿಯಾದೆಂ-ರಾಜನಾದೆನು, ಇನ್ನಂ ಅನುದಿನಂ-ಮುಂದೆ ಯಾವಾಗಲೂ, ಸಮ್ಯಕ್-ಶ್ರೇಷ್ಠವಾದ, ವ್ರತಾಚಾರ ಲಕ್ಷಣಮುಂ ಆಂತು-ವ್ರತ ಆಚಾರಗಳ ಲಕ್ಷಣ ವನ್ನು ಹೊಂದಿ, ದೇವಪದಮುಂ-ಸ್ವರ್ಗವನ್ನೂ, ಶಾಶ್ವತವು-ಶಾಶ್ವತವಾದ, ಕೈವಲ್ಯಮುಂ -ಮೋಕ್ಷ ವನ್ನೂ, ಕೊಂಬೆನ್-ಸ್ವೀಕರಿಸುವೆನು, ಎಂದು ಎಣಿಸುತ್ತ-ಯೋಚಿಸುತ್ತ, ಉಜ್ಜುಗಿಪಾತನೇ-ಪ್ರಯತ್ನ ಪಡುವವನೇ, ಸುಖಿಯಲಾ-ಸುಖವನ್ನು ಹೊಂದುತ್ತಾನಲ್ಲವೇ ? ರತ್ನಾಕರಾಧೀಶ್ವರಾ !

ಪೂರ್ವಜನ್ಮದಲ್ಲಿ ಎಲ್ಲೋ ಸ್ವಲ್ಪಕಾಲ ಮಾಡಿದ ಕೆಲವು ವ್ರತಾಚರಣೆಗಳ ಫಲವಾಗಿ ಈ ಜನ್ಮ ದಲ್ಲಿ ರಾಜನಾಗಿ ಹುಟ್ಟಿ ಎಲ್ಲರಿಂದಲೂ ಹೊಗಳಿಸಿಕೊಳ್ಳುತ್ತಿರುವೆನು. ಈ ವ್ರತಾಚರಣೆಗಳನ್ನೇ ಮುಂದುವರಿಸಿಕೊಂಡು ತನ್ನ ಮುಂದಿನ ಗತಿಯನ್ನು ಇನ್ನೂ ಉತ್ತಮಪಡಿಸಿಕೊಳ್ಳಬೇಕೆಂಬ ಬಯಕೆ ಯನ್ನು ಹೊಂದಿರುವವನೇ ನಿಜವಾದ ಸುಖಿ. "ಶ್ರೇಷ್ಠವಾದ ನೋಂಪಿಗಳನ್ನಾಚರಿಸಿ, ಸಂಯಮ ಜೀವನವನ್ನು ನಡೆಸಿ ದೇವಪದವಿಯನ್ನು ಅನಂತರ ಶಾಶ್ವತ ಸುಖದ ಆಗರವಾದ ಮೋಕ್ಷಸಾಮ್ರಾಜ್ಯ ವನ್ನು ಪಡೆಯುತ್ತೇನೆ" ಎಂದು ಸಂಕಲ್ಪಮಾಡಿ ನಿರಂತರ ಪ್ರಯತ್ನಿಸುವವನೇ ಭವ್ಯಾತ್ಮ-ಅವರ ಮನಸ್ಸಿನ ಶಾಂತಿ, ಸುಖ, ಸಮಾಧಾನಗಳು ಬೇರೆಯವರಿಗೆ ಬರುತ್ತದೆಯೇ ?

ಭೃತ್ಯಂ ತನ್ನನದೆಂತು ಕಾಣ್ಬನವನಂತುರ್ವೀಶ್ವರಂ ನಿಮ್ಮ ಕಂ-
ಡತ್ಯಾನಂದದೆ ಕಾಣ್ಕೆ ಕೆಯ್ಮುಗಿತಮಷ್ಟಾಂಗಾನತಂ ಸಮ್ಮುಖ-||
ಸ್ತೌತ್ಯಂ ಸೇವೆಗಳೆಂಬಿವಂ ನೆಗಳುತಂ ನಂಬಿರ್ದೊಡಾತಂಗೆ ತ-|
ತ್ಪ್ರತ್ಯರ್ಥಿಕ್ಷಿತಿಪಾಲರೇನೆರಗರೇ ? ರತ್ನಾಕರಾಧೀಶ್ವರಾ ! ||೮೦||

ಭೃತ್ಯಂ ತನ್ನಂ ಅದೆಂತು ಕಾಣ್ಬನ್, ಅವನ್ ಅಂತು ಉರ್ವೀಶ್ವರಂ ನಿಮ್ಮ
ಕಂಡು ಅತ್ಯಾನಂದದೆ, ಕಾಣ್ಕೆ ಕೆಯ್ಮುಗಿತಂ ಅಷ್ಟಾಂಗಾನತಂ
ಸಮ್ಮುಖಸ್ತೌತ್ಯಂ ಸೇವೆಗಳೆಂಬಿವಂ ನೆಗಳುತಂ ನಂಬಿರ್ದೊಡೆ, ಆತಂಗೆ
ತತ್ ಪ್ರತ್ಯರ್ಥಿಕ್ಷಿತಿ ಪಾಲರ್ ಏನ್ ಎರಗರೇ ! ರತ್ನಾಕರಾಧೀಶ್ವರಾ !

ಭೃತ್ಯಂ-ಸೇವಕನು, ತನ್ನಂ ಅದೆಂತು ಕಾಣ್ಬನ್-ತನ್ನನ್ನು ಹೇಗೆ ಕಾಣುವನೋ, ಅವನ್ ಅಂತು-ಅವನಹಾಗೆ, ಉರ್ವೀಶ್ವರಂ-ರಾಜನು, ನಿಮ್ಮಕಂಡು-ನಿಮ್ಮನ್ನು ನೋಡಿ, ಅತ್ಯಾನಂದದೆ-ಬಹಳ ಆನಂದದಿಂದ, ಕಾಣ್ಕೆ-ದರ್ಶನ, ಕೆಯ್ಮುಗಿತಂ-ಕೈಗಳನ್ನು ಮುಗಿಯುವಿಕೆ, ಅಷ್ಟಾಂಗ ಆನತಂ-ಅಷ್ಟಾಂಗ ನಮಸ್ಕಾರ, ಸಮ್ಮುಖಸ್ತೌತ್ಯಂ-ಸಮ್ಮುಖದಲ್ಲಿ ಸ್ತೋತ್ರ ಸೇವೆಗಳೆಂಬ, ಇವಂ-ಸೇವೆಗಳು ಎಂಬಿವುಗಳನ್ನು ನೆಗಳುತಂ-ಮಾಡುತ್ತ, ನಂಬಿರ್ದೊಡೆ-ನಂಬಿಕೊಂಡಿದ್ದರೆ, ಆತಂಗೆ-ಆ ರಾಜನಿಗೆ, ತತ್-ಅವನ, ಪ್ರತ್ಯರ್ಥಿ ಕ್ಷಿತಿಪಾಲರ್ ಏನ್-ಶತ್ರುರಾಜರೇನು, ಎರಗರೇ-ನಮಸ್ಕರಿಸುವುದಿಲ್ಲವೇ ? ರತ್ನಾಕರಾಧೀಶ್ವರಾ !

ತನ್ನ ಸೇವಕರು ತನ್ನನ್ನು ಹೇಗೆ ಅತ್ಯಂತ ಭಕ್ತಿ, ಶ್ರದ್ಧೆಗಳಿಂದ ಕಾಣುವರೋ ಅದೇ ರೀತಿ ಮಹಾರಾಜನೂ ಜಿನೇಂದ್ರನ ಇದಿರು ಭಯಭಕ್ತಿಯಿಂದಿದ್ದು, ದರ್ಶನಸ್ತುತಿಗೈದು, ಕೈಮುಗಿದು, ಸಾಷ್ಟಾಂಗ ನಮಸ್ಕಾರಮಾಡಿ, ಕೊಂಡಾಡಿ ಅವನನ್ನೇ ನಂಬಿ ಅವನಿಗೆ ಸಂಪೂರ್ಣ ಶರಣಾದರೆ, ಏನು ಫಲತಾನೇ ಸಿಗುವುದಿಲ್ಲ ! ಶತ್ರುರಾಜರು ಬಂದು ತಮಗೆ ತಾವೇ ಅವನಿಗೆ (ಅಂಥಾ ರಾಜನಿಗೆ) ಶರಣಾಗತರಾಗುವರು. ಇದರಲ್ಲಿ ಏನಾಶ್ಚರ್ಯ ?

ಸುರಪಂ ತನ್ನಿಭವಿತ್ತು ಮಾವತಿಗನಪ್ಪಂ ಕಾಂತೆಯಿಂ ಪಾಡಿಪಂ–
ಸುರಸೈನ್ಯಂ ಸಹವಾಗಿ ನಿಮ್ಮಭಿಷವಕ್ಕೊಲ್ದೂಳಿಗಂ ಮಾಳ್ಪನಾ–
ದರದಿಂ ಛತ್ರಮುನೆತ್ತುವಂ ನಟಿಸುವಂ ಪಲ್ಲಕ್ಕಿಯುಂ ತಾಳ್ವನೀ |
ನರಕೀಟಾದಿಗಳೇಕೆ ಗರ್ವಿಸುವರೋ ! ರತ್ನಾಕರಾಧೀಶ್ವರಾ ! ||೮೧||

ಸುರಪಂ ತನ್ನಿಭವಿತ್ತು ಮಾವತಿಗನಪ್ಪಂ, ಕಾಂತೆಯಿಂ ಪಾಡಿಪಂ,
ಸುರಸೈನ್ಯಂ ಸಹವಾಗಿ ನಿಮ್ಮ ಅಭಿಷವಕ್ಕೆ ಒಲ್ದು ಊಳಿಗಂ ಮಾಳ್ಪಂ,
ಆದರದಿಂ ಛತ್ರಮುಂ ಎತ್ತುವಂ ನಟಿಸುವಂ ಪಲ್ಲಕ್ಕಿಯುಂ ತಾಳ್ವನ್,
ಈ ನರಕೀಟಾದಿಗಳ್ ಏಕೆ ಗರ್ವಿಸುವರೋ ! ರತ್ನಾಕರಾಧೀಶ್ವರಾ !

ಸುರಪಂ–ದೇವೇಂದ್ರನು, ತನ್ನ ಇಭವಿತ್ತು–ತನ್ನ ಐರಾವತವೆಂಬ ಆನೆಯನ್ನು ಕೊಟ್ಟು, ಮಾವತಿಗನಪ್ಪಂ–ಮಾವಟಿಗನಾಗುತ್ತಾನೆ, ಕಾಂತೆಯಿಂ–ತನ್ನ ಪತ್ನಿ ಶಚೀದೇವಿಯಿಂದ, ಪಾಡಿಪಂ–ಹಾಡಿಸುತ್ತಾನೆ, ಸುರಸೈನ್ಯಂ ಸಹವಾಗಿ–ದೇವತೆಗಳ ಸೈನ್ಯಸಮೇತನಾಗಿ, ನಿಮ್ಮ ಅಭಿಷವಕ್ಕೆ–ನಿಮ್ಮ ಜನ್ಮಾಭಿಷೇಕಕ್ಕೆ, ಒಲ್ದು–ಪ್ರೀತಿಸಿ, ಊಳಿಗಂ ಮಾಳ್ಪಂ–ಸೇವೆಯನ್ನು ಮಾಡುತ್ತಾನೆ, ಆದರದಿಂ–ವಿಶ್ವಾಸದಿಂದ, ಛತ್ರಮುಂ ಎತ್ತುವಂ–ಶ್ವೇತಛತ್ರಿಯನ್ನು ಎತ್ತಿಹಿಡಿಯುತ್ತಾನೆ, ನಟಿಸುವಂ–ನರ್ತನ ಮಾಡುತ್ತಾನೆ, ಪಲ್ಲಕ್ಕಿಯುಂ ತಾಳ್ವನ್–ಪಲ್ಲಕ್ಕಿಯನ್ನು ಹೊರುವನು, ಈ ನರಕೀಟಾದಿಗಳ್–ಈ ಹುಲು ಮಾನವರು, ಏಕೆ ಗರ್ವಿಸುವರೋ–ಏಕೆ ಅಹಂಕಾರ ಪಡುವರೋ ? ರತ್ನಾಕರಾಧೀಶ್ವರಾ !

ಜಿನಶಿಶು ಜನಿಸಿದಾಗ ದೇವೇಂದ್ರನಿಗೆ ತಿಳಿದು ಅತ್ಯಂತ ಹರ್ಷಗೊಳ್ಳುತ್ತಾನೆ. ಆ ಮಹಾ ಚೇತನದ ಸೇವೆಗಾಗಿ ಕಂಕಣಬದ್ಧನಾಗಿ, ಅತ್ಯಂತ ಭಕ್ತಿಶ್ರದ್ಧೆಗಳಿಂದ ಸಿದ್ಧನಾಗುತ್ತಾನೆ. ದೇವಲೋಕದ ಐರಾವತದ ಮೇಲೆ ಜಿನಬಾಲಕನನ್ನು ವಿರಾಜಮಾನಮಾಡಿಸಿ ತಾನೇ ಮಾವಟಿಗನಾಗಿ ಜನ್ಮಾಭಿಷೇಕಕ್ಕೆ ಮೇರುಪರ್ವತಕ್ಕೆ ಕರೆದೊಯ್ಯುತ್ತಾನೆ. ಶಚೀದೇವಿಯಿಂದ ಹಾಡಿಸುತ್ತಾನೆ. ಇಡೀ ದೇವಲೋಕದ ಸಮೂಹವೇ ಈ ಮಹಾ ಉತ್ಸವದಲ್ಲಿ ಪಾಲ್ಗೊಳ್ಳುತ್ತದೆ. ದೇವಸೈನ್ಯ ಸಜ್ಜಾಗಿ ಈ ಮೆರವಣಿಗೆಯಲ್ಲಿ ಬರುತ್ತದೆ. ಮೇರುಪರ್ವತದಲ್ಲಿರುವ ಪಾಂಡುಕಶಿಲೆಯಮೇಲೆ ಆ ಜಿನಬಾಲಕನ ಜನ್ಮಾಭಿಷೇಕಕ್ಕೆ ಸಕಲ ಸಿದ್ಧತೆಗಳನ್ನುಮಾಡಿ ತಾನು ಎಲ್ಲ ಸೇವೆಯನ್ನು ಮಾಡಲು ದೇವೇಂದ್ರ ಕಾತುರನಾಗಿದ್ದಾನೆ. ತಾನೇ ಶ್ವೇತಛತ್ರಿಯನ್ನು ಎತ್ತಿಹಿಡಿಯುತ್ತಾನೆ. ಇಷ್ಟಕ್ಕೇ ತೃಪ್ತನಾಗದೆ ತಾನೇ ಸ್ವತಃ ಆನಂದನೃತ್ಯ ಮಾಡುತ್ತಾನೆ. ಮುಂದೆ ತೀರ್ಥಂಕರ ಚೇತನಕ್ಕೆ ವೈರಾಗ್ಯ ಅಂಕುರಿಸಿದಾಗ ದೇವೇಂದ್ರ ಭುವಿಗಿಳಿದು ಆ ವಿರಕ್ತ ಚೇತನವನ್ನು ಪಲ್ಲಕ್ಕಿಯಲ್ಲಿ ಕೂರಿಸಿ ತಾನೇ ಕಾಡಿನತ್ತ ಹೊರುವನು. ದೇವತೆಗಳಿಂದ ಎಂಥ ಭಕ್ತಿಯ ಪ್ರದರ್ಶನ! ಹೀಗಿರುವಾಗ ಈ ನರಕೀಟಗಳು ಎಷ್ಟೊಂದು ಗರ್ವಪಡುವರು! ದೇವಲೋಕದ ವೈಭವದ ಮುಂದೆ ಈ ಮಾನವರ ವೈಭವ ಅಣುಮಾತ್ರ, ಹಾಗಿದ್ದರೂ ಏನು ಅಹಂಕಾರ ಈ ಹುಲುಮಾನವರಸು ?

ದೊರೆಯೇನಂ ಪಿಡಿದಿರ್ಪನಂತದನೆ ಲೋಕಂ ಮೆಚ್ಚುಗುಂ ತದ್ಧರಾ-
ವರನಾ ದುರ್ಮತದತ್ತ ತಾನೆಳಸಿದಂದಾ ಸಾರ್ದರಂ ತನ್ನುವಂ ||
ನರಕಕ್ಕಿಕ್ಕಿದನೊಲ್ದು ನಿಮ್ಮ ಮತದತ್ತಿಚ್ಛೈಸಿದಂದಾತನು-
ದ್ಧರಿಸಲ್ತಾನೆ ಸಮರ್ಥನಾದನರರೇ ! ರತ್ನಾಕರಾಧೀಶ್ವರಾ! ||೮೨||

ದೊರೆಯೇನಂ ಪಿಡಿದಿರ್ಪಂ ಅಂತದನೆ ಲೋಕಂ ಮೆಚ್ಚುಗುಂ,
ತತ್‌ಧರಾವರಂ ಆ ದುರ್ಮತದತ್ತ ತಾನ್ ಎಳಸಿದಂದು ಆ ಸಾರ್ದರಂ
ತನ್ನುವಂ ನರಕಕ್ಕಿಕ್ಕಿದಂ; ಒಲ್ದು ನಿಮ್ಮ ಮತದತ್ತ ಇಚ್ಛೈಸಿದಂದು ಆತನ್
ಉದ್ಧರಿಸಲ್ ತಾನೆ ಸಮರ್ಥನಾದನ್ ಅರರೇ ! ರತ್ನಾಕರಾಧೀಶ್ವರಾ !

ದೊರೆ ಏನಂ ಪಿಡಿದಿರ್ಪಂ–ದೊರೆ ಏನನ್ನು ಅಂಗೀಕರಿಸಿರುವನೋ, ಅಂತು ಅದನೆ–ಹಾಗೆ ಅದನ್ನೇ, ಲೋಕಂ ಮೆಚ್ಚುಗುಂ–ಲೋಕವು ಮೆಚ್ಚುತ್ತದೆ, ತತ್‌ಧರಾವರಂ–ಆ ರಾಜನು, ಆ ದುರ್ಮತದತ್ತ–ಆ ದುಷ್ಟ ಮತದಕಡೆಗೆ, ತಾನ್–ತಾನು, ಎಳಸಿದಂದು–ಅಪೇಕ್ಷೆ ಪಟ್ಟಾಗ, ಆ ಸಾರ್ದರಂ–ತನ್ನನ್ನು ಹೊಂದಿದವರನ್ನೂ, ತನ್ನುವಂ–ತನ್ನನ್ನೂ, ನರಕಕ್ಕೆ ಇಕ್ಕಿದಂ-ನರಕಕ್ಕೆ ಬೀಳಿಸಿದನು, ಒಲ್ದು-ಪ್ರೀತಿಸಿ, ನಿಮ್ಮ ಮತದತ್ತ-ನಿಮ್ಮ ಮತದಕಡೆಗೆ, ಇಚ್ಛೈಸಿದಂದು–ಅಪೇಕ್ಷೆಪಟ್ಟಾಗ, ಅರರೇ ! ಆತನ್–ಆ ರಾಜನು, ಉದ್ಧರಿಸಲ್ ತಾನೆ ಸಮರ್ಥನಾದನ್–ತನ್ನನ್ನೂ ತನ್ನ ಪ್ರಜೆಗಳನ್ನೂ ಉದ್ಧರಿಸುವುದಕ್ಕೆ ಸಮರ್ಥನಾದನು ; ರತ್ನಾಕರಾಧೀಶ್ವರಾ !

ದೊರೆ ಯಾವ ಮತವನ್ನು ಅಂಗೀಕರಿಸುವನೋ ಆತನ ಪ್ರಜೆಗಳೂ ಅವನನ್ನೇ ಹಿಂಬಾಲಿಸುತ್ತಾರೆ. "ಯಥಾರಾಜ ತಥಾ ಪ್ರಜಾಃ" ಸದ್ಧರ್ಮದತ್ತ ಅವನ ಮನ ವಾಲಿದರೆ ಅವನ ಪ್ರಜೆಗಳೂ ಸದ್ಧರ್ಮಿಗಳಾಗುವರು. ಮಿಥ್ಯಾದೃಷ್ಟಿಯಾಗಿ, ದುರ್ಮತದತ್ತ ಆ ರಾಜನು ಒಲಿದರೆ ತಾನು ಕೆಡುವುದಲ್ಲದೆ ತನ್ನ ಪ್ರಜೆಗಳನ್ನೂ ತಪ್ಪುದಾರಿಗೆ ಎಳೆದು ಕೊನೆಗೆ ಎಲ್ಲರೂ ದುರ್ಮಾರ್ಗಿಗಳಾಗಿ ನರಕಕ್ಕೆ ಇಳಿಯುವರು. ಅಹಿಂಸಾ ಧರ್ಮವನ್ನು ರಾಜ ನಿಷ್ಠೆಯಿಂದ ಪಾಲಿಸಿದರೆ ಅವನು ಉದ್ಧಾರವಾಗುವುದಲ್ಲದೆ ಅವನ ಪ್ರಜೆಗಳೂ ಅಹಿಂಸಾಮಾರ್ಗದಲ್ಲಿ ನಡೆದು ತಮ್ಮ ಆತ್ಮೋದ್ಧಾರಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ನರರೊಳ್ಪುಟ್ಟಿ ನರೇಂದ್ರನಾದ ದಿನದೊಳ್ಸದ್ಧರ್ಮಮಂ ಸನ್ಮುನೀ-
ಶ್ವರರಂ ಭವ್ಯರನೊಲ್ದು ಮನ್ನಿಸಿಯನಾಥರ್ಗಾಶ್ರಿತರ್ಗೀವುತಂ ॥
ಪರಿವಾರಪ್ರಜೆಗಳ್ಗೆ ತಾಯತೆರದಿಂದೋವುತ್ತಮಿರ್ಪಂ ಧರಾ-
ವರನಿಂದಾ ಬರ್ದಿಲಕ್ಕೆ ನಾಳಿನವನೈ ರತ್ನಾಕರಾಧೀಶ್ವರಾ ! ॥೮೩॥

ನರರೊಳ್ ಪುಟ್ಟಿ ನರೇಂದ್ರನಾದ ದಿನದೊಳ್, ಸದ್ಧರ್ಮಮಂ
ಸನ್ಮುನೀಶ್ವರರಂ ಭವ್ಯರಂ ಒಲ್ದು ಮನ್ನಿಸಿ, ಅನಾಥರ್ಗೆ ಆಶ್ರಿತರ್ಗೆ
ಈವುತಂ, ಪರಿವಾರ ಪ್ರಜೆಗಳ್ಗೆ ತಾಯತೆರದಿಂದ ಓವುತ್ತಂ ಇರ್ಪಂ,
ಧರಾವರನ್ ಇಂದು ಆ ಬರ್ದಿಲಕ್ಕೆ ನಾಳಿನವನೈ ರತ್ನಾಕರಾಧೀಶ್ವರಾ !

ನರರೊಳ್‌ಪುಟ್ಟಿ–ಮನುಷ್ಯರಲ್ಲಿ ಹುಟ್ಟಿ, ನರೇಂದ್ರನಾದ ದಿನದೊಳ್–ರಾಜನಾದ ದಿನದಲ್ಲಿ, ಸದ್ಧರ್ಮಮಂ–ಶ್ರೇಷ್ಠವಾದ ಧರ್ಮವನ್ನೂ, ಸನ್ಮುನೀಶ್ವರರಂ–ಶ್ರೇಷ್ಠರಾದ ಮುನೀಶ್ವರರನ್ನೂ, ಭವ್ಯರಂ – ಭವ್ಯರನ್ನೂ, ಒಲ್ದು–ಪ್ರೀತಿಸಿ, ಮನ್ನಿಸಿ–ಉಪಚರಿಸಿ, ಅನಾಥರ್ಗೆ–ದಿಕ್ಕಿಲ್ಲದವರಿಗೆ, ಆಶ್ರಿತರ್ಗೆ–ತನ್ನನ್ನು ಆಶ್ರಯಿಸಿದವರಿಗೆ, ಈವುತಂ–ದಾನವನ್ನು ಮಾಡುತ್ತ, ಪರಿವಾರ ಪ್ರಜೆಗಳ್ಗೆ–ತನ್ನ ಪರಿವಾರಕ್ಕೂ ಪ್ರಜೆಗಳಿಗೂ, ತಾಯತೆರದಿಂದ – ತಾಯಿಯಂತೆ, ಓವುತ್ತಂ–ಕಾಪಾಡುತ್ತ, ಇರ್ಪಂ–ಇರುವ ರಾಜನು, ಇಂದು ಧರಾವರನ್–ಈಹೊತ್ತು ಭೂಮಿಗೆ ಅಧಿಪತಿಯು, ಆ ಬರ್ದಿಲಕ್ಕೆ ನಾಳಿನವನೈ–ಆ ಸ್ವರ್ಗಲೋಕಕ್ಕೆ ನಾಳಿನವನು ! ರತ್ನಾಕರಾಧೀಶ್ವರಾ !

ಪುಣ್ಯಪ್ರಭಾವದಿಂದ ಮಾನವನಾಗಿ ಹುಟ್ಟಿ ಮತ್ತೆ ತಾನು ರಾಜಪದವಿಗೇರಿದ ದಿನದಲ್ಲೂ ಧರ್ಮಾಚರಣೆಯನ್ನು ಚಾಚೂ ತಪ್ಪದೆ ನಡೆಸುವುದು ತನ್ನ ಆದ್ಯ ಕರ್ತವ್ಯವೆಂದು ತಿಳಿಯುವವನೇ ಸತ್ಪುರುಷನು. ಅಂಥಹ ರಾಜೇಂದ್ರನು ಜಿನಧರ್ಮವನ್ನು ಆಶ್ರಯಿಸಿ, ಮುನಿಪುಂಗವರಿಗೆ ಉಪಚಾರ ವೆಸಗಿ ಭವ್ಯರನ್ನು ಆದರಿಸಿ, ದಾನಧರ್ಮಗಳನ್ನು ಮಾಡುತ್ತ ದಿಕ್ಕಿಲ್ಲದವರಿಗೆ ಆಶ್ರಯನೀಡಿ, ಪ್ರಜೆಗಳನ್ನು ತನ್ನ ಮಕ್ಕಳಂತೆ ಕಾಪಾಡಿದರೆ ಅವನಂಥಹ ಧರ್ಮರಾಜನು ಇನ್ನಾರಿದ್ದಾರೆ? ಅಂಥಹವನು ಮಾಡುವ ಈ ಸದ್ಧರ್ಮಕಾರ್ಯಗಳಿಂದ ಪುಣ್ಯದ ಹೊರೆಯನ್ನೇ ಹೊತ್ತು ಮುಂದಿನ ಗತಿಯಲ್ಲಿ ಸ್ವರ್ಗಕ್ಕೆ ಅಧಿಪತಿಯಾಗುವುದರಲ್ಲಿ ಏನು ಸಂದೇಹ ?

ಎಷ್ಟೆಷ್ಟೈಸಿರಿ ಪೆರ್ಚುಗುಂ ತನಗೆ ತಾನಷ್ಟಷ್ಟು ಸದ್ಧರ್ಮಕು-
ತ್ಕೃಷ್ಟಂ ಮಾಡಲೆವೇಳ್ಕು ನೋಂಪಿಗಳನಾನಿರ್ಗ್ರಂಥರಂ ನಿಚ್ಚ ಸಂ-॥
ತುಷ್ಟಂ ಮಾಡಲೆವೇಳ್ಕು ಧಾರ್ಮಿಕಜನಕ್ಕಾಧಾರವಾಗಲ್ಕೆ ವೇ-
ಳ್ಕಿಷ್ಟುಂ ತಾಂ ಸುಕೃತಾನುಬಂಧಿಸುಕೃತಂ ರತ್ನಾಕರಾಧೀಶ್ವರಾ ! ॥೮೮॥

ಎಷ್ಟೆಷ್ಟು ಐಸಿರಿ ಪೆರ್ಚುಗುಂ ತನಗೆ, ತಾನ್ ಅಷ್ಟಷ್ಟು ಸದ್ಧರ್ಮಕೆ ಉತ್ಕೃಷ್ಟಂ ಮಾಡಲೆವೇಳ್ಕು, ನೋಂಪಿಗಳಂ ಆ ನಿರ್ಗ್ರಂಥರಂ ನಿಚ್ಚ ಸಂತುಷ್ಟಂ ಮಾಡಲೆವೇಳ್ಕು, ಧಾರ್ಮಿಕಜನಕ್ಕೆ ಆಧಾರವಾಗಲ್ಕೆವೇಳ್ಕು, ಇಷ್ಟುಂ ತಾಂ ಸುಕೃತಾನುಬಂಧಿ ಸುಕೃತಂ ರತ್ನಾಕರಾಧೀಶ್ವರಾ !

ತನಗೆ, ಎಷ್ಟೆಷ್ಟು, ಐಸಿರಿ-ಸಂಪತ್ತು, ಪೆರ್ಚುಗುಂ-ಹೆಚ್ಚುವುದೋ ಅಷ್ಟಷ್ಟು, ತಾನ್-ತಾನು, ಸದ್ಧರ್ಮಕೆ-ಶ್ರೇಷ್ಠವಾದ ಧರ್ಮಕ್ಕೆ, ಉತ್ಕೃಷ್ಟಂ-ಅಭಿವೃದ್ಧಿಯನ್ನು, ಮಾಡಲೆವೇಳ್ಕು-ಮಾಡಬೇಕು, ನೋಂಪಿಗಳಂ-ವ್ರತಗಳನ್ನೂ, ಆ ನಿರ್ಗ್ರಂಥರಂ-ಆ ಪರಿಗ್ರಹರಹಿತರಾದ ಮುನಿಗಳನ್ನೂ, ನಿಚ್ಚ ಸಂತುಷ್ಟಂ-ಪ್ರತಿದಿನವೂ ಸಂತೋಷವುಳ್ಳವರನ್ನಾಗಿ, ಮಾಡಲೆವೇಳ್ಕು-ಮಾಡಬೇಕು, ಧಾರ್ಮಿಕ ಜನಕ್ಕೆ-ಧರ್ಮಾತ್ಮರಿಗೆ, ಆಧಾರವಾಗಲ್ಕೆವೇಳ್ಕು – ಆಶ್ರಯದಾತನಾಗಿರಬೇಕು, ಇಷ್ಟುಂ ತಾಂ-ಈ ಕಾರ್ಯವೆಲ್ಲವೂ, ಸುಕೃತಾನುಬಂಧಿ ಸುಕೃತಂ – ಸುಕೃತಾನುಬಂಧಿ ಸುಕೃತವೆನಿಸುವುದು. ರತ್ನಾಕರಾಧೀಶ್ವರಾ !

ಶ್ರೀಮಂತಿಕೆ ಹೆಚ್ಚಿದಂತೆಲ್ಲ ಆ ಶ್ರೀಮಂತಿಕೆಯನ್ನು ಸದ್ಧರ್ಮವೃದ್ಧಿಗೆ ಉಪಯೋಗ ಮಾಡಬೇಕು. ಸತ್ಪಾತ್ರದಾನದಲ್ಲಿ ತನ್ನ ಧನವನ್ನು ವಿನಿಯೋಗಿಸಬೇಕು. ವ್ರತಾಚರಣೆಗಳಲ್ಲಿ ತೊಡಗಬೇಕು. ಭಗವಂತನ ಪೂಜೋತ್ಸವಗಳಲ್ಲಿ ಶ್ರದ್ಧಾಭಕ್ತಿಗಳಿಂದ ಪಾಲ್ಗೊಳ್ಳಬೇಕು. ದಿಗಂಬರ ಮುನಿಗಳ ಸೇವೆಯಲ್ಲಿ ತೊಡಗಿ ಅವರಿಗೆ ನಿರಾತಂಕವಾಗಿ ಆಹಾರದಾನ ಮಾಡುವ, ಅವರು ನಿರಂತರ ಸಂತೋಷದಲ್ಲಿರುವಹಾಗೆ ನೋಡಿಕೊಳ್ಳಬೇಕು. ಧರ್ಮಾತ್ಮರಿಗೆ ಮನ್ನಣೆ ನೀಡುವುದಲ್ಲದೆ ಅವರ ಧಾರ್ಮಿಕ ಕಾರ್ಯಕ್ರಮಗಳಲ್ಲಿ ನೆರವುನೀಡಿ, ಅವರಿಗೆ ಆಶ್ರಯದಾತನಾಗಿರಬೇಕು. ಈ ಧಾರ್ಮಿಕ ಕಾರ್ಯಗಳೆಲ್ಲವೂ ಮಾನವನನ್ನು ಸುಕೃತಾನುಬಂಧಿಸುಕೃತನಾಗುವಹಾಗೆ ಮಾಡುತ್ತವೆ.

ವ್ರತಮುಂ ಮಾಣ್ದೊಡೆ ಸೇವೆ ಮಾಣ್ಬುದರಿದೇ ? ಶೀಲೋಪವಾಸಕ್ಕೆ ಬೆ-
ಚ್ಚುತಿರಲ್ವಿಕ್ರಮಲಕ್ಷ್ಮಿಜಾರ್ವುದರಿದೇ ? ಸತ್ಪಾತ್ರದಾನಂ ವಿವ-
ರ್ಜಿತಮಾಗಲ್ಸಿರಿಕುಂದಿವರ್ಪುದರಿದೇ ? ನಿಮ್ಮರ್ಚನಾಸಂಭ್ರಮಂ |
ಚ್ಯುತಮಾಗಲ್ನೃಪವೈಭವಂ ಸಡಿಲದೇ ? ರತ್ನಾಕರಾಧೀಶ್ವರಾ ! ||೮೫||

ವ್ರತಮುಂ ಮಾಣ್ದೊಡೆ ಸೇವೆ ಮಾಣ್ಬುದು ಅರಿದೇ ? ಶೀಲ ಉಪವಾಸಕ್ಕೆ
ಬೆಚ್ಚುತಿರಲ್ ವಿಕ್ರಮ ಲಕ್ಷ್ಮಿ ಜಾರ್ವುದು ಅರಿದೇ ? ಸತ್ಪಾತ್ರದಾನಂ
ವಿವರ್ಜಿತಮಾಗಲ್ ಸಿರಿ ಕುಂದಿವರ್ಪುದು ಅರಿದೇ ? ನಿಮ್ಮ ಅರ್ಚನಾ
ಸಂಭ್ರಮಂ ಚ್ಯುತಮಾಗಲ್ ನೃಪವೈಭವಂ ಸಡಿಲದೇ ? ರತ್ನಾಕರಾಧೀಶ್ವರಾ !

ವ್ರತಮುಂ–ಉತ್ತಮ ವ್ರತಾಚರಣೆಗಳನ್ನು, ಮಾಣ್ದೊಡೆ–ಆಚರಿಸದೆ ಬಿಟ್ಟರೆ, ಸೇವೆ–ತನಗೆ ಪರರು ಮಾಡುವ ಸೇವೆಯು, ಮಾಣ್ಬುದು ಅರಿದೇ–ತಪ್ಪಿಹೋಗುವುದು ಅಸಾಧ್ಯವೇ? ಶೀಲ ಉಪವಾಸಕ್ಕೆ–ಒಳ್ಳೆಯ ನಡತೆ ಮತ್ತು ಉಪವಾಸಾದಿ ವ್ರತಗಳಿಗೆ, ಬೆಚ್ಚುತಿರಲ್–ಭಯಪಟ್ಟರೆ, ವಿಕ್ರಮ ಲಕ್ಷ್ಮಿ–ಪರಾಕ್ರಮ ಮತ್ತು ಸಂಪತ್ತು, ಜಾರ್ವುದು ಅರಿದೇ–ತೊಲಗಿ ಹೋಗುವುದು ಅಸಾಧ್ಯವೇ ? ಸತ್ಪಾತ್ರದಾನಂ–ಸತ್ಪಾತ್ರದಾನವು, ವಿರ್ವಜಿತಮಾಗಲ್–ಬಿಡಲ್ಪಡುತ್ತಿರಲು, ಸಿರಿ–ಐಶ್ವರ್ಯವು, ಕುಂದಿವರ್ಪುದು ಅರಿದೇ–ಕ್ಷೀಣವಾಗುತ್ತ ಬರುವುದು ಅಸಾಧ್ಯವೇ ? ನಿಮ್ಮ ಅರ್ಚನಾಸಂಭ್ರಮಂ–ನಿಮ್ಮ ಪೂಜೆಯ ಉತ್ಸಾಹವು ಚ್ಯುತಮಾಗಲ್–ಲೋಪವಾಗಲು, ನೃಪವೈಭವಂ–ರಾಜವೈಭವಗಳು, ಸಡಿಲದೆ–ಶಿಥಿಲವಾಗುವುದಿಲ್ಲವೇ ? ರತ್ನಾಕರಾಧೀಶ್ವರಾ !

ಅಹಿಂಸೆಯೇ ಮೊದಲಾದ ಉತ್ತಮ ವ್ರತಾಚರಣೆಗಳಿಂದ ಭಗವಂತನ ಸೇವೆಯನ್ನು ಮಾಡುವುದನ್ನು ನಿಲ್ಲಿಸಿದರೆ, ನಮ್ಮ ಸೇವೆಯಲ್ಲಿ ನಿರತರಾಗಿದ್ದ ಭೃತ್ಯರು ನಮಗೆ ಅನಾದರಣೆ ತೋರುವುದರಲ್ಲಿ ಏನಾಶ್ಚರ್ಯ ? ಸಚ್ಚಾರಿತ್ರವಂತನಾಗಿಬಾಳಿ, ಉಪವಾಸಾದಿ ಉತ್ತಮ ಆಚರಣೆಗಳನ್ನು ಮಾಡದಿದ್ದರೆ, ನಮ್ಮ ಪರಾಕ್ರಮ, ಸಂಪತ್ತು ಜಾರಿಹೋಗುವುದಿಲ್ಲವೇ ? ನಮ್ಮ ಧನವನ್ನು ಸತ್ಪಾತ್ರದಲ್ಲಿ ದಾನ ಮಾಡದೆ ಲೋಭಿಯಾದರೆ, ನಮ್ಮ ಸಿರಿವಂತಿಕೆ ಕ್ಷೀಣವಾಗುವುದರಲ್ಲಿ ಸಂದೇಹವೇ ಇಲ್ಲ. ಅರಹಂತನ ಪೂಜಾ ಕೈಂಕರ್ಯಗಳಲ್ಲಿ ಉತ್ಸಾಹತೋರದೆ ಅನಾದರಣೆ ತಲೆದೋರಿದರೆ, ನಮಗೆ ದೊರೆತಿದ್ದ ರಾಜ ವೈಭವಗಳು ಕಣ್ಮರೆಯಾಗುವುದು ಅಸಾಧ್ಯವೇ ?

ಭೂಕಂಪಂ ಗ್ರಹಣಂ ಬರಂ ಗ್ರಹದನಿಷ್ಟಂ ವ್ಯಂತರೋಗ್ರಂ ರುಜಾ-
ಶೋಕಂ ದುಃಸ್ಥಿತಿಗವ್ಯಮರ್ತ್ಯಗಜವಾಹೋನ್ಮಾರಿದುಸ್ಸ್ವಪ್ನ ನಾ-॥
ನಾಕಷ್ಟಕ್ಕೆ ಮಹಾಭಿಷೇಕ ಕಲಿಕುಂಡಾದ್ಯರ್ಚನಂ ಸಂಘ ಪೂ-
ಜಾಕಾರ್ಯಂ ದೊರೆ ಮಾಳ್ಪ ಶಾಂತಿಕವಲಾ ರತ್ನಾಕರಾಧೀಶ್ವರಾ ! ॥೮೬

ಭೂಕಂಪಂ ಗ್ರಹಣಂ ಬರಂ ಗ್ರಹದ ಅನಿಷ್ಟಂ, ವ್ಯಂತರೋಗ್ರಂ ರುಜಾ
ಶೋಕಂ ದುಃಸ್ಥಿತಿ, ಗವ್ಯ ಮರ್ತ್ಯ ಗಜ ವಾಹ ಉನ್ಮಾರಿ ದುಸ್ಸ್ವಪ್ನ
ನಾನಾಕಷ್ಟಕ್ಕೆ, ಮಹಾಭಿಷೇಕ ಕಲಿಕುಂಡಾದಿ ಅರ್ಚನಂ
ಸಂಘಪೂಜಾಕಾರ್ಯಂ, ದೊರೆಮಾಳ್ಪ ಶಾಂತಿಕವಲಾ ರತ್ನಾಕರಾಧೀಶ್ವರಾ !

ಭೂಕಂಪಂ–ಭೂಕಂಪ, ಗ್ರಹಣಂ–ಸೂರ್ಯ ಚಂದ್ರಗ್ರಹಣ, ಬರಂ-ಕ್ಷಾಮ, ಗ್ರಹದ ಅನಿಷ್ಟಂ-ಗ್ರಹಗಳ ಕಾಟ, ವ್ಯಂತರ ಉಗ್ರಂ-ವ್ಯಂತರ ದೇವತೆಗಳ ಭೀತಿ, ರುಜಾಶೋಕಂ-ರೋಗದ ದುಃಖ, ದುಃಸ್ಥಿತಿ-ಹೀನಸ್ಥಿತಿ, ಗವ್ಯ-ಗೋವಿಗೆ ಸಂಬಂಧಿಸಿದ, ಮರ್ತ್ಯ-ಮನುಷ್ಯರ, ಗಜ-ಆನೆಗಳ, ವಾಹ-ಕುದುರೆಗಳ, ಉನ್ಮಾರಿ-ಕ್ರೂರವಾದ ರೋಗವು, ದುಃಸ್ವಪ್ನ-ಕೆಟ್ಟಸ್ವಪ್ನ, ನಾನಾಕಷ್ಟಕ್ಕೆ-(ಈ ತೆರನಾದ) ನಾನಾ ಕಷ್ಟಗಳಿಗೆ, ಮಹಾಭಿಷೇಕ–ಮಹಾಭಿಷೇಕವೂ, ಕಲಿಕುಂಡಾದಿ ಅರ್ಚನಂ-ಕಲಿಕುಂಡ ಮೊದಲಾದ ಯಂತ್ರಾರಾಧನೆಯೂ, ಸಂಘ ಪೂಜಾಕಾರ್ಯಂ - ಸಂಘಪೂಜಾಕಾರ್ಯವೂ, ದೊರೆ - ರಾಜನು, ಮಾಳ್ಪ-ಮಾಡುವ, ಶಾಂತಿಕವಲಾ !–ಶಾಂತಿಕವಲ್ಲವೇ ? ರತ್ನಾಕರಾಧೀಶ್ವರಾ !

ಭೂಕಂಪ, ಸೂರ್ಯಚಂದ್ರಗ್ರಹಣಗಳ ತಾಪ, ಕ್ಷಾಮ, ಗ್ರಹಗಳ ಪೀಡೆ, ವ್ಯಂತರ ದೇವತೆಗಳ ಭೀತಿ, ರೋಗರುಜಿನಗಳ ಭಯ, ಹೀನಸ್ಥಿತಿ, ಗೋವುಗಳಿಗೆ, ಮನುಷ್ಯರಿಗೆ, ಆನೆಗಳಿಗೆ, ಕುದುರೆಗಳಿಗೆ ಭಯಂಕರವಾದ ರೋಗಗಳು ತಾಕುವಿಕೆ, ಕೆಟ್ಟ ಸ್ವಪ್ನಗಳು ಈ ತೆರನಾದ ನಾನಾ ಸಂಕಷ್ಟಗಳು ಒದಗಿದಾಗ ರಾಜನಾದವನು ಇವುಗಳ ಶಾಂತಿಗೋಸ್ಕರ ಮಹಾಭಿಷೇಕ ಪೂಜೆ, ಕಲಿಕುಂಡ ಮೊದಲಾದ ಯಂತ್ರಾರಾಧನೆಗಳನ್ನೂ, ಸಂಘಪೂಜಾಕಾರ್ಯಗಳನ್ನೂ ಮಾಡಿಸಿ ಪ್ರಜೆಗಳಿಗೆ ಒದಗಿಬಂದಿರುವ ಈ ಆಪತ್ತು, ಕಷ್ಟಕಾರ್ಪಣ್ಯಗಳನ್ನು ನಿವಾರಿಸಲು ಯತ್ನಿಸುವುದು ಉಚಿತವಾದ ಮಾರ್ಗ.

ದೀಕ್ಷಾಗ್ರಾಹಿಗಳಂ ದಯಾಶ್ರುತಮನಾ ಯಕ್ಷರ್ಕಳಂ ನಿಮ್ಮ ಸ-।
ಲ್ಲಕ್ಷದ್ಬಿಂಬಮನಾನೆಯಂದಣಗಳೊಳ್ಪಲ್ಲಕ್ಕಿ ಯೊಳ್ತೇರೊಳಿ-॥
ಟ್ಟಕ್ಷೂಣೋತ್ಸವದಿಂ ಪ್ರಭಾವನೆಗಳಂ ಮಾಳ್ಪಂ ನಿರಾಯಾಸದಿಂ ।
ಮೋಕ್ಷಶ್ರೀಗಧಿನಾಥನಪ್ಪುದರಿದೇ ? ರತ್ನಾಕರಾಧೀಶ್ವರಾ ! ॥೮೭॥

ದೀಕ್ಷಾಗ್ರಾಹಿಗಳಂ ದಯಾಶ್ರುತಮಂ ಆ ಯಕ್ಷರ್ಕಳಂ ನಿಮ್ಮ ಸಲ್ಲಕ್ಷತ್
ಬಿಂಬಮಂ, ಆನೆ ಅಂದಣಗಳೊಳ್ ಪಲ್ಲಕ್ಕಿಯೊಳ್ ತೇರೊಳ್ ಇಟ್ಟು,
ಅಕ್ಷೂಣ ಉತ್ಸವದಿಂ ಪ್ರಭಾವನೆಗಳಂ ಮಾಳ್ಪಂ, ನಿರಾಯಾಸದಿಂ
ಮೋಕ್ಷಶ್ರೀಗೆ ಅಧಿನಾಥನ್ ಅಪ್ಪುದು ಅರಿದೇ ? ರತ್ನಾಕರಾಧೀಶ್ವರಾ !

ದೀಕ್ಷಾಗ್ರಾಹಿಗಳಂ–ದೀಕ್ಷೆಯನ್ನು ತೆಗೆದುಕೊಂಡವರನ್ನೂ, ದಯಾಶ್ರುತಮಂ-ಅಹಿಂಸಾಪ್ರಧಾನವಾದ ಶಾಸ್ತ್ರವನ್ನೂ, ಆ ಯಕ್ಷರ್ಕಳಂ-ಆ ಯಕ್ಷ ದೇವತೆಗಳನ್ನೂ, ನಿಮ್ಮ ಸಲ್ಲಕ್ಷತ್-ನಿಮ್ಮ ಶ್ರೇಷ್ಠವಾದ ಹಾಗೂ ಲಕ್ಷಣವಾದ, ಬಿಂಬಮಂ–ಬಿಂಬವನ್ನೂ, ಆನೆ–ಆನೆಯ, ಅಂದಣಗಳೊಳ್–ಅಂಬಾರಿಗಳಲ್ಲಿಯೂ, ಪಲ್ಲಕ್ಕಿಯೊಳ್–ಪಲ್ಲಕ್ಕಿಯಲ್ಲಿಯೂ, ತೇರೊಳ್–ರಥದಲ್ಲಿಯೂ, ಇಟ್ಟು–ಇರಿಸಿ, ಅಕ್ಷೂಣ ಉತ್ಸವದಿಂ–ಪರಿಪೂರ್ಣವಾದ ಉತ್ಸವದಿಂದ, ಪ್ರಭಾವನೆಗಳಂ ಮಾಳ್ಪಂ–ಧರ್ಮಪ್ರಭಾವನೆಗಳನ್ನು ಮಾಡುವವನು, ನಿರಾಯಾಸದಿಂ–ಶ್ರಮವಿಲ್ಲದೆ, ಮೋಕ್ಷಶ್ರೀಗೆ–ಮೋಕ್ಷಸಾಮ್ರಾಜ್ಯಕ್ಕೆ, ಅಧಿನಾಥನ್ ಅಪ್ಪುದು ಅರಿದೇ–ಅಧಿಪತಿಯಾಗುವುದು ಅಸಾಧ್ಯವೇ ? ರತ್ನಾಕರಾಧೀಶ್ವರಾ !

ಮಹಾಮುನಿಗಳನ್ನೂ, ಅಹಿಂಸಾಧರ್ಮವನ್ನು ಚಿತ್ರಿಸುವ ಶಾಸ್ತ್ರಗಳನ್ನೂ, ಜಿನಶಾಸನ ದೇವತೆಗಳನ್ನೂ. ಶ್ರೇಷ್ಠವಾದ ಸಲ್ಲಕ್ಷಣವಾದ ಜಿನಬಿಂಬವನ್ನೂ, ಭಕ್ತಿ, ಶ್ರದ್ಧೆ, ಉತ್ಸಾಹಗಳಿಂದ, ಆನೆಯ ಅಂಬಾರಿಗಳಲ್ಲಿ, ಪಲ್ಲಕ್ಕಿಗಳಲ್ಲಿ ರಥವಲ್ಲಿ ಇರಿಸಿ ಉತ್ಸವಾದಿಗಳನ್ನು ಮಾಡುವ ಮೂಲಕ ಯಾವನು ಸದ್ಧರ್ಮಪ್ರಭಾವನೆಯನ್ನು ಮಾಡುವನೋ, ಆ ಭವ್ಯಜೀವಿ ಮುಕ್ತಿಪಥದಲ್ಲಿರುವನೆಂದು ನಿಸ್ಸಂದೇಹವಾಗಿ ಹೇಳಬಹುದು. ಆಸನ್ನಭವ್ಯನಾದಂಥ ಆ ಜೀವನು ಖಂಡಿತವಾಗಿ ಮುಂದೆ ಕೆಲವೇ ಭವಗಳಲ್ಲಿ ಮೋಕ್ಷಸಂಪತ್ತನ್ನು ಪಡೆಯುವನು. ಪ್ರಭಾವನಾಂಗ ಸಮ್ಯಗ್ ದೃಷ್ಟಿಯ ಲಕ್ಷಣ.

ಹೊರ ಮಿಂಚಿಂ ಹೊಲೆವೆಣ್ಗೆ ಸೋಲ್ವತೆರದಿಂ ಶೃಂಗಾರವೀರಕ್ಕೆ ಬಾ-
ಯೊರೆದೀ ತಸ್ಕರಜಾರವೀರವಿಟವೇಶ್ಯಾ ಕಾವ್ಯಮಂ ಕೇಳ್ದು ಮೆ-॥
ಯ್ಮರೆವರ್ಪುಣ್ಯ ಪುರಾಣದತ್ತೆಳಸರಯ್ಯೋ ! ಭೂಪರೊಲ್ದಾಮ್ಲಮಂ ।
ಸುರಿವರ್ಪಾಲ್ಗುಡಿಯೆಂದರಂ ಜಡಿವರ್ಥೈ, ರತ್ನಾಕರಾಧೀಶ್ವರಾ ! ॥೮೮॥

ಹೊರಮಿಂಚಿಂ ಹೊಲೆವೆಣ್ಗೆ ಸೋಲ್ವತೆರದಿಂ, ಶೃಂಗಾರ ವೀರಕ್ಕೆ ಬಾಯೊರೆದು,
ಈ ತಸ್ಕರ ಜಾರ ವೀರ ವಿಟ ವೇಶ್ಯಾ ಕಾವ್ಯಮಂ ಕೇಳ್ದು ಮೆಯ್‌ಮರೆವರ್,
ಪುಣ್ಯಪುರಾಣದತ್ತ ಎಳಸರ್ ಅಯ್ಯೋ ! ಭೂಪರ್ ಒಲ್ದು ಆಮ್ಲಮಂ
ಸುರಿವರ್, ಪಾಲ್ಗುಡಿಯೆಂದರಂ ಜಡಿವರ್ಥೈ, ರತ್ನಾಕರಾಧೀಶ್ವರಾ !

ಹೊರಮಿಂಚಿಂ-ಹೊರಗಿನ ಬೆಡಗಿನಿಂದ, ಹೊಲೆವೆಣ್ಗೆ-ಚಂಡಾಲಸ್ತ್ರೀಗೆ, ಸೋಲ್ವತೆರದಿಂ-ಸೋಲುವಹಾಗೆ, ಶೃಂಗಾರ-ಶೃಂಗಾರ ರಸಕ್ಕೂ, ವೀರಕ್ಕೆ-ವೀರರಸಕ್ಕೂ, ಬಾಯ್‌ಒರೆದು-ಬಾಯಿ ಬಾಯಿ ಬಿಟ್ಟು, ಈ ತಸ್ಕರ-ಈ ಕಳ್ಳರ, ಜಾರ-ಜಾರರ, ವೀರ-ವೀರರ, ವಿಟ-ವಿಟಪುರುಷರ, ವೇಶ್ಯಾ ಕಾವ್ಯಮಂ-ಸೂಳೆಯರ ಕಾವ್ಯಗಳನ್ನು, ಕೇಳ್ದು-ಕೇಳಿ, ಮೆಯ್‌ಮರೆವರ್-ಮೆಯ್ ಮರೆಯುತ್ತಾರೆ. ಪುಣ್ಯಪುರಾಣದತ್ತ-ಪುಣ್ಯಕರವಾದ ಮಹಾಪುರುಷರ ಕಥೆಯ ಕಡೆಗೆ, ಎಳಸರ್-ಅಪೇಕ್ಷೆಪಡುವುದಿಲ್ಲ, ಅಯ್ಯೋ ? ಭೂಪರ್ - ಈ ರಾಜರು, ಒಲ್ದು - ಪ್ರೀತಿಯಿಂದ, ಆಮ್ಲಮಂ - ಹುಣಿಸೇ ಹುಳಿಯ ರಸವನ್ನು, ಸುರಿವರ್-ಸೇವಿಸುತ್ತಾರೆ (ಆದರೆ), ಪಾಲ್ಗುಡಿ ಎಂದರಂ-ಹಾಲನ್ನು ಕುಡಿ ಎಂದು ಹೇಳಿದವರನ್ನು, ಜಡಿವರ್ಥೈ-ಬೆದರಿಸುತ್ತಾರೆ! ರತ್ನಾಕರಾಧೀಶ್ವರಾ !

ಮೇಲಿನ ಬೆಡಗು ಬಿನ್ನಾಣಗಳಿಗೆ ಮರುಳಾಗಿ ಮೋಹಗೊಂಡು ರಾಜರುಗಳು ಚಂಡಾಲಸ್ತ್ರೀಯರನ್ನು ಕೂಡುವರು. ಶೃಂಗಾರ ಮತ್ತು ವೀರರಸಗಳಿಗೆ ಬಾಯ್ ಬಾಯ್ ಬಿಟ್ಟು, ದುಷ್ಟರ ಕಥೆಗಳನ್ನೂ, ಕಳ್ಳರ, ಜಾರರ, ವಿಟರ, ವಾರಾಂಗನೆಯರ ವಿಪುಲವರ್ಣನೆಯಿರುವ ದುಷ್ಕಾವ್ಯಗಳನ್ನೂ ಕೇಳಿ ಮೆಯ್ ಮರೆಯುತ್ತಾರೆ. ಪುಣ್ಯಪುರುಷರ, ಮೋಕ್ಷಗಾಮಿಗಳ ಸತ್ಕಾವ್ಯಗಳತ್ತ ಮನಸ್ಸೇಹೋಗದು. ಅಯ್ಯೋ ? ಏನು ಕರ್ಮಗೇಡಿಗಳು ? ಬೇಕಾದಷ್ಟು ಅಮೃತದಂತಿರುವ ಹಾಲಿದ್ದರೂ ಅದನ್ನು ಸೇವಿಸದೆ, ಹುಣಿಸೇ ಹಣ್ಣಿನ ಹುಳಿಯನ್ನೇ ಸೇವಿಸಲು ಆತುರಪಡುವರಲ್ಲ! ಕೆಟ್ಟಕಡೆಗೇ ಅವರ ಯೋಚನೆಗಳು ಹರಿಯುವುದಲ್ಲಾ !

ಶೃಂಗಾರಂ ಕಲಿನೀತಿಗೆಂದವನಿಪರ್ದುಷ್ಕಾವ್ಯಕೇ ಕೊಲ್ವರಾ ।
ಶೃಂಗಾರಂ ಕಲಿನೀತಿಗಳ್ಕಡಮೆಯೇ ಸತ್ಕಾವ್ಯದೊಳ್ ? ಲೌಕಿಕಂ ॥
ಪೊಂಗಿರ್ದಗ್ಗಳನೇಮಿರತ್ನ ಕುಮುದೇಂದು ಶ್ರೀ ಜಿನಾಚಾರ್ಯರ್ಕಾ-
ವ್ಯಂಗಳ್ಮಾಡವೆ ಮೋಹಮಂ ಮುಕುತಿಯುಂ ? ರತ್ನಾಕರಾಧೀಶ್ವರಾ ! ॥೮೯॥

ಶೃಂಗಾರಂ ಕಲಿ ನೀತಿಗೆಂದು ಅವನಿಪರ್ ದುಷ್ಕಾವ್ಯಕೆ ಏಕೆ ಒಲ್ವರ್,
ಆ ಶೃಂಗಾರಂ ಕಲಿ ನೀತಿಗಳ್ ಕಡಮೆಯೇ ಸತ್ಕಾವ್ಯದೊಳ್ ? ಲೌಕಿಕಂ
ಪೊಂಗಿರ್ದ ಅಗ್ಗಳ ನೇಮಿ ರತ್ನ ಕುಮುದೇಂದು ಶ್ರೀ ಜಿನಾಚಾರ್ಯ
ಕಾವ್ಯಂಗಳ್, ಮಾಡವೆ ಮೋಹಮಂ ಮುಕುತಿಯುಂ ರತ್ನಾಕರಾಧೀಶ್ವರಾ !

ಶೃಂಗಾರಂ-ಶೃಂಗಾರಕ್ಕಾಗಿ, ಕಲಿ-ಶೌರ್ಯಕ್ಕೆ, ನೀತಿಗೆಂದು–ನೀತಿಗೆಂದು, ಅವನಿಪರ್-ರಾಜರುಗಳು, ದುಷ್ಕಾವ್ಯಕೆ–ದುಷ್ಕಾವ್ಯಗಳಿಗೆ, ಏಕೆ ಒಲ್ವರ್-ಏಕೆ ಒಲಿಯುತ್ತಾರೋ ? ಆ ಶೃಂಗಾರಂ-ಆ ಶೃಂಗಾರ, ಕಲಿ ನೀತಿಗಳ್–ವೀರರಸ ಮತ್ತು ನೀತಿ, ಸತ್ಕಾವ್ಯದೊಳ್ ಕಡಮೆಯೇ–ಸತ್ಕಾವ್ಯಗಳಲ್ಲಿ ಕಡಿಮೆ ಇದೆಯೇ, ಲೌಕಿಕಂ ಪೊಂಗಿರ್ದ–ಐಹಿಕ ವಿಚಾರಗಳು ತುಂಬಿರುವ, ಅಗ್ಗಳ, ನೇಮಿ, ರನ್ನ, ಕುಮುದೇಂದು, ಶ್ರೀ ಜಿನಸೇನಾಚಾರ್ಯರ, ಕಾವ್ಯಂಗಳ್-ಕಾವ್ಯಗಳು, ಮೋಹಮಂ–ಅನುರಾಗವನ್ನೂ, ಮುಕುತಿಯುಂ–ಮೋಕ್ಷವನ್ನೂ, ಮಾಡವೆ-ಉಂಟುಮಾಡುವುದಿಲ್ಲವೇ ? ರತ್ನಾಕರಾಧೀಶ್ವರಾ !

ಶೃಂಗಾರರಸಕ್ಕಾಗಿ, ವೀರರಸಕ್ಕಾಗಿ, ನೀತಿಗಾಗಿ ರಾಜರುಗಳು ಸಿಕ್ಕ ಸಿಕ್ಕ ಕೆಟ್ಟ ಕಾವ್ಯಗಳತ್ತ ಏಕೆ ಮನಸ್ಸು ಕೊಡುತ್ತಾರೆ ? ನಮ್ಮ ಹಿಂದಿನ ಆಚಾರ್ಯರು ಕವಿಪುಂಗವರು ಅಮೂಲ್ಯವಾದ ಸಾಹಿತ್ಯ ಭಂಡಾರವನ್ನೇ ಬಿಟ್ಟುಹೋಗಿದ್ದಾರೆ. ಅವರು ರಚಿಸಿರುವ ಸತ್ಕಾವ್ಯಗಳು ಶೃಂಗಾರಕ್ಕೆ ಕಡಿಮೆಯೇ ? ಅವುಗಳಲ್ಲಿ ವೀರರಸವಿಲ್ಲವೇ ? ನೀತಿಬೋಧಕಗಳಲ್ಲವೇ ? ರಸವತ್ ಕಾವ್ಯಗಳನ್ನು ರಚಿಸಿರುವ ಅಗ್ಗಳ, ನೇಮಿ, ರನ್ನ, ಕುಮುದೇಂದು, ಶ್ರೀ ಜಿನಸೇನಾಚಾರ್ಯ ಮುಂತಾದವರು ಸಾಮಾನ್ಯ ಕವಿಗಳೇ ? ಅವರ ಕಾವ್ಯಗಳಲ್ಲಿ ಲೌಕಿಕ ವಿಷಯಗಳ ನಿರೂಪಣೆಯಿದ್ದರೂ, ಅವುಗಳ ಅಧ್ಯಯನದಿಂದ ನಮಗೆ ಇಹಲೋಕದ ಸುಖವೂ, ಪರಲೋಕದ ಸುಖವೂ, ಕಡೆಗೆ ಮುಕ್ತಿಲಾಭವೂ ಆಗುವುದಿಲ್ಲವೇ ?

ಚೇತೋರಂಗದೊಳಿಟ್ಟು ನಿಮ್ಮಡಿಗಳಂ ಬಂದೋಲಗಂಗೊಟ್ಟೊಡಂ ।
ಪ್ರಾತಃಕಾಲದ ರಾಗದೊಳ್ಪದದೊಳಂ ಪದ್ಯಂಗಳೊಳ್ವೀಣೆಯೊಳ್ ॥
ಶ್ರೀ ತೀರ್ಥಂಕರ ನಿಮ್ಮ ಪಾಡಿಸುತೆ ಪಾಡುತ್ತಳ್ತಿಯುಂ ಮಾಡುತಿ–
ರ್ಪಾತಂ ಭೂಪನೆ ? ಪಾಪಲೋಪಕನಲಾ ರತ್ನಾಕರಾಧೀಶ್ವರಾ ! ॥೯೦॥

ಚೇತೋರಂಗದೊಳಿಟ್ಟು ನಿಮ್ಮಡಿಗಳಂ ಬಂದು ಓಲಗಂ ಕೊಟ್ಟೊಡಂ,
ಪ್ರಾತಃಕಾಲದ ರಾಗದೊಳ್ ಪದದೊಳಂ ಪದ್ಯಂಗಳೊಳ್ ವೀಣೆಯೊಳ್,
ಶ್ರೀತೀರ್ಥಂಕರ ನಿಮ್ಮ ಪಾಡಿಸುತೆ ಪಾಡುತ್ತ ಅಳ್ತಿಯಂ ಮಾಡುತ
ಇರ್ಪಾತಂ ಭೂಪನೆ ? ಪಾಪಲೋಪಕನಲಾ ರತ್ನಾಕರಾಧೀಶ್ವರಾ !

ನಿಮ್ಮಡಿಗಳಂ–ನಿಮ್ಮ ಪಾದಗಳನ್ನು, ಚೇತೋರಂಗದೊಳಿಟ್ಟು–ಮನಸ್ಸೆಂಬ ರಂಗಮಂಟಪದೊಳಿಟ್ಟು, ಬಂದು, ಓಲಗಂ ಕೊಟ್ಟೊಡಂ - ಓಲಗವನ್ನು ಮಾಡುತ್ತಿದ್ದರೂ, ಪ್ರಾತಃಕಾಲದ ರಾಗದೊಳ್–ಉದಯರಾಗದಲ್ಲಿಯೂ, ಪದದೊಳಂ – ಹಾಡಿನಲ್ಲಿಯೂ, ಪದ್ಯಂಗಳೊಳ್-ಶ್ಲೋಕಗಳಲ್ಲಿಯೂ, ವೀಣೆಯೊಳ್–ವೀಣಾವಾದನದಲ್ಲಿಯೂ, ಶ್ರೀ ತೀರ್ಥಂಕರ–ತೀರ್ಥಂಕರ ಮಹಾಪ್ರಭು, ನಿಮ್ಮ ಪಾಡಿಸುತೆ–ನಿಮ್ಮನ್ನು ಸ್ತೋತ್ರಮಾಡಿಸುತ್ತ, ಪಾಡುತ್ತ-ತಾನೇ ಸ್ವತಃ ಹಾಡುತ್ತ, ಅಳ್ತಿಯಂ-ಆನಂದವನ್ನು, ಮಾಡುತ ಇರ್ಪಾತಂ-ಮಾಡುತ್ತಿರುವವನು, ಭೂಪನೆ-ರಾಜನೇ ? ಪಾಪಲೋಪಕನಲಾ-ಪಾಪವನ್ನು ನಾಶಮಾಡುವವನಲ್ಲವೇ ? ರತ್ನಾಕರಾಧೀಶ್ವರಾ !

ರಾಜನಾದವನು ಓಲಗದಲ್ಲಿರುವಾಗಲೂ ವೀತರಾಗ. ಸರ್ವಜ್ಞತೀರ್ಥಂಕರ ಮಹಾಪ್ರಭುವಿನ ದಿವ್ಯ ಪಾದಕಮಲಗಳನ್ನು ತನ್ನ ಹೃದಯ ಮಂಟಪದಲ್ಲಿ ವಿರಾಜಮಾನಮಾಡಿಸಿ, ಆ ಭಗವಂತನ ಗುಣಗಾನವನ್ನು ಉದಯರಾಗವೇ ಮೊದಲಾದ ರಾಗಗಳಲ್ಲಿ ಸುಶ್ರಾವ್ಯವಾಗಿ ಹಾಡಿಸುತ್ತ, ಅನೇಕ ಸ್ತೋತ್ರಗಳನ್ನು ಹೇಳಿಸುತ್ತ, ವೀಣಾವಾದನದಲ್ಲಿ ಆ ಭಗವಂತನ ನಾಮ ಸಂಕೀರ್ತನೆಯನ್ನು ನುಡಿಸುತ್ತ, ಭಕ್ತಿಪರವಶನಾಗಿ ತಾನೇ ಹಾಡುತ್ತ ಇದ್ದರೆ ಪುಣ್ಯಫಲಪ್ರಾಪ್ತಿಗೆ ಎಣೆಯುಂಟೆ ? ಅಂತಹ ಭವ್ಯ ಜೀವಿಯಾದ ಮಹಾರಾಜನು ಅಸಾಧಾರಣ ಚೇತನವೆಂದೇ ಹೇಳಬೇಕು. ಈ ಭಗವದ್ಭಕ್ತಿಯಿಂದ ಪಾಪಕರ್ಮಗಳು ತನ್ನಷ್ಟಕ್ಕೆ ತಾನೇ ಜಾರಿಹೋಗುವುದಿಲ್ಲವೇ ?

ಭರತಂಗಂ ಸಭೆಗೆಯ್ದೆ ಚಿತ್ತಕಲುಷಂ ನಿವ್ಮಾಲಯಕ್ಕೆಯ್ದೆ ಸ–
ತ್ಪರಿಣಾಮಂ ಪರಿದೆಯ್ದುತಂ ಪರೆಯುತಂ ಬೆಂಕೊಂಡಿರಲ್ಕಂಡು ತ–||
ದ್ಭರತಂ ನಿಮ್ಮನೆ ಪೊರ್ದಿ ಸಾರ್ದನಮೃತಶ್ರೀ ಸೌಖ್ಯಮಂ ನಿಮ್ಮನೀ–
ನರನಾಥರ್ಮರೆದೇಕೆ ನೋವರಕಟಾ ! ರತ್ನಾಕರಾಧೀಶ್ವರಾ! ||೯೧||

ಭರತಂಗಂ ಸಭೆಗೆಯ್ದೆ ಚಿತ್ತಕಲುಷಂ, ನಿಮ್ಮಾಲಯಕ್ಕೆಯ್ದೆ
ಸತ್ಪರಿಣಾಮಂ, ಪರಿದೆಯ್ದುತಂ ಪರೆಯುತಂ ಬೆಂಕೊಂಡಿರಲ್ ಕಂಡು,
ತದ್ಭರತಂ ನಿಮ್ಮನೆ ಪೊರ್ದಿಸಾರ್ದನ್ ಅಮೃತ ಶ್ರೀಸೌಖ್ಯಮಂ, ನಿಮ್ಮಂ
ಈ ನರನಾಥರ್ ಮರೆದು ಏಕೆ ನೋವರ್ ಅಕಟಾ ! ರತ್ನಾಕರಾಧೀಶ್ವರಾ !

ಭರತಂಗಂ–ಭರತಚಕ್ರವರ್ತಿಗೂ, ಸಭೆಗೆ ಎಯ್ದೆ–ಸಭೆಗೆ ಬರಲು, ಚಿತ್ತಕಲುಷಂ–ಮನಸ್ಸಿಗೆ ಕ್ಲೇಷವೂ, ನಿಮ್ಮ ಆಲಯಕ್ಕೆ ಎಯ್ದೆ–ನಿಮ್ಮ ಸನ್ನಿಧಿಗೆ ಬರಲು, ಸತ್‌ಪರಿಣಾಮಂ–ಒಳ್ಳೆಯ ಪರಿಣಾಮವು, ಪರಿದೆ ಎಯ್ದುತಂ–ಹರಿದುಬರುತ್ತಿರಲು, ಪರೆಯುತಂ–ವ್ಯಾಪಿಸುತ್ತಿರಲು, ಬೆಂಕೊಂಡಿರಲ್–ಎಡಬಿಡದೆ ಅನುಸರಿಸುತ್ತಿರಲು, ಕಂಡು–ಇದನ್ನು ನೋಡಿ, ತತ್‌ಭರತಂ–ಆ ಭರತನು, ನಿಮ್ಮನೆ ಪೊರ್ದಿ–ನಿಮ್ಮನ್ನೇ ಆಶ್ರಯಿಸಿ, ಅಮೃತ ಶ್ರೀಸೌಖ್ಯಮಂ–ಮೋಕ್ಷಲಕ್ಷ್ಮಿಯ ಸುಖವನ್ನು, ಸಾರ್ದಂ–ಪೊಂದಿದನು, ನಿಮ್ಮಂ–ನಿಮ್ಮನ್ನು, ಈ ನರನಾಥರ್–ಈ ದೊರೆಗಳು, ಮರೆದು ಏಕೆ–ಮರೆತು ಏಕೆ, ನೋವರ್ ಅಕಟಾ–ದುಃಖಪಡುವರು, ಅಕಟಾ ! ರತ್ನಾಕರಾಧೀಶ್ವರಾ !

ತದ್ಭವ ಮೋಕ್ಷಗಾಮಿಯಾದ ಭರತಚಕ್ರವರ್ತಿಗೂ ತನ್ನ ಆಸ್ಥಾನಕ್ಕೆ ಬಂದರೆ ಮನಸ್ಸಿನಲ್ಲಿ ಕ್ಲೇಷವುಂಟಾಗುವುದು. ಆದರೆ ಜಿನದರ್ಶನಕೋಸ್ಕರ ಭವ್ಯ ಚೈತ್ಯಾಲಯಕ್ಕೆ ಬಂದರೆ ಅಪೂರ್ವ ಮನಶ್ಯಾಂತಿ ಲಭಿಸುವುದು. ಆ ಸತ್ಪರಿಣಾಮವೇ ವೃದ್ಧಿಹೊಂದುತ್ತ ಆ ಭರತಚಕ್ರವರ್ತಿಯನ್ನು ಎಡಬಿಡದೆ ಅನುಸರಿಸುತ್ತ ಅವನನ್ನು ಅಂತರ್ಮುಖಿಯನ್ನಾಗಿ ಮಾಡಲು ಸಹಾಯಮಾಡುತ್ತಿತ್ತು. ಈ ಸಾಧನೆಯಿಂದಲೇ ಆ ಮಹಾನ್‌ಚೇತನ ಚಕ್ರವರ್ತಿ ಪದವಿಯ ಭೋಗೋಪಭೋಗಗಳನ್ನು ಅನುಭವಿಸುತ್ತಿದ್ದರೂ ಕೊನೆಗೆ ಎಲ್ಲವನ್ನೂ ತ್ಯಾಗಮಾಡಿ ಎರಡು ಘಳಿಗೆಯಲ್ಲಿ ಕೇವಲಜ್ಞಾನವನ್ನು ಪಡೆದು ಜಿನೇಂದ್ರನಾದನು. ಭರತೇಶನ ಈ ಆದರ್ಶವನ್ನು ತಮ್ಮ ಮುಂದಿಟ್ಟುಕೊಳ್ಳದೆ ಇಂದಿನ ರಾಜ ಮಹಾರಾಜರು ಸಂಸಾರಸಾಗರದಲ್ಲಿ ಸಿಕ್ಕಿ ತೊಳಲಾಡುತ್ತಿರುವರಲ್ಲಾ !

ರಾಜಶ್ರೀಯೊಳನೇಕ ಕಾಮಿನಿಯರುಂಟಾಳಾಪ ನೃತ್ಯಂಗಳುಂ-
ಟಾಜಿಹ್ವಾರುಚಿಯುಂಟು ಕಾಮಿಸಿದವೆಲ್ಲಾ ಉಂಟುವುಂಟಾದೊಡಂ ॥
ರಾಜೀವಂ ಕೆಸರಳ್ದಿಯಳ್ದದವೊಲಿರ್ದೂರ್ಧ್ವಕ್ಕೆ ಕಣ್ಣಿಟ್ಟೊಡಾ-
ರಾಜಂ ರಾಜನೆ ? ತಾನೆ ರಾಜಋಷಿಯೈ ರತ್ನಾಕರಾಧೀಶ್ವರಾ ! ॥೯೨॥

ರಾಜಶ್ರೀಯೊಳ್ ಅನೇಕ ಕಾಮಿನಿಯರುಂಟು, ಆಳಾಪನೃತ್ಯಂಗಳುಂಟು,
ಆ ಜಿಹ್ವಾರುಚಿಯುಂಟು, ಕಾಮಿಸಿದವೆಲ್ಲಾ ಉಂಟು ಉಂಟಾದೊಡಂ,
ರಾಜೀವಂ ಕೆಸರ್ ಅಳ್ದಿ ಅಳ್ದದವೊಲ್ ಇರ್ದು ಊರ್ಧ್ವಕ್ಕೆ ಕಣ್ಣಿಟ್ಟೊಡೆ,
ಆ ರಾಜಂ ರಾಜನೆ ? ತಾನೆ ರಾಜಋಷಿಯೈ ! ರತ್ನಾಕರಾಧೀಶ್ವರಾ !

ರಾಜಶ್ರೀಯೊಳ್–ರಾಜಸಂಪತ್ತಿನಲ್ಲಿ, ಅನೇಕ ಕಾಮಿನಿಯರುಂಟು–ಅನೇಕ ಸ್ತ್ರೀಯರಿರುತ್ತಾರೆ, ಆಳಾಪ-ಸಂಗೀತಗಳೂ, ನೃತ್ಯಂಗಳುಂಟು–ನರ್ತನಗಳೂ ಇರುತ್ತವೆ, ಆ ಜಿಹ್ವಾರುಚಿಯುಂಟು–ಆ ನಾಲಗೆಗೆ ರುಚಿಕರವಾದ ಪದಾರ್ಥಗಳೂ ಇರುತ್ತವೆ, ಕಾಮಿಸಿದವೆಲ್ಲಾ ಉಂಟು–ಇಚ್ಛೆಪಟ್ಟ ವಸ್ತುಗಳೆಲ್ಲಾ ಇರುತ್ತವೆ, ಉಂಟಾದೊಡಂ–ಇವೆಲ್ಲ ಇದ್ದರೂ, ರಾಜೀವಂ–ಕಮಲವು, ಕೆಸರ್ ಅಳ್ದಿ–ಕೆಸರಿನಲ್ಲಿ ಅದ್ದಿಯೂ, ಅಳ್ದದವೊಲ್–ಅದ್ದದಹಾಗೆ, ಇರ್ದು-ಇದ್ದು, ಊರ್ಧ್ವಕ್ಕೆ–ಮೇಲಕ್ಕೆ, ಕಣ್ಣಿಟ್ಟೊಡೆ–ದೃಷ್ಟಿಯನ್ನಿಟ್ಟರೆ, ಆ ರಾಜಂ–ಅಂತಹ ರಾಜನು, ರಾಜನೆ-ಸಾಧಾರಣ ರಾಜನೆ, ತಾನೆ ರಾಜಋಷಿಯೈ-ತಾನು ರಾಜಋಷಿಯಲ್ಲವೇ ! ರತ್ನಾಕರಾಧೀಶ್ವರಾ !

ರಾಜನಾದವನಿಗೆ ಸುಖಸಂಪತ್ತುಗಳಿಗೆ ಕಡಿಮೆಯೇ? ಅಂತಃಪುರದ ವಿಲಾಸಿನಿಯರಿಗೆ ಕಡಿಮೆಯೇ? ಪ್ರಸಿದ್ಧರಾದ ಗಾಯಕ ಗಾಯಕಿಯರು ಅವನಿಗೋಸ್ಕರ ಸುಶ್ರಾವ್ಯವಾಗಿ ಹಾಡಲು ಸದಾ ಸಿದ್ಧವಾಗಿರುತ್ತಾರೆ. ನೃತ್ಯಗಾರ್ತಿಯರು ತಮ್ಮ ಬೆಡಗು ಬಿನ್ನಾಣಗಳಿಂದ ಅವನನ್ನು ಸಂತೋಷಪಡಿಸಲು ಹಾತೊರೆಯುತ್ತಿರುತ್ತಾರೆ. ಬೇಕುಬೇಕಾದ ಭಕ್ಷ್ಯಗಳು ಅವನಿಗಾಗಿ ಸದಾಸಿದ್ಧ. ರಾಜನ ಇಂಗಿತವನ್ನರಿತು ಅವನನ್ನು ಸಂತುಷ್ಟಗೊಳಿಸಲು ಅವನ ಸೇವಕರು ಕಾತುರರಾಗಿರುತ್ತಾರೆ. ಏನು ಬೇಕು ಅವೆಲ್ಲವೂ ಅವನಿಗಾಗಿ ಅಣಿಮಾಡುತ್ತಾರೆ. ಇಷ್ಟೆಲ್ಲ ಭೋಗೋಪಭೋಗಗಳಲ್ಲಿ ಇದ್ದರೂ ಶ್ರೇಷ್ಠನಾದ ರಾಜನು ಇವುಗಳಲ್ಲೇ ಮಗ್ನನಾಗಿರುವುದಿಲ್ಲ, ಅವುಗಳಿಗೆ ಅಂಟಿಯೂ ಅಂಟದಂತೆ ನಿರ್ಲಿಪ್ತನಾಗಿರುತ್ತಾನೆ. ಕಮಲ ಕೆಸರಿನಲ್ಲಿ ಹುಟ್ಟಿದರೂ ಕೆಸರನ್ನೆಲ್ಲಾ ತನ್ನ ಮೈಗೆ ಬಳಿದುಕೊಳ್ಳುವುದಿಲ್ಲ. ಕಮಲದ ಹೂವಿನ ದೃಷ್ಟಿಯೆಲ್ಲ ಸೂರ್ಯನಕಡೆ. ಹಾಗೆ ರಾಜನೂ ಸಹ ಈ ಇಹಲೋಕದ ಸುಖದ ಸುಪ್ಪತ್ತಿಗೆಯಲ್ಲಿ ಪವಡಿಸಿದ್ದರೂ ಅವನ ಅಂತರಂಗ ವೀತರಾಗಭಾವನೆಯಿಂದ ತುಂಬಿರಬೇಕು. ಅವನ ಅಂತರ್‌ದೃಷ್ಟಿ ಯಾವಾಗಲೂ ಮೋಕ್ಷದ ಕಡೆಗೇ ಇರಬೇಕು. ಅಂಥಹ ರಾಜನು ನಿಜಕ್ಕೂ ರಾಜಋಷಿಯೇ ಸರಿ.

ಅಂದೇಂ ತಂದನೆ ಗರ್ಭದಿಂ ಪರರದೇಶಂ ಲಕ್ಷ್ಮಿಸೈನ್ಯಂಗಳಂ ।
ಮುಂದೇನೊಯ್ವನೆ ತಳ್ತ ಪೆಣ್ಪಡೆದ ಮಕ್ಕಳ್ಪೊತ್ತ ದೇಹಂಗಳಂ ॥
ಬಂದಿತ್ತೊಂದು ವಿನೋದಗೋಷ್ಠಿಯದು ನಿಮ್ಮಂ ಮುನ್ನಕಂಡಿರ್ದ ಸೈ-
ಪಿಂದಂ ಮತ್ತಮದೇಕೆ ತಾಂ ಮರೆವನೋ ರತ್ನಾಕರಾಧೀಶ್ವರಾ ! ॥೯೩॥

ಅಂದೇಂ ತಂದನೆ ಗರ್ಭದಿಂ ಪರರ ದೇಶಂ ಲಕ್ಷ್ಮಿ ಸೈನ್ಯಂಗಳಂ,
ಮುಂದೇಂ ಒಯ್ವನೆ ತಳ್ತಪೆಣ್ ಪಡೆದಮಕ್ಕಳ್ ಪೊತ್ತದೇಹಂಗಳಂ,
ಬಂದಿತ್ತೊಂದು ವಿನೋದಗೋಷ್ಠಿಯದು ನಿಮ್ಮಂ ಮುನ್ನ ಕಂಡಿರ್ದ
ಸೈಪಿಂದಂ, ಮತ್ತಂ ಅದೇಕೆ ತಾಂ ಮರೆವನೋ, ರತ್ನಾಕರಾಧೀಶ್ವರಾ !

ಅಂದೇಂ ತಂದನೆ ಗರ್ಭದಿಂ–ಗರ್ಭದಿಂದ ಬರುವಾಗ ಏನು ತೆಗೆದುಕೊಂಡು ಬಂದನೆ ?, ಪರರ ದೇಶಂ–ಬೇರೆಯವರ ರಾಜ್ಯವನ್ನೂ, ಲಕ್ಷ್ಮಿ–ಸಂಪತ್ತನ್ನೂ, ಸೈನ್ಯಂಗಳಂ–ಚತುರಂಗ ಬಲವನ್ನೂ ? ಮುಂದೆ ಏಂ ಒಯ್ವನೆ–ಸಾಯುವಾಗ ಏನು ತೆಗೆದುಕೊಂಡು ಹೋಗುವನೇ ? ತಳ್ತಪೆಣ್–ಕೈಹಿಡಿದ ಹೆಂಡತಿಯನ್ನೂ, ಪಡೆದ ಮಕ್ಕಳ್–ತನಗೆ ಹುಟ್ಟಿದ ಮಕ್ಕಳನ್ನೂ, ಪೊತ್ತದೇಹಂಗಳಂ–ಧರಿಸಿದ ದೇಹಗಳನ್ನೂ ? ನಿಮ್ಮಂ-ನಿಮ್ಮನ್ನು, ಮುನ್ನಕಂಡಿರ್ದ-ಪೂರ್ವಜನ್ಮದಲ್ಲಿ ಕಂಡಿದ್ದ, ಸೈಪಿಂದಂ-ಪುಣ್ಯದಿಂದ, ಒಂದು ವಿನೋದಗೋಷ್ಠಿಯದು–ಅದೊಂದು ವಿನೋದಗೋಷ್ಠಿಯಂತೆ ಬಂದಿತ್ತು, ಮತ್ತಂ–ಪುನಃ, ಅದೇಕೆ, ತಾಂ–ತಾನು, ಮರೆವನೋ–ಮರೆತುಬಿಡುವನೋ ! ರತ್ನಾಕರಾಧೀಶ್ವರಾ !

ಹುಟ್ಟುವಾಗ ತನ್ನ ಜೊತೆಯಲ್ಲಿ ರಾಜ್ಯ, ಕೋಶ, ಚತುರಂಗಬಲ ಮುಂತಾದ ಸಂಪತ್ತು ವೈಭವಗಳನ್ನು ಈ ಜೀವನು ತಂದನೇ ? ಸಾಯುವಾಗ ಏನಾದರೂ ಈ ವೈಭವಗಳನ್ನು ತನ್ನ ಜೊತೆಗೆ ತೆಗೆದುಕೊಂಡು ಹೋಗಲು ಸಾಧ್ಯವೇ ? ಕೈಹಿಡಿದ ಹೆಂಡತಿ, ತನ್ನ ಮಕ್ಕಳು, ತಾನು ಧರಿಸಿದ ದೇಹ, ಇವುಗಳಾದರೂ ತನ್ನ ಹಿಂದೆ ಬರುವುದೇ ? ಈ ಜೀವನ ಒಂದು ವಿನೋದಗೋಷ್ಠಿಯ ಕನಸಿದ್ದಂತೆ– "ಬರುತಂ ಬಯಲಾಗುತಂ ಇರ್ಪುವೈಸೆ." ಹಿಂದೆ ಮಾಡಿದ ಪುಣ್ಯಕರ್ಮ ಈ ಜನ್ಮದಲ್ಲಿ ಫಲನೀಡಿ ಕಣ್ಮರೆಯಾಗುತ್ತದೆ. ತಾನು ಅಸು ನೀಗಿದಮೇಲೆ ಮುಂದಿನ ಜನ್ಮದಲ್ಲಿ ಹಿಂದಿನ ಜೀವನದ ಯಾವ ನೆನಹೂ ಉಳಿದಿರುವುದಿಲ್ಲ. ಎಲ್ಲವನ್ನೂ ಮರೆತುಬಿಡುತ್ತಾನೆ. ಈ ಇಹಲೋಕದ ಸುಖಸಂಪದಗಳು ಕ್ಷಣ ಭಂಗುರವೆಂದು ತಿಳಿಯದೆ ಅವಿವೇಕಿಗಳು ಇವರೊಳಗೇ ತಮ್ಮ ದೃಷ್ಟಿಯನ್ನಿಟ್ಟು ಪರಮಾರ್ಥವನ್ನು ಮರೆತುಬಿಡುವರಲ್ಲಾ !

ಭಂಡಾರಂ ಬರುವನ್ನನಿರ್ಪನೆ ? ವಧೂಸಂಭೋಗದೊಳ್ಸಾಕೆನಲ್ ।
ಕಂಡೇಂ ಪೋಪನೆ ! ಯಳ್ಕರಿಂ ಪಡೆದ ರಾಜ್ಯಶ್ರೀಯನೇನಂತ್ಯದೊಳ್ ॥
ಕೊಂಡೊಯ್ದಪ್ಪನೆ ? ನಾಸ್ತಿ ನಾಸ್ತಿ ಗುರುದೈವಕ್ಕೊಲ್ದುಕೊಟ್ಟೈಸು ತಾ–
ನುಂಡುಟ್ಟೈಸು ತನತ್ತು ಮತ್ತೆ ಬರಿದೈ ರತ್ನಾಕರಾಧೀಶ್ವರಾ ! ॥೯೪॥

ಭಂಡಾರಂ ಬರುವನ್ನಂ ಇರ್ಪನೆ? ವಧೂಸಂಭೋಗದೊಳ್ ಸಾಕೆನಲ್
ಕಂಡೇಂ ಪೋಪನೆ ? ಅಳ್ಕರಿಂ ಪಡೆದ ರಾಜ್ಯಶ್ರೀಯಂ ಏನ್ ಅಂತ್ಯದೊಳ್
ಕೊಂಡೊಯ್ದಪ್ಪನೆ ?, ನಾಸ್ತಿ ನಾಸ್ತಿ, ಗುರುದೈವಕ್ಕೊಲ್ದು ಕೊಟ್ಟೈಸು
ತಾನ್ ಉಂಡುಟ್ಟೈಸು ತನತ್ತು, ಮತ್ತೆ ಬರಿದೈ ರತ್ನಾಕರಾಧೀಶ್ವರಾ !

ಭಂಡಾರಂ – ತನ್ನ ಕೋಶವು, ಬರುವನ್ನಂ – ತುಂಬುವವರೆಗೂ, ಇರ್ಪನೆ – ಬದುಕಿರುವನೇ ?, ವಧೂಸಂಭೋಗದೊಳ್-ಸ್ತ್ರೀ ಸಂಭೋಗದಲ್ಲಿ, ಸಾಕೆನಲ್–ಸಾಕೆನ್ನುವಹಾಗೆ, ಕಂಡೇಂ ಪೋಪನೆ–ಕಂಡು ಏನು ಹೋಗುವನೇ? ಅಳ್ಕರಿಂ–ಪ್ರೀತಿಯಿಂದ, ಪಡೆದ–ಸಂಪಾದಿಸಿದ, ರಾಜ್ಯ ಶ್ರೀಯಂ-ರಾಜ್ಯ ಸಂಪತ್ತನ್ನು, ಏನ್–ಏನು, ಅಂತ್ಯದೊಳ್–(ತನ್ನ) ಕೊನೆಯ ಕಾಲದಲ್ಲಿ, ಕೊಂಡು ಒಯ್ದಪ್ಪನೆ-ತೆಗೆದುಕೊಂಡು ಹೋಗುವನೇ ?, ನಾಸ್ತಿ ನಾಸ್ತಿ-ಇಲ್ಲ ಇಲ್ಲ, ಗುರು ದೈವಕ್ಕೆ ಒಲ್ದು-ಗುರುಗಳಿಗೂ ದೇವರಿಗೂ ಪ್ರೀತಿಸಿ, ಕೊಟ್ಟೈಸು-ಕೊಟ್ಟಷ್ಟೂ, ತಾನ್ ಉಂಡು ಉಟ್ಟೈಸು-ತಾನು ತಿಂದಷ್ಟೂ, ಉಟ್ಟುಕೊಂಡಷ್ಟೂ, ತನತ್ತು–ತನ್ನದು, ಮತ್ತೆ ಬರಿದೈ–ಉಳಿದುದು ವ್ಯರ್ಥವೇ ? ರತ್ನಾಕರಾಧೀಶ್ವರಾ !

ರಾಜ ಮಹಾರಾಜರುಗಳು ಈ ಭೂಮಿಯಮೇಲೆ ಸ್ಥಿರವಾಗಿ ನಿಲ್ಲುವರೇ ? ಅವನ ಖಜಾನೆ ತುಂಬಿ ತುಳುಕುವವರೆಗೂ ರಾಜನು ಬದುಕಲು ಸಾಧ್ಯವೇ ? ಅಂತಃಪುರದಲ್ಲಿ ಅನೇಕ ಸುಂದರ ತರುಣಿಯರು ಇದ್ದರೂ, ಅವರಲ್ಲಿ ಅವನು ರತಿರಾಗದಲ್ಲಿ ಸತತ ತೊಡಗಿದ್ದರೂ, ಕಾಮಾಸಕ್ತಿಯೂ ಕಡಿಮೆಯಾಯಿತೇ ? ಎಲ್ಲವೂ ತನಗೆ ದೊರೆಯಬೇಕು ಎನ್ನುವ ಅತ್ಯಾಸೆಯಿಂದ ಧರ್ಮಾಧರ್ಮದ ವಿಚಾರ ಮಾಡದೆ ಸಂಪಾದಿಸಿದ ರಾಜ್ಯಕೋಶಾದಿಗಳು ಅವನ ಅಂತ್ಯಕಾಲದಲ್ಲಿ ಅವನೊಡನೆ ಹೋಗುವುವೇ ? ಖಂಡಿತಾ ಇಲ್ಲ. ಈ ಇಹಲೋಕದ ಸುಖಸಂಪತ್ತುಗಳಿಗೆ ಮಾರುಹೋಗಿ ಪರಮಾರ್ಥವನ್ನು ಮರೆಯುವುದು ಮೂರ್ಖತನವಲ್ಲವೇ ? ಪೂರ್ವಾರ್ಜಿತ ಪುಣ್ಯದಿಂದ ಬಂದ ಐಶ್ವರ್ಯವನ್ನು ಸದ್ವಿನಿಯೋಗ ಮಾಡಬೇಕು. ಗುರುಗಳ ಸೇವೆಯಲ್ಲಿಯೂ, ದೇವರ ಪೂಜಾಕಾರ್ಯಗಳಲ್ಲಿಯೂ ಉಪಯೋಗಿಸಬೇಕು. ಹೀಗೆ ಧರ್ಮಕ್ಕೆ ಕೊಟ್ಟಷ್ಟೂ, ತಾನು ಅನುಭವಿಸದಷ್ಟೂ ಮಾತ್ರ ತನ್ನದು. ಲೋಭತನದಿಂದ ಕೂಡಿಟ್ಟಷ್ಟೂ ಅದು ವ್ಯರ್ಥವಲ್ಲವೇ ?

ಆವಾವಂಗನೆಯಲ್ಲಿ ಕೂಡಿದೊಡಮಾ ಪಾಡಲ್ಲದೇಂ ಕಂಡನೇ ? ।
ಆವಾವೂಟಮನುಂಡೊಡಂ ಸವಿಗಳೊಳ್ಬೇರೊಂದನೇನುಂಡನೇ ? ॥
ಆವಾವಾಭರಣಂಗಳಂ ತೊಡೆ ತೊವಲ್ಪೊನ್ನಾದುದೇ ! ಕಂಡುಮೀ–
ಜೀವಂ ಕಾಣದು ಉಂಡುಮೇಂ ದಣಿಯದೋ ? ರತ್ನಾಕರಾಧೀಶ್ವರಾ ! ॥೯೫॥

ಆವಾವ ಅಂಗನೆಯಲ್ಲಿ ಕೂಡಿದೊಡಂ ಆ ಪಾಡಲ್ಲದೇಂ ಕಂಡನೇ ?,
ಆವಾವ ಊಟಮಂ ಉಂಡೊಡಂ ಸವಿಗಳೊಳ್ ಬೇರೊಂದನೇಂ ಉಂಡನೇ ?,
ಆವಾವ ಆಭರಣಂಗಳಂ ತೊಡೆ ತೊವಲ್ ಪೊನ್ನಾದುದೇ !,
ಕಂಡುಂ ಈ ಜೀವಂ ಕಾಣದು ಉಂಡುಂ ಏಂ ದಣಿಯದೋ ? ರತ್ನಾಕರಾಧೀಶ್ವರಾ !

ಆವಾವ ಅಂಗನೆಯಲ್ಲಿ–ಯಾವ ಯಾವ ಸ್ತ್ರೀಯಲ್ಲಿ, ಕೂಡಿದೊಡಂ–ಸಂಭೋಗಿಸಿದರೂ, ಆ ಪಾಡು ಅಲ್ಲದೆ ಏಂ–ಆ ಅವಸ್ಥೆಯಲ್ಲದೆ ಏನು, ಕಂಡನೇ–(ಬೇರೊಂದು ರೀತಿಯಲ್ಲಿ) ನೋಡಿದನೇ ? ಆವಾವ ಊಟಮಂ–ಯಾವ ಯಾವ ಆಹಾರವನ್ನು, ಉಂಡೊಡಂ–ತಿಂದರೂ, ಸವಿಗಳೊಳ್–ರುಚಿಗಳಲ್ಲಿ, ಬೇರೊಂದಂ ಏಂ ಉಂಡನೇ–ಮತ್ತೊಂದು ರುಚಿಯನ್ನೇನು ಅನುಭವಿಸಿದನೇ ? ಆವಾವ ಆಭರಣಂಗಳಂ ತೊಡೆ–ಯಾವ ಯಾವ ಒಡವೆಗಳನ್ನು ಧರಿಸಿದರೂ, ತೊವಲ್–ಚರ್ಮವು, ಪೊನ್ನಾದುದೇ–ಚಿನ್ನವಾಯಿತೇ ? ಈ ಜೀವಂ–ಈ ಜೀವನು, ಕಂಡುಂ–ಇದನ್ನೆಲ್ಲಾ ನೋಡಿಯೂ, ಕಾಣದು–ನೋಡದವನಾಗಿದ್ದಾನೆ. ಉಂಡುಂ–ತಿಂದರೂ, ಏಂ ದಣಿಯದೋ–ತೃಪ್ತಿಹೊಂದುವುದಿಲ್ಲವೋ ? ರತ್ನಾಕರಾಧೀಶ್ವರಾ !

ಕಣ್ಣಿಗೆ ಕಂಡ ಕನ್ನೆಯರನ್ನೆಲ್ಲಾ ಬಯಸಿ ಕೂಡಿದರೂ ಹೊಸ ಅನುಭವವೇನಾದರೂ ಕಂಡೀತೇ? ಬೇಕು ಬೇಕಾದ ರುಚಿ ರುಚಿಯಾದ ತಿಂಡಿ ತಿನಿಸುಗಳನ್ನು ತಿಂದರೂ ರುಚಿಗಳಲ್ಲಿ ಬೇರೆ ಏನನ್ನಾದರೂ ಸವಿದನೇ ! ಭಂಗಾರದ ಆಭರಣಗಳನ್ನೆಲ್ಲಾ ಮೈಗೆ ಭಾರವಾಗುವಷ್ಟು ಅಲಂಕರಿಸಿಕೊಂಡರೂ ಈ ತೊಗಲು ಚಿನ್ನವಾಯಿತೇ ? ಈ ಜೀವಕ್ಕೆ ಏನು ಮೋಹ ! ಏನು ಭ್ರಮೆ ! ಬೇಕಾದಹಾಗೆ ಸುಖ ಅನುಭವಿಸಿಯೂ, ತಿಂದು, ಉಟ್ಟು, ಮೆರೆದರೂ ತೃಪ್ತಿಯಿಲ್ಲದೇ ಹೋಯಿತೇ ! ವಿಷಯಲಂಪಟ ತನಕ್ಕೆ ಕಡಿವಾಣ ಹಾಕುವ ಪ್ರಯತ್ನವನ್ನೇ ಮಾಡುವುದಿಲ್ಲವಲ್ಲ ಈ ಜೀವ !

ಭರತಂಬೊಲ್ಸಗರಂಬೊಲಾ ದಶರಥಂಬೊಲ್ ಶ್ರೇಣಿಕಂಬೊಲ್ಮಹೇ-
ಶ್ವರನೊದ್ದಾಯನನಂತೆ ದಾನರುಚಿಯೊಳ್ ಶಾಸ್ತ್ರಾರ್ಥಿಯೊಳ್ಸತ್ಯದೊಳ್ ||
ವಿರತಿಕ್ಷಾಂತಿಯೊಳರ್ಚನಾವಿಭವದೊಳ್ಸಂದೊಪ್ಪೆ ಭಾಗ್ಯಂ ಸುಖಾ-|
ಕರಮಂತಲ್ಲದೊಡೇನೊ ದುಷ್ಕರವಲಾ ರತ್ನಾಕರಾಧೀಶ್ವರಾ ! ||೯೬||

ಭರತಂಬೊಲ್ ಸಗರಂಬೊಲ್ ಆ ದಶರಥಂಬೊಲ್, ಶ್ರೇಣಿಕಂಬೊಲ್
ಮಹೇಶ್ವರಂ ಒದ್ದಾಯನನಂತೆ, ದಾನರುಚಿಯೊಳ್ ಶಾಸ್ತ್ರಾರ್ಥಿಯೊಳ್
ಸತ್ಯದೊಳ್ ವಿರತಿಕ್ಷಾಂತಿಯೊಳ್, ಅರ್ಚನಾವಿಭವದೊಳ್ ಸಂದು ಒಪ್ಪೆ
ಭಾಗ್ಯಂ ಸುಖಾಕರಂ, ಅಂತಲ್ಲದೊಡೇನೊ ದುಷ್ಕರವಲಾ ರತ್ನಾಕರಾಧೀಶ್ವರಾ !

ದಾನರುಚಿಯೊಳ್-ದಾನದ ಪ್ರೀತಿಯಲ್ಲಿ, ಭರತಂಬೊಲ್-ಭರತ ಚಕ್ರವರ್ತಿಯಂತೆಯೂ, ಶಾಸ್ತ್ರಾರ್ಥಿಯೊಳ್-ಶಾಸ್ತ್ರಪ್ರೀತಿಯಲ್ಲಿ, ಸಗರಂಬೊಲ್-ಸಗರ ಚಕ್ರವರ್ತಿಯಂತೆಯೂ, ಸತ್ಯದೊಳ್-ಸತ್ಯವ್ರತದಲ್ಲಿ, ಆ ದಶರಥಂಬೊಲ್-ಆ ದಶರಥ ರಾಜನಂತೆಯೂ, ವಿರತಿಕ್ಷಾಂತಿಯೊಳ್-ವ್ರತ ಮತ್ತು ಸಹನೆಯಲ್ಲಿ, ಶ್ರೇಣಿಕಂಬೊಲ್-ಶ್ರೇಣಿಕ ರಾಜನಂತೆಯೂ, ಅರ್ಚನಾವಿಭವದೊಳ್-ಪೂಜಾ ವೈಭವ ದಲ್ಲಿ, ಮಹೇಶ್ವರಂ ಒದ್ದಾಯನನಂತೆ-ಒದ್ದಾಯನ ಮಹಾರಾಜನಂತೆಯೂ, ಸಂದು ಒಪ್ಪೆ-ಆಸಕ್ತ ನಾಗಿ ಒಪ್ಪುತ್ತಿರಲು, ಭಾಗ್ಯಂ ಸುಖಾಕರಂ-ಅಂತಹವನ ಭಾಗ್ಯವು ಸುಖಕ್ಕೆ ಆಕರ (ಉತ್ಪತ್ತಿಸ್ಥಾನವು), ಅಂತಲ್ಲದೊಡೆ ಏನೊ-ಹಾಗೆ ಮಾಡದಿದ್ದರೆ ಏನೋ, ದುಷ್ಕರವಲಾ-ದುಃಖವನ್ನುಂಟುಮಾಡುವುದ ಲ್ಲವೇ ? ರತ್ನಾಕರಾಧೀಶ್ವರಾ !

ಭರತಚಕ್ರವರ್ತಿಯಂತೆ ಚತುರ್ವಿಧ ದಾನದಲ್ಲಿ ಆಸಕ್ತಿಯನ್ನು ಹೊಂದಿರಬೇಕು. ಸದ್ಧರ್ಮದ ತಿಳುವಳಿಕೆ. ಶಾಸ್ತ್ರಆಗಮುಗಳ ಅಧ್ಯಯನದಲ್ಲಿ ಆಳವಾದ ಆಸಕ್ತಿಯನ್ನು ಸಗರಚಕ್ರವರ್ತಿಯಂತೆ ಬೆಳೆಸಿ ಕೊಳ್ಳಬೇಕು. ಸತ್ಯವ್ರತದ ನಿಷ್ಠೆಯಲ್ಲಿ ದಶರಥ ಮಹಾರಾಜನ ಆದರ್ಶವನ್ನು ಯಾವಾಗಲೂ ಮುಂದಿಟ್ಟುಕೊಂಡು ಜೀವನವನ್ನು ಮುಂದುವರಿಸಬೇಕು. ವ್ರತಾಚರಣೆಗಳಲ್ಲಿ, ಸಂಯಮ ಗುಣದಲ್ಲಿ ಕ್ಷಮಾಭಾವನೆಯಲ್ಲಿ ಶ್ರೇಣಿಕ ಮಹಾರಾಜನ ಹೆಜ್ಜೆಯಲ್ಲಿ ನಡೆಯಬೇಕು. ಜಿನೇಶ್ವರಭಕ್ತಿ ಮತ್ತು ಪೂಜಾ ಕೈಂಕರ್ಯಗಳನ್ನು ಮಾಡುವುದರಲ್ಲಿ ಮಹೇಶ್ವರ ಒದ್ದಾಯನನಂತೆ ಶ್ರದ್ಧಾಭಕ್ತಿಗಳನ್ನು ಅಳವಡಿಸಿಕೊಂಡು ತನ್ನ ಆತ್ಮಕಲ್ಯಾಣವನ್ನು ಮಾಡಿಕೊಳ್ಳಲು ಹಾತೊರೆಯಬೇಕು. ಇಂತಹ ಮಹೋನ್ನತ ಧರ್ಮಕಾರ್ಯಗಳಲ್ಲಿ ಉತ್ತಮ ಭಾವನೆಗಳನ್ನು ಇಟ್ಟುಕೊಂಡಿರುವವರ ಜೀವನ ಸುಖ ಮಯವಾಗುವುದಿಲ್ಲವೇ ? ಹಾಗೆ ಮಾಡದೆ ಮಿಥ್ಯಾದೃಷ್ಟಿಯಾದರೆ ಅಧೋಗತಿಗಿಳಿದು ದುಃಖಾತ್ಮ ರಾಗುವುದಿಲ್ಲವೇ ?

ಉಳಿಯಿಂ ಗೆಯ್ಯದ ಚೈತ್ಯಮಂದಿರದೊಳಿಟ್ಟೀ ಯೋಗಿಗಳ್ತಾರದಾ-
ಜಳದಿಂ ತೇಯದ ಗಂಧದಿಂ ತೊಳೆಯದೇ ನಾಂದಕ್ಕಿಯಿಂದೆತ್ತದಾ ||
ತಳಿರ್ಪೂವಿಂದಡದನ್ನದಿಂ ಸುಡದ ದೀಪೋದ್ಧೂಪದಿಂ ಕೊಯ್ಯದಾ-
ಫಳದಿಂದರ್ಘ್ಯದೆ ನಿಮ್ಮನರ್ಚಿಪರಹೋ ರತ್ನಾಕರಾಧೀಶ್ವರಾ! ||೯೭||

ಉಳಿಯಿಂ ಗೆಯ್ಯದ ಚೈತ್ಯಮಂದಿರದೊಳಿಟ್ಟು, ಈ ಯೋಗಿಗಳ್ ತಾರದಾ
ಜಳದಿಂ ತೇಯದ ಗಂಧದಿಂ, ತೊಳೆಯದೇ ನಾಂದಕ್ಕಿಯಿಂದ ಎತ್ತದಾ
ತಳಿರ್ ಪೂವಿಂದ, ಅಡದ ಅನ್ನದಿಂ ಸುಡದ ದೀಪೋದ್ಧೂಪದಿಂ ಕೊಯ್ಯದಾ
ಫಳದಿಂದ, ಅರ್ಘ್ಯದೆ ನಿಮ್ಮಂ ಅರ್ಚಿಪರ್ ಅಹೋ ರತ್ನಾಕರಾಧೀಶ್ವರಾ !

ಉಳಿಯಿಂ ಗೆಯ್ಯದ–ಉಳಿಯಿಂದ ಮಾಡದಿರುವ, ಚೈತ್ಯ ಮಂದಿರದೊಳ್ ಇಟ್ಟು–ಜಿನಮಂದಿರದಲ್ಲಿಟ್ಟು, ಈ ಯೋಗಿಗಳ್–ಈ ಯೋಗಿಗಳು, ತಾರದಾ ಜಳದಿಂ–ತಾರದಿರುವ ಆ ನೀರಿನಿಂದಲೂ, ತೇಯದ ಗಂಧದಿಂ–ತೇಯದಿರುವ ಗಂಧದಿಂದಲೂ, ತೊಳೆಯದೇ–ನೀರಿನಲ್ಲಿ ತೊಳೆಯದೇ, ನಾಂದಕ್ಕಿಯಿಂದ–ನೆನೆಸಿರುವ ಅಕ್ಕಿಯಿಂದಲೂ, ಎತ್ತದಾ–ಬಿಡಿಸಿದ ಹಾಗೂ ಬಾಡದಿರುವ, ತಳಿರ್ಪೂವಿಂದ–ಆ ಚಿಗುರು ಮತ್ತು ಹೂವುಗಳಿಂದಲೂ, ಅಡದ ಅನ್ನದಿಂ–ಬೇಯಿಸದಿರುವ ಅನ್ನದಿಂದಲೂ, ಸುಡದ ದೀಪೊದ್ಧೂಪದಿಂ–ಸುಡದಿರುವ ದೀಪ ಮತ್ತು ಶ್ರೇಷ್ಠವಾದ ಧೂಪದಿಂದಲೂ, ಕೊಯ್ಯದಾ ಫಳದಿಂದ–ಕಿತ್ತುಕೊಂಡುಬಾರದಿರುವ ಆ ಫಲದಿಂದಲೂ, ಅರ್ಘ್ಯದೆ–ಅರ್ಘ್ಯದಿಂದಲೂ, ನಿಮ್ಮಂ–ನಿಮ್ಮನ್ನು, ಅರ್ಚಿಪರ್–ಪೂಜಿಸುತ್ತಾರೆ. ಅಹೋ–ಆಶ್ಚರ್ಯ ! ರತ್ನಾಕರಾಧೀಶ್ವರಾ !

ಯೋಗಿಗಳು ದ್ರವ್ಯಪೂಜೆಮಾಡುವುದಿಲ್ಲ, ದ್ರವ್ಯಪೂಜೆ ಶ್ರಾವಕರಿಗೆ ಮೀಸಲು. ಆದರೆ ಯೋಗಿಗಳು ಆ ಭಗವಜ್ಜಿನೇಂದ್ರರ ಸ್ವರೂಪವನ್ನು ತಮ್ಮ ಹೃದಯ ಕಮಲದಲ್ಲಿ ಸ್ಥಾಪಿಸಿ ಅಷ್ಟವಿಧ ಅರ್ಚನೆಯನ್ನು ಭಾವನೆಯ ಮೂಲಕ ಸಲ್ಲಿಸುತ್ತಾರೆ. ಈ ಭಾವಪೂಜೆಯೇ ಸರ್ವೋತ್ಕೃಷ್ಟವಾದುದು. ಶ್ರಾವಕರೂ ಸಹ ಇದನ್ನು ಅಭ್ಯಾಸಮಾಡಬಹುದು. ಭಗವಂತನನ್ನು ಉಳಿಯಿಂದ ಮಾಡದಿರುವ ಅಕೃತ್ರಿಮ ಜಿನಮಂದಿರದೊಳಿಟ್ಟು, ತಾರದಿರುವ ಶುದ್ಧಜಲದಿಂದಲೂ, ತೇಯದ ಗಮಗಮಿಸುವ ಗಂಧದಿಂದಲೂ, ನೀರಿನಲ್ಲಿ ತೊಳೆಯುದೆ ನೆನೆಸಿರುವ ಅಕ್ಕಿಯಿಂದಲೂ, ಬಿಡಿಸಿಕೊಂಡು ಬಾರದಿರುವ ವಿವಿಧ ಪುಷ್ಪಗಳಿಂದಲೂ, ಬೇಯಿಸದಿರುವ ನೈವೇದ್ಯದಿಂದಲೂ, ಸುಡದ ದೀಪ ಮತ್ತು ಉತ್ಕೃಷ್ಟವಾದ ಧೂಪದಿಂದಲೂ, ಕಿತ್ತುಕೊಂಡುಬಾರದಿರುವ ಉತ್ತಮ ಫಲಗಳಿಂದಲೂ, ಅರ್ಘ್ಯವನ್ನು ಎತ್ತುತ್ತಲೂ ನಿಮ್ಮನ್ನು ಪೂಜಿಸುತ್ತಾರೆ. ಅವರ ಚಿತ್ತಏಕಾಗ್ರತೆ ಆಶ್ಚರ್ಯಕರವಲ್ಲವೇ ?

ಆವಂ ಮಾಡಿದ ಭಾವಪೂಜೆಯಿನವಂಗೋರ್ವಂಗೆ ಲೇಸಲ್ಲಿಗಾ ।
ಸಾವದ್ಯಂ ರಹಿತಂ ಸಮಂತು ಸುಜನರ್ಸದ್ವಸ್ತುವಿಂ ಪೂಜಿಸಲ್ ॥
ಸಾವದ್ಯಂ ಕಳೆಯಲ್ಕೆ ತೀರದೊಡಮೇಂ ತತ್ಪೂಜೆಯಂ ಕಂಡು ಕೇ–
ಳ್ದೀವೇಳ್ವೆಂ ಪಲರುಂ ಸುಖಂಬಡೆಯರೇ ? ರತ್ನಾಕರಾಧೀಶ್ವರಾ ! ॥೯೮॥

ಆವಂ ಮಾಡಿದ ಭಾವಪೂಜೆಯಿಂ ಅವಂಗೆ ಓರ್ವಂಗೆ ಲೇಸು
ಅಲ್ಲಿಗೆ ಆ ಸಾವದ್ಯಂ ರಹಿತಂ, ಸಮಂತು ಸುಜನರ್ ಸದ್‌ವಸ್ತುವಿಂ
ಪೂಜಿಸಲ್ ಸಾವದ್ಯಂ ಕಳೆಯಲ್ಕೆ ತೀರದೊಡಂ ಏಂ, ತತ್‌ಪೂಜೆಯಂ
ಕಂಡು ಕೇಳ್ದು ಏವೇಳ್ವೆಂ ಪಲರುಂ ಸುಖಂಬಡೆಯರೇ ! ರತ್ನಾಕರಾಧೀಶ್ವರಾ !

ಆವಂ ಮಾಡಿದ–ಯಾವ ಯೋಗಿಯು ಮಾಡಿದ, ಸಾವದ್ಯಂ ರಹಿತಂ–ಆ ನಿರ್ದೋಷವಾದ, ಭಾವಪೂಜೆಯಿಂ-ಭಾವಪೂಜೆಯಿಂದ, ಅವಂಗೆ ಓರ್ವಂಗೆ-ಅವನಿಗೊಬ್ಬನಿಗೆ, ಲೇಸು ಅಲ್ಲಿಗೆ-ಶ್ರೇಯಸ್ಸು ಉಂಟಾಗುವುದು, ಸಮಂತು–ಹಾಗೆಯೆ, ಸುಜನರ್–ಸತ್ಪುರುಷರು, ಸದ್‌ವಸ್ತುವಿಂ – ಶ್ರೇಷ್ಠವಾದ ಪದಾರ್ಥದಿಂದ, ಪೂಜಿಸಲ್-ಪೂಜೆಮಾಡಲು, ಸಾವದ್ಯಂ ಕಳೆಯಲ್ಕೆ-ದೋಷವನ್ನು ಕಳೆಯಲು (ದ್ರವ್ಯಪೂಜೆಯಿಂದ ಉಂಟಾದ ಸ್ವಲ್ಪ ದೋಷವನ್ನು ಕಳೆಯಲು), ತೀರದೊಡಂ–ಆಗದಿದ್ದರೂ, ಏಂ–ಏನು ? ತತ್‌ಪೂಜೆಯಿಂ–ಆ ದ್ರವ್ಯಪೂಜೆಯನ್ನು, ಕಂಡು–ಕಂಡು, ಕೇಳ್ದು–ಕೇಳಿ, ಏವೇಳ್ವೆಂ–ಏನು ಹೇಳಲಿ, ಪಲರುಂ-ಹಲವರು, ಸುಖಂಬಡೆಯರೇ–ಸುಖವನ್ನು ಪಡೆಯುವುದಿಲ್ಲವೇನು ? ರತ್ನಾಕರಾಧೀಶ್ವರಾ !

ನಿರ್ದೋಷವಾದ ಭಾವಪೂಜೆಯಿಂದ ಕೇವಲ ಅದನ್ನು ಮಾಡಿದವನಿಗೊಬ್ಬನಿಗೆ ಮಾತ್ರ ಶ್ರೇಯಸ್ಸು ಉಂಟಾಗುವುದು. ಆದರೆ ಶ್ರಾವಕರು ಉತ್ಕೃಷ್ಟ ದ್ರವ್ಯಗಳಿಂದ ಭಗವಂತನಿಗೆ ಪೂಜೆಯನ್ನು ನೆರವೇರಿಸಿದರೆ, ಆದರಿಂದ ಆ ಪೂಜೆಯನ್ನು ಮಾಡಿಸುವವರಿಗೂ, ಆ ಪೂಜಾ ವೈಭವವನ್ನು ನೋಡುವವರಿಗೂ ಕೇಳಿದವರಿಗೂ ಸುಖವುಂಟಾಗುವುದಿಲ್ಲವೇ ? ದ್ರವ್ಯಪೂಜೆಯಿಂದ ಸ್ವಲ್ಪ ದೋಷವುಂಟಾಗುವುದೇನೋ ನಿಜ. ಆದರೆ ಆದರಿಂದ ಬಹುಜನಕ್ಕೆ ಪುಣ್ಯಾಸ್ರವವಾಗುವುದಿಲ್ಲವೇ ? ದ್ರವ್ಯಪೂಜೆಮಾಡುವುದಕ್ಕಾಗಿ ಅನಿವಾರ್ಯವಾಗಿ ಚಿಗುರು, ಹೂವು ಮತ್ತು ಹಣ್ಣುಗಳನ್ನು ಕೀಳಬೇಕಾಗಬಹುದು. ಇದರಿಂದ ಏಕೇಂದ್ರಿಯ ಜೀವಿಗಳಿಗೆ ಹಿಂಸೆಯಾಗುವುದು. ಅಭಿಷೇಕಾದಿಗಳಿಂದ ಕ್ರಿಮಿಕೀಟಾದಿಗಳಿಗೆ ಬಾಧೆಯುಂಟಾಗಬಹುದು. ಆದರೆ ಸದ್ಧರ್ಮವೃದ್ಧಿಗೋಸ್ಕರ ಈ ಪಂಚಮ ಕಾಲದಲ್ಲಿ ಇಂತಹ ದ್ರವ್ಯಪೂಜೆಗಳು ಅನಿವಾರ್ಯ. ಧರ್ಮಪ್ರಸಾರ ಮತ್ತು ಪ್ರಭಾವನೆಗಳಿಗೆ ಅಭಿಷೇಕಗಳು, ರಥೋತ್ಸವಗಳು. ಧಾರ್ಮಿಕ ಸಭೆಗಳು ಮಾಡಬೇಕಾಗುತ್ತೆ. ಈ ಧಾರ್ಮಿಕ ಕಾರ್ಯಗಳ ಪ್ರಭಾವ ಸಾಧಾರಣ ಜನತೆಯಮೇಲೆ ಸಾಕಾದಷ್ಟು ಆಗುವುದರಲ್ಲಿ ಸಂದೇಹವಿಲ್ಲ.

ಮುನಿಗಳ್ಮಾಡುವ ಭಾವಪೂಜೆ ರುಚಿಯೋ ? ಸದ್ಭವ್ಯಸಂತಾನವ–
ರ್ಚನೆಗೆಯ್ವುತ್ತಮುವಸ್ತುಪೂಜೆ ರುಚಿಯೋ ? ಪೇಳಯ್ಯ ನೀನೇಕೆ ಸು–॥
ಮ್ಮನೆಯಿರ್ಪೈಯಿದರಂದಮುಂ ತಿಳಿದೆನ್ನೈ ನಿಷ್ಕಾಂಕ್ಷಕಂ ನೀನವರ್ ।
ಮನಮುಂ ನಿಮ್ಮೊಳಿಡಲ್ಕೆ ಸಾಧಿಪರಲಾ ! ರತ್ನಾಕರಾಧೀಶ್ವರಾ ! ॥೯೯॥

ಮುನಿಗಳ್ ಮಾಡುವ ಭಾವಪೂಜೆ ರುಚಿಯೋ ? ಸದ್ಭವ್ಯ ಸಂತಾನವು
ಅರ್ಚನೆಗೆಯ್ವ ಉತ್ತಮ ವಸ್ತು ಪೂಜೆ ರುಚಿಯೋ ?, ಪೇಳಯ್ಯ ನೀನೇಕೆ
ಸುಮ್ಮನೆಯಿರ್ಪೈ, ಇದರಂದಮುಂ ತಿಳಿದೆನ್ನೈ ನಿಷ್ಕಾಂಕ್ಷಕಂ ನೀನ್,
ಅವರ್ ಮನಮುಂ ನಿಮ್ಮೊಳಿಡಲ್ಕೆ ಸಾಧಿಪರಲಾ ! ರತ್ನಾಕರಾಧೀಶ್ವರಾ !

ಮುನಿಗಳ್ಮಾಡುವ ಭಾವಪೂಜೆ ರುಚಿಯೋ–ಮುನಿಗಳು ಮಾಡುವ ಭಾವಪೂಜೆ ನಿನಗೆ ಇಷ್ಟವೇ ?, ಸದ್ಭವ್ಯಸಂತಾನವು–ಒಳ್ಳೆಯ ಭವ್ಯರ ಸಮೂಹವು, ಅರ್ಚನೆಗೆಯ್ವ–ಪೂಜಿಸುವ, ವಸ್ತು ಪೂಜೆ ರುಚಿಯೋ–ದ್ರವ್ಯಪೂಜೆ ಇಷ್ಟವೋ ? ಪೇಳಯ್ಯ–ಮಹಾಪ್ರಭು ! ಹೇಳುಸ್ವಾಮಿ !, ನೀನೇಕೆ ಸುಮ್ಮನೆಯಿರ್ಪೈ–ನೀನೇಕೆ ಮಾತನಾಡದೆ ಸುಮ್ಮನೆಯಿರುವೇ ?, ಇದರಂದಮುಂ ತಿಳಿದೆನ್ನೈ–ಈ ನಿನ್ನ ರೀತಿಯನ್ನು ತಿಳಿದೆನು, ನಿಷ್ಕಾಂಕ್ಷಕಂ ನೀನ್–ನೀನು ಯಾವ ಇಚ್ಛೆಯೂ ಇಲ್ಲದವನು, ಅವರ್–ಆ ಭವ್ಯರು, ಮನಮುಂ–ಮನಸ್ಸನ್ನು, ನಿಮ್ಮೊಳಿಡಲ್ಕೆ–ನಿಮ್ಮಲ್ಲಿ ನಿಲ್ಲಿಸುವುದಕ್ಕೆ, ಸಾಧಿಪರಲಾ–ಸಾಧಿಸುತ್ತಾರಲ್ಲವೇ ? ರತ್ನಾಕರಾಧೀಶ್ವರಾ !

ಜಿನೇಂದ್ರ ! ಮುನಿಗಳು ಮಾಡುವ ಭಾವಪೂಜೆ ನಿನಗೆ ಇಷ್ಟವೋ ಅಥವಾ ಭವ್ಯಾತ್ಮರು ಮಾಡುವ ದ್ರವ್ಯಪೂಜೆ ನಿನಗೆ ಹಿತವೋ, ಹೇಳಯ್ಯ ? ಏತಕ್ಕೆ ಸುಮ್ಮನಿರುವೇ ? ನಿನ್ನ ಈ ಮೌನ ಈಗ ನನಗೆ ಅರ್ಥವಾಯಿತು. ನೀನು ಯಾರಲ್ಲೂ, ಯಾವುದರಲ್ಲೂ ಆಸಕ್ತಿ ಇಲ್ಲ. ನೀನು ವೀತರಾಗ ನಲ್ಲವೇ ! ಆದರೆ ಭವ್ಯಾತ್ಮರು ತಮ್ಮ ಮನವನ್ನು ನಿನ್ನಲ್ಲಿ ಸ್ಥಿರಗೊಳಿಸಲು ಈ ಸಾಧನೆಯನ್ನು ಮಾಡುತ್ತಿದ್ದಾರೆ. ಚಂಚಲವಾದ ಮನಸ್ಸನ್ನು ಹಿಡಿದು ಕಟ್ಟಿಹಾಕಲು ಈ ಪೂಜಾ ವಿಧಾನಗಳನ್ನು ಅನುಸರಿಸುತ್ತಿದ್ದಾರೆ. ಭಾವಪೂಜೆಯ ಗುರಿಯೂ ಆತ್ಮಕಲ್ಯಾಣ, ದ್ರವ್ಯಪೂಜೆಯ ಗುರಿಯೂ ಆತ್ಮಕಲ್ಯಾಣ.

ಪೂಜಾತಂತ್ರದೆ ವಸ್ತುವಂ ನೆನೆಯುತಂ ಮತ್ತಂ ಸುಮಂತ್ರಾಕ್ಷರ-
ಭ್ರಾಜದ್ಧ್ವನಮನಾಲಿಸುತ್ತೆ ತವ ಬಿಂಬಸ್ನಾನಮಂ ನೋಡಿ ನಾ-॥
ನಾಜೀವಂ ಸುಖಿಯಕ್ಕುಮಲ್ಲಿ ಬಹಿರಂಗಾಳೋಚನಂ ಮೋಚನಂ ।
ಪೂಜಾರ್ಥಂ ಪುರುಷಾರ್ಥಮಾದುದದರಿಂ ! ರತ್ನಾಕರಾಧೀಶ್ವರಾ ! ॥೧೦೦॥

ಪೂಜಾತಂತ್ರದೆ ವಸ್ತುವಂ ನೆನೆಯುತಂ, ಮತ್ತಂ ಸುಮಂತ್ರಾಕ್ಷರ
ಭ್ರಾಜ ಧ್ವಾನಮಂ ಆಲಿಸುತ್ತೆ, ತವ ಬಿಂಬಸ್ನಾನಮಂ ನೋಡಿ ನಾನಾ
ಜೀವಂ ಸುಖಿಯಕ್ಕುಂ, ಅಲ್ಲಿ ಬಹಿರಂಗ ಆಳೋಚನಂ ಮೋಚನಂ,
ಪೂಜಾರ್ಥಂ ಪುರುಷಾರ್ಥಂ ಆದುದು ಅದರಿಂ ರತ್ನಾಕರಾಧೀಶ್ವರಾ !

ಪೂಜಾತಂತ್ರದೆ-ಪೂಜಾ ಕ್ರಮದಿಂದ, ವಸ್ತುವಂ ನೆನೆಯುತಂ-ಪೂಜಾದ್ರವ್ಯಗಳನ್ನು ನೆನೆಯುತ್ತ, ಮತ್ತಂ-ಮತ್ತು, ಸುಮಂತ್ರಾಕ್ಷರ-ಒಳ್ಳೆಯ ಮಂತ್ರಗಳಲ್ಲಿರುವ ಬೀಜಾಕ್ಷರಗಳ, ಭ್ರಾಜ-ಸ್ಫುಟವಾದ, ಧ್ವಾನಮಂ-ಶಬ್ದವನ್ನು, ಆಲಿಸುತ್ತೆ-ಆಲಿಸುತ್ತ, ತವ-ನಿನ್ನ, ಬಿಂಬಸ್ನಾನಮಂ-ಪ್ರತಿಬಿಂಬದ ಅಭಿಷೇಕವನ್ನು ನೋಡಿ, ನಾನಾಜೀವಂ-ಅನೇಕ ಜೀವಿಗಳು, ಸುಖಿಯಕ್ಕುಂ-ಸುಖವನ್ನು ಪಡೆಯುವರು, ಅಲ್ಲಿ-ಆ ಪೂಜಾಸ್ಥಳದಲ್ಲಿ, ಬಹಿರಂಗ ಆಳೋಚನಂ-ಹೊರಗಿನ ಯೋಚನೆಯು, ಮೋಚನಂ-ವಿಮೋಚನೆಯಾಗುವುದು, ಅದರಿಂ-ಆದುದರಿಂದ, ಪೂಜಾರ್ಥಂ-ಪೂಜೆಯ ಪ್ರಯೋಜನವು, ಪುರುಷಾರ್ಥಂ ಆದುದು-ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥವಾಯಿತು ! ರತ್ನಾಕರಾಧೀಶ್ವರಾ !

ಪೂಜೆಯನ್ನು ಮಾಡುವಾಗ ಆ ಪೂಜಾಕ್ರಮವನ್ನು ನೆನೆಯುತ್ತ ಮತ್ತು ಯಾವ ಯಾವ ಪೂಜಾ ದ್ರವ್ಯಗಳನ್ನು ಅಣಿಮಾಡಿಕೊಳ್ಳಬೇಕೆನ್ನುವುದರಲ್ಲಿ ಮನಸ್ಸು ತಲ್ಲೀನವಾಗಿರುತ್ತದೆ. ಪೂಜೆ ಪ್ರಾರಂಭವಾಯಿತೆಂದರೆ ಮಂತ್ರಘೋಷಗಳ ಗಂಭೀರ ನಿನಾದದಲ್ಲಿ ನಮ್ಮ ಚಿತ್ತ ಒಲಿದಿರುತ್ತದೆ. ಆ ಜಿನೇಂದ್ರನ ಬಿಂಬಕ್ಕೆ ಆಗುತ್ತಿರುವ ಜಲ, ಕ್ಷೀರ ಮತ್ತು ಗಂಧದ ಅಭಿಷೇಕಗಳನ್ನು ಕಣ್ತುಂಬನೋಡಿ ನಲಿಯುತ್ತೇವೆ. ನಮ್ಮ ಅಂತರಂಗ ಧರ್ಮಧ್ಯಾನದತ್ತ ವಾಲಿರುತ್ತದೆ. ಆ ಸಮಯದಲ್ಲಿ ಇನ್ನಾವ ಯೋಚನೆಗಳು ನಮ್ಮನ್ನು ಮುತ್ತಿ ಕಾಡಲಾರವು. ಆದುದರಿಂದ ಇಂಥಹ ದ್ರವ್ಯಪೂಜೆಯಿಂದ ಲಾಭವೇ ಆಗುವುದು. ಶ್ರಾವಕರು ತಮ್ಮ ಪುರುಷಾರ್ಥಸಾಧನೆಗೆ (ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ) ದ್ರವ್ಯಪೂಜೆಯನ್ನುಮಾಡಿ ಕೃತಾರ್ಥರಾಗುತ್ತಾರೆ.

ಉಪಹಾರಂ ಸ್ತವನಂ ಸುವಾದ್ಯನಿನದಂ ನೃತ್ಯಂ ಸುಗೀತಂಗಳಿಂ–
ತುಪಚಾರಂಗಳಿವೈಸೆ ನಿಮ್ಮ ರುಚಿಯೋ ಅಲ್ತಲ್ತು ನಿಮ್ಮಲ್ಲಿ ಮು–||
ಕ್ತಿಪದಂ ಸ್ವಲ್ಪಮೆ ವೃದ್ಧಿ ವೃದ್ಧಿ ಧನಿಕಂಗೊಂದಿತ್ತೆರಳ್ಕೊಂಬುದ–
ರ್ಕುಪಮಾನರ್ಮಿಗೆ ಕಾಣ್ಕೆಯೆಂದು ಕುಡರೇ? ರತ್ನಾಕರಾಧೀಶ್ವರಾ ! ||೧೦೧||

ಉಪಹಾರಂ ಸ್ತವನಂ ಸುವಾದ್ಯನಿನದಂ ನೃತ್ಯಂ ಸುಗೀತಂಗಳ್, ಇಂತು
ಉಪಚಾರಂಗಳ್ ಇವೈಸೆ ನಿಮ್ಮ ರುಚಿಯೋ ಅಲ್ತಲ್ತು, ನಿಮ್ಮಲ್ಲಿ
ಮುಕ್ತಿಪದಂ ಸ್ವಲ್ಪಮೆ, ವೃದ್ಧಿ ವೃದ್ಧಿ, ಧನಿಕಂಗೆ ಒಂದಿತ್ತು ಎರಳ್‌ಕೊಂಬು
ದರ್ಕೆ ಉಪಮಾನರ್‌ಮಿಗೆ ಕಾಣ್ಕೆಯೆಂದುಕುಡರೇ ರತ್ನಾಕರಾಧೀಶ್ವರಾ !

ಉಪಹಾರಂ–ನೈವೇದ್ಯ, ಸ್ತವನಂ-ಸ್ತೋತ್ರವೂ, ಸುವಾದ್ಯನಿನದಂ-ಒಳ್ಳೆಯ ವಾದ್ಯಧ್ವನಿಯೂ, ನೃತ್ಯಂ–ನರ್ತನವೂ, ಸುಗೀತಂಗಳ್–ಶ್ರೇಷ್ಠವಾದ ಹಾಡುಗಳೂ, ಇಂತು–ಈ ಪ್ರಕಾರವಾಗಿ, ಉಪಚಾರಂಗಳ್–ಉಪಚಾರಗಳು, ಇವುಐಸೆ–ಇವು ಅಲ್ಲವೇ, ನಿಮ್ಮ ರುಚಿಯೇ–ನಿಮಗೆ ಇಷ್ಟವಾದುದೇ ?, ಅಲ್ತು ಅಲ್ತು–ಅಲ್ಲ ಅಲ್ಲ, ನಿಮ್ಮಲ್ಲಿ ಮುಕ್ತಿಪದಂ ಸ್ವಲ್ಪಮೆ–ನಿಮ್ಮಲ್ಲಿ ಮೋಕ್ಷಪದವಿಯು ಅಲ್ಪವಾದುದೇ ?, ವೃದ್ಧಿ ವೃದ್ಧಿ–ಹೆಚ್ಚು ಹೆಚ್ಚು, ಧನಿಕಂಗೆ–ಧನಿಕನಿಗೆ, ಒಂದಿತ್ತು ಎರಳ್ ಕೊಂಬುದರ್ಕೆ–ಒಂದನ್ನು ಕೊಟ್ಟು ಎರಡನ್ನು ಸ್ವೀಕರಿಸುವುದಕ್ಕೆ, ಉಪಮಾನರ್–ಸಮಾನರಾದವರು, (ಅಂದರೆ ಭಕ್ತರು) ಮಿಗೆ – ಹೆಚ್ಚಾಗಿ, ಕಾಣ್ಕೆಯೆಂದು - ಕಾಣಿಕೆಯೆಂದು, ಕುಡರೇ – ಕೊಡುವುದಿಲ್ಲವೇ ? ರತ್ನಾಕರಾಧೀಶ್ವರಾ !

ಕಾಣಿಕೆ, ನೈವೇದ್ಯ, ಭಕ್ತರುಮಾಡುವ ಸ್ತೋತ್ರ, ನುಡಿಸುವ ವಾದ್ಯಗಳ ಇಂಪಾದ ಧ್ವನಿ, ನರ್ತನ, ಶ್ರೇಷ್ಠವಾದ ಹಾಡುಗಳೂ ಇವೆಲ್ಲಾ ಭಗವಂತನಿಗೆ ಬೇಕೇ ? ಆವನಿಗೆ ಇವುಗಳಲ್ಲಿ ಅನುರಾಗವೇ ? ಖಂಡಿತಾ ಇಲ್ಲ. ಅವನಲ್ಲಿರುವ ಅನಂತದರ್ಶನ, ಅನಂತಜ್ಞಾನ, ಅನಂತಸುಖ, ಅನಂತ ವೀರ್ಯ ಇವುಗಳಿಗೆ ಎಣೆಯುಂಟೇ ! ಶ್ರೀಮಂತನ ಸೇವೆಯನ್ನುಮಾಡಿ ಒಂದಕ್ಕೆರಡು ಗಿಟ್ಟಿಸುವಂತೆ ಭಕ್ತರು ನಿನ್ನ ಸೇವೆಯನ್ನುಮಾಡಿ ಬೇಕಾದಷ್ಟು ಪುಣ್ಯವನ್ನು ಗಳಿಸಿಕೊಳ್ಳುವರು. ಈ ಪುಣ್ಯಗಳಿಕೆಗೆ ನಿನ್ನ ಉಪಚಾರವನ್ನು ಅನೇಕ ರೀತಿಯಲ್ಲಿ ಮಾಡುವರು. ಅಲ್ಪಸೇವೆಯೇ ಆಗಲಿ, ನಿರ್ಮಲ ಮನಸ್ಸಿನಿಂದ ಮಾಡಿಸರೆ ಅಪಾರ ಲಾಭವಾಗುವುದರಲ್ಲಿ ಸಂದೇಹವೇ ಇಲ್ಲ.

ಮೋಕ್ಷಶ್ರೀಸುಖ ವಿಶ್ವನಾಥನಿವನೆಂದಾರೋಪಿಸಲ್ಪೂಜೆಯೊಳ್ ।
ಯಕ್ಷರ್ದಿಕ್ಪ್ರಭುಗಳ್ ಗ್ರಹರ್ತಿಥಿವರರ್ನಾಗರ್ಸುರರ್ವ್ಯಂತರರ್ ॥
ನಕ್ಷತ್ರರ್ಮುನಿಗಳ್ಸುಮಂತ್ರವಿಧಿಯಿಂ ಸನ್ಮಾನಿಸಲ್ಪಟ್ಟರೀ-
ದಾಕ್ಷಿಣ್ಯಂ ಭಜಕಂಗದೇನ ಕುಡದೋ ರತ್ನಾಕರಾಧೀಶ್ವರಾ ! ॥೧೦೨॥

ಮೋಕ್ಷಶ್ರೀಸುಖ ವಿಶ್ವನಾಥಂ ಇವನೆಂದು ಆರೋಪಿಸಲ್ ಪೂಜೆಯೊಳ್,
ಯಕ್ಷರ್ ದಿಕ್‌ಪ್ರಭುಗಳ್ ಗ್ರಹರ್ ತಿಥಿವರರ್ ನಾಗರ್ ಸುರರ್ ವ್ಯಂತರರ್,
ನಕ್ಷತ್ರರ್ ಮುನಿಗಳ್ ಸುಮಂತ್ರವಿಧಿಯಿಂ ಸನ್ಮಾನಿಸಲ್‌ಪಟ್ಟರ್,
ಈ ದಾಕ್ಷಿಣ್ಯಂ ಭಜಕಂಗೆ ಅದೇನ ಕುಡದೋ ರತ್ನಾಕರಾಧೀಶ್ವರಾ !

ಮೋಕ್ಷಶ್ರೀ ಸುಖವಿಶ್ವನಾಥಂ-'' ಮೋಕ್ಷಸಾಮ್ರಾಜ್ಯಕ್ಕೆ ಅಧಿಪತಿ '', ಇವನೆಂದು-ಈ ಜಿನೇಂದ್ರನೆಂದು, ಪೂಜೆಯೊಳ್ ಆರೋಪಿಸಲ್-ಪೂಜಾಕಾಲದಲ್ಲಿ ಆರೋಪಿಸಿದರೆ (ಭಕ್ತಿಯಿಂದ ನೆನೆದರೆ), ಯಕ್ಷರ್-ಯಕ್ಷರು, ದಿಕ್‌ಪ್ರಭುಗಳ್-ದಿಕ್ಪಾಲಕರು, ಗ್ರಹರ್-ನವಗ್ರಹವು, ತಿಥಿವರರ್-ತಿಥಿದೇವತೆಗಳು, ನಾಗರ್-ನಾಗದೇವತೆಗಳು, ಸುರರ್-ಕಲ್ಪವಾಸಿ ದೇವತೆಗಳು, ವ್ಯಂತರರ್-ವ್ಯಂತರ ದೇವತೆಗಳು, ನಕ್ಷತ್ರರ್-ಜ್ಯೋತಿರ್ದೇವತೆಗಳು, ಮುನಿಗಳ್-ಮುನಿಗಳು, ಸುಮಂತ್ರವಿಧಿಯಿಂ-ಶ್ರೇಷ್ಠವಾದ ಮಂತ್ರದ ವಿಧಾನದಿಂದ, ಸನ್ಮಾನಿಸಲ್‌ಪಟ್ಟರ್-ಸತ್ಕರಿಸಲ್ಪಟ್ಟಂತೆಯೇ, ಈ ದಾಕ್ಷಿಣ್ಯಂ-ಭಗವಂತನಿಗೆ ಸಲ್ಲಿಸಿದ ಈ ಭಕ್ತಿಯ ದಾಕ್ಷಿಣ್ಯವು, ಭಜಕಂಗೆ-ಭಕ್ತನಿಗೆ (ಭಾಜಕನಿಗೆ), ಅದೇನ ಕುಡದೋ-ಏನುತಾನೆ ಕೊಡುವುದಿಲ್ಲ ! ರತ್ನಾಕರಾಧೀಶ್ವರಾ !

ಮೋಕ್ಷಸಾಮ್ರಾಜ್ಯದ ಅಧಿಪತಿಯೆಂದು, ವೀತರಾಗನೆಂದು, ಭಗವಂತ ಜಿನೇಂದ್ರನನ್ನು ಭಕ್ತಿಯಿಂದ ಸ್ತೋತ್ರಮಾಡಿ, ಅವನಿಗೆ ಪೂಜಾಕೈಂಕರ್ಯಗಳನ್ನು ನೆರವೇರಿಸಿದರೆ, ಆ ಭಗವಂತನ ಪಾದ ಸೇವಕರಾದ ಯಕ್ಷದೇವತೆಗಳೂ, ದಿಕ್ಪಾಲಕರೂ, ನವಗ್ರಹವೂ, ತಿಥಿದೇವತೆಗಳೂ, ಭವನವಾಸಿ ದೇವತೆಗಳೂ, ಕಲ್ಪವಾಸಿ ದೇವತೆಗಳೂ, ವ್ಯಂತರ ದೇವತೆಗಳೂ, ಜ್ಯೋತಿರ್ಲೋಕದ ದೇವತೆಗಳೂ, ಮುನಿಗಳೂ ಇವರೆಲ್ಲರಿಗೂ ಸಂತೋಷವುಂಟಾಗುವುದು. ತೀರ್ಥಂಕರ ಮಹಾಪ್ರಭುವನ್ನು ಪೂಜಿಸಿದರೆ, ಇವರೆಲ್ಲರನ್ನೂ ಪೂಜಿಸಿದಂತೆಯೇ. ನಮ್ಮ ಅರ್ಹಂತ ಭಕ್ತಿಗೆ ಮೆಚ್ಚಿ ಸಂತುಷ್ಟರಾಗಿ ಈ ದೇವತೆಗಳು ನಮಗೆ ಬೇಕಾದ ವರಪ್ರಸಾದಗಳನ್ನು ನೀಡುವರು. ಜಿನೇಂದ್ರ ಪೂಜೆಯ ಈ ದಾಕ್ಷಿಣ್ಯ ಏನುತಾನೆ ನಮಗೆ ಕೊಡುವುದಿಲ್ಲಾ ?

ಉಪಚಾರಕ್ಕುಡಲೀವವಂಗುಣವಿಡಲ್ಮತ್ತೇನನೊಲ್ದೀಯನೋ ।
ಉಪಮಾತೀತನೆ ನಿಮ್ಮ ಬಿಂಬವನಲಂಪಿಂದರ್ಚಿಸಲ್ಸಂಪದಂ ॥
ವಿಪುಳಾನಂದದೆ ನಿಮ್ಮರೂಪಿನ ಮುನೀಂದ್ರರ್ಗನ್ನಮಂ ನೀಡುವಂ-
ಗಪವರ್ಗಂ ನಿಜದುರ್ಗಮಪ್ಪುದರಿದೇ ? ರತ್ನಾಕರಾಧೀಶ್ವರಾ ! ॥೧೦೩॥

ಉಪಚಾರಕ್ಕೆ ಉಡಲ್ ಈವವಂಗೆ ಉಣವಿಡಲ್ ಮತ್ತೇನನ್ ಒಲ್ದೀಯನೋ
ಉಪಮಾತೀತನೆ ನಿಮ್ಮಬಿಂಬವಂ ಅಲಂಪಿಂದ ಅರ್ಚಿಸಲ್ ಸಂಪದಂ,
ವಿಪುಳಾನಂದದೆ ನಿಮ್ಮರೂಪಿನ ಮುನೀಂದ್ರರ್ಗೆ ಅನ್ನಮಂ ನೀಡುವಂಗೆ,
ಅಪವರ್ಗಂ ನಿಜದುರ್ಗಂ ಅಪ್ಪುದು ಅರಿದೇ ? ರತ್ನಾಕರಾಧೀಶ್ವರಾ !

ಉಪಚಾರಕ್ಕೆ-ಉಪಚಾರಕ್ಕೆ, ಉಡಲ್ ಈವವಂಗೆ-ಉಡಲು ಕೊಡುವವನಿಗೆ, ಉಣವಿಡಲ್-ಊಟಕ್ಕಿಟ್ಟರೆ, ಮತ್ತೇನನ್-ಮತ್ತೇನನ್ನು, ಒಲ್ದು ಈಯನೋ-ಪ್ರೀತಿಸಿ ಕೊಡುವುದಿಲ್ಲವೋ ? ಉಪಮಾತೀತನೆ-ಅಸದೃಶನಾದವನೆ !, ನಿಮ್ಮಬಿಂಬವಂ-ನಿಮ್ಮ ಮೂರ್ತಿಯನ್ನು, ಅಲಂಪಿಂದ-ವೈಭವದಿಂದ, ಅರ್ಚಿಸಲ್-ಪೂಜಿಸುತ್ತಿರಲು, ಸಂಪದಂ-ಐಶ್ವರ್ಯ ಲಭಿಸುವುದು, ವಿಪುಳ ಆನಂದದೆ-ಬಹುಸಂತೋಷದಿಂದ, ನಿಮ್ಮರೂಪಿನ-ನಿಮ್ಮರೂಪನ್ನು ಧರಿಸಿರುವ (ದಿಗಂಬರ), ಮುನೀಂದ್ರರ್ಗೆ-ಮುನಿಶ್ರೇಷ್ಠರಿಗೆ, ಅನ್ನಮಂ ನೀಡುವಂಗೆ-ಆಹಾರವನ್ನು ಕೊಡುವವನಿಗೆ, ಅಪವರ್ಗಂ-ಮೋಕ್ಷವು ನಿಜದುರ್ಗಂ ಅಪ್ಪುದು-ಆತ್ಮರಕ್ಷಣೆಯ ಸ್ಥಾನವಾಗುವುದು, ಅರಿದೇ-ಅಸಾಧ್ಯವೇ? ರತ್ನಾಕರಾಧೀಶ್ವರಾ!

ಸಾಧಾರಣ ಉಪಚಾರಕ್ಕೆ ಸಂತುಷ್ಟನಾಗಿ ಉಡಲು ಬಟ್ಟೆಬರೆಗಳನ್ನು ಕೊಡುವ ಮಹಾತ್ಮನಿಗೆ, ಪ್ರೀತಿಯಿಂದ ಊಟಕ್ಕಿಟ್ಟು ಉಪಚರಿಸಿದರೆ ಆವನು ಇನ್ನೆಷ್ಟು ಸಂತೋಷಗೊಳ್ಳುವುದಿಲ್ಲ, ಸಂತೋಷ ಗೊಂಡು ಏನನ್ನು ತಾನೇ ದಯಪಾಲಿಸುವುದಿಲ್ಲ ! ಜಿನೇಂದ್ರನೇ ! ನಿನ್ನನ್ನು ಯಾರಿಗೆತಾನೆ ಹೋಲಿಸ ಲಾದೀತು ! ನಿನ್ನ ರೂಪ ಆತ್ಮೋಪಮ ! ನಿನ್ನ ಬಿಂಬವನ್ನು ಭಕ್ತಿಯಿಂದ ಪೂಜಿಸಿದರೆ ಆ ಪೂಜಕನಿಗೆ ಅತುಳೈಶ್ವರ್ಯ ದೊರಕುವುದಿಲ್ಲವೇ ? ಹೀಗಿರುವಾಗ ನಿನ್ನ ದಿಗಂಬರ ರೂಪನ್ನೇ ಧರಿಸಿರುವ ನಿರ್ಗ್ರಂಥ ಮಹಾಮುನಿಗಳಿಗೆ ಭಕ್ತಿ ಶ್ರದ್ಧೆಗಳಿಂದ ಆಹಾರದಾನ ಮಾಡಿದರೆ, ಸಿಗುವ ಶ್ರೇಯಸ್ಸು ಅನುಪಮ ವಾದದ್ದು. ಅಂತಹ ಭವ್ಯಾತ್ಮನಿಗೆ ಆತ್ಮಸಾಕ್ಷಾತ್ಕಾರವಾಗುವುದರಲ್ಲಿ ಏನು ಆಶ್ಚರ್ಯ ?

ವಿಜ್ಞಾನಂ ಕ್ಷಮೆ ಶಕ್ತಿ ಭಕ್ತಿ ದಯೆ ನಿರ್ಲೋಭಂ ದೃಢಂಗೂಡಿಯಾ-
ತ್ಮಜ್ಞಾನಾನ್ವಿತ ಯೋಗಿಗನ್ನಮನಲಂಪಿಂದಿತ್ತವಂ ಕೂಡೆ ತಾಂ ॥
ಸುಜ್ಞಾನಂಬಡೆದಂ ಸುಖಂಬಡೆದನೊಳ್ಪಂ ಪೆತ್ತನೇ ಮಾತೊ ಸ-
ರ್ವಜ್ಞಾ ನಿಮ್ಮನೆ ಕಂಡನಿನ್ನುಳಿದುವೇಂ ? ರತ್ನಾಕರಾಧೀಶ್ವರಾ ! ॥೧೦೪॥

ವಿಜ್ಞಾನಂ ಕ್ಷಮೆ ಶಕ್ತಿ ಭಕ್ತಿ ದಯೆ ನಿರ್ಲೋಭಂ ದೃಢಂಗೂಡಿ,
ಆತ್ಮಜ್ಞಾನಾನ್ವಿತ ಯೋಗಿಗೆ ಅನ್ನಮಂ ಅಲಂಪಿಂದ ಇತ್ತವಂ,
ಕೂಡೆ ತಾಂ ಸುಜ್ಞಾನಂ ಬಡೆದಂ ಸುಖಂಬಡೆದಂ ಒಳ್ಪಂಪೆತ್ತನ್,
ಏ ಮಾತೊ ಸರ್ವಜ್ಞಾ ನಿಮ್ಮನೆ ಕಂಡನ್ ಇನ್ನುಳಿದುವೇಂ ? ರತ್ನಾಕರಾಧೀಶ್ವರಾ !

ವಿಜ್ಞಾನಂ-ಭೇದವಿಜ್ಞಾನವೂ, ಕ್ಷಮೆ-ಕ್ಷಮಾಗುಣವೂ, ಶಕ್ತಿ-ಸಾಮರ್ಥ್ಯವೂ, ಭಕ್ತಿ-ಭಕ್ತಿಯೂ, ದಯೆ-ದಯೆಯೂ, ನಿರ್ಲೋಭಂ-ಆಸೆಯಿಲ್ಲದಿರುವಿಕೆಯೂ, ದೃಢಂಗೂಡಿ-ಚೆನ್ನಾಗಿಸೇರಿ, ಆತ್ಮ ಜ್ಞಾನ ಅನ್ವಿತಯೋಗಿಗೆ-ಪರಮಾತ್ಮಜ್ಞಾನಿಯಾದ ಮುನಿಗೆ, ಅನ್ನಮಂ-ಆಹಾರವನ್ನು, ಅಲಂಪಿಂದ-ಭಕ್ತಿಯಿಂದ, ಇತ್ತವಂ-ಕೊಟ್ಟವನು, ಕೂಡೆ-ಶೀಘ್ರವಾಗಿ, ತಾಂ-ತಾನು, ಸುಜ್ಞಾನಂ ಪಡೆದಂ-ಉತ್ತಮಜ್ಞಾನವನ್ನು ಪಡೆದವನಾಗುತ್ತಾನೆ, ಸುಖಂಪಡೆದಂ-ಸೌಖ್ಯವನ್ನು ಪಡೆಯುತ್ತಾನೆ, ಒಳ್ಪಂ ಪೆತ್ತನ್-ಯೋಗ್ಯತೆಯನ್ನು ಪಡೆದವನೂ ಆಗುತ್ತಾನೆ, ಏ ಮಾತೊ-ಏನು ಮಾತೋ ! ಸರ್ವಜ್ಞಾ ! ನಿಮ್ಮನೆ ಕಂಡನ್-ನಿಮ್ಮನ್ನೇ ನೋಡಿದವನಾದನು, ಇನ್ನು ಉಳಿದುವೇಂ-ಇನ್ನುಳಿದ ಮಾತುಗಳೇಕೆ ? ರತ್ನಾಕರಾಧೀಶ್ವರಾ !

ಆತ್ಮವಿಜ್ಞಾನಿಯಾಗಿ, ಕ್ಷಮಾಶೀಲನಾಗಿ, ಶಕ್ತಿಯುತನಾಗಿ, ಭಕ್ತಾಗ್ರೇಸರನಾಗಿ, ದಯಾವಂತ ನಾಗಿ, ನಿರ್ಲೋಭಿಯಾಗಿ ಹಂಸಕಲೋಪಾಸನೆನಿಸಿದ ಮುನಿಗೆ ಮನಸಾರೆ ಆಹಾರ ದಾನಮಾಡಿದವನು ಕ್ಷಿಪ್ರದಲ್ಲೇ ತಾನು ಸುಜ್ಞಾನಿಯಾಗುವನು, ಸುಖವನ್ನು ಅನುಭವಿಸುವನು ಮತ್ತು ಶ್ರೇಯಸ್ಸನ್ನು ಸಾಧಿಸುವನು. ಆಹಾರದಾನದ ಮಹಿಮೆ ಎಷ್ಟು ಹೇಳಿದರೂ ಕಡಿಮೆಯೇ, ಒಂದೇ ಮಾತಿನಲ್ಲಿ ಹೇಳುವುದಾದರೆ ಆ ಭಗವಂತನನ್ನೇ ಕಂಡಂತಾಗುವುದು.

ಒಡಲಂ ದಂಡಿಸುತಿಂದ್ರಿಯಂಗಳ ಪೊಡರ್ಪಂ ಕುಂದಿಸುತ್ತಂ ಗುಣಂ-
ಬಿಡಿಯುತ್ತಂ ಮನದೇಳ್ಗೆಯುಂ ತಡೆಯುತಂ ತನ್ನಾತ್ಮನೊಳ್ತಾನೆ ಮಾ-॥
ರ್ನುಡಿಯುತ್ತಂ ಭಜಕರ್ಗೆ ಮುಕ್ತಿಪಥಮಂ ತೋರುತ್ತೆ ನೋವಳ್ತಿಯಿಂ ।
ಪಡೆಗೆಯ್ದಾಚರಿಪಾತನೇ ಶಿವನಲಾ ರತ್ನಾಕರಾಧೀಶ್ವರಾ ! ॥೧೦೫॥

ಒಡಲಂ ದಂಡಿಸುತ ಇಂದ್ರಿಯಂಗಳ ಪೊಡರ್ಪಂ ಕುಂದಿಸುತ್ತಂ,
ಗುಣಂಬಿಡಿಯುತ್ತಂ ಮನದ ಏಳ್ಗೆಯಂ ತಡೆಯುತಂ ತನ್ನಾತ್ಮನೊಳ್ ತಾನೆ
ಮಾರ್ನುಡಿಯುತ್ತಂ, ಭಜಕರ್ಗೆ ಮುಕ್ತಿಪಥಮಂ ತೋರುತ್ತೆ ನೋವ
ಅಳ್ತಿಯಿಂ ಪಡೆಗೆಯ್ದು ಆಚರಿಪಾತನೇ ಶಿವನಲಾ ರತ್ನಾಕರಾಧೀಶ್ವರಾ !

ಒಡಲಂ-ಶರೀರವನ್ನು, ದಂಡಿಸುತ-ಕಷ್ಟಕ್ಕೊಡ್ಡುತ, ಇಂದ್ರಿಯಂಗಳ ಪೊಡರ್ಪಂ-ಇಂದ್ರಿಯಗಳ ಸಾಮರ್ಥ್ಯವನ್ನು, ಕುಂದಿಸುತ್ತಂ-ಕಡಿಮೆಮಾಡುತ್ತ, ಗುಣಂಪಿಡಿಯುತ್ತಂ-ಸದ್ಗುಣವನ್ನು ಪರಿಗ್ರಹಿಸುತ್ತ, ಮನದ ಏಳ್ಗೆಯಂ-ಮನಸ್ಸಿನ ಸ್ವೇಚ್ಛಾವೃತ್ತಿಯನ್ನು, ತಡೆಯುತಂ-ತಡೆಯುತ್ತ, ತನ್ನ ಆತ್ಮನೊಳ್ ತಾನೆ ಮಾರ್ನುಡಿಯುತ್ತಂ-ತನ್ನ ಆತ್ಮನಲ್ಲಿ ತಾನೇ ಪ್ರತ್ಯುತ್ತರದ ಮಾತುಗಳನ್ನಾಡುತ್ತ, ಭಜಕರ್ಗೆ-ಭಜಿಸುವವರಿಗೆ, ಮುಕ್ತಿಪಥಮಂ ತೋರುತ್ತೆ-ಮೋಕ್ಷಮಾರ್ಗವನ್ನು ತೋರಿಸುತ್ತ, ನೋವ ಅಳ್ತಿಯಿಂ ಪಡೆಗೆಯ್ದು-ನೋವನ್ನು ಪ್ರೀತಿಯಿಂದ ಹೋಗಲಾಡಿಸಿ, ಆಚರಿಪಾತನೆ-ಆಚರಿಸುವವನೇ, ಶಿವನಲಾ-ಮಂಗಳಸ್ವರೂಪನಲ್ಲವೇ ? ರತ್ನಾಕರಾಧೀಶ್ವರಾ !

ಶರೀರವನ್ನು ಬಹಿರಂಗ ತಪಸ್ಸಿನ ಅನೇಕ ಕಷ್ಟಗಳಿಗೆ ಒಡ್ಡುತ್ತ, ಇಂದ್ರಿಯಗಳ ಸಾಮರ್ಥ್ಯವನ್ನು ಕಡಿಮೆಮಾಡುತ್ತ, ಅವುಗಳಮೇಲೆ ತನ್ನ ಹತೋಟಿಯನ್ನಿಟ್ಟುಕೊಳ್ಳುತ್ತ, ಸದ್ಗುಣಗಳನ್ನು ಪರಿಗ್ರಹಿಸುತ್ತ, ಮನಸ್ಸಿನ ಹರಿದಾಟವನ್ನು ತಡೆಯುತ್ತ, ಚಿತ್ತ ಏಕಾಗ್ರತೆಯನ್ನು ಸಾಧಿಸುತ್ತ, ಅಂತರ್ ಮುಖಿಯಾಗಿ ಆತ್ಮನೊಡನೆ ಅನುಸಂಧಾನಮಾಡುತ್ತ, ಭಕ್ತರಿಗೆ, ಭಜಕರಿಗೆ ಮೋಕ್ಷಮಾರ್ಗವನ್ನು ತೋರಿಸುತ್ತ, ತನ್ನ ನೋವನ್ನು ಗಣನೆಗೆತಾರದೆ, ಪರರ ದುಃಖ ಮತ್ತು ನೋವುಗಳಿಗೆ ಪರಿಹಾರ ಹುಡುಕಿ ಅವುಗಳನ್ನು ಹೋಗಲಾಡಿಸಲು ಪ್ರಯತ್ನಮಾಡುವವನಾತನೇ ಶಿವಶಂಕರನಲ್ಲವೇ ? ನಿರ್ಮಲಾಂತಃಕರಣನೂ, ಮಂಗಳದಾಯಕನೂ ಅಲ್ಲವೇ ? ಭವಸಾಗರವನ್ನು ದಾಟಲು ಇಂತಹ ಚೇತನಗಳ ಸಹಾಯ ಅತ್ಯಗತ್ಯವಲ್ಲವೇ ?

ಕಡೆಗಿನ್ನೆಂತೊ ಭವಾಗ್ನಿತಾಪವಕಟಾ ! ಕಾಮಾಗ್ನಿಯಂನೋಳ್ಪೊಡಾ-
ಸಿಡಿಲೇಂ ಶೇಷನ ದಾಡೆಯೇಂ ಬಡಬನೇಂ ಕಾಲಾಗ್ನಿಯೇಂ ಶೃಂಗಿಯೇಂ ||
ತಡೆದಾಂತಗ್ಗಳಿಯಂ ಗಡಂ ಮದನನೇಂ ಪಾಪಾರಿಯೇಂ ಕಾಲನೇಂ
ಮೃಡನೇಂ ಮೃತ್ಯುವದೇಂ ನಿಲಲ್ನೆರೆಗುಮೇ ರತ್ನಾಕರಾಧೀಶ್ವರಾ ! ||೧೦೬||

ಕಡೆಗೆ ಇನ್ನೆಂತೊ ಭವಾಗ್ನಿತಾಪವು ಅಕಟಾ !, ಕಾಮಾಗ್ನಿಯಂ
ನೋಳ್ಪೊಡೆ ಆ ಸಿಡಿಲೇಂ ಶೇಷನ ದಾಡೆಯೇಂ ಬಡಬನೇಂ ಕಾಲಾಗ್ನಿಯೇಂ
ಶೃಂಗಿಯೇಂ, ತಡೆದಾಂತ ಅಗ್ಗಳಿಯಂ ಗಡಂ, ಮದನನೇಂ, ಪಾಪಾರಿಯೇಂ
ಕಾಲನೇಂ ಮೃಡನೇಂ ಮೃತ್ಯುವದೇಂ ನಿಲಲ್ ನೆರೆಗುಮೇ ರತ್ನಾಕರಾಧೀಶ್ವರಾ !

ಕಾಮಾಗ್ನಿಯಂ ನೋಳ್ಪೊಡೆ-ಕಾಮವೆಂಬ ಬೆಂಕಿಯ ತಾಪವನ್ನು ಕ್ರೂರವಾದುದೆಂದು ನೋಡುವ ಪಕ್ಷದಲ್ಲಿ, ಕಡೆಗೆ-ಮುಂದೆ, ಭವಾಗ್ನಿತಾಪವು-ಸಂಸಾರವೆಂಬ ಬೆಂಕಿಯ ತಾಪವು, ಇನ್ನೆಂತೊ-ಇನ್ನು ಹೇಗೋ, ಅಕಟಾ-ಅಯ್ಯೋ ! (ಭವವೆಂಬ ಬೆಂಕಿಯ ತಾಪವನ್ನು ಪ್ರತಿಭಟಿಸಿ ನಿಲ್ಲಲು) ಆ ಸಿಡಿಲೇಂ-ಆ ಸಿಡಿಲೇನು, ಶೇಷನ ದಾಡೆಯೇಂ-ಆದಿಶೇಷನ ಕೋರೆಹಲ್ಲೇನು, ಬಡಬನೇಂ-ಬಡಬಾಗ್ನಿಯೇನು, ಕಾಲಾಗ್ನಿಯೇಂ-ಪ್ರಳಯಕಾಲದ ಬೆಂಕಿಯೇನು, ಶೃಂಗಿಯೇಂ – ಚೂಪಾದ ಕೊಂಬುಳ್ಳ ಪ್ರಾಣಿಯೇನು ಸಮರ್ಥವಾಗುವುದೇ ? ತಡೆದಾಂತ-ಸಂಸಾರಿ ಪ್ರಾಣಿಗಳನ್ನು ಬಂಧಿಸಿ ಹಿಡಿದಿರುವವನೂ, ಅಗ್ಗಳಿಯಂ ಗಡಂ-ಶೂರನೂ ಆದ, ಮದನನೇಂ-ಮನ್ಮಥನೇನು, ಪಾಪಾರಿಯೇಂ - ಪಾಪವೆಂಬ ಶತ್ರುವೇನು, ಕಾಲನೇಂ-ಯಮನೇನು, ಮೃಡನೇಂ-ರುದ್ರನೇನು, ಮೃತ್ಯುವದೇಂ – ಮರಣವೇನು, ನಿಲಲ್ ನೆರೆಗುಮೇ-ಪ್ರತಿಭಟಿಸಿ ನಿಲ್ಲಲು ಸಮರ್ಥವಾಗುವುದೇ ? ರತ್ನಾಕರಾಧೀಶ್ವರಾ !

ಕಾಮವೆಂಬ ಅಗ್ನಿಯ ತಾಪ ಯಾರನ್ನು ತಾನೆ ತಟ್ಟುವುದಿಲ್ಲ. ಆ ಭಯಂಕರ ಕಾಮಾಗ್ನಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ? ಕಾಮಾಗ್ನಿಯ ಮುಂದೆ ಸಿಡಿಲೇನು ? ಆದಿಶೇಷನ ಕೋರೆಹಲ್ಲೇನು ? ಬಡಬಾಗ್ನಿಯೇನು ? ಪ್ರಳಯಕಾಲದ ಬೆಂಕಿಯೇನು ? ಹರಿತವಾದ ಕೊಂಬುಳ್ಳ ಪ್ರಾಣಿಗಳೇನು ? ಇವುಗಳು ಪ್ರತಿಭಟಿಸಿನಿಲ್ಲಲು ಸಾಧ್ಯವೇ ? ಹಾಗೆಯೆ ಎಲ್ಲಾ ಪ್ರಾಣಿಗಳನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿರುವವನೂ ಶೂರನೂ ಆದ ಮನ್ಮಥನೇನು ಸಮರ್ಥನಾಗುವನೇ ? ಪಾಪವೆಂಬ ಶತ್ರುವೇನು ಸಮರ್ಥನಾಗುವನೇ ? ಯಮನೇನು ಸಮರ್ಥನಾಗುವನೇ ? ರುದ್ರನೇನು ಸಮರ್ಥನಾಗುವನೇ ? ಮರಣವೇನು ಸಮರ್ಥವಾಗುವುದೇ ? ಹೀಗಿರುವಾಗ ಕಾಮಾಗ್ನಿಗಿಂತಲೂ ಭಯಾನಕವಾದ ಭವಾಗ್ನಿ ತಾಪವನ್ನು ವಿವರಿಸಲಾದೀತೆ. ಅಕಟಾ ! ಈ ಸಂಸಾರವೆಂಬ ಬೆಂಕಿಯ ತಾಪದಿಂದ ಬಿಡಿಸಿಕೊಳ್ಳಲು ಏನು ಮಾಡಬೇಕು !

ಶ್ರುತಮುಂನೋಳ್ಪ ತದರ್ಥಮುಂ ತಿಳಿವ ತನ್ಮರ್ಯಾದೆಯೊಳ್ಪೋಪ ಸು-
ವ್ರತಮುಂ ಪಾಲಿಪ ಕಾಮಮುಂ ತುಳಿವ ಮಾಯಾಜಾಡ್ಯಮುಂ ಝಾಡಿಪು-॥
ನ್ನತ ಕಾರುಣ್ಯದೊಳಾಳ್ವ ಜೀವಹಿತಮುಂ ಪೇಳ್ವಾತನೇ ಮದ್ಗುರು ।
ಶ್ರುತಯೋಗೀಶ್ವರನಿಂದು ನಾಳಿನಶಿವಂ ರತ್ನಾಕರಾಧೀಶ್ವರಾ! ॥೧೦೭॥

ಶ್ರುತಮುಂನೋಳ್ಪ ತದರ್ಥಮುಂ ತಿಳಿವ ತನ್‌ಮರ್ಯಾದೆಯೊಳ್ ಪೋಪ,
ಸುವ್ರತಮುಂ ಪಾಲಿಪ ಕಾಮಮುಂ ತುಳಿವ ಮಾಯಾಜಾಡ್ಯಮುಂ ಝಾಡಿಪ,
ಉನ್ನತ ಕಾರುಣ್ಯದೊಳ್ ಆಳ್ವ ಜೀವಹಿತಮುಂ ಪೇಳ್ವಾತನೇ ಮದ್ಗುರು,
ಶ್ರುತಯೋಗೀಶ್ವರನ್ ಇಂದು ನಾಳಿನ ಶಿವಂ ರತ್ನಾಕರಾಧೀಶ್ವರಾ !

ಶ್ರುತಮುಂನೋಳ್ಪ–ಶಾಸ್ತ್ರಾದಿಗಳನ್ನು ಅವಲೋಕಿಸುವವನೂ, ತದರ್ಥಮುಂ ತಿಳಿವ–ಆ ಶಾಸ್ತ್ರಗಳ ಅರ್ಥವನ್ನು ತಿಳಿಯುವವನೂ, ತನ್‌ಮರ್ಯಾದೆಯೊಳ್‌ಪೋಪ–ಆ ಶಾಸ್ತ್ರದ ಎಲ್ಲೆಯಲ್ಲಿ ನಡೆಯುವವನೂ, ಸುವ್ರತಮುಂ ಪಾಲಿಪ–ಶ್ರೇಷ್ಠವಾದ ವ್ರತಗಳನ್ನು ಪಾಲಿಸುವವನೂ, ಕಾಮಮುಂ ತುಳಿವ–ಕಾಮದ ಇಚ್ಛೆಯನ್ನು ಮೆಟ್ಟಿ ತುಳಿಯುವವನೂ, ಮಾಯಾಜಾಡ್ಯಮುಂ ಝಾಡಿಪ–ಅಜ್ಞಾನದ ಜಡತೆಯನ್ನು ಒದರಿಬಿಡುವವನೂ, ಉನ್ನತ ಕಾರುಣ್ಯದೊಳ್ ಆಳ್ವ–ಉನ್ನತವಾದ ದಯಾರಸದಲ್ಲಿ ಮಗ್ನನೂ, ಜೀವಹಿತಮುಂ ಪೇಳ್ವಾತನೇ–ಎಲ್ಲ ಜೀವರಾಶಿಗಳಲ್ಲಿಯೂ ಹಿತವನ್ನು ಬೋಧಿಸುವವನೇ ಮದ್ಗುರು–ನನ್ನ ಗುರುವು, ಇಂದು ಶ್ರುತಯೋಗೀಶ್ವರನ್–ಈಗ ಆ ಭವ್ಯಚೇತನ "ಶ್ರುತಯೋಗೀಶ್ವರನು"; ನಾಳಿನ–ನಾಳೆಯ, ಶಿವಂ–ಭಗವಂತನು ! ರತ್ನಾಕರಾಧೀಶ್ವರಾ !

ದೇವ ಗುರು ಶಾಸ್ತ್ರಗಳಲ್ಲಿ ಅಚಲವಾದ ನಂಬಿಕೆಯುಳ್ಳವನೂ, (ಸಮ್ಯಗ್‌ದೃಷ್ಟಿಯೂ), ಶಾಸ್ತ್ರಾದಿ ಆಗಮಗ್ರಂಥಗಳನ್ನು ಅಧ್ಯಯನಮಾಡಿ ಜ್ಞಾನಾರ್ಜನೆಯನ್ನು ಮಾಡಿಕೊಳ್ಳುವವನೂ, (ಸಮ್ಯಗ್ ಜ್ಞಾನಿಯೂ), ಧರ್ಮಗ್ರಂಥಗಳಲ್ಲಿ ಹೇಳಿದರೀತಿ ತನ್ನ ಚಾರಿತ್ರವನ್ನು ಪರಿಪಾಲಿಸಿಕೊಂಡು ಬರುವವನೂ–(ಸಮ್ಯಕ್ ಚಾರಿತ್ರವಂತನೂ). ಅಹಿಂಸಾದಿ ಶ್ರೇಷ್ಠವ್ರತಗಳನ್ನು ಚಾಚೂತಪ್ಪದೆ ನಡೆಸುವವನೂ, ಕಾಮವನ್ನು ಕಡೆಗಣಿಸಿದವನೂ, ಅಜ್ಞಾನ, ಅಂಧಶ್ರದ್ಧೆ, ಕುರುಡುನಂಬಿಕೆಗಳನ್ನು ತನ್ನ ಮನಸ್ಸಿನಿಂದ ಕಿತ್ತೊಗೆದವನೂ, ದಯಾಮಯನೂ, ಕ್ಷಮಾಶೀಲನೂ, ಸಕಲಜೀವರಾಶಿಗಳಿಗೆ ಲೇಸನ್ನೇ ಬಯಸಬೇಕೆಂದು ಬೋಧಿಸುವವನೂ ಆದವನೇ ನನ್ನ ಪರಮಗುರು. ಇಂದು ಆ ಮಹಾಚೇತನವು ಶ್ರುತಯೋಗಿಶ್ವರನಾಗಿದ್ದಾನೆ, ಮುಂದೆ ಆ ಜೀವವೇ ಪರಮಾತ್ಮನಾಗುವುದು.

ಪರಸಂತೋಷಮೆ ಸೌಖ್ಯಮೆಂಬ ಪರದುಃಖಂ ತನ್ನನೋವೆಂಬ ತಾಂ ।
ಪರನೆಂಬಂದಮನಿಂತುಟೆಂಬ ಪರಲೋಕಂ ತನ್ನನಾಡೆಂಬ ತ-
ತ್ಪರಮಜ್ಞಾನಿ ಜಗದ್ಗುರುಂ ಮಮಗುರುಂ ದೇವೇಂದ್ರಕೀರ್ತಿವ್ರತೀ-
ಶ್ವರನಾತಂ ಪೆರನಲ್ತು ನೀನೆ ಪಲವೇಂ ? ರತ್ನಾಕರಾಧೀಶ್ವರಾ ! ||೧೦೮||

ಪರಸಂತೋಷಮೆ ಸೌಖ್ಯಂ ಎಂಬ ಪರದುಃಖಂ ತನ್ನನೋವೆಂಬ,
ತಾಂ ಪರನೆಂಬ ಅಂದಮಂ ಇಂತುಟೆಂಬ ಪರಲೋಕಂ ತನ್ನನಾಡೆಂಬ,
ತತ್ ಪರಮಜ್ಞಾನಿ ಜಗದ್ಗುರುಂ ಮಮಗುರುಂ ದೇವೇಂದ್ರಕೀರ್ತಿವ್ರತೀಶ್ವರಂ
ಆತಂ, ಪೆರನಲ್ತು ನೀನೆ ಪಲವೇಂ ರತ್ನಾಕರಾಧೀಶ್ವರಾ !

ಪರಸಂತೋಷಮೆ–ಬೇರೆಯವರ ಸಂತೋಷವೇ, ಸೌಖ್ಯಂ ಎಂಬ–ತನ್ನ ಸುಖವೆಂಬವನೂ, ಪರದುಃಖಂ–ಬೇರೆಯವರ ದುಃಖವೇ, ತನ್ನನೋವೆಂಬ–ತನ್ನ ವ್ಯಥೆಯೆಂಬವನೂ, ತಾಂ ಪರನ್ ಎಂಬ ಅಂದಮಂ–ತಾನು ಶರೀರದಿಂದ ಭಿನ್ನನಾದವನೂ ಎಂಬ ಈ ತಿಳುವಳಿಕೆಯನ್ನು, ಇಂತುಟೆಂಬ-ಈ ಪ್ರಕಾರವೆಂದು ಹೇಳುವವನೂ, ಪರಲೋಕಂ ತನ್ನ ನಾಡೆಂಬ-ಪರಲೋಕ (ಮೋಕ್ಷಸ್ಥಾನ) ವೇ ತನ್ನ ದೇಶವೆಂಬವನೂ, ತತ್ಪರಮಜ್ಞಾನಿ–ಆ ಶ್ರೇಷ್ಠಜ್ಞಾನಿಯೂ ಆದವನೇ, ಜಗದ್ಗುರುಂ–ಈ ಜಗತ್ತಿಗೆ ಗುರುವು ಹಾಗೂ ಮಮಗುರುಂ–ನನ್ನ ಗುರುವೂ ಸಹ, ದೇವೇಂದ್ರಕೀರ್ತಿ ವ್ರತೀಶ್ವರಂ ಆತಂ–ಆ ಜ್ಞಾನಿಯು ದೇವೇಂದ್ರಕೀರ್ತಿ ಮುನೀಶ್ವರನು, ಪಲವೇಂ-ಹಲವು ಮಾತೇಕೆ, ಪೆರನ್ ಅಲ್ತು–ಅವನು ಬೇರೆ ಯಾರೂ ಅಲ್ಲ, ನೀನೆ–ನೀನೇ ! (ಅಂದರೆ ಸಾಕ್ಷಾತ್ ಜಿನೇಂದ್ರ) ರತ್ನಾಕರಾಧೀಶ್ವರಾ !

ಅನ್ಯರ ಸಂತೋಷವೇ ತನ್ನ ಸಂತೋಷವೆಂದು ನಲಿದಾಡುವ, ಬೇರೆಯವರ ದುಃಖಕ್ಕೆ ಅನುಕಂಪೆಯನ್ನು ತೋರುವ, ಅಶಾಶ್ವತವಾದ ಈ ಶರೀರದಿಂದ ಆತ್ಮ ಭಿನ್ನವಾದುದೆಂದು ತಾನು ತಿಳಿದು ಪರರಿಗೆ ತಿಳುವಳಿಕೆಕೊಟ್ಟು ಹಿತೋಪದೇಶವನ್ನು ಮಾಡುವವನೂ ಕರ್ಮಸಂಯೋಗದಿಂದ ಈ ಚತುರ್ಗತಿಗಳಲ್ಲಿ ಅಲೆದಾಡುತ್ತಿದ್ದರೂ ತನ್ನ ನಿಜವಾದ ಸ್ಥಾನ ಮೋಕ್ಷಸಾಮ್ರಾಜ್ಯವೆಂದು ದೃಢವಾಗಿ ನಂಬಿರುವವನೂ, ಸಮ್ಯಗ್‌ದೃಷ್ಟಿಯೂ, ಪರಮಜ್ಞಾನಿಯೂ ಆದವನೇ ಈ ಜಗತ್ತಿಗೆ ಗುರುವಾಗಲು ಸಾಧ್ಯ. ಇಂತಹ ಶ್ರೇಷ್ಠಗುಣಗಳನ್ನು ಅಳವಡಿಸಿಕೊಂಡಿರುವವನು ನನ್ನ ಗುರುವಾದ ದೇವೇಂದ್ರ ಕೀರ್ತಿ ಮುನೀಶ್ವರನು. ಹೆಚ್ಚುಮಾತೇಕೆ–ಈ ನನ್ನ ಗುರು ಬೇರೆ ಅಲ್ಲ, ಸಾಕ್ಷಾತ್ ಜಿನೇಂದ್ರನು ಬೇರೆ ಅಲ್ಲ, ಗುರುಭಕ್ತಿಗಿಂತ ಮಿಗಿಲಾದದ್ದು ಇನ್ನುಂಟೇ ?

ವ್ಯವಹಾರಂ ವ್ಯವಸಾಯಮೋಲಗಮಿವಂ ಮಾಡೆಂಬರಂ ಮಾಡೆ ಮೆ–
ಚ್ಚುವರಂ ಮಾಳ್ಪರನೆಲ್ಲಿಯುಮಂ ಪಡೆಯಲುಂಟೂರೂರೊಳ್ನಿನ್ನಂತೆ ಮೋ–||
ಕ್ಷವನೊಂದಂ ನೆಗಳೆಂಬರಂ ನೆಗಳೆ ಹೋ ಲೇಸೆಂಬರಂ ನಚ್ಚಿ ಮಾ–
ಳ್ಪವರಂ ನಿನ್ನವರಲ್ಲದೆಲ್ಲಿ ಪಡೆಯೆಂ ರತ್ನಾಕರಾಧೀಶ್ವರಾ ! ||೧೦೯||

ವ್ಯವಹಾರಂ ವ್ಯವಸಾಯಂ ಓಲಗಮಿವಂ ಮಾಡೆಂಬರಂ, ಮಾಡೆ
ಮೆಚ್ಚುವರಂ ಮಾಳ್ಪರಂ ಎಲ್ಲಿಯುಂ ಪಡೆಯಲುಂಟು ಊರೂರೊಳ್,
ನಿನ್ನಂತೆ ಮೋಕ್ಷವನೊಂದಂ ನೆಗಳೆಬಂರಂ ನೆಗಳೆ ಹೋ ಲೇಸೆಂಬರಂ,
ನಚ್ಚಿ ಮಾಳ್ಪವರಂ ನಿನ್ನವರಲ್ಲದೆ ಎಲ್ಲಿ ಪಡೆಯೆಂ ರತ್ನಾಕರಾಧೀಶ್ವರಾ !

ವ್ಯವಹಾರಂ–ವ್ಯಾಪಾರ, ಉದ್ಯೋಗ, ವ್ಯವಸಾಯಂ-ವ್ಯವಸಾಯ, ಓಲಗಂ-ಓಲಗಗೊಡುವುದು, ಇವಂ–ಇವುಗಳನ್ನು, ಮಾಡೆಂಬರಂ–ಮಾಡೆಂದು ಹೇಳುವವರನ್ನೂ, ಮಾಡೆ–ಮಾಡಿದರೆ, ಮೆಚ್ಚುವರಂ–ಮೆಚ್ಚುವವರನ್ನೂ, ಮಾಳ್ಪರಂ–ತಾವು ಮಾಡುವವರನ್ನೂ, ಎಲ್ಲಿಯುಂ–ಎಲ್ಲಾಕಡೆಯಲ್ಲಿಯೂ, ಊರೂರೊಳ್–ಪ್ರತಿ ಊರಿನಲ್ಲಿಯೂ, ಪಡೆಯಲುಂಟು–ಪಡೆಯಬಹುದು, ನಿನ್ನಂತೆ–ನಿನ್ನಹಾಗೆ, ಮೋಕ್ಷವನೊಂದಂ–ಮೋಕ್ಷಸಾಧನೆಯ ಕಾರ್ಯವೊಂದನ್ನು, ನೆಗಳ್ ಎಂಬರಂ–ಮಾಡೆಂದು ಹೇಳುವವರನ್ನೂ, ನೆಗಳೆ–ಮಾಡಿದಗೆ, ಹೋ ಲೇಸೆಂಬರಂ-ಆಹಾ ! 'ಚೆನ್ನಾಗಿದೆ' ಎಂದು ಹೇಳುವವರನ್ನೂ. ನಚ್ಚಿ–ನಂಬಿಕೆಯನ್ನಿಟ್ಟು, ಮಾಳ್ಪವರಂ–ಮಾಡುವವರನ್ನೂ, ನಿನ್ನವರ್ ಅಲ್ಲದೆ–ನಿನ್ನವರನ್ನು ಹೊರತು, ಎಲ್ಲಿ ಪಡೆಯೆಂ–ಎಲ್ಲಿಯೂ ಪಡಯಲಾರೆನು ? ರತ್ನಾಕರಾಧೀಶ್ವರಾ !

ವ್ಯಾಪಾರ, ಉದ್ಯೋಗ ಮುಂತಾದ ಲೌಕಿಕ ಕಾರ್ಯಗಳನ್ನು, ಕೃಷಿಕಾರ್ಯಗಳನ್ನು, ರಾಜನಾದವನು ಓಲಗಗೊಡುವ್ರದು ಮುಂತಾದ ಕೆಲಸಗಳನ್ನು ಮಾಡೆಂದು ಉತ್ತೇಜನ ಕೊಡುವವರೂ, ಅವರು ಹೇಳಿದಹಾಗೆ ಮಾಡಿದರೆ ಭೇಶ್ ! ಎಂದು ಬೆನ್ನು ತಟ್ಟುವವರನ್ನೂ ಹಾಗೂ ತಾವೇ ಸ್ವತಃ ಈ ಲೌಕಿಕ ಕಾರ್ಯಗಳಲ್ಲಿ ಮಗ್ನರಾಗಿರುವವರನ್ನೂ ಎಲ್ಲಾ ಊರು ಕೇರಿಗಳಲ್ಲಿ ಕಾಣಬಹುದು. ಅಂತಹವರಿಗೆ ಏನೂ ಕೊರತೆಯಿಲ್ಲ. ಆದರೆ "ಈ ಲೌಕಿಕವನ್ನು ಕಡೆಗಣಿಸಿ, ಪರಮಾರ್ಥದ ಕಡೆ ದೃಷ್ಟಿಯಿಡು, ಮೋಕ್ಷಸಾಧನೆಯತ್ತಸಾಗು" ಎಂದು ಹೇಳುವವರೂ, ಹಾಗೆ ಮಾಡಿದರೆ ಸಂತೋಷಪಟ್ಟು "ಸದ್ಧರ್ಮವೃದ್ಧಿರಸ್ತು" ಎಂದು ಹರಸಿ ಆಶೀರ್ವಾದ ಮಾಡುವವರೂ, ರತ್ನತ್ರಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮೋಕ್ಷಪಥದಲ್ಲಿರುವವರನ್ನೂ ಕಾಣುವುದು ದುರ್ಲಭ. ಸಮ್ಯಗ್ದೃಷ್ಟಿಗಳು ಹಾಗೂ ಜಿನೇಂದ್ರಭಕ್ತರು ಮಾತ್ರ ಈ ಪರಮಾತ್ಮ ಚಿಂತನೆಯಲ್ಲಿ ಮಗ್ನರಾಗಿರುತ್ತಾರೆ ವಿನಹ ಮಿಕ್ಕವರಲ್ಲ.

ವಿಂಧ್ಯಾಕುಕ್ಕುಟನೊಂದು ಸಂಕ್ರಮಣಮಂ ಪಾರ್ದಲ್ಲಿ ಮೆಯ್ವಣ್ಣಮಂ ।
ವಂಧ್ಯಂ ಮಾಡದೆ ಮಾಡಿಕೊಳ್ವುದು ಗಡಾ ಯೋಗೀಶ್ವರರ್ನಿಚ್ಚಲುಂ ॥
ಸಂಧ್ಯಾಕಾಲಮನಾಸೆವಟ್ಟದರೊಳೀರ್ಯಾಶುದ್ಧಿಯಿಂ ಸ್ತೋತ್ರಜ
ಪ್ಯಂ ಧ್ಯಾನಂಗಳ ಮಾಡೆ ಸಿದ್ಧಿಯರಿದೇ ? ರತ್ನಾಕರಾಧೀಶ್ವರಾ ! ॥೧೧೦॥

ವಿಂಧ್ಯಾಕುಕ್ಕುಟಂ ಒಂದು ಸಂಕ್ರಮಣಮಂ ಪಾರ್ದು, ಅಲ್ಲಿ ಮೆಯ್‌ಬಣ್ಣಮಂ
ವಂಧ್ಯಂಮಾಡದೆ ಮಾಡಿಕೊಳ್ವುದು ಗಡಾ, ಯೋಗೀಶ್ವರರ್ ನಿಚ್ಚಲುಂ
ಸಂಧ್ಯಾಕಾಲಮಂ ಆಸೆಪಟ್ಟು ಅದರೊಳ್ ಈರ್ಯಾಶುದ್ಧಿಯಿಂ
ಸ್ತೋತ್ರ ಜಪ್ಯಂ ಧ್ಯಾನಂಗಳ ಮಾಡೆ ಸಿದ್ಧಿ ಅರಿದೇ ? ರತ್ನಾಕರಾಧೀಶ್ವರಾ !

ವಿಂಧ್ಯಾಕುಕ್ಕುಟಂ ಒಂದು–ಕಾಡುಕೋಳಿಯೊಂದು, ಸಂಕ್ರಮಣಮಂ ಪಾರ್ದು–ಮಕರ ಸಂಕ್ರಾಂತಿಯ ಕಾಲವನ್ನು ನೋಡಿ, ಅಲ್ಲಿ–ಆ ಕಾಲದಲ್ಲಿ, ವಂಧ್ಯಂಮಾಡದೆ–ವ್ಯರ್ಥಮಾಡದೆ, ಮೆಯ್ ಬಣ್ಣಮಂ–ಮೆಯ್ ಬಣ್ಣವನ್ನು, ಮಾಡಿಕೊಳ್ವುದು ಗಡಂ–ಮಾಡಿಕೊಳ್ಳುವುದಲ್ಲವೇ ?, ಆ ಯೋಗೀಶ್ವರರ್–ಆ ಮುನೀಶ್ವರರು, ನಿಚ್ಚಲುಂ–ಯಾವಾಗಲೂ, ಸಂಧ್ಯಾಕಾಲಮಂ–ತ್ರಿಸಂಧ್ಯಾ ಕಾಲಗಳನ್ನು, ಆಸೆಪಟ್ಟು-ಆಸೆಪಟ್ಟು, ಅದರೊಳ್–ಆ ಕಾಲಗಳಲ್ಲಿ, ಈರ್ಯಾಶುದ್ಧಿಯಿಂ-ಈರ್ಯಾಪಥಶುದ್ಧಿಯಿಂದ, ಸ್ತೋತ್ರ ಜಪ್ಯಂ ಧ್ಯಾನಂಗಳ ಮಾಡೆ–ಸ್ತೋತ್ರ, ಜಪ, ಧ್ಯಾನಾದಿಗಳನ್ನುಮಾಡಲು, ಸಿದ್ಧಿ ಅರಿದೇ–ಸಿದ್ಧಪದವಿ ಪ್ರಾಪ್ತವಾಗುವುದು ಅಸಾಧ್ಯವೇ ? ರತ್ನಾಕರಾಧೀಶ್ವರಾ !

ಮಕರಸಂಕ್ರಾಂತಿ ಕಾಲಕ್ಕಾಗಿ ಕಾಡುಕೋಳಿಗಳು ಕಾದು ಕೂತಿರುತ್ತವೆ. ಏಕೆಂದರೆ ಆ ಸಂಕ್ರಮಣ ಕಾಲದಲ್ಲಿ, ಕಾಲವನ್ನು ವ್ಯರ್ಥಮಾಡದೆ ಅವು ತಮ್ಮ ಮೆಯ್ ಬಣ್ಣವನ್ನು ವೃದ್ಧಿಮಾಡಿಕೊಳ್ಳುವುದು. ಹಾಗೆ ಮುನೀಶ್ವರರು ದಿನನಿತ್ಯ ತಮ್ಮ ಯಾವ ಕಾಲವನ್ನು ವೃಥಾ ಹರಣ ಮಾಡುವುದಿಲ್ಲ. ಮೂರು ಸಂಧ್ಯಾಕಾಲಗಳಲ್ಲೂ ಈರ್ಯಾಪಥಶುದ್ಧಿಯಿಂದ ಜಿನೇಂದ್ರನ ಸ್ತೋತ್ರ, ಪಂಚಪರಮೇಷ್ಠಿಗಳ ಜಪ ಮತ್ತು ಆತ್ಮಧ್ಯಾನವನ್ನು ಮಾಡುತ್ತಿರುತ್ತಾರೆ. ಹೀಗೆ ಮಾಡುವುದರಿಂದ ಕರ್ಮನಿರ್ಜರೆಯಾಗಿ ಆ ಮಹಾತ್ಮರು ಸಿದ್ಧಪದವಿಗೇರುವುದರಲ್ಲಿ ಏನು ಆಶ್ಚರ್ಯ ?

ಅಸ್ತಾದ್ರಿಸ್ಥಳದಲ್ಲಿ ಕಂಡು ರವಿಯುಂ ತಾರಾಳಿಯುಂ ಕಾಣ್ಬೆನಂ |
ನಿಸ್ತೇಜಕ್ಕೆಡೆಯಾದ ತಾರೆಗಳ ಕಂಡಕೋರ್ದಯುಂ ಕಾಣ್ಬೆನಂ ||
ವಿಸ್ತಾರಂಗಿಡೆ ಮೆಯ್ನೆಳಲ್ಮಗುಳೆ ವಿಸ್ತಾರಕ್ಕೆ ತೋರ್ಪನ್ನೆಗಂ |
ಸುಸ್ತೋತ್ರಂಗೆಯೆ ನಿಮ್ಮ ಕಾಣ್ಬುದರಿದೇ ? ರತ್ನಾಕರಾಧೀಶ್ವರಾ ! ||೧೧೧||

ಅಸ್ತಾದ್ರಿಸ್ಥಳದಲ್ಲಿ ಕಂಡುರವಿಯುಂ ತಾರಾಳಿಯುಂ ಕಾಣ್ಬೆನಂ,
ನಿಸ್ತೇಜಕ್ಕೆ ಎಡೆಯಾದ ತಾರೆಗಳ ಕಂಡು ಅರ್ಕೋದಯಂ ಕಾಣ್ಬೆನಂ
ವಿಸ್ತಾರಂಕಿಡೆ ಮೆಯ್‌ನೆಳಲ್ ಮಗುಳೆ ವಿಸ್ತಾರಕ್ಕೆ ತೋರ್ಪನ್ನೆಗಂ,
ಸುಸ್ತೋತ್ರಂಗೆಯೆ ನಿಮ್ಮಕಾಣ್ಬುದು ಅರಿದೇ ? ರತ್ನಾಕರಾಧೀಶ್ವರಾ !

ಅಸ್ತಾದ್ರಿಸ್ಥಳದಲ್ಲಿ–ಅಸ್ತಪರ್ವತದಸ್ಥಾನದಲ್ಲಿ, ಕಂಡು ರವಿಯುಂ–ಸೂರ್ಯನನ್ನು ನೋಡಿ, ತಾರಾಳಿಯುಂ ಕಾಣ್ಬೆನಂ-ತಾರೆಗಳ ಸಮೂಹವನ್ನು ನೋಡುವವರೆಗೂ (ಸಾಯಂಸಂಧ್ಯಾ), ನಿಸ್ತೇಜಕ್ಕೆ ಎಡೆಯಾದ-ಕಾಂತಿಗುಂದುವುದಕ್ಕೆ ಆಸ್ಪದವಾದ, ತಾರೆಗಳ ಕಂಡು–ನಕ್ಷತ್ರಗಳನ್ನು ಕಂಡು, ಅರ್ಕ ಉದಯುಂ–ಸೂರ್ಯೋದಯವನ್ನು, ಕಾಣ್ಬೆನಂ - ನೋಡುವವರೆಗೂ (ಪ್ರಾತಃಸಂಧ್ಯಾ), ಮೆಯ್ ನೆಳಲ್-ಶರೀರದ ನೆರಳು, ವಿಸ್ತಾರಂಕಿಡೆ – ಚಿಕ್ಕದಾಗುತ್ತಿರಲು, ಮಗುಳೆ – ಪುನಃ, ವಿಸ್ತಾರಕ್ಕೆ–ದೊಡ್ಡದಾಗುವುದಕ್ಕೆ, ತೋರ್ಪ ಅನ್ನೆಗಂ-ಕಾಣುವವರೆಗೂ (ಮಧ್ಯಾಹ್ನ), ಸುಸ್ತೋತ್ರಂಗೆಯೆ–ಉದಾತ್ತವಾದ ಸ್ತೋತ್ರವನ್ನು ಮಾಡಿದರೆ, ನಿಮ್ಮ-ನಿಮ್ಮನ್ನು, ಕಾಣ್ಬುದು ಅರಿದೇ–ಕಾಣುವುದು ಅಸಾಧ್ಯವೇ ? ರತ್ನಾಕರಾಧೀಶ್ವರಾ !

ಜಿನೇಂದ್ರನ ಸ್ತುತಿ, ಜಪ, ತಪ, ಧ್ಯಾನಗಳನ್ನು ತ್ರಿಸಂಧ್ಯಾ ಕಾಲಗಳಲ್ಲಿ ತಪ್ಪದೇ ಮಾಡಬೇಕು. ಸೂರ್ಯ ಮುಳುಗಿ ನಕ್ಷತ್ರಗಳು ಆಗಸದಲ್ಲಿ ಕಾಣುವಹೊತ್ತು ಸಾಯಂಸಂಧ್ಯಾಕಾಲ. ನಕ್ಷತ್ರಗಳ ಕಾಂತಿ ಕುಂದಿ ರವಿ ಉದಯಿಸುವ ಹೊತ್ತು ಪ್ರಾತಃ ಸಂಧ್ಯಾಕಾಲ ಮತ್ತು ಮಧ್ಯಾಹ್ನದ ಸಮಯ–ಈ ತ್ರಿ ಸಂಧ್ಯಾಕಾಲಗಳಲ್ಲಿ ಭಕ್ತಿಯಿಂದ ಜಿನೇಂದ್ರನ ಸ್ತುತಿಗೈದರೆ, ಆತ್ಮಸಾಕ್ಷಾತ್ಕಾರವಾಗದೇ! ಈ ಪುರುಷಾರ್ಥವನ್ನು ನಿಷ್ಠೆಯಿಂದ ಮಾಡಿದರೆ ಭಗವಂತನನ್ನು ಕಾಣಲು ಸುಲಭಸಾಧ್ಯವಾಗುವುದು.

ಸಿಂಹಂನಾಸ್ತಿ ಭಟಾಳಿ ಸಿಂಹರವನುಂ ಮಾಡಲ್ಗಜಂ ಬೆರ್ಚುಗುಂ ।
ಸಿಂಹಾಕಾರಮನಂಕಿಸಲ್ನರರ ಬೆನ್ನೊಳ್ ಹಸ್ತಿರೋಗಂ ಹರಂ ॥
ಸಿಂಹಾರೂಢನೆ ! ನಿಮ್ಮ ಮಂತ್ರದೆ ಭವಚ್ಛ್ರೀಬಿಂಬದೇಂ ಪೀಡೆಗಳ್ ।
ಸಂಹಾರಂಗಳನೆಯ್ದುವೇ ? ಸಕಲವೇಂ ? ರತ್ನಾಕರಾಧೀಶ್ವರಾ ! ॥೧೧೨॥

ಸಿಂಹಂನಾಸ್ತಿ ಭಟಾಳಿ ಸಿಂಹರವಮಂ ಮಾಡಲ್ ಗಜಂ ಬೆರ್ಚುಗುಂ,
ಸಿಂಹಾಕಾರಮಂ ಅಂಕಿಸಲ್ ನರರ ಬೆನ್ನೊಳ್ ಹಸ್ತಿರೋಗಂ ಹರಂ,
ಸಿಂಹಾರೂಢನೆ ! ನಿಮ್ಮ ಮಂತ್ರದೆ ಭವತ್ ಶ್ರೀ ಬಿಂಬದೆ, ಏಂ ಪೀಡೆಗಳ್
ಸಂಹಾರಂಗಳಂ ಎಯ್ದುವೇ ? ಸಕಲವೇಂ ? ರತ್ನಾಕರಾಧೀಶ್ವರಾ !

ಸಿಂಹಂನಾಸ್ತಿ–ಸಿಂಹವಿಲ್ಲ (ಆದರೂ), ಭಟಾಳಿ–ಸೈನಿಕರ ಸಮೂಹ, ಸಿಂಹರವಮಂ–ಸಿಂಹ ಗರ್ಜನೆಯನ್ನು, ಮಾಡಲ್-ಮಾಡಲು, ಗಜಂ ಬೆರ್ಚುಗುಂ-ಆನೆಯು ಹೆದರುವುದು, ಸಿಂಹಾಕಾರಮಂ–ಸಿಂಹದ ಆಕಾರವನ್ನು, ನರರ ಬೆನ್ನೊಳ್-ಮನುಷ್ಯರ ಬೆನ್ನಿನಲ್ಲಿ, ಅಂಕಿಸಲ್-ಬರೆದರೆ, ಹಸ್ತಿರೋಗಂ–ಆನೆರೋಗವು (ಆನೆಕಜ್ಜಿ ಎಂಬ ರೋಗವು), ಹರಂ-ನಾಶವಾಗುವುದು, ಸಿಂಹಾರೂಢನೆ–ಸಿಂಹಪೀಠದ ಮೇಲೆ ವಿರಾಜಮಾನನಾಗಿರುವ ಜಿನೇಂದ್ರನೆ !, ನಿಮ್ಮ ಮಂತ್ರದೆ–ನಿಮ್ಮ ಮಂತ್ರದಿಂದಲೂ, ಭವತ್ ಶ್ರೀ ಬಿಂಬದೆ-ನಿಮ್ಮ ಶೋಭಾಯಮಾನವಾದ ಬಿಂಬದಿಂದಲೂ, ಪೀಡೆಗಳ್-ಬಾಧೆಗಳು, ಸಂಹಾರಂಗಳಂ ಎಯ್ದುವೇ ಏಂ–ನಾಶಹೊಂದುವುದಿಲ್ಲವೇ ಏನು ?, ಸಕಲವೇಂ–ಬೇರೆ ಪ್ರತೀಕಾರಗಳೇಕೆ ? ರತ್ನಾಕರಾಧೀಶ್ವರಾ !

ಸಿಂಹವೇ ಬೇಕಿಲ್ಲ, ಯುದ್ಧದಲ್ಲಿ ಶೂರರಾದ ಭಟರು ಸಿಂಹನಾದವನ್ನು ಮಾಡಿದರೆ ಸಾಕು, ಆನೆಗಳು ಚೆಲ್ಲಾಪಿಲ್ಲಿಯಾಗಿ ಹೆದರಿ ಓಡುತ್ತವೆ. ಆನೆಕಜ್ಜಿ ಆದರೆ ರೋಗಿಯ ಬೆನ್ನಿನಮೇಲೆ ಸಿಂಹದ ಆಕಾರವನ್ನು ಬರೆದರೆ ರೋಗ ಗುಣವಾಗುತ್ತದೆ ; ಸಮವಸರಣದಲ್ಲಿ ಮಣಿಮಯೂಖ ಶಿಖಾವಿಚಿತ್ರವಾದ ಸಿಂಹಾಸನದಮೇಲೆ ವಿರಾಜಮಾನನಾಗಿರುವ ಜಿನೇಂದ್ರನನ್ನು ಭಕ್ತಿಯಿಂದ ಸ್ಮರಿಸಿದರೆ ಸಾಕು. ಸಕಲ ರೋಗರುಜಿನಗಳೂ, ಕಷ್ಟಕಾರ್ಪಣ್ಯಗಳೂ ಹೇಳಹೆಸರಿಲ್ಲದಂತೆ ಮಾಯವಾಗುತ್ತವೆ. ಇದು ಬಿಟ್ಟು ಅಲ್ಲಿ ಇಲ್ಲಿ ವ್ಯರ್ಥವಾಗಿ ಪರಿಹಾರಕ್ಕೆ ಪರದಾಡುವುದೇಕೆ ?

ಗರುಡೋಚ್ಚಾರಣಮಂತ್ರದಿಂ ವಿಷವಿನಾಶಂ ಯಕ್ಷಿಣೀ ಮಂತ್ರದಿಂ |
ದೊರೆಕೊಳ್ಗುಂ ಬಹುವಿದ್ಯೆಗಳ್ಗರುಡಯಕ್ಷರ್ ಪೂಜ್ಯಪಾದಾಬ್ಜನಂ ||
ಗುರುವೇ ನಿಮ್ಮನಲಂಪಿನಿಂ ನೆನೆವವಂಗಾವಾವ ಕಷ್ಟಂಗಳ–
ಲ್ಲಿರವಾವಾವ ಮನೋರಥಂ ಫಲಿಸದೋ ? ರತ್ನಾಕರಾಧೀಶ್ವರಾ ! ||೧೧೩||

ಗರುಡೋಚ್ಚಾರಣ ಮಂತ್ರದಿಂ ವಿಷವಿನಾಶಂ, ಯಕ್ಷಿಣೀ ಮಂತ್ರದಿಂ
ದೊರೆಕೊಳ್ಗುಂ ಬಹುವಿದ್ಯೆಗಳ್, ಗರುಡ ಯಕ್ಷರ್ ಪೂಜ್ಯಪಾದಾಬ್ಜನಂ
ಗುರುವೇ ನಿಮ್ಮಂ ಅಲಂಪಿನಿಂ ನೆನೆವವಂಗೆ, ಆವಾವ ಕಷ್ಟಂಗಳ್
ಅಲ್ಲಿರವು, ಆವಾವ ಮನೋರಥಂ ಫಲಿಸದೋ ? ರತ್ನಾಕರಾಧೀಶ್ವರಾ !

ಗರುಡಉಚ್ಚಾರಣ ಮಂತ್ರದಿಂ–ಗರುಡನನ್ನು ಜಪಿಸುವ ಮಂತ್ರದಿಂದ, ವಿಷವಿನಾಶಂ–ವಿಷವು ನಾಶವಾಗುತ್ತದೆ, ಯಕ್ಷಿಣೀ ಮಂತ್ರದಿಂ–ದೇವತಾ ಸಿದ್ಧಿಮಂತ್ರದಿಂದ, ಬಹುವಿದ್ಯೆಗಳ್–ಅನೇಕ ವಿದ್ಯೆಗಳು, ದೊರೆಕೊಳ್ಗುಂ–ಕರಗತವಾಗುತ್ತವೆ, ಗರುಡ ಯಕ್ಷರ್–ಗರುಡರೆಂಬ ದೇವತೆಗಳಿಂದಲೂ, ಯಕ್ಷದೇವತೆಗಳಿಂದಲೂ, ಪೂಜ್ಯಪಾದಾಬ್ಜನಂ – ಪೂಜಿಸಲ್ಪಡುವ ಪಾದಕಮಲಗಳುಳ್ಳ, ಗುರುವೇ–ಸ್ವಾಮಿಯೇ !, ನಿಮ್ಮಂ–ನಿಮ್ಮನ್ನು, ಅಲಂಪಿನಿಂ–ಭಕ್ತಿಯಿಂದ, ನೆನೆವವಂಗೆ – ನೆನೆಯುವವನಿಗೆ, ಆವಾವ ಕಷ್ಟಂಗಳ್–ಯಾವ ಯಾವ ಕಷ್ಟಗಳೂ, ಅಲ್ಲಿರವು–ಇರುವುದಿಲ್ಲ, ಆವಾವ–ಏನೇನು, ಮನೋರಥಂ–ಮನಸ್ಸಿನ ಅಭೀಷ್ಟಗಳು, ಫಲಿಸದೋ–ಫಲಿಸುವುದಿಲ್ಲ ? ರತ್ನಾಕರಾಧೀಶ್ವರಾ !

ಗರುಡ ಮಂತ್ರವನ್ನು ಪಠಿಸುವುದರಿಂದ ವಿಷದ ಬಾಧೆಯು ನಾಶವಾಗುತ್ತದೆ. ಯಕ್ಷಿಣೀ ಮಂತ್ರದಿಂದ ಅನೇಕ ವಿದ್ಯೆಗಳನ್ನು ಸಾಧಿಸಿಕೊಳ್ಳಬಹುದು. ಈ ಗರುಡರೂ ಮತ್ತು ಯಕ್ಷದೇವತೆಗಳೂ ಭಗವಾನ್ ಜಿನೇಂದ್ರರ ಪಾದಕಮಲಗಳಲ್ಲಿ ಸದಾ ಸೇವೆಗೆಯ್ಯುತ್ತಿರುವ ಭಕ್ತರು. ಹೀಗಿರುವಾಗ ನಾವು ಜಿನೇಂದ್ರನನ್ನು ಸದಾ ಸ್ಮರಿಸಿದರೆ ಈ ಗರುಡರೂ ಯಕ್ಷರೂ ನಮ್ಮ ಸಹಾಯಕ್ಕೆ ಧಾವಿಸುವುದಿಲ್ಲವೇ ? ಜಿನೇಂದ್ರನನ್ನು ಸ್ತೋತ್ರಮಾಡುವ, ಭಕ್ತಿಯಿಂದ ಅರ್ಚಿಸುವ ಬರುವ ಪುಣ್ಯ ನಮಗೆ ಏನನ್ನುತಾನೆ ತಂದುಕೊಡುವುದಿಲ್ಲ ! ನಮ್ಮ ಎಲ್ಲ ಸಂಕಟಗಳೂ ಪರಿಹಾರವಾಗಿ ನಮ್ಮ ಎಲ್ಲ ಮನೋರಥಗಳೂ ಈಡೇರುತ್ತವೆ.

ಗೆಡೆಗೊಂಡಾಡುವ ಲೋಕವಾರ್ತೆಗಳೊಳೆನ್ನಂಗಾಯುತಂ ತುಂಬಿದಾ |
ಕೊಡದಂತಿರ್ಪುದು ನಿಮ್ಮ ಮಂತ್ರಜಪಮಂ ಮಾಳ್ಪಾಗಳುಂ ಮಿರ್ದ ಕ–||
ಣ್ಬಿಡುನೀರ್ ಮೆಯ್ಮುರಿವಾಗುಳಿಕ್ಕೆಗಳಿವೇ ದುಷ್ಕರ್ಮಬಂಧಂ ಸಡಿ–
ಲ್ದೊಡೆದೇ ಸೋರ್ದಪುದೆಂಬುದಂ ನುಡಿಯುವೇ? ರತ್ನಾಕರಾಧೀಶ್ವರಾ! ||೧೧೪||

ಗೆಡೆಗೊಂಡಾಡುವ ಲೋಕವಾರ್ತೆಗಳೊಳ್ ಎನ್ನ ಅಂಗ ಆಯುತಂ
ತುಂಬಿದಾ ಕೊಡದಂತಿರ್ಪುದು, ನಿಮ್ಮ ಮಂತ್ರಜಪಮಂ ಮಾಳ್ಪಾಗಳುಂ
ಮಿರ್ದ ಕಣ್ಬಿಡುನೀರ್ ಮೆಯ್‌ಮುರಿವು ಆಗುಳಿಕ್ಕೆಗಳು, ಇವೇ ದುಷ್ಕರ್ಮಬಂಧಂ
ಸಡಿಲ್ದೊಡೆದು ಏ ಸೋರ್ದಪುದೆಂಬುದಂ ನುಡಿಯುವೇ ರತ್ನಾಕರಾಧೀಶ್ವರಾ!

ಗೆಡೆಗೊಂಡು–ಸ್ನೇಹವನ್ನು ಹೊಂದಿ, ಆಡುವ-ಮಾತನಾಡುವ, ಲೋಕವಾರ್ತೆಗಳೊಳ್–ಲೌಕಿಕ ವಿಚಾರಗಳಲ್ಲಿ, ಎನ್ನ ಅಂಗ ಆಯುತಂ–ನನ್ನ ಶರೀರವೆಲ್ಲ, ತುಂಬಿದಾ ಕೊಡದಂತಿರ್ಪುದು–ತುಂಬಿದ ಕೊಡದಂತಿರುತ್ತದೆ, ನಿಮ್ಮ ಮಂತ್ರಜಪಮಂ ಮಾಳ್ಪಾಗಳುಂ–ನಿಮ್ಮ ಮಂತ್ರದ ಜಪವನ್ನು ಮಾಡುವಾಗಲಾದರೋ, ಮಿರ್ದ ಕಣ್‌ಬಿಡುನೀರ್–ಕಣ್ಣಿನಿಂದ ಸುರಿಯುವ ನೀರು, ಮೆಯ್ ಮುರಿವು–ಮೆಯ್ ಮುರಿವಿಕೆಯೂ, ಆಗುಳಿಕ್ಕೆಗಳು–ಆಕಳಿಕೆಗಳೂ (ಉಂಟಾಗುವುವು), ಇವೇ–ಈ ಚಿಹ್ನೆಗಳೇ, ದುಷ್ಕರ್ಮಬಂಧಂ–ಪಾಪಕರ್ಮದ ಬಂಧ, ಸಡಿಲ್ದು ಒಡೆದು ಏ–ಸಡಿಲಿ ಒಡೆದು ಹೋಗಿಯೇ, ಸೋರ್ದಪುದು ಎಂಬುದಂ–ಸುರಿಯುತ್ತಿರುವುದೆಂಬುದನ್ನು, ನುಡಿಯುವೇ–ಹೇಳುವುದಿಲ್ಲವೇ? ರತ್ನಾಕರಾಧೀಶ್ವರಾ!

ಈ ಜಗತ್ತಿನಲ್ಲಿ ಜನಗಳು ಲೌಕಿಕ ವಿಚಾರದಲ್ಲಿ ಮಗ್ನರಾಗಿ ಆಡುವ ಮಾತುಗಳತ್ತ ನನ್ನ ಮನ ಒಲಿಯದು, ತುಂಬಿದಕೊಡ ತುಳಕದಹಾಗೆ ನಾನು ಈ ವಿಷಯಗಳಲ್ಲಿ ತಲೆಹಾಕುವುದಿಲ್ಲ. ನಿಮ್ಮನ್ನು ಸ್ತೋತ್ರಮಾಡುವಾಗ, ಪಂಚಪರಮೇಷ್ಠಿಗಳ ಜಪಮಾಡುವಾಗ ಆನಂದ ಉಕ್ಕಿಬಂದು ಕಣ್ಣೀರು ಕೋಡಿ ಹರಿಯುವುದು, ಮೆಯ್ ಮುರಿವಿಕೆಯೂ ಆಕಳಿಕೆಗಳೂ ಉಂಟಾಗುವುವು. ಮೈಮೇಲಿದ್ದ ಭಾರ ಕಡಿಮೆಯಾದಂತಾಗಿ ಹೃದಯ ಮತ್ತು ಮನಸ್ಸುಗಳು ತಂಪಾಗುವುವು. ಜಿನೇಂದ್ರನ ಸಾನ್ನಿಧ್ಯ ಪಾಪಕರ್ಮಗಳ ನಾಶಕ್ಕೆ ಕಾರಣವಾಗುತ್ತದೆ. ಈ ಕಣ್ಣೀರು ಹರಿವಿಕೆಯು ಪಾಪಕರ್ಮದ ಬಂಧನ ಸಡಿಲಿ ಜಾರುತ್ತಿದೆ ಎಂಬುದನ್ನು ಸೂಚಿಸುವುದಿಲ್ಲವೇ! ಜಿನಬಿಂಬ ದರ್ಶನವಾದಕೂಡಲೇ ಕಣ್ಣೀರು ಮಿಡಿಯುವವನೇ ಸಮ್ಯಕ್ತ್ವಜೀವಿ.

ವಣಿಜಂ ಪಂಚಸರಂಗಳಂ ಪಿಡಿದು ಮುಕ್ತಾಜಾಲಮಂ ತಾಂ ಪರೀ-
ಕ್ಷಣೆ ಗೆಯ್ವಂತಿರೆ ಪಂಚಮಂತ್ರದೊಳೊಡಂಬಟ್ಟಕ್ಷರವ್ರಾತಮಂ ॥
ಪಣೆಯೊಳ್ಜಾನಿಸಿ ಚರ್ಮದೃಷ್ಟಿಮುಗಿಯಲ್ಸುಜ್ಞಾನಸದ್ದೃಷ್ಟಿಯಿಂ-।
ದೆಣಿಸುತ್ತಾಗಳೆ ಕಾಣ್ಬನೇ ರಿಸಿಯಲಾ ? ರತ್ನಾಕರಾಧೀಶ್ವರಾ ! ॥೧೧೫॥

ವಣಿಜಂ ಪಂಚಸರಂಗಳಂ ಪಿಡಿದು ಮುಕ್ತಾಜಾಲಮಂ ತಾಂ
ಪರೀಕ್ಷಣೆಗೆಯ್ವಂತಿರೆ, ಪಂಚಮಂತ್ರದೊಳ್ ಒಡಂಬಟ್ಟ ಅಕ್ಷರ
ವ್ರಾತಮಂ ಪಣೆಯೊಳ್ ಜಾನಿಸಿ, ಚರ್ಮದೃಷ್ಟಿಮುಗಿಯಲ್ ಸುಜ್ಞಾನ
ದೃಷ್ಟಿಯಿಂದ ಎಣಿಸುತ್ತ ಆಗಳೆ ಕಾಣ್ಬನೇ ರಿಸಿಯಲಾ ? ರತ್ನಾಕರಾಧೀಶ್ವರಾ !

ವಣಿಜಂ-ವರ್ತಕನು, ಪಂಚಸರಂಗಳಂ ಪಿಡಿದು-(ಮುತ್ತಿನ) ಐದು ಸರಗಳನ್ನು ಹಿಡಿದು, ಮುಕ್ತಾಜಾಲಮಂ-ಮುತ್ತುಗಳ ಸಮೂಹವನ್ನು, ತಾಂ-ತಾನು, ಪರೀಕ್ಷಣೆ ಗೆಯ್ವಂತಿರೆ-ಪರೀಕ್ಷೆ ಮಾಡುವಂತೆ, ಪಂಚ ಮಂತ್ರದೊಳ್-ಐದು ಮಂತ್ರಗಳಲ್ಲಿ, ಒಡಂಬಟ್ಟ-ಸಂಬಂಧಿಸಿರುವ, ಅಕ್ಷರ ವ್ರಾತಮಂ-ಅಕ್ಷರಗಳ ಸಮೂಹವನ್ನು, ಪಣೆಯೊಳ್-ಹಣೆಯಲ್ಲಿ, ಜಾನಿಸಿ-ಧ್ಯಾನಿಸಿ, ಚರ್ಮದೃಷ್ಟಿ ಮುಗಿಯಲ್-ಚರ್ಮಚಕ್ಷು ನೋಡಿಯಾದಮೇಲೆ, ಸುಜ್ಞಾನ ದೃಷ್ಟಿಯಿಂದ-ಶ್ರೇಷ್ಠವಾದ ಜ್ಞಾನವೆಂಬ ಒಳಕಣ್ಣಿನಿಂದ, ಎಣಿಸುತ್ತ-ಆ ಅಕ್ಷರಗಳನ್ನು ಎಣಿಸುತ್ತ, ಆಗಳೆ-ಆ ಸಮಯದಲ್ಲೇ, ಕಾಣ್ಬನೇ-ಪರಂಜ್ಯೋತಿ ಸ್ವರೂಪವನ್ನು ನೋಡುವವನೇ, ರಿಸಿಯಲಾ-ಮುನಿಯಲ್ಲವೇ ? ರತ್ನಾಕರಾಧೀಶ್ವರಾ !

ವರ್ತಕನು ಮುತ್ತಿನ ಐದು ಸರಗಳನ್ನು ಹಿಡಿದು ಅವುಗಳಲ್ಲಿರುವ ಮುತ್ತುಗಳ ಸಮೂಹವನ್ನು ಸೂಕ್ಷ್ಮವಾಗಿ ಪರೀಕ್ಷಿಸುವಂತೆ, ನಾವು ಪಂಚನಮಸ್ಕಾರ ಮಂತ್ರಗಳನ್ನು ಭಕ್ತಿಯಿಂದ ಪಠಿಸುತ್ತ, ಅವುಗಳಲ್ಲಿರುವ ಅಕ್ಷರಗಳ ಸಮೂಹವನ್ನು ಸ್ಫುಟವಾಗಿ ಉಚ್ಚರಿಸುತ್ತ, ಅವುಗಳನ್ನು ಹಣೆಯಲ್ಲಿ ಧರಿಸಿ ಈ ಬಹಿರಂಗ ಚರ್ಮದ ಕಣ್ಣುಗಳಿಂದ ನೋಡುತ್ತ ಧ್ಯಾನಿಸಬೇಕು. ಇದಾದಮೇಲೆ ಆ ಪಂಚ ನಮಸ್ಕಾರದ ಅಕ್ಷರಗಳನ್ನು ಮೆಲುಕುಹಾಕುತ್ತ ಮನನಮಾಡಿ ನಮ್ಮ ಜ್ಞಾನನೇತ್ರದಿಂದ ಆ ಅಕ್ಷರಗಳನ್ನು ಗಮನಿಸುತ್ತ, ಅದರ ಪರಿಭಾವನೆಯನ್ನು ಮಾಡುತ್ತಿರಬೇಕು. ಹಾಗೆ ಮಾಡುವವರೇ ಸರ್ವಸಂಗ ಪರಿತ್ಯಾಗಿಗಳಾದ ಮುನಿಗಳಲ್ಲವೇ !

ಮೂವತ್ತೈದು ಶುಭಾಕ್ಷರಂ ತುದಿಗೆ ಬಂದೋಂಕಾರವೊಂದಾದಿಗಿಂ-
ತೀ ವರ್ಣೋಕ್ತದೆ ಮೂಲಮಂತ್ರವದು ತಾನೇಳಂಗವಾಯ್ತಾದೊಡೆ-॥
ಲ್ಲಾ ವೊಂದೇ ಅಸಿಆ ಉಸಾಯೆನಲಿದೇ ಪಂಚಾಕ್ಷರಂ ಭಾವಿಸಲ್ ।
ಕೈವಲ್ಯಾಂಗನೆ ಕೂಡಿ ಕೆಯ್ವಿಡಿಯಳೇ ? ರತ್ನಾಕರಾಧೀಶ್ವರಾ ! ॥೧೧೬॥

ಮೂವತ್ತೈದು ಶುಭಾಕ್ಷರಂ ತುದಿಗೆ ಬಂದು ಓಂಕಾರಂ ಒಂದು ಆದಿಗೆ,
ಇಂತು ಈ ವರ್ಣೋಕ್ತದೆ ಮೂಲಮಂತ್ರವು ಅದು ತಾನ್ ಏಳ್ ಅಂಗವಾಯ್ತು,
ಆದೊಡೆ ಎಲ್ಲಾ ಒಂದೇ ಅಸಿಆಉಸ ಯೆನಲ್ ಇದೇ ಪಂಚಾಕ್ಷರಂ, ಭಾವಿಸಲ್
ಕೈವಲ್ಯಾಂಗನೆ ಕೂಡಿ ಕೆಯ್ವಿಡಿಯಳೇ ? ರತ್ನಾಕರಾಧೀಶ್ವರಾ !

ಮೂವತ್ತೈದು ಶುಭಾಕ್ಷರಂ ತುದಿಗೆ ಬಂದು-ಮಂಗಳಕರವಾದ ಮೂವತ್ತೈದು ಅಕ್ಷರಗಳು ಕೊನೆಗೆ ಬಂದು, ಓಂಕಾರಂ ಒಂದು ಆದಿಗೆ-ಓಂಕಾರವೊಂದು ಮೊದಲು ಬರಬೇಕು, ಇಂತು ಈ ವರ್ಣ ಉಕ್ತದೆ ಮೂಲಮಂತ್ರವು-ಈ ರೀತಿಯಾಗಿ ಈ ಅಕ್ಷರಗಳಿಂದ ಹೇಳಲ್ಪಟ್ಟುದು ಮೂಲ ಮಂತ್ರವು, ಅದು ತಾನ್ ಏಳ್ ಅಂಗವಾಯ್ತು-ಈ ಮೂಲಮಂತ್ರವು ತಾನು ಏಳು ಭೇದವಾಯಿತು, ಆದೊಡೆ ಎಲ್ಲಾ ಒಂದೇ - ಆದರೆ ಅವೆಲ್ಲಾ ಒಂದೇ ಅರ್ಥವು, ಅಸಿಆಉಸಾ ಯೆನಲ್ - ಅಸಿಆಉಸಾ ಎಂದು ಹೇಳಿದರೆ, ಇದೇ ಪಂಚಾಕ್ಷರಂ-ಇದೇ ಪಂಚಾಕ್ಷರವು, ಭಾವಿಸಲ್-ಈ ಪಂಚ ನಮಸ್ಕಾರವನ್ನು ಭಾವಿಸಿದರೆ, ಕೈವಲ್ಯಾಂಗನೆ ಕೂಡಿ-ಮೋಕ್ಷ ಲಕ್ಷ್ಮಿಯು ಒಲಿದು, ಕೆಯ್ವಿಡಿಯಳೇ- ಕೈಹಿಡಿಯುವುದಿಲ್ಲವೇ ! ರತ್ನಾಕರಾಧೀಶ್ವರಾ !

ಪಂಚ ನಮಸ್ಕಾರಗಳಲ್ಲಿ ಒಟ್ಟು ಮೂವತ್ತೈದು ಅಕ್ಷರಗಳಿವೆ. ಈ ಅಕ್ಷರಗಳ ಮೊದಲಲ್ಲಿ ಓಂಕಾರವೆಂಬ ಒಂದು ಅಕ್ಷರವಿದೆ. ಹೀಗೆ ಒಟ್ಟು 36 ಅಕ್ಷರಗಳಿರುವ ಮಂತ್ರವೇ ಮೂಲಮಂತ್ರ, ಓಂ ಣಮೋ ಅರಹಂತಾಣಂ, ಣಮೋ ಸಿದ್ಧಾಣಂ, ಣಮೋ ಆಯಿರಿಯಾಣಂ, ಣಮೋ ಉವಜ್ಝಾಯಾಣಂ, ಣಮೋ ಲೋಯೇಸವ್ವಸಾಹೂಣಂ. ಈ ಮೂಲಮಂತ್ರವನ್ನು ಸಂಕ್ಷಿಪ್ತವಾಗಿಯೂ ಉಚ್ಚರಿಸಬಹುದು. ಅದನ್ನು ಏಳು ವಿಧವಾಗಿ ಹೇಳಬಹುದು. ಅವುಗಳ ಅರ್ಥವೆಲ್ಲಾ ಒಂದೇ ಆಗಿದೆ. [1. ಓಂ ಣಮೋ ಅರಹಂತಾಣಂ, ಣಮೋ ಸಿದ್ಧಾಣಂ, ಣಮೋ ಆಯಿರಿಯಾಣಂ, ಣಮೋ ಉವಜ್ಝಾಯಾಣಂ, ಣಮೋ ಲೋಏಸವ್ವಸಾಹೂಣಂ, 2. ಅರಹಂತ ಸಿದ್ಧ ಆಇರಿಯಾ ಉವಜ್ಝಾಯಾ ಸಾಹು 3. ಅರಹಂತ ಸಿಸಾ 4. ಅಸಿಆಉಸಾ 5. ಅಸಿಸಾಹು 6. ಆಸಾ 7. ಓಂ], ಒಟ್ಟಿನಲ್ಲಿ ಅಸಿಆಉಸಾ ಎಂಬ ಐದು ಅಕ್ಷರಗಳ ಮಂತ್ರವೇ ಪಂಚಾಕ್ಷರವು. ಇದನ್ನು ಶ್ರದ್ಧಾಭಕ್ತಿಗಳಿಂದ ಪರಿಭಾವಿಸಿದರೆ ಮುಕ್ತಿಸಾಮ್ರಾಜ್ಯವನ್ನು ಪಡೆಯುವುದರಲ್ಲಿ ಸಂದೇಹವಿಲ್ಲ.

ನಳಿನೀನಾಳಕೆ ಮೂಲದಿಂ ತುದಿವರಂ ಸಂಪೂರ್ಣದಿಂ ಸ್ವಚ್ಛದಿಂ
ದೊಳಗೆಂತಿರ್ಪುದು ತಂತುವಂತೆ ನರರ್ಗಂ ಕೆಂಬಜ್ಜೆಯಿಂ ನೆತ್ತಿಮು–||
ಟ್ಟಳಿತಂ ತಪ್ಪದೆ ಮೂರ್ತಿ ತುಂಬಿ ಪಳುಕಿಂ ಗೆಯ್ಸಿರ್ದ ನಿಮ್ಮೊಂದು ನಿ–
ರ್ಮಳ ಬಿಂಬೋಪಮನಾತ್ಮನಿರ್ದಪನಲಾ ರತ್ನಾಕರಾಧೀಶ್ವರಾ ! ||೧೧೭||

ನಳಿನೀನಾಳಕೆ ಮೂಲದಿಂ ತುದಿವರಂ ಸಂಪೂರ್ಣದಿಂ ಸ್ವಚ್ಛದಿಂದ,
ಒಳಗೆ ಎಂತಿರ್ಪುದು ತಂತುವು, ಅಂತೆ ನರರ್ಗಂ ಕೆಂಬಜ್ಜೆಯಿಂ
ನೆತ್ತಿಮುಟ್ಟಳಿತಂ ತಪ್ಪದೆ ಮೂರ್ತಿ ತುಂಬಿ, ಪಳುಕಿಂ ಗೆಯ್ಸಿರ್ದ ನಿಮ್ಮೊಂದು
ನಿರ್ಮಳ ಬಿಂಬೋಪಮಂ, ಆತ್ಮನಿರ್ದಪನಲಾ ರತ್ನಾಕರಾಧೀಶ್ವರಾ !

ನಳಿನೀನಾಳಕೆ–ತಾವರೆಯದಂಟಿಗೆ, ಮೂಲದಿಂ ತುದಿವರಂ–ಬುಡದಿಂದ ತುದಿಯವರೆಗೂ, ಸಂಪೂರ್ಣದಿಂ–ಸಂಪೂರ್ಣವಾಗಿ, ಸ್ವಚ್ಛದಿಂದ–ನಿರ್ಮಲತೆಯಿಂದ, ಒಳಗೆ ಎಂತಿರ್ಪುದು ತಂತುವು–ಒಳಗೆ ದಾರವು ಹೇಗೆ ಇರುವುದೋ, ಅಂತೆ–ಹಾಗೆಯೇ, ನರರ್ಗಂ–ಮನುಷ್ಯರಿಗೆ, ಕೆಂಬಜ್ಜೆಯಿಂ–ಅಂಗಾಲಿನಿಂದ, ನೆತ್ತಿಮುಟ್ಟಳಿತಂ–ತಲೆಯುವರಿಗೂ, ತಪ್ಪದೆ–ತಪ್ಪದಂತೆ, ಮೂರ್ತಿತುಂಬಿ–ಆಕಾರವು ತುಂಬಿ, ಪಳುಕಿಂ ಗೆಯ್ಸಿರ್ದ–ಸ್ಫಟಿಕದಿಂದ ಮಾಡಿದ, ನಿಮ್ಮೊಂದು–ನಿಮ್ಮ ಒಂದು, ನಿರ್ಮಳ ಬಿಂಬೋಪಮಂ – ನಿರ್ಮಲವಾದ ಬಿಂಬಕ್ಕೆ ಹೋಲುವಂತೆ, ಆತ್ಮನಿರ್ದಪನಲಾ – ಆತ್ಮನಿರುವನಲ್ಲವೇ ? ರತ್ನಾಕರಾಧೀಶ್ವರಾ !

ತಾವರೆದಂಟಿನ ಸ್ವಚ್ಛವಾದ ಎಳೆಗಳು ಬುಡದಿಂದ ತುದಿಯುವರೆಗೂ ಸಂಪೂರ್ಣವಾಗಿ ಹೊಂದಿಕೊಂಡಿರುವಂತೆ, ಮನುಷ್ಯನ ದೇಹದಲ್ಲಿ ಅಂಗುಷ್ಠದಿಂದ ನೆತ್ತಿಯವರಿಗೂ ಸರ್ವಾಂಗಸಂಪೂರ್ಣನಾಗಿ ಆತ್ಮ ತುಂಬಿರುವನು. ಪರಮಪರಂಜ್ಯೋತಿಸ್ವರೂಪನಾದ ಆತ್ಮ ಸ್ಫಟಿಕದ ನಿರ್ಮಲ ಜಿನಬಿಂಬದಂತೆ ಶರೀರದಲ್ಲಿ ಬೆಳಗುತ್ತಿರುವನು. ಶರೀರವು ಯಾವ ಆಕೃತಿಯಲ್ಲಿರುವುದೋ ಹಾಗೆಯೇ ಆತ್ಮಪ್ರದೇಶವೂ ಇರುವುದು.

ನರರಾತ್ಮಂ ಸ್ಫಟಿಕೋಪಮಂ ಗಡಮದೇನಾಕಾರಮುಂ ಸ್ವಚ್ಛಮಾ-
ಗಿರದೆಂಬರ್ಮಿಗೆ ಕೇಳಿಮಾ ಸ್ಫಟಿಕಮೆಂತೈವಣ್ಣಮುಂ ಸೋಂಕೆ ಯಾ-||
ಪರಿಯೊಳ್ತೋರುಗುಮಂತೆ ಮೆಯ್ಯ ತೊವಲುಂ ಕರ್ಪಾಗೆ ಕೆಂಪಾಗೆ ತಾಂ |
ಕರಿಯಂ ಕೆಂಪನೆನಿಪ್ಪನೆಂದರುಪಿದೈ ರತ್ನಾಕರಾಧೀಶ್ವರಾ ! ||೧೧೮||

ನರರಾತ್ಮಂ ಸ್ಫಟಿಕೋಪಮಂ ಗಡಂ, ಅದೇಂ ಆಕಾರಮುಂ ಸ್ವಚ್ಛಮಾಗಿರದು
ಎಂಬರ್ ಮಿಗೆ ಕೇಳಿಂ, ಆ ಸ್ಫಟಿಕಂ ಎಂತು ಐವಣ್ಣಮುಂ ಸೋಂಕೆ
ಆ ಪರಿಯೊಳ್ ತೋರುಗುಂ, ಅಂತೆ ಮೆಯ್ಯ ತೊವಲುಂ ಕರ್ಪಾಗೆ ಕೆಂಪಾಗೆ ತಾಂ
ಕರಿಯಂ ಕೆಂಪನ್ ಎನಿಪ್ಪನ್ ಎಂದರುಪಿದೈ ರತ್ನಾಕರಾಧೀಶ್ವರಾ !

" ನರರ ಆತ್ಮಂ-ಮನುಷ್ಯರ ಆತ್ಮನು, ಸ್ಫಟಿಕ ಉಪಮಂ ಗಡಂ-ಸ್ಫಟಿಕಕ್ಕೆ ಹೋಲುತ್ತಾನಲ್ಲವೇ? ಅದೇಂ-ಅದೇನು, ಆಕಾರಮುಂ-ಆಕಾರವು, ಸ್ವಚ್ಛಮಾಗಿರದು-ನಿರ್ಮಲವಾಗಿರುವುದಿಲ್ಲ " ಎಂಬರ್ ಮಿಗೆ ಕೇಳಿಂ-ಎಂಬುವವರು ಸರಿಯಾಗಿ ಕೇಳಿ, ಆ ಸ್ಫಟಿಕಂ-ಆ ಸ್ಫಟಿಕಕ್ಕೆ, ಎಂತು ಐವಣ್ಣಮುಂ ಸೋಂಕೆ-ಹೇಗೆ ಐದು ಬಣ್ಣವು ಸೋಕಲು, ಆ ಪರಿಯೊಳ್-ಆಯಾ ಬಣ್ಣದ ರೀತಿಯಲ್ಲಿ, ತೋರುಗುಂ-ತೋರುವುದು, ಅಂತೆ-ಹಾಗೆ, ಮೆಯ್ಯ ತೊವಲುಂ-ಶರೀರದ ಚರ್ಮವು, ಕರ್ಪಾಗೆ-ಕಪ್ಪಾಗಿರಲು, ಕೆಂಪಾಗೆ-ಕೆಂಪಾಗಿರಲು, ತಾಂ-ತಾನು, ಕರಿಯಂ-ಕಪ್ಪಾಗಿರುವವನು, ಕೆಂಪನ್-ಕೆಂಪಾಗಿರುವವನು, ಎನಿಪ್ಪನ್ - ಎನಿಸಿಕೊಳ್ಳುತ್ತಾನೆ, ಎಂದು ಅರುಪಿದೈ - ಎಂದು ತಿಳಿಸಿದೆ. ರತ್ನಾಕರಾಧೀಶ್ವರಾ !

" ಮನುಷ್ಯನ ಶರೀರದಲ್ಲಿ ತುಂಬಿರುವ ಆತ್ಮನು ಸ್ಫಟಿಕಕ್ಕೆ ಹೋಲುತ್ತಾನೆ. ಆದರೆ ಆ ಶರೀರದ ಆಕಾರ ಮತ್ತು ಬಣ್ಣ ನಿರ್ಮಲವಾಗಿರುವುದಿಲ್ಲವಲ್ಲ " ಎಂದು ಕೆಲವರು ಪ್ರಶ್ನೆ ಹಾಕುತ್ತಾರೆ. ಅಂಥ ವರಿಗೆ ಉತ್ತರ ಹೀಗಿದೆ. ಸ್ಫಟಿಕದ ಬಿಂಬಕ್ಕೆ ಐದು ತರಹದ ಬಣ್ಣಗಳು (ಕೃಷ್ಣ, ನೀಲ, ಕಾಪೋತ, ಪೀತ, ಪದ್ಮ, ಶುಕ್ಲ) ಸಂಬಂಧಿಸಿದರೆ, ಆ ಬಿಂಬವೂ ಸಹ ಅದೇ ಬಣ್ಣದಲ್ಲಿ ಕಂಗೊಳಿಸುತ್ತದೆ. ಹಾಗೆ ಈ ಶರೀರದ ಚರ್ಮವು ಕಪ್ಪಾಗಿರಲು, ಅವನು (ಆತ್ಮನು) ಕಪ್ಪನೆಯವನು ಎನಿಸಿಕೊಳ್ಳು ತ್ತಾನೆ. ಚರ್ಮವು ಕೆಂಪಾಗಿರಲು ಅವನು ಕೆಂಪನೆಯವನು ಎನಿಸಿಕೊಳ್ಳುತ್ತಾನೆ ಎಂದು ಆಗಮಗಳು ತಿಳಿಸುತ್ತವೆ. [ಇಲ್ಲಿಯ ವಿವರಣೆ ತುಂಬಾ ಸ್ಥೂಲವಾಯಿತು. ಎಲ್ಲ ಸಂದರ್ಭದಲ್ಲೂ ದೇಹದ ಬಣ್ಣವೇ ಜೀವಕ್ಕಿರುವುದಿಲ್ಲ. ಜೀವದ ಬಣ್ಣ ಸಂಸಾರಕ್ಕೆ ಅನುಗುಣವಾಗಿ ರೂಪಗೊಳ್ಳುವುದು.]

ಸ್ವಚ್ಛಾಕಾರದ ಜೀವನೀ ತನುವಿನೊಳ್ತಾನೇಕೆ ಸಿಲ್ಕಿರ್ದಪಂ ? ।
ಸ್ವೇಚ್ಛಾಮಾರ್ಗದೆ ತಾನುಪಾರ್ಜಿಸಿದ ಕರ್ಮಾಧೀನದಿಂ ಕರ್ಮಮುಂ ॥
ತುಚ್ಛಂ ಕ್ರೋಧದೆ ಮಾನಮಾಯೆಗಳಿನಾ ಲೋಭಾರ್ಥದಿಂ ಬಂದುದೇ ।
ಮ್ಲೇಚ್ಛಾಕಾರ ಕಷಾಯಮುಂ ಸುಡೆ ಸುಖಂ ರತ್ನಾಕರಾಧೀಶ್ವರಾ ! ॥೧೧೯॥

ಸ್ವಚ್ಛಾಕಾರದ ಜೀವನ್ ಈ ತನುವಿನೊಳ್ ತಾನೇಕೆ ಸಿಲ್ಕಿರ್ದಪಂ,
ಸ್ವೇಚ್ಛಾಮಾರ್ಗದೆ ತಾನ್ ಉಪಾರ್ಜಿಸಿದ ಕರ್ಮಾಧೀನದಿಂ,
ಕರ್ಮಮುಂ ತುಚ್ಛಂ, ಕ್ರೋಧದೆ ಮಾನ ಮಾಯೆಗಳಿಂ ಆ ಲೋಭಾರ್ಥದಿಂ
ಬಂದುದೇ, ಮ್ಲೇಚ್ಛಾಕಾರ ಕಷಾಯಮಂ ಸುಡೆ ಸುಖಂ ರತ್ನಾಕರಾಧೀಶ್ವರಾ !

ಸ್ವಚ್ಛಾಕಾರದ ಜೀವನ್–ನಿರ್ಮಲವಾದ ಆಕಾರವುಳ್ಳ ಜೀವಾತ್ಮನು, ಈ ತನುವಿನೊಳ್–ಈ ಶರೀರದಲ್ಲಿ, ತಾನೇಕೆ ಸಿಲ್ಕಿರ್ದಪಂ–ತಾನೇಕೆ ಸಿಕ್ಕಿಹಾಕಿಕೊಂಡಿದ್ದಾನೆ ?, ಸ್ವೇಚ್ಛಾಮಾರ್ಗದೆ–ಮನಸ್ಸಿಗೆ ಬಂದ ಮಾರ್ಗದಲ್ಲಿ, ತಾನ್– ತಾನು, ಉಪಾರ್ಜಿಸಿದ–ಸಂಪಾದಿಸಿದ, ಕರ್ಮಾಧೀನದಿಂ–ಕರ್ಮಕ್ಕೆ ಅಧೀನನಾಗಿ, ಕರ್ಮಮುಂ ತುಚ್ಛಂ–ಕರ್ಮವೂ ನೀಚವಾದುದು, ಕ್ರೋಧದೆ–ಕೋಪದಿಂದ, ಮಾನ ಮಾಯೆಗಳಿಂ–ಅಹಂಕಾರ ಕಪಟಗಳಿಂದಲೂ, ಆ ಲೋಭಾರ್ಥದಿಂ–ಆ ಅತ್ಯಾಸೆಯ ಗುರಿಯಿಂದಲೂ, ಬಂದುದೇ-ಪ್ರಾಪ್ತವಾದುದೇ ಆಗಿದೆ, ಮ್ಲೇಚ್ಛಾಕಾರ ಕಷಾಯಮಂ-ಅನಾಗರೀಕರ ಆಕಾರದಂತೆ ಇರುವ ಈ ಕಷಾಯಗಳನ್ನು. ಸುಡೆ–ಸುಟ್ಟರೆ, ಸುಖಂ–ಸುಖವುಂಟಾಗುವುದು, ರತ್ನಾಕರಾಧೀಶ್ವರಾ !

ನಿರ್ಮಲವಾದ ಆತ್ಮನು ಈ ಶರೀರದಲ್ಲಿ ಬಂದು ಏತಕ್ಕೆ ಸಿಕ್ಕಿ ನರಳುತ್ತಿದ್ದಾನೆ ? ಏಕೆಂದರೆ ಮನಬಂದರೀತಿ ತಾನು ನಡೆದು ಕರ್ಮವನ್ನು ಅಂಟಿಸಿಕೊಂಡಿರುವನು. ಜನ್ಮಾಂತರಗಳಲ್ಲಿ ಈ ರೀತಿ ಸಂಪಾದಿಸಿದ ಕರ್ಮಕ್ಕೆ ಅಧೀನನಾಗಿ, ಆ ಕರ್ಮ ಆಡಿಸಿದ ರೀತಿ ಆಡುತ್ತಾನೆ. ಕರ್ಮವೆಂಬುದು ಅತ್ಯಂತ ನೀಚವಾದದ್ದು, ಆತ್ಮಕ್ಕೆ ಅಹಿತವಾದದ್ದು. ಕ್ರೋಧ, ಮಾನ, ಮಾಯ, ಲೋಭಗಳೆಂಬ ಈ ಕಷಾಯಗಳಿಂದಲೇ ಜೀವಾತ್ಮನು ಕರ್ಮಬಂಧನ ಮಾಡಿಕೊಂಡು ಚತುರ್ಗತಿಗಳಲ್ಲಿ ತಿರ್ರನೆ ತಿರುಗಿ ಬಳಲಿ ಬೇಸತ್ತು ಬೆಂಡಾಗಿಹೋಗಿರುವನು. ಈ ದುಷ್ಟವಾದ ಕರ್ಮವನ್ನು ಕಿತ್ತೊಗೆದು ನಿರ್ಮಲಾಂತಃಕರಣನಾದರೆ ಸುಖವಾಗುವುದಲ್ಲವೇ ? ಕರ್ಮನಿರ್ಜರೆಯಿಂದಲೇ ಶಾಶ್ವತ ಸುಖಪ್ರಾಪ್ತಿ, ಮೋಕ್ಷ ಸಾಮ್ರಾಜ್ಯದ ಒಡೆತನವಲ್ಲವೇ !

ನೆಲದಿಂ ಮೇಲೊಗೆದೈದು ಸಾಸಿರಧನುಃ ಪ್ರಾಮಾಣ್ಯದೊಳ್ಕಾಂಚನೋ-
ಜ್ಜ್ವಲರತ್ನಂಗಳಿನಾದ ಮಂಡಪದ ಮಧ್ಯಸ್ಥಾನದೊಳ್ಸಿಂಹದಾ ॥
ತಲೆಯೊಳ್ತೋರ್ಪರುಣಾಬ್ಜಕರ್ಣಿಕೆಗೆ ಚಾತುಷ್ಕಾಂಗುಲೋದ್ದೇಶದೊ-
ಳ್ಗೆಲವಾಂತಿರ್ದೆ ರವೀಂದು ಕೋಟಿಕಿರಣಾ ! ರತ್ನಾಕರಾಧೀಶ್ವರಾ! ॥೧೨೦॥

ನೆಲದಿಂ ಮೇಲೊಗೆದು ಐದು ಸಾಸಿರಧನುಃ ಪ್ರಾಮಾಣ್ಯದೊಳ್,
ಕಾಂಚನೋಜ್ಜ್ವಲರತ್ನಂಗಳಿಂ ಆದ ಮಂಡಪದ ಮಧ್ಯಸ್ಥಾನದೊಳ್,
ಸಿಂಹದಾತಲೆಯೊಳ್ ತೋರ್ಪ ಅರುಣಾಬ್ಜಕರ್ಣಿಕೆಗೆ, ಚಾತುಷ್ಕಾಂಗುಲ
ಉತ್ ದೇಶದೊಳ್ ಗೆಲವಾಂತು ಇರ್ದೆ, ರವೀಂದುಕೋಟಿಕಿರಣಾ, ರತ್ನಾಕರಾಧೀಶ್ವರಾ!

ನೆಲದಿಂ ಮೇಲೊಗೆದು-ನೆಲದಿಂದ ಮೇಲಕ್ಕೆಹೋಗಿ, ಐದು ಸಾಸಿರ ಧನುಃ ಪ್ರಾಮಾಣ್ಯದೊಳ್-ಐದು ಸಾವಿರ ಧನುಸ್ಸಿನ ಪ್ರಮಾಣದಲ್ಲಿ, ಕಾಂಚನ ಉಜ್ಜ್ವಲ ರತ್ನಂಗಳಿಂ-ಬಂಗಾರದ ಹಾಗೂ ಪ್ರಕಾಶಮಾನವಾದ ರತ್ನಗಳಿಂದ, ಆದ-ನಿರ್ಮಿತವಾದ, ಮಂಡಪದ-ಲಕ್ಷ್ಮೀಮಂಟಪದ, ಮಧ್ಯಸ್ಥಾನದೊಳ್-ಮಧ್ಯಭಾಗದಲ್ಲಿ, ಸಿಂಹದಾತಲೆಯೊಳ್ ತೋರ್ಪ-ಸಿಂಹದ ತಲೆಯಮೇಲೆ ಕಾಣುವ, ಅರುಣ ಅಬ್ಜಕರ್ಣಿಕೆಗೆ-ಕೆಂದಾವರೆಯ ಕರ್ಣಿಕೆಗೆ, ಚಾತುಷ್ಕಾಂಗುಲ-ನಾಲ್ಕು ಅಂಗುಲದ, ಉತ್ ದೇಶದೊಳ್-ಉನ್ನತ ಪ್ರದೇಶದಲ್ಲಿ, ಗೆಲವು ಆಂತು ಇರ್ದೆ-ಜಯವನ್ನು ಹೊಂದಿದ್ದೆ, ರವೀಂದು ಕೋಟಿ ಕಿರಣಾ-ಕೋಟಿ ಸೂರ್ಯಚಂದ್ರ ಪ್ರಕಾಶವುಳ್ಳ ಸ್ವಾಮಿಯೇ ! ರತ್ನಾಕರಾಧೀಶ್ವರಾ!

ತೀರ್ಥಂಕರ ಪದವಿಗೇರುವ ಜೀತನಕ್ಕೆ ಕೇವಲಜ್ಞಾನವಾದ ಕೂಡಲೇ ಸಮವಸರಣ ಮಂಟಪದಲ್ಲಿ ಜಿನೇಂದ್ರನಾಗಿ ರಾರಾಜಿಸುವನು. ಸಮವಸರಣದ ಸಿರಿಯನ್ನು ಬಣ್ಣಿಸಲು ಸಾಧ್ಯವೇ ! ಜಿನೇಂದ್ರನ ಬಹಿರಂಗ ಸಿರಿಯದು. ಭೂಮಿಯಿಂದ ಐದುಸಾವಿರ ಬಿಲ್ಲಿನೆತ್ತರದಲ್ಲಿ ಈ ಸಮವಸರಣದ ರಚನೆಯಾಗುವುದು. ಆ ಸಮವಸರಣದ ಮಧ್ಯೆ ಬಂಗಾರ, ಮುತ್ತು, ರತ್ನಗಳಿಂದ ನಿರ್ಮಿತವಾದ ಲಕ್ಷ್ಮೀಮಂಟಪ ಕಂಗೊಳಿಸುವುದು. ಆ ಮಂಟಪದಲ್ಲಿ ದಿಕ್ಕಿಗೊಂದರಂತೆ ಕುಳಿತಿರುವ ಬಂಗಾರದ ಸಿಂಹಗಳ ತಲೆಯಮೇಲೆ ಕಾಣುವ ಕೆಂದಾವರೆಯ ಕರ್ಣಿಕೆಗೆ ಅಂಟಿಯೂ ಅಂಟದಂತೆ ನಾಲ್ಕು ಬೆರಳು ಸೋಕದೆ ಭಗವಂತ ವಿರಾಜಮಾನನಾಗಿರುತ್ತಾನೆ. ಪರಮ ಪರಂಜ್ಯೋತಿ ಕೋಟಿ ಚಂದ್ರಾದಿತ್ಯ ಕಿರಣಸುಜ್ಞಾನ ಪ್ರಕಾಶನಾಗಿ ಭವ್ಯ ಜೀವರುಗಳಿಗೆ ದಿವ್ಯಧ್ವನಿಯಮೂಲಕ ಧರ್ಮಾಮೃತವನ್ನು ನೀಡುವನು.

ಜೊನ್ನಂಬೊಲ್ ನಯನಕ್ಕೆ ತೋರಿ ಕರದಿಂದಂ ಮುಟ್ಟಲಿಲ್ಲಾದ ಸಂ-।
ಪನ್ನಾಕಾರದೊಳಿರ್ದಪಂ ವಿಮಲಸಿದ್ಧಕ್ಷೇತ್ರದೊಳ್ಸಿದ್ಧನ-॥
ಚ್ಛಿನ್ನಜ್ಞಾನಸಮೇತನಷ್ಟಗುಣಗಾಂಭೀರ್ಯಾತ್ಮನೆಂದಿಚ್ಛೆಯಿಂ ।
ನಿನ್ನಂ ಧ್ಯಾನಿಸುವಂಗೆ ಮುಕ್ತಿಯರಿದೇ ? ರತ್ನಾಕರಾಧೀಶ್ವರಾ ! ॥೧೨೧॥

ಜೊನ್ನಂಬೊಲ್ ನಯನಕ್ಕೆ ತೋರಿ ಕರದಿಂದಂ ಮುಟ್ಟಲಿಲ್ಲಾದ,
ಸಂಪನ್ನ ಆಕಾರದೊಳ್ ಇರ್ದಪಂ ವಿಮಲಸಿದ್ಧಕ್ಷೇತ್ರದೊಳ್ ಸಿದ್ಧಂ,
ಅಚ್ಛಿನ್ನಜ್ಞಾನಸಮೇತಂ ಅಷ್ಟಗುಣಗಾಂಭೀರ್ಯ ಆತ್ಮನೆಂದು ಇಚ್ಛೆಯಿಂ
ನಿನ್ನಂ ಧ್ಯಾನಿಸುವಂಗೆ ಮುಕ್ತಿಯರಿದೇ ? ರತ್ನಾಕರಾಧೀಶ್ವರಾ !

ಸಿದ್ಧಂ-ಸಿದ್ಧಪರಮೇಷ್ಠಿಯು, ಜೊನ್ನಂಬೊಲ್–ಬೆಳುದಿಂಗಳಿನಂತೆ, ನಯನಕ್ಕೆ ತೋರಿ–ಕಣ್ಣಿಗೆ ಕಾಣಿಸಿ, ಕರದಿಂದಂ-ಕೈಯಿಂದ, ಮುಟ್ಟಲಿಲ್ಲಾದ–ಮುಟ್ಟುವುದಕ್ಕಾಗದಿರುವುದೂ, ಸಂಪನ್ನ ಆಕಾರದೊಳ್-ಜ್ಞಾನಾದಿ ಸಂಪದ್ಭರಿತವಾದ ಆಕಾರದಲ್ಲಿ, ವಿಮಲ ಸಿದ್ಧಕ್ಷೇತ್ರದೊಳ್–ನಿರ್ಮಲವೂ, ಪವಿತ್ರವೂ ಆದ ಸಿದ್ಧಲೋಕದಲ್ಲಿ, ಇರ್ದಪಂ–ಇರುತ್ತಾನೆ (ಆ ಸಿದ್ಧಪರಮಾತ್ಮನು), ಅಚ್ಛಿನ್ನಜ್ಞಾನ ಸಮೇತಂ–ಸಂಪೂರ್ಣವಾದ ಜ್ಞಾನದಿಂದ ಕೂಡಿದವನೂ, ಅಷ್ಟಗುಣ–ಎಂಟು ಗುಣಗಳಿಂದಲೂ, ಗಾಂಭೀರ್ಯ–ಗಾಂಭೀರ್ಯದಿಂದಲೂ (ಶೋಭಿಸುವ), ಆತ್ಮನೆಂದು–ಆತ್ಮನೆಂದು, ಇಚ್ಛೆಯಿಂ–ಪ್ರೀತಿಯಿಂದ, ನಿನ್ನಂ ಧ್ಯಾನಿಸುವಂಗೆ–ನಿನ್ನನ್ನು ಧ್ಯಾನಿಸುವವನಿಗೆ, ಮುಕ್ತಿ ಅರಿದೇ–ಮೋಕ್ಷವು ಅಸಾಧ್ಯವೇ ! ರತ್ನಾಕರಾಧೀಶ್ವರಾ !

ಸಿದ್ಧಪರಮೇಷ್ಠಿಯ ರೂಪ, ಆಕಾರಗಳನ್ನು ಈ ಚರ್ಮಚಕ್ಷು ಗುರುತಿಸಲಾರದು. ಜ್ಞಾನನೇತ್ರದಿಂದ ಮಾತ್ರ ಅದು ಸಾಧ್ಯವಾಗುತ್ತದೆ. ಸಂಪೂರ್ಣಜ್ಞಾನದಿಂದ ಕೂಡಿದವನೂ, ಸರ್ವಜ್ಞನೂ ಆದ ಸಿದ್ಧಾತ್ಮನಿಗೆ ಎಂಟು ಗುಣಗಳಿವೆ. ಅವು ಯಾವುವೆಂದರೆ ಸಮ್ಯಕ್ತ್ವ, ಜ್ಞಾನ, ದರ್ಶನ, ವೀರ್ಯ, ಸೂಕ್ಷ್ಮತ್ವ, ಅವಗಹನತ್ವ, ಅಗುರುಲಘುತ್ವ, ಅವ್ಯಾಬಾಧತ್ವ. ಈ ಎಂಟು ಗುಣಗಳಿಂದ ಶೋಭಿತನಾಗಿ ಗಂಭೀರಭಾವದಿಂದ ಕೂಡಿದ ಸ್ವರೂಪವುಳ್ಳ ಸಿದ್ಧಪರಮೇಷ್ಠಿಯು ಬೆಳುದಿಂಗಳಂತೆ ಕಣ್ಣಿಗೆ ಕಾಣಿಸಿ ಕೈಯಿಂದ ಮುಟ್ಟುವುದಕ್ಕಾಗದಿರುವುದೂ ಜ್ಞಾನಾದಿ ಸಂಪತ್ತುಗಳಿಂದ ಕೂಡಿರುವುದೂ ಆದ ಆಕೃತಿಯಲ್ಲಿ ನಿರ್ಮಲವಾದ ಸಿದ್ಧಲೋಕದಲ್ಲಿರುತ್ತಾನೆ; ಎಂಬುದಾಗಿ ಪ್ರೀತಿಯಿಂದ ನಿನ್ನನ್ನು ಧ್ಯಾನಿಸುವವನಿಗೆ ಮೋಕ್ಷವು ಅಸಾಧ್ಯವೇ ?

ಕ್ಷಮೆ ಮಾಳ್ಪಂತೆ ವಿರೋಧಮೇಂ ಕುಡುವುದೇ ಸಂತೋಷಮುಂ ತತ್ತ್ವಶಾ-
ಸ್ತ್ರಮೆ ಮಾಳ್ಪಂತೆ ಕುಶಾಸ್ತ್ರಮೇಂ ಕುಡುವುದೇ ಸುಜ್ಞಾನಮುಂ ಮೋಕ್ಷರಾ-
ಜ್ಯಮೆ ಮಾಳ್ಪಂತೆ ಚತುಃಸ್ಥಳಂ ಕುಡುವುದೇ ಸಿದ್ಧತ್ವಮುಂ ನಿಮ್ಮ ಧ-
ರ್ಮಮೆ ಕಾವಂತೆನಗನ್ಯರೇಂ ಪೊರೆವರೇ ರತ್ನಾಕರಾಧೀಶ್ವರಾ ! ॥೧೨೨॥

ಕ್ಷಮೆ ಮಾಳ್ಪಂತೆ ವಿರೋಧಮೇಂ ಕುಡುವುದೇ ಸಂತೋಷಮುಂ,
ತತ್ತ್ವಶಾಸ್ತ್ರಮೆ ಮಾಳ್ಪಂತೆ ಕುಶಾಸ್ತ್ರಮೇಂ ಕುಡುವುದೇ ಸುಜ್ಞಾನಮುಂ,
ಮೋಕ್ಷರಾಜ್ಯಮೆ ಮಾಳ್ಪಂತೆ ಚತುಃಸ್ಥಳಂ ಕುಡುವುದೇ ಸಿದ್ಧತ್ವಮುಂ,
ನಿಮ್ಮ ಧರ್ಮಮೆ ಕಾವಂತೆ ಎನಗೆ ಅನ್ಯರೇಂ ಪೊರೆವರೇ ರತ್ನಾಕರಾಧೀಶ್ವರಾ !

ಕ್ಷಮೆ ಮಾಳ್ಪಂತೆ–ಕ್ಷಮಾಗುಣವು ಸಂತೋಷವನ್ನುಂಟುಮಾಡುವ ಹಾಗೆ, ವಿರೋಧಂ–ದ್ವೇಷವು, ಏಂ ಕುಡುವುದೇ ಸಂತೋಷಮುಂ – ಸಂತೋಷವನ್ನು ಕೊಡುತ್ತದೆಯೇನು ?, ತತ್ತ್ವ ಶಾಸ್ತ್ರಮೆ ಮಾಳ್ಪಂತೆ–ತತ್ತ್ವಶಾಸ್ತ್ರಗಳು ಜ್ಞಾನವನ್ನುಂಟುಮಾಡುವ ಹಾಗೆ, ಕುಶಾಸ್ತ್ರಂ–ಮಿಥ್ಯಾ ಶಾಸ್ತ್ರವು, ಏಂ ಕುಡುವುದೇ ಸುಜ್ಞಾನಮುಂ–ಸುಜ್ಞಾನವನ್ನು ಕೊಡುತ್ತದೆಯೇನು ?, ಮೋಕ್ಷರಾಜ್ಯಮೆ ಮಾಳ್ಪಂತೆ–ಮೋಕ್ಷಸಾಮ್ರಾಜ್ಯವೇ ಸಿದ್ಧಸ್ವರೂಪವನ್ನುಂಟುಮಾಡುವ ಹಾಗೆ, ಚತುಃಸ್ಥಳಂ ಕುಡುವುದೇ ಸಿದ್ಧತ್ತ್ವಮುಂ–ಈ ಚತುರ್ಗತಿಗಳು ಸಿದ್ಧಸ್ವರೂಪವನ್ನು ಕೊಡುತ್ತದೆಯೇನು ?. ನಿಮ್ಮ ಧರ್ಮಮೆ– ನಿಮ್ಮ ಧರ್ಮವೇ, ಕಾವಂತೆ–ಕಾಪಾಡುವ ಹಾಗೆ, ಎನಗೆ–ನನಗೆ, ಅನ್ಯರೇಂ–ಬೇರೆಯವರೇನು, ಪೊರೆವರೇ–ಕಾಪಾಡುವರೇ ! ರತ್ನಾಕರಾಧೀಶ್ವರಾ !

ಕ್ಷಮಾಗುಣವು ಆತ್ಮಸಂತೋಷವನ್ನುಂಟುಮಾಡುವಹಾಗೆ, ಪ್ರತೀಕಾರಬುದ್ಧಿ ಸಂತೋಷ ಕೊಡುತ್ತದೆಯೇ ? ಸದ್ಧರ್ಮಬೋಧೆಯನ್ನು ಮಾಡುವ ತತ್ತ್ವಶಾಸ್ತ್ರಗಳು ಸುಜ್ಞಾನವನ್ನುಂಟುಮಾಡುವ ಹಾಗೆ, ಮಿಥ್ಯಾಶಾಸ್ತ್ರಗಳು ಶ್ರೇಷ್ಠಜ್ಞಾನವನ್ನು ಕೊಡಲು ಸಾಧ್ಯವೇ ! ಮೋಕ್ಷಸಾಮ್ರಾಜ್ಯದಲ್ಲಿ ಅನಂತ ಸುಖಸಿರಿಗಳಲ್ಲಿ ಓಲಾಡುವಹಾಗೆ ಚತುರ್ಗತಿಗಳಲ್ಲಿ ಭ್ರಮಣೆ ಮಾಡಿದರೆ ಆ ಶಾಶ್ವತ ಸುಖವನ್ನು ಅನುಭವಿಸಲು ಸಾಧ್ಯವೇ ! ಸದ್ಧರ್ಮವನ್ನು ಆಶ್ರಯಿಸಿದರೆ, ಆ ಧರ್ಮವು ನಮ್ಮನ್ನು ಎಡಬಿಡದೆ ಕಾಪಾಡುವ ಹಾಗೆ ಇನ್ನಾರುತಾನೆ ನಮ್ಮನ್ನು ಕಾಪಾಡುವವರು !

ನಿನ್ನಂ ಚಿಂತಿಸುತಿರ್ಪವಂಗೆ ಪರದೇಶಂ ತನ್ನದೇಶಂ ಪರರ್ ।
ತನ್ನಿಷ್ಟರ್ ಪಗೆಗಳ್ಭಟರ್ದೊರೆಗಳಾತ್ಮಸ್ನೇಹಿತರ್ಕಿಚ್ಚು ಬಾ–॥
ವನ್ನಂ ವ್ಯಾಧಿ ಸುಖಂ ವಿಷಂ ಸುಧೆಯೆನಿಕ್ಕುಂ ನೋಡೆ ನೀನಿರ್ದುಮಾ–
ನಿನ್ನೊಂದಕ್ಕೆಳಸಿರ್ಪೆನೇಕೆಯಕಟಾ ! ರತ್ನಾಕರಾಧೀಶ್ವರಾ ! ॥೧೨೩॥

ನಿನ್ನಂ ಚಿಂತಿಸುತಿರ್ಪವಂಗೆ ಪರದೇಶಂ ತನ್ನದೇಶಂ,
ಪರರ್ ತನ್ನಿಷ್ಟರ್ ಪಗೆಗಳ್ ಭಟರ್ ದೊರೆಗಳ್ ಆತ್ಮ ಸ್ನೇಹಿತರ್,
ಕಿಚ್ಚು ಬಾವನ್ನಂ ವ್ಯಾಧಿ ಸುಖಂ ವಿಷಂ ಸುಧೆ ಯೆನಿಕ್ಕುಂ, ನೋಡೆ ನೀನ್
ಇರ್ದುಂ ಆನ್ ಇನ್ನೊಂದಕ್ಕೆ ಎಳಸಿರ್ಪೆನ್ ಏಕೆ ಅಕಟಾ ! ರತ್ನಾಕರಾಧೀಶ್ವರಾ !

ನಿನ್ನಂ ಚಿಂತಿಸುತ ಇರ್ಪವಂಗೆ-ನಿನ್ನನ್ನು ಧ್ಯಾನಿಸುತ್ತಿರುವವನಿಗೆ, ಪರದೇಶಂ – ಪರದೇಶವು, ತನ್ನದೇಶಂ–ತನ್ನ ದೇಶವಾಗುವುದು, ಪರರ್–ಬೇರೆಯವರು, ತನ್ನ ಇಷ್ಟರ್–ತನ್ನ ಇಷ್ಟ ಬಂಧುಗಳಾಗುವರು, ಪಗೆಗಳ್–ಶತ್ರುಗಳು, ಭಟರ್–ಮಿತ್ರರಾಗುವರು, ದೊರೆಗಳ್ – ರಾಜರು, ಆತ್ಮಸ್ನೇಹಿತರ್-ಆತ್ಮಸ್ನೇಹಿತರಾಗುವರು, ಕಿಚ್ಚು -ಬೆಂಕಿಯು, ಬಾವನ್ನಂ–ಶ್ರೀಗಂಧವಾಗುವುದು, ವ್ಯಾಧಿ–ರೋಗವು, ಸುಖಂ–ಸುಖಕರವಾಗುವುದು, ವಿಷಂ–ವಿಷವು, ಸುಧೆ ಏನಿಕ್ಕುಂ–ಅಮೃತವೆನಿಸುವುದು, ನೋಡೆ – ವಿಚಾರಮಾಡಿ ನೋಡಿದರೆ, ನೀನ್ ಇರ್ದುಂ – ನೀನು ಇದ್ದರೂ, ಆನ್ – ನಾನು, ಇನ್ನೊಂದಕ್ಕೆ–ಬೇರೊಂದು ವಸ್ತುವಿಗೆ, ಎಳಸಿರ್ಪೆನ್–ಅಪೇಕ್ಷೆಪಡುತ್ತಿರುವೆನಲ್ಲಾ ! ಏಕೆ–ಏತಕ್ಕಾಗಿ?, ಅಕಟಾ-ಅಯ್ಯೋ ! ರತ್ನಾಕರಾಧೀಶ್ವರಾ !

ಪರಮಾತ್ಮಧ್ಯಾನದಲ್ಲಿ ತಲ್ಲೀನನಾಗಿರುವವನಿಗೆ ಏನು ಭಯ ? ಅವನಿಗೇನು ಕಡಿಮೆ ? ಯಾವ ದೇಶದಲ್ಲಿದ್ದರೂ ತನ್ನ ದೇಶದಲ್ಲಿರುವಷ್ಟೇ ಸುಖ ಸಂತೃಪ್ತಿಗಳಿಂದ ಇರುತ್ತಾನೆ. ಹೊರಗಿನವರು ತನ್ನ ಆಪ್ತರಾಗುತ್ತಾರೆ. ಶತ್ರುಗಳು ಮಿತ್ರರಾಗುತ್ತಾರೆ. ದೊರೆಗಳು ಆ ಭಗವದ್ಭಕ್ತನನ್ನು ಆದರ ಸತ್ಕಾರಗಳಿಂದ ತಣಿಸಿ ಅವನ ಆತ್ಮೀಯನಾಗುತ್ತಾರೆ. ಬೆಂಕಿಯಂಥ ತಾಪ ಶ್ರೀಗಂಧದ ಹಾಗೆ ತಂಪಾಗುತ್ತದೆ. ರೋಗ ರುಜಿನಗಳು ಅವನ ಹತ್ತಿರ ಸುಳಿಯುವುದಿಲ್ಲ. ದೃಢಕಾಯನಾಗಿ, ಆರೋಗ್ಯವಂತನಾಗಿ ಸುಖದಿಂದಿರುತ್ತಾನೆ. ವಿಷವು ಅಮೃತವಾಗುತ್ತದೆ. ಈ ವಿಚಾರವು ತಿಳಿದಿದ್ದರೂ ಏಕೋ ಏನೋ ನಾನು ಭ್ರಮೆಯಿಂದ, ಆಸೆಯಿಂದ, ಲೋಭದಿಂದ ಪರಮಾತ್ಮಧ್ಯಾನದಿಂದ ವಿಚಲಿತನಾಗಿ ನನಗೆ ಹಿತವಲ್ಲದ ವಸ್ತುಗಳ ಕಡೆಗೆ ದೃಷ್ಟಿಹಾಯಿಸಿ ಕೈಚಾಚುತ್ತಿರುವೆನಲ್ಲಾ ! ಅಯ್ಯೋ ಏನು ಹೇಳಲಿ ಈ ಮೂರ್ಖತನಕ್ಕೆ !

ನೀನಾನೆಂಬರಿವಾಗೆ ಸಾಕು ಸಿರಿಯೇಂ ದಾರಿದ್ರ್ಯಮೇಂ ಗ್ರಾಮಮೇಂ |
ಕಾನೇಂ ಪಾಲುಣಿಸೇಂ ಕದನ್ನದುಣಿಸೇಂ ನಿರ್ಬಂಧಮೇಂ ರಾಜ್ಯಮೇಂ ||
ಈ ನಾನಾ ವಿಧಿಯೆಲ್ಲವುಂ ಕನಸಿವಂ ಕೊಂಡೇನೊ ನಿನ್ನೆನ್ನ ಸಂ-|
ಧಾನಂ ನಿತ್ಯಸುಖೈಕವಿನ್ನುಳಿದುವೇಂ ರತ್ನಾಕರಾಧೀಶ್ವರಾ ! ||೧೨೪||

ನೀನ್ ಆನ್ ಎಂಬ ಅರಿವಾಗೆ ಸಾಕು ಸಿರಿಯೇಂ ದಾರಿದ್ರ್ಯಮೇಂ,
ಗ್ರಾಮಮೇಂ ಕಾನೇಂ ಪಾಲ್ ಉಣಿಸೇಂ ಕದನ್ನದ ಉಣಿಸೇಂ,
ನಿರ್ಬಂಧಮೇಂ ರಾಜ್ಯಮೇಂ, ಈ ನಾನಾ ವಿಧಿಯೆಲ್ಲವುಂ ಕನಸು, ಇವಂ ಕೊಂಡು
ಏನೊ ನಿನ್ನ ಎನ್ನ ಸಂಧಾನಂ ನಿತ್ಯಸುಖೈಕವು, ಇನ್ನುಳಿದುವೇಂ ರತ್ನಾಕರಾಧೀಶ್ವರಾ !

ನೀನ್ ಆನ್ ಎಂಬ–ನೀನೇ ನಾನು ಎಂಬ, ಅರಿವಾಗೆ ಸಾಕು-ತಿಳುವಳಿಕೆಯುಂಟಾದರೆ ಸಾಕು, ಸಿರಿಯೇಂ-ಶ್ರೀಮಂತಿಕೆಯೇನು ?, ದಾರಿದ್ರ್ಯಮೇಂ-ಬಡತನವೇನು ?, ಗ್ರಾಮಮೇಂ-ಊರೇನು ?, ಕಾನೇಂ-ಕಾಡೇನು ?, ಪಾಲ್ ಉಣಿಸೇಂ–ಹಾಲಿನ ಆಹಾರವೇನು ?, ಕದನ್ನದ ಉಣಿಸೇಂ-ಸತ್ವವಿಲ್ಲದ ಆಹಾರವೇನು ?, ನಿರ್ಬಂಧಮೇಂ–ಸೆರೆಮನೆಯೇನು ?, ರಾಜ್ಯಮೇಂ-ರಾಜ್ಯವೇನು ?, ಈ ನಾನಾ ವಿಧಿಯೆಲ್ಲವುಂ–ಈ ನಾನಾ ಪ್ರಕಾರವಾದ ವ್ಯವಹಾರವೆಲ್ಲವೂ, ಕನಸು–ಸ್ವಪ್ನ, ಇವಂ ಕೊಂಡು ಏನೊ-ಇವುಗಳನ್ನು ಕಟ್ಟಿಕೊಂಡೇನು ಪ್ರಯೋಜನ ?, ನಿನ್ನ ಎನ್ನ–ನಿನ್ನ ಮತ್ತು ನನ್ನ, ಸಂಧಾನಂ–ಸಂಯೋಗವು, ನಿತ್ಯಸುಖ ಏಕವು-ಶಾಶ್ವತವಾದ ಸುಖವು ಇದೊಂದೇ, ಇನ್ನು ಉಳಿದುವು ಏಂ–ಇನ್ನು ಮಿಕ್ಕವು ಏನು ಪ್ರಯೋಜನ ? ರತ್ನಾಕರಾಧೀಶ್ವರಾ !

ನಾನಾರು ? ನನ್ನ ಸ್ವರೂಪವೇನು ? ನನ್ನ ಗುರಿಯೇನು ? ಕರ್ಮದ ಕಟ್ಟಿಗೆ ಸಿಕ್ಕಿಬಿದ್ದಿರುವ ನಾನು ಆ ಬಂಧನದಿಂದ ಬಿಡಿಸಿಕೊಂಡು ಪರಮಾತ್ಮಪದವಿಗೇರುವುದು ನನ್ನ ಪರಮ ಕರ್ತವ್ಯ ಎಂಬ ತಿಳುವಳಿಕೆ ಮೂಡಿದರೆ, ಶ್ರೀಮಂತಿಕೆಯೇನು, ದಾರಿದ್ರ್ಯವೇನು, ಊರೇನು, ಕಾಡೇನು, ಭೂರಿಭೋಜನವೇನು, ಹಳಸಿದ ಅನ್ನವೇನು, ಸೆರೆಮನೆಯಾದರೇನು, ಅರಮನೆಯಾದರೇನು, ಈ ಲೌಕಿಕ ವಿಚಾರಗಳಲ್ಲಿ ಆಸಕ್ತಿಯೇ ಮೂಡುವುದಿಲ್ಲ. ಇವೆಲ್ಲ ಕನಸಿನಂತೆ ಅಶಾಶ್ವತವಾದವುಗಳು. ಇವುಗಳಿಂದ ಯಾವ ಪ್ರಯೋಜನವೂ ಕಾಣೆ. ನನ್ನ ನಿನ್ನ ಸಂಯೋಗವೊಂದೇ ಶಾಶ್ವತಸುಖಕ್ಕೆ ನಾಂದಿ, ಇನ್ನುಳಿದುವುಗಳಿಂದ ಏನು ಪ್ರಯೋಜನ ? ಅವೆಲ್ಲ ಹೇಯವಾದವುಗಳು.

ನಡೆದೆಂ ಚಿತ್ತಕೆ ಬಂದವೊಲ್ನುಡಿದೆ ನಾಂ ಬಾಯ್ಗಿಚ್ಚೈಬಂದಂತೆ ಸೈ-
ಗೆಡೆದೆಂ ದುಃಖಸಮುದ್ರದೊಳ್ಪಡೆದೆನಂಧಂ ಕಣ್ಗಳಂ ಪೆತ್ತವೊಲ್ ॥
ಬಿಡೆ ನಿಮ್ಮಂಘ್ರಿಗಳಂ ಬಿಡೆಂ ಬಿಡೆನುದಾರಂ ನೀನಹೋ ! ಬಲ್ಲೆನೆ-
ನ್ನೊಡೆಯಾ ! ರಕ್ಷಿಸು ರಕ್ಷಿಸಾ ತಳುವಿದೇಂ ರತ್ನಾಕರಾಧೀಶ್ವರಾ ! ॥೧೨೫॥

ನಡೆದೆಂ ಚಿತ್ತಕೆ ಬಂದವೊಲ್, ನುಡಿದೆನಾಂ ಬಾಯ್ಗಿಚ್ಚೈಬಂದಂತೆ,
ಸೈಗೆಡೆದೆಂ ದುಃಖಸಮುದ್ರದೊಳ್, ಪಡೆದೆಂ ಅಂಧಂ ಕಣ್ಗಳಂ ಪೆತ್ತವೊಲ್,
ಬಿಡೆ ನಿಮ್ಮಂಘ್ರಿಗಳಂ ಬಿಡೆಂ ಬಿಡೆಂ, ಉದಾರಂ ನೀಂ ಅಹೋ ! ಬಲ್ಲೆನ್,
ಎನ್ನೊಡೆಯಾ ! ರಕ್ಷಿಸು ರಕ್ಷಿಸಾ ತಳುವಿದೇಂ ರತ್ನಾಕರಾಧೀಶ್ವರಾ !

ಆಂ–ನಾನು, ಚಿತ್ತಕೆ ಬಂದವೊಲ್–ಮನಸ್ಸಿಗೆ ಬಂದಹಾಗೆ, ನಡೆದೆಂ – ನಡೆದುಕೊಂಡೆ, ಬಾಯ್ಗಿಚ್ಚೈಬಂದಂತೆ–ಬಾಯಿಗೆ ಬಂದಹಾಗೆ, ನುಡಿದೆಂ–ಮಾತನಾಡಿದೆನು, ದುಃಖಸಮುದ್ರದೊಳ್–ದುಃಖವೆಂಬ ಸಮುದ್ರದಲ್ಲಿ, ಸೈಗೆಡೆದೆಂ–ಧೈರ್ಯಗುಂದಿದೆನು, ಅಂಧಂ–ಕುರುಡನು, ಕಣ್ಗಳಂ ಪೆತ್ತವೊಲ್–ಕಣ್ಣುಗಳನ್ನು ಹೊಂದಿರುವಹಾಗೆ, ಪಡೆದೆಂ–ಕಣ್ಣುಗಳನ್ನು ಹೊಂದಿರುವೆನು, ಬಿಡೆ ನಿಮ್ಮಂಘ್ರಿಗಳಂ–ನಿಮ್ಮ ಪಾದಗಳನ್ನು ಬಿಡುವುದಿಲ್ಲ, ಬಿಡೆಂ ಬಿಡೆಂ–ಬಿಡುವುದಿಲ್ಲ, ಬಿಡುವುದಿಲ್ಲ, ಉದಾರಂ ನೀಂ ಅಹೋ ಬಲ್ಲೆನ್–ನೀನು ಉದಾತ್ತನಾದವನು, ನನಗೆ ಗೊತ್ತು !, ಎನ್ನೊಡೆಯಾ !–ನನ್ನ ಪ್ರಭುವೇ !, ರಕ್ಷಿಸು–ಕಾಪಾಡು, ರಕ್ಷಿಸಾ – ಕಾಪಾಡು, ತಳುವಿದೇಂ – ಸಾವಕಾಶವೇಕೆ ? ರತ್ನಾಕರಾಧೀಶ್ವರಾ !

ಮನಸ್ಸಿಗೆ ಬಂದಂತೆ ಅಡ್ಡಾಡಿದೆ. ನನ್ನ ನಡೆವಳಿಕೆಗೆ ಲಂಗು ಲಗಾಮುಗಳೇ ಇಲ್ಲ. ಬಾಯಿಗೆ ಬಂದಹಾಗೆ ಮಾತನಾಡಿ ಅನೇಕರ ನೋವಿಗೆ ಕಾರಣನಾದೆ. ದುಃಖಸಮುದ್ರದಲ್ಲಿ ಬಿದ್ದು ಒದ್ದಾಡುತ್ತಿರುವೆನು. ಕಣ್ಣಿದ್ದೂ ಕುರುಡನಾದೆನು. ಕುರುಡನಿಗೆ ಕಣ್ಣಿರುವುದೂ ಒಂದೇ ನನಗೆ ಕಣ್ಣಿರುವುದೂ ಒಂದೇ. ಸುದೃಷ್ಟಿತ್ವವಿಲ್ಲದೆ ಭಂಗಹೊಂದಿದೆನು. ಈಗ ಜ್ಞಾನೋದಯವಾಗಿದೆ. ನಿಮ್ಮ ಪಾದದ್ವಯಗಳನ್ನು ಖಂಡಿತ ಬಿಡೆನು. ನನ್ನನ್ನು ಕಾಪಾಡುಸ್ವಾಮಿ ! ನೀನು ಕರುಣಾಕರನಲ್ಲವೇ ! ಉದಾರಿಯಲ್ಲವೇ ! ಪತಿತೋದ್ಧಾರನಲ್ಲವೇ ! ಏತಕ್ಕಾಗಿ ತಡಮಾಡುತ್ತಿರುವೆ ಪ್ರಭು !

ತ್ರಿಜಗತ್ಸ್ವಾಮಿ ಜಿನೇಂದ್ರ ಸಿದ್ಧ ಶಿವಲೋಕಾರಾಧ್ಯ ಸರ್ವಜ್ಞ ಶಂ–
ಭು ಜಗನ್ನಾಥ ಜಗತ್ಪಿತಾಮಹ ಹರ ಶ್ರೀಕಾಂತ ವಾಣೀಶ ವಿ–॥
ಷ್ಣು ಜಿತಾನಂಗ ಜಿನೇಶ ಪಶ್ಚಿಮಸಮುದ್ರಾಧೀಶ್ವರಾ ಬೇಗದಿಂ ।
ನಿಜಮಂತೋರು ದಯಾಳುವೇ ತಳುವಿದೇಂ ರತ್ನಾಕರಾಧೀಶ್ವರಾ! ॥೧೨೬॥

ತ್ರಿಜಗತ್‌ಸ್ವಾಮಿ ಜಿನೇಂದ್ರ ಸಿದ್ಧ ಶಿವ ಲೋಕಾರಾಧ್ಯ, ಸರ್ವಜ್ಞ
ಶಂಭು ಜಗನ್ನಾಥ ಜಗತ್‌ಪಿತಾಮಹ ಹರ ಶ್ರೀಕಾಂತ, ವಾಣೀಶ
ವಿಷ್ಣು ಜಿತಾನಂಗ ಜಿನೇಶ ಪಶ್ಚಿಮಸಮುದ್ರಾಧೀಶ್ವರಾ,
ಬೇಗದಿಂ ನಿಜಮಂ ತೋರು ದಯಾಳುವೇ ತಳುವಿದೇಂ, ರತ್ನಾಕರಾಧೀಶ್ವರಾ!

ತ್ರಿಜಗತ್‌ಸ್ವಾಮಿ–ಮೂರುಲೋಕದ ಪ್ರಭುವೇ, ಜಿನೇಂದ್ರ–ಜಿನೇಶ್ವರನೆ, ಸಿದ್ಧ–ಸಿದ್ಧಿಯನ್ನು ಹೊಂದಿದವನೆ, ಶಿವಂ – ಶಿವಸ್ವರೂಪನೆ, ಲೋಕಾರಾಧ್ಯ – ಲೋಕಾಧಿಪತಿಯೆ, ಸರ್ವಜ್ಞ – ಸಮಸ್ತಜ್ಞಾನ ಸಂಭೂತನೆ, ಶಂಭು-ಸುಖಕ್ಕೆ ಉತ್ಪತ್ತಿಸ್ಥಾನನೆ, ಜಗನ್ನಾಥ–ಜಗತ್ತಿಗೆ ಸ್ವಾಮಿಯೆ, ಜಗತ್ ಪಿತಾಮಹ–ಲೋಕಕ್ಕೆ ಪಿತಾಮಹನೆ, ಹರ–ಕರ್ಮವನ್ನು ನಾಶಮಾಡಿದವನೆ, ಶ್ರೀಕಾಂತ–ಜ್ಞಾನಾದಿ ಸಂಪತ್ತುಗಳಿಗೆ ಒಡೆಯನೆ, ವಾಣೀಶ–ಸರಸ್ವತಿಗೆ ಪ್ರಭುವೆ, ವಿಷ್ಣು–ಜ್ಞಾನಮೂಲಕ ವ್ಯಾಪಕನಾದವನೆ, ಜಿತಾನಂಗ–ಕಾಮವನ್ನು ಜಯಿಸಿದವನೆ, ಜಿನೇಶ–ಕರ್ಮವನ್ನು ನಿರ್ಜರೆ ಮಾಡುವವರಿಗೆ ಸ್ವಾಮಿಯೆ, ಪಶ್ಚಿಮ ಸಮುದ್ರಾಧೀಶ್ವರಾ–ಪಶ್ಚಿಮ ಸಮುದ್ರಾಧಿಪತಿಯೆ. ಬೇಗದಿಂ–ಬೇಗನೆ, ನಿಜಮಂ ತೋರು–ಯಥಾರ್ಥವಾದ ಸ್ವರೂಪವನ್ನು ತೋರು, ದಯಾಳುವೇಂ–ದಯಾಮಯನೆ, ತಳುವು ಇದೇಂ–ಇದೇಕೆ ತಡ ? ರತ್ನಾಕರಾಧೀಶ್ವರಾ!

ಮೂರು ಲೋಕಕ್ಕೂ ಒಡೆಯನಾದ ಸ್ವಾಮಿಯೆ ! ಸಿದ್ಧಲೋಕದಲ್ಲಿ ರಾರಾಜಿಸುವನೆ, ಮಂಗಳ ಸ್ವರೂಪನೆ, ಲೋಕಾಧಿಪತಿಯೆ, ಸಮಸ್ತ ಜ್ಞಾನವನ್ನು ಹೊಂದಿರತಕ್ಕವನೆ, ಅನಂತ ಸುಖವುಳ್ಳವನೆ, ಕರ್ಮನಿರ್ಜರೆಮಾಡಿಕೊಂಡು ಸಾಮ್ರಾಜ್ಯವನ್ನು ಹೊಂದಿದವನೆ, ಅನಂತದರ್ಶನ ಅನಂತ ಜ್ಞಾನ ಅನಂತವೀರ್ಯ, ಅನಂತಸುಖವುಳ್ಳವನೆ, ಸರಸ್ವತಿ ಪ್ರಭುವೆ, ಕಾಮವನ್ನು ಜಯಿಸಿದವನೆ, ಪಶ್ಚಿಮ ಸಮುದ್ರಾಧೀಶ್ವರನೆ, ಬೇಗ ಸತ್ಯಮಾರ್ಗವನ್ನು ತೋರು, ನನ್ನ ಮೊರೆ ಕೇಳುವುದಿಲ್ಲವೇ, ತಡವೇಕೆ ಪ್ರಭು ! ನೀನು ದಯಾಸಮುದ್ರನಲ್ಲವೇ ? ನನ್ನಮೇಲೆ ಕರುಣೆಯಿಡು ಮಹಾಸ್ವಾಮಿ ! [ಈ ಶ್ಲೋಕ ರತ್ನಾಕರನ ಸರ್ವಧರ್ಮಸಮನ್ವಯ ದೃಷ್ಟಿಗೆ ಹಾಗೂ ಆತನ ಹೃದಯವೈಶಾಲ್ಯಕ್ಕೆ ಸಾಕ್ಷಿಯಾಗಿದೆ. ರತ್ನಾಕರ ಯಾವ ಮತವನ್ನೂ ಅವಹೇಳನಮಾಡದೆ ಸ್ವಮತದ ಮಹಿಮೆಯನ್ನು ಲೋಕ ಮೆಚ್ಚಿ ಒಪ್ಪುವಂತೆ ಸಾರಿದ ಸಮನ್ವಯಾಚಾರ್ಯ.]

ತ್ರಾಹಿ ತ್ರೈಭುವನೇಂದ್ರಮಸ್ತಕಮಣಿವ್ರಾತಾರ್ಚಿತಾಂಘ್ರಿದ್ವಯಾ।
ತ್ರಾಹಿ ಶ್ರೀರಮಣೀನಟನ್ನಟನರಂಗಶ್ರೀಪದಾಬ್ಜೋಭಯಾ॥
ತ್ರಾಹಿ ತ್ರಾಹಿ ಮಹೇಶ ಮಾಂ ಪುನರಪಿ ತ್ರಾಹೀತಿ ರತ್ನತ್ರಯಾ।
ದೇಹಿ ತ್ವಂ ಮಮ ದೀಯತಾಂ ಜಯ ಜಯಾ! ರತ್ನಾಕರಾಧೀಶ್ವರಾ! ॥೧೨೭॥

ತ್ರಾಹಿ ತ್ರೈಭುವನೇಂದ್ರ ಮಸ್ತಕಮಣಿವ್ರಾತ ಅರ್ಚಿತ ಅಂಘ್ರಿದ್ವಯಾ,
ತ್ರಾಹಿ ಶ್ರೀರಮಣೀ ನಟನ್ನಟನರಂಗ ಶ್ರೀಪದಾಬ್ಜ ಉಭಯಾ,
ತ್ರಾಹಿ ತ್ರಾಹಿ ಮಹೇಶ ಮಾಂ ಪುನರಪಿ ತ್ರಾಹೀತಿ ರತ್ನತ್ರಯಾ,
ದೇಹಿ ತ್ವಂ ಮಮ ದೀಯತಾಂ ಜಯ ಜಯಾ ! ರತ್ನಾಕರಾಧೀಶ್ವರಾ !

ತ್ರೈಭುವನೇಂದ್ರ–ಮೂರು ಲೋಕಗಳ ಇಂದ್ರರ, ಮಸ್ತಕಮಣಿ–ತಲೆಯ ಕಿರೀಟಗಳಲ್ಲಿರುವ ರತ್ನಗಳ, ವ್ರಾತ–ಸಮೂಹದಿಂದ, ಅರ್ಚಿತ–ಪೂಜಿಸಲ್ಪಟ್ಟ. ಅಂಘ್ರಿದ್ವಯಾ–ಎರಡು ಪಾದಗಳುಳ್ಳ ಸ್ವಾಮಿಯೆ, ತ್ರಾಹಿ–ಕಾಪಾಡು, ಶ್ರೀರಮಣೀ–ಮೋಕ್ಷಲಕ್ಷ್ಮಿಯೆಂಬ, ನಟನ್ನಟನರಂಗ–ನರ್ತಕಿಯ ನರ್ತನಕ್ಕೆ ರಂಗಸ್ಥಳವೂ, ಶ್ರೀ–ಶೋಭಾಯಮಾನವೂ ಆದ, ಪದಾಬ್ಜ ಉಭಯಾ–ಎರಡು ಪಾದ ಕಮಲಗಳುಳ್ಳ ಮಹಾಪ್ರಭುವೇ ! ತ್ರಾಹಿ – ಕಾಪಾಡು ! ತ್ರಾಹಿ – ರಕ್ಷಿಸು ! ಮಹೇಶ !, ಮಾಂ–ನನ್ನನ್ನು, ಪುನರಪಿ–ಪುನಃ ಪುನಃ, ತ್ರಾಹೀ–ಕಾಪಾಡು, ಕಾಪಾಡು !, ರತ್ನತ್ರಯಾ–ಸಮ್ಯಗ್ ದರ್ಶನ ಜ್ಞಾನಚಾರಿತ್ರಗಳೆಂಬ ರತ್ನತ್ರಯವುಳ್ಳವನೇ, ದೇಹಿ ತ್ವಂ–ನೀನು ನನಗೆ ರತ್ನತ್ರಯವನ್ನು ಕೊಡು, ದೀಯತಾಂ–ಆ ರತ್ನತ್ರಯವು ನನಗೆ ಕೊಡಲ್ಪಡಲಿ, ಜಯ ಜಯಾ ! ರತ್ನಾಕರಾಧೀಶ್ವರಾ !

ಊರ್ಧ್ವ ಮಧ್ಯ ಅಧೋಲೋಕಗಳ ಮಹೇಂದ್ರರು ಭಕ್ತಿಯಿಂದ ಸ್ವಾಮಿಗೆ ಎರಗಿದಾಗ, ಅವರ ಕಿರೀಟಗಳಲ್ಲಿರುವ ಅಮೂಲ್ಯ ರತ್ನಗಳ ಪ್ರಭೆಯಲ್ಲಿ ಕಂಗೊಳಿಸುವ ಪಾದದ್ವಯವುಳ್ಳ ಪರಮಾತ್ಮನೆ ! ಕಾಪಾಡು ! ಕಾಪಾಡು ! ನನ್ನನ್ನು ಎಡೆಬಿಡದೆ ಕಾಪಾಡು ! ರತ್ನತ್ರಯನೇ ! ಕಾಪಾಡು ! ನನಗೂ ಆ ರತ್ನತ್ರಯವನ್ನು ದಯಪಾಲಿಸು !

ವೈರಾಗ್ಯನೀತಿಯಾತ್ಮವಿ-
ಚಾರಂ ತಾಂ ಬಗೆದು ನೋಡೆ ರಾಜಿಸುಗುಂ ಶೃಂ-
ಗಾರಕವಿಹಂಸರಾಜಂ
ಪೂರಿಸಿದ ಸಪಾದಶತಕ ರತ್ನಾಕರದೊಳ್ ! ||೧೨೮||

ವೈರಾಗ್ಯ ನೀತಿ ಆತ್ಮವಿಚಾರಂ
ತಾಂ ಬಗೆದುನೋಡೆ ರಾಜಿಸುಗುಂ
ಶೃಂಗಾರ ಕವಿಹಂಸರಾಜಂ ಪೂರಿಸಿದ, ಸಪಾದ ರತ್ನಾಕರದೊಳ್ !

ತಾಂ-ತಾನು, ಬಗೆದುನೋಡೆ-ವಿಚಾರಮಾಡಿ ನೋಡಿದರೆ, ಶೃಂಗಾರ ಕವಿಹಂಸರಾಜಂ-ಶೃಂಗಾರ ಕವಿಹಂಸರಾಜನು, ಪೂರಿಸಿದ-ಪೂರ್ತಿಮಾಡಿದ, ಸಪಾದ ರತ್ನಾಕರದೊಳ್-ಸಪಾದ ಶತಕ ರತ್ನಾಕರ ಗ್ರಂಥದಲ್ಲಿ, ವೈರಾಗ್ಯ-ವೈರಾಗ್ಯವು, ನೀತಿ-ನೀತಿಯೂ, ಆತ್ಮವಿಚಾರಂ-ಆತ್ಮವಿಚಾರವು, ರಾಜಿಸುಗುಂ-ಪ್ರಕಾಶಿಸುತ್ತಿರುವುವು.

ಮಹಾಕವಿ, ಶೃಂಗಾರಕವಿಹಂಸರಾಜ ರತ್ನಾಕರನಿಂದ ವಿರಚಿತವಾದ ರತ್ನಾಕರಶತಕದಲ್ಲಿ ಒಳ ಹೊಕ್ಕು ನೋಡಿದರೆ, ವೈರಾಗ್ಯ, ನೀತಿ ಮತ್ತು ಆತ್ಮವಿಚಾರಗಳು ತುಂಬಿತುಳುಕಾಡುತ್ತದೆ.

ಶ್ರೀಮದ್ದೇವೇಂದ್ರಕೀರ್ತಿಯೋಗೀಶ್ವರ ಪಾದಾಂಭೋಜ
ಭೃಂಗಾಯಮಾನ ಶೃಂಗಾರಕವಿಹಂಸರಾಜ ವಿರಚಿತಮಪ್ಪ
ರತ್ನಾಕರ ಸಪಾದಶತಕಂ ಸಮಾಪ್ತಂ

ಶ್ರೀಮದ್ದೇವೇಂದ್ರ ಕೀರ್ತಿಯೋಗೀಶ್ವರರ ಪಾದಕಮಲದಲ್ಲಿ
ಭ್ರಮರದಂತಿರುವ ಶೃಂಗಾರ ಕವಿಹಂಸರಾಜನು ವಿರಚಿಸಿದ
ರತ್ನಾಕರ ಸಪಾದಶತಕವು ಸಮಾಪ್ತವಾದುದು.

ಓಂ ಶಾಂತಿಃ ಶಾಂತಿಃ ಶಾಂತಿಃ

ಪದ್ಯಗಳ ಅಕಾರಾದಿ

—o—